॥ ಶ್ರೀಃ ಹರಿಃ ಓಂ ॥

॥ಶ್ರೀ ಗರುಡವಾಹನ ಲಕ್ಷ್ಮೀನರಸಿಂಹಾಭಿನ್ನ ಶ್ರೀ ಜಗನ್ನಾಥವಿಠ್ಠಲಾಯ ನಮಃ

## ಸಂಧಿ-೧೯

## ಕರ್ಮವಿಮೋಚನ ಸಂಧಿ

## (ಸ್ತೋತ್ರ ಪ್ರಕರಣ ಸಂಧಿ)

ಹರಿಕಥಾಮೃತಸಾರ ಗುರುಗಳ ।
ಕರುಣದಿಂದಾಪನಿತು ಪೇಳುವೆ ॥
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ॥ ಪ ॥

### ಪದ್ಯ-೧

**ಮೂಲ :**

ಮೂಲ ನಾರಾಯಣನು ಮಾಯಾ ।
ಲೋಲಽನಂತವತಾರ ನಾಮಕ ।
ವ್ಯಾಳರೂಪ ಜಯಾರಮಣನಾವೇಶನೆನಿಸುವನು ॥
ಲೀಲೆಗೈವಾನಂತ ಚೇತನ ।
ಜಾಲದೊಳು ಪ್ರದ್ಯುಮ್ನ ಬ್ರಹ್ಮಾಂ ।
ಡಾಲಯದ ಒಳಹೊರಗೆ ನೆಲಸಿಹ ಶಾಂತಿ ಅನಿರುದ್ಧ ॥೧॥

**ಅವತರಣಿಕೆ:**

ಪೂರ್ವೋಕ್ತ ಸಂಧಿಗಳಲ್ಲಿ ಕರ್ಮಗಳ ಸ್ವಭಾವ ದ್ವಂದ್ವ ಕರ್ಮಗಳ ಸಮರ್ಪಣಾ ಕ್ರಮ ಇತ್ಯಾದಿ ತತ್ತ್ವಾರ್ಥಗಳನ್ನು ಹೇಳಿ ಪ್ರಸಕ್ತ ಸಂಧಿಯಲ್ಲಿ ಪರಮ ದಯಾಮಯನಾದ ಶ್ರೀಹರಿಯು ಅಂತಹ ಕರ್ಮಗಳ ವಿಮೋಚನೆ

ಯನ್ನು ಹೇಗೆ ಮಾಡುತ್ತಾನೆ ? ಅವನ ಅಸದೃಶ ಮಹಿಮಾ ದ್ಯೋತಕ ವಾದ ಸ್ತೋತ್ರ ಪ್ರಕರಣವನ್ನು ಆರಂಭಿಸುತ್ತಾರೆ.

**ಪ್ರತಿಪದಾರ್ಥ:**

**ಮೂಲ**=ಸೃಷ್ಟಿ ಕಾರ್ಯಕ್ಕೆ ಪ್ರಧಾನ ಕಾರಣಭೂತನಾದ, **ನಾರಾಯಣನು**=ಸಕಲ ದೋಷವಿದೂರನಾದ ಮೂಲರೂಪೀ ಶ್ರೀಮನ್ನಾರಾಯಣನು, **ಮಾಯೊಳೊಲ**=ಮಾಯಾನಾಮಕರಾದ ಶ್ರೀ ಲಕ್ಷ್ಮೀದೇವಿಯರ ಸಹಿತ ವಿಹಾರಗೈವ ವಾಸುದೇವನಾಮಕ ಶ್ರೀ ಪರಮಾತ್ಮನು, **ಅನಂತ ಅವತಾರ**=ವಾಸುದೇವ ರೂಪದಿಂದಲೇ ಅನಂತಾನಂತ ಅವತಾರ ರೂಪಗಳ ಅಭಿವ್ಯಕ್ತಿಗೆ ಕಾರಣವಾಗಿರುವುದರಿಂದ, **ನಾಮಕ**=ಅನಂತಾನಂತ ನಾಮಗಳಿಂದ ವಿದ್ಯಮಾನನಾಗಿ, **ವ್ಯಾಳರೂಪ**=ಸರ್ಪದಂತೆ ದೀರ್ಘಾಕಾರ ಕಾಲದಲ್ಲಿ ಅಂತರ್ಯಾಮಿಯಾದ ತೃತೀಯ ರೂಪವಾದ, **ಜಯೊರಮಣ**=ಜಯಾನಾಮಕ ಶ್ರೀ ಲಕ್ಷ್ಮೀಪತಿಯಾದ ಶ್ರೀ ಸಂಕರ್ಷಣ ರೂಪದಿಂದ **ಆವೇಶನೆನಿಸುವನು**=ಸರ್ವಜೀವರ ಮನೋವ್ಯಾಪಾರಗಳನ್ನು ಪ್ರವರ್ತಿಸುವವನಾದ ಕಾರಣದಿಂದ ಆವೇಶವುಳ್ಳವನೆಂದು ಕರೆಸುತ್ತಾನೆ. **ಪ್ರದ್ಯುಮ್ನ**=ಚತುರ್ಥರೂಪಿಯಾದ ಪ್ರದ್ಯುಮ್ನ ನಾಮಕನು, **ಅನಂತಚೇತನಜಾಲದೊಳು**=ಅನಂತಸಂಖ್ಯಾಕರಾದ ಜೀವರ ಸಮೂಹದಲ್ಲಿ, **ಲೀಲೆಗೈವನು**=ಇಂದ್ರಿಯ ಜನ್ಯ ವಿಷಯರೂಪಗಳಾದ ವ್ಯಾಪಾರಗಳನ್ನು ಮಾಡುತ್ತಾ ವಿಹರಿಸುವನು, **ಶಾಂತಿ ಅನಿರುದ್ಧ**=ಶಾಂತಿನಾಮಕ ಲಕ್ಷ್ಮೀರಮಣನಾದ ಅನಿರುದ್ಧನಾಮಕನು **ಬ್ರಹ್ಮಾಂಡಾಲಯದ**=ಬ್ರಹ್ಮಾಂಡವೆಂಬ ಮಂದಿರದ, **ಒಳ ಹೊರಗೆ**=ಒಳಗೂ ಮತ್ತು ಹೊರಗೂ (ಅಂತರ್ಬಹಿಶ್ಚ) ಅಂದರೆ ಸರ್ವಪ್ರಾಣಿಗಳ ಒಳಗೆ ಅಂತರ್ಯಾಮಿಯಾಗಿ ಹೊರಗೆ ಸ್ಥೂಲದೇಹಗತ ಬಾಹ್ಯೇಂದ್ರಿಯಗಳಲ್ಲಿ **ನೆಲೆಸಿಹ**=ಸರ್ವತ್ರ ವ್ಯಾಪ್ತನಾಗಿದ್ದಾನೆ. ॥ ೧ ॥

## ವ್ಯಾಖ್ಯಾನಗಳು

### ೧ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಪೂರ್ವೋಕ್ತ ಅನುಸರಿಸಿ ಬಿಂಬ ಪ್ರತಿಬಿಂಬಗಳ ತಿಳಿದ ಅನಂತರದಲ್ಲಿ ಈ ಸಂಧಿಯಲ್ಲಿ ಉಕ್ತವಾದ ಕ್ರಮಕ್ಕೆ ಅನುಸಂಧಾನಯುಕ್ತನಾಗಿ ಕರ್ಮಗಳ ಮಾಡಿದಾ ಎಂದರೆ, ಅವುಗಳ ಲೇಪವಾಗದೆ ಮೋಚನವಾಗುತ್ತಾ ಬರುತ್ತವೆ ಎಂತ ಹೇಳಿ ಅದರ ಅನುಸಂಧಾನ ಕ್ರಮವನ್ನು ಹೇಳುತ್ತಾರೆ.

ಜೀವರು ಕರ್ಮ ಮಾಡಬೇಕಾದರೆ ಸ್ಥೂಲ ದೇಹ ವಿಶಿಷ್ಟರಾಗಿ ಕರ್ಮ ಮಾಡಬೇಕು. ಈ ಸ್ಥೂಲ ದೇಹ ಸೃಷ್ಟಿ ಆಗಬೇಕಾದರೆ ಬ್ರಹ್ಮಾಂಡ ಸೃಷ್ಟಿಯಾಗಿ ಸ್ಥೂಲದೇಹ ಸೃಷ್ಟಿ ಆಗಬೇಕು. ಸ್ಥೂಲದೇಹಗಳೇನು ಬ್ರಹ್ಮಾಂಡವೇ ದಾರು ಮಾಡಿದರೆಂದರೆ ಹೇಳತಾರೆ.

ಮೂಲ ಸೃಷ್ಟಿಗೆ ಕಾರಣಭೂತನಾದ ನಾರಾಯಣದೇವರು ಬ್ರಹ್ಮ ಪ್ರಳಯಾನಂತರದಲ್ಲಿ ತ್ರಿವಿಧ ಜೀವರ ತೃಣಾಂತವಾಗಿ ಉದರದಲ್ಲಿ ಧರಿಸಿ· ಲಕ್ಷ್ಮೀರೂಪರಾದ ಭೂದೇವೇರು ವಟಪತ್ರರಾಗಿಯೂ. ಶ್ರೀದೇವೇರು ಉದಕ ರೂಪರಾಗಿಯೂ, ಪ್ರಳಯಕಾಲ ರಾತ್ರಿಕಾಲವಾದ್ದರಿಂದ ದುರ್ಗಾದೇವೇರು ಅಂಧಕಾರ ರೂಪದಿಂದಲೂ, ಇರುವ ಕಾಲದಲ್ಲಿ ಈ ನಾರಾಯಣದೇವರಿಂದ, ಮಾಯಾನಾಮಕ ಲಕ್ಷ್ಮೀದೇವೇರ ಕೂಡ ವಿಹಾರ ಮಾಡತಕ್ಕ ವಾಸುದೇವ ರೂಪ ಅಭಿವ್ಯಕ್ತಿಯಾಗಿ, ಈ ವಾಸುದೇವ ರೂಪದಿಂದಲೇ ಅನಂತಾನಂತ ಅವತಾರ ರೂಪಗಳು ಅಭಿವ್ಯಕ್ತಿಗೆ ಕಾರಣವಾದ ರೂಪವಾದ್ದರಿಂದ, ಈ ವಾಸುದೇವನಿಂದ ಸರ್ಪದಂತೆ ದೀರ್ಘಾಕಾರ ಕಾಲದಲ್ಲಿ ಅಂತರ್ಯಾಮಿಯಾದ ಎರಡನೇ ರೂಪವಾದ ಜಯಾನಾಮಕ ಲಕ್ಷ್ಮೀದೇವೇರ ಪತಿಯಾದ ಸಂಕರ್ಷಣ ರೂಪವು, ಈ ರೂಪದಿಂದ ಸರ್ವಜೀವರನ ಚಿನ್ಮನಸ್ಸಿನಲ್ಲಿ ಪ್ರವೇಶನಾಗಿ ಮನೋದ್ವಾರಾ ವ್ಯಾಪಾರಗಳ ಅಂಕುರ ಮಾಡತಕ್ಕವ ನಾದ್ದರಿಂದ, ಈ ಸಂಕರ್ಷಣನು ಆವೇಶವುಳ್ಳವನು ಎಂತ ಕರಸುತ್ತಾನೆ. ಮೂರನೇದಾದ ರೂಪ ಪ್ರದ್ಯುಮ್ನ ರೂಪ. ಅನಂತರಾದ ಜೀವರ ಸಮೂಹದೊಳು ವಿದ್ಯಮಾನಗಳಾದ, ಆಯಾ ಪ್ರಾಣಿಗಳ ಚಿದಿಂದ್ರಿಯಗಳಾದ

ದಶೇಂದ್ರಿಯಗಳಲ್ಲಿ ಪ್ರವೇಶನಾದ ಇವನೇ ದಳ ಸಂಚಾರಿಯಾದ ಮೂಲೇಶನು ಇವನೂ ಸಂಕರ್ಷಣರೂಪನಿಂದ ಅಭಿವ್ಯಕ್ತನಾದವನು. ಆಯಾ ಇಂದ್ರಿಯ ಜನ್ಯ ವ್ಯಾಪಾರಗಳ ನಡೆಸುತ್ತಾನೆ. ಶಾಂತೀನಾಮಕ ಲಕ್ಷ್ಮೀಪತಿಯಾದ ಅನಿರುದ್ಧ ಬ್ರಹ್ಮಾಂಡ ಸಾಂಕೇತವಾದ ಮನಿಯಲ್ಲೂ, ತದಪಕಾಶದಲ್ಲೂ ಇರತಕ್ಕ ಜೀವರ ಸ್ಥೂಲದೇಹೇಂದ್ರಿಯಾದಿಗಳಲ್ಲೇನು, ತದನ್ಯ ಸರ್ವತ್ರದಲ್ಲೇನು, ಬ್ರಹ್ಮಾಂಡದ ಹೊರಗೆ ಇರುವ ಪ್ರಾಣಿಗಳ ಸ್ಥೂಲದೇಹದಲ್ಲೇನು, ತದನ್ಯ ನವಾವರಣ ಪರಿಯಂತರದಲ್ಲೂ ವ್ಯಾಪ್ತನಾಗಿ ಇದ್ದಾನೆ. ಈ ಅನಿರುದ್ಧ ರೂಪ ಪ್ರದ್ಯುಮ್ನ ರೂಪದಿಂದ ಅಭಿವ್ಯಕ್ತಿ ಎಂತ ತಿಳೀಬೇಕು. ಈ ಪ್ರಕಾರ ಮೂಲ ಕಾರಣನಾದ ನಾರಾಯಣದೇವರ ರೂಪದಿಂದ ಹೊರಟ ರೂಪಗಳು ನಾಲ್ಕು, ಮೂಲರೂಪ ಒಂದು ಅಂತು ಐದು ರೂಪಗಳು.

೧. ಸೃಷ್ಟಿಕರ್ತ ಅನಿರುದ್ಧ
೨. ಸ್ಥಿತಿಕರ್ತ ಪ್ರದ್ಯುಮ್ನ
೩. ಸಂಹಾರಕರ್ತ ಸಂಕರ್ಷಣ
೪. ಮೋಕ್ಷಪ್ರದ ವಾಸುದೇವ
೫. ಸ್ವರೂಪಾನಂದ ಉಣಿಸುವ ನಾರಾಯಣ

ಈ ಪ್ರಕಾರ ಸರ್ವಜಗತ್ಕಾರ್ಯಗಳಿಗೂ ಇನ್ನೂ ಅನೇಕ ಕಾರ್ಯಗಳಿಗೂ ಕಾರಣರೂಪಗಳು. ಈ ಐದು ರೂಪಗಳು ಎಲ್ಲಾ ಕಡಿಯಲ್ಲೂ ವ್ಯಾಪ್ತವಾಗಿ ಇರುತ್ತವೆ.

**ವಿಶೇಷಾರ್ಥ** - ಮತ್ತು ಇದೇ ಅನಿರುದ್ಧ ಬ್ರಹ್ಮಾಂಡಕ್ಕೆ ಸದೃಶವಾದ ಪಿಂಡಾಂಡವೆನ್ನತಕ್ಕ ಜೀವನ ಸ್ವರೂಪ ದೇಹದಲ್ಲಿ ಅವಾಸನಾಗಿ ಆಧಾರಭೂತನಾಗಿದ್ದಾನೆ. ನಾರಾಯಣ ಜೀವನ ಹೃದಯದಲ್ಲಿ ಪ್ರಾದೇಶನಾಮಕನು ಎಂತ ಕರಸತಾನೆ. ''ಹೃದಯೇ. ಸರ್ವಶೋವ್ಯಾಪ್ತಿ ಪ್ರಾದೇಶಃ''. ಈ ನಾರಾಯಣನ ಆರನೇ ರೂಪವಾದ ಪುರುಷರೂಪ, ಜೀವನ ಸ್ವರೂಪ ದೇಹಗತ, ಉಚ್ಚಾರಣೆಗೆ ಯೋಗ್ಯಗಳಾದ ಓಂಕಾರಾದಿ ವರ್ಣಗಳಲ್ಲಿ ವ್ಯಾಪ್ತವಾಗಿ ಅದೆ. ಈ ಓಂಕಾರದಿಂದ ವರ್ಣಗಳು, ಮಂತ್ರಗಳು ಅಭಿವ್ಯಕ್ತ ಎಂತ ತಿಳಿಯಬೇಕು. ಜೀವರ ಸ್ಥೂಲ ದೇಹ ಪ್ರವಿಷ್ಟ ರೂಪಗಳು ಪ್ರಳಯ ಕಾಲದಲ್ಲಿ ಪುನಶ್ಚ ಮೂಲರೂಪದಲ್ಲಿ ಐಕ್ಯ ಐದುತ್ತವೆ. ಈ ಐದು ರೂಪ

ಗಳು ತ್ರಿಗುಣ ಕಾರ್ಯಗಳ ನಡಿಸುವ ನಿಮಿತ್ತದಿಂದ ಪ್ರವೇಶ ಎಂತ ತಾತ್ಪರ್ಯ. ಈ ಐದು ರೂಪಗಳ ನಾಮ ನಿರ್ವಚನ ಬರಿಯಲ್ಪಡುತ್ತದೆ.

**ನಾರಾಯಣ** ಎಂದರೆ,

೧. ಅರ, ನ, ದೋಷಗಳು ಇಲ್ಲದವ. ಈ ದೋಷರಹಿತವಾದ ಗುಣಗಳು ದಾವವವೋ ಅವುಗಳ, ಅಯಣ-ಚಂದಾಗಿ ಆಶ್ರಯವುಳ್ಳವನಾದು-ದರಿಂದಲೂ,

೨. ನರಾಃ ಎಂದರೆ, ಚೇತನರು ಚೇತನ ಸಂಬಂಧತ್ವ ದೆಶೆಯಿಂದ, ನಾರಂ= ಜ್ಞಾನವು, ಜ್ಞಾನರೂಪನಾದ್ದರಿಂದಲೂ, ಇಂಥಾ ಜ್ಞಾನರೂಪ ರಾದವರಿಗ, ಅಯಣ= ಆಶ್ರಯರೂಪನಾದ್ದರಿಂದಲೂ,

೩. ಅರ, ನ= ಅಜ್ಞಾನರಹಿತನಾದ್ದರಿಂದಲೂ ಜ್ಞಾನಿಗಳಾದ ಭಕ್ತರಿಗೆ, ಅಯಣ= ಆಶ್ರಯನಾದಕಡಿಯಿಂದಲೂ ನಾರಾಯಣ ಎಂತ ತಾತ್ಪರ್ಯ.

ಈ **ನಾರಾಯಣಗೆ** ಅಂಶಿತ್ವವು ಹ್ಯಾಂಗೆ ಅದೆ ಎಂದರೆ, ಈ ನಾಮವು ಅನಿರುದ್ಧಾದಿ ಪಂಚಮೂರ್ತಿ ಪರವಾಗಿ ನಿರ್ವಚನ ಮಾಡೋಣದರಿಂದ ಅಂಶಿತ್ವವು ಕೂಡುತ್ತದೆ. ಅದು ಹ್ಯಾಂಗೆಂದರೆ, ರೀಙ್ ಕ್ಷಯೇ ಎಂತ ಧಾತು ಇದ್ದ ಕಾರಣ ರ ಎಂದರೆ ನಾಶ ಎಂತ ಅರ್ಥವು. ಯಾವಾತನ ಜ್ಞಾನಾನಂದಾದಿಗಳಿಗೆ ವೃದ್ಧಿ ಕ್ಷಯಗಳಿಲ್ಲವೋ ಆತನು ನರ ಎಂತ ಕರಸುತ್ತಾನೆ. ನರ ಎಂದರೆ ವಾಯುವು. ಈ ವಾಯುವಿನ ಅಂತರ್ಯಾಮಿತ್ವದಿಂದ ಆಶ್ರಯನಾದ ಕಾರಣ ನಾರಾಯಣ ಎಂದರೆ ಅನಿರುದ್ಧನೆಂತ ಅರ್ಥ. ನಾರಾ, ಅನಿರುದ್ಧ ಶಬ್ದಗಳಿಗೆ ಏಕಾರ್ಥತ್ವ ಅದೆ. ಹ್ಯಾಂಗೆಂದರೆ, ಅನಃ ಎಂದರೆ ವಾಯುದೇವರು, ಅನೋವೈ ಪ್ರಾಣಃ ಎಂತ ಶ್ರುತಿ. ಈ ವಾಯುದೇವರಲ್ಲಿ ಅತ್ಯಂತವಾಗಿ, ರುದ್ಧಃ= ಅಂತರ್ಯಾಮಿತ್ವದಿಂದ ಬದ್ಧನಾದ ಕಾರಣ, ನಾರಾಯಣಾನಿರುದ್ಧ ಶಬ್ದಗಳಿಗೆ ಏಕಾರ್ಥತ್ವ ಇರೋಣದರಿಂದ ನಾರಾಯಣ ಎಂದರೆ **ಅನಿರುದ್ಧ** ಎಂತ ಸಿದ್ಧವಾಯಿತು. ಕ್ಷೀಣವಾಗದೆ ಇದ್ದ ಸುಖ ಜ್ಞಾನಾನಂದ ಸ್ವರೂಪನಾದ ಕಾರಣ ನಾರಾ ಎಂತ ಕರಸುತ್ತಾನೆ. ತದಂತರ್ಗತ ಭಗವದ್ರೂಪವು ನಾರಾ ಎನಿಸುತ್ತದೆ ಎಂತ ನಾಮ ಮಹೋದಧಿ

ಪ್ರಮಾಣವದೆ. ಆ ಅಧಿಷ್ಠಾನಗತ ಭಗವದ್ರೂಪವು ಆ ಅಧಿಷ್ಠಾನನಾಮದಿಂದ ಕರಸುತ್ತದೆ, ಎಂತ ಶ್ರೀಮದಾಚಾರ್ಯರ ಉಕ್ತಿ ಇರುತ್ತದೆ.

ದಾವಾತಗೆ ಜ್ಞಾನಾನಂದತಿರೋಧಾನಭಾವ ಲಕ್ಷಣ ನಾಶವಿಲ್ಲವೋ ಆತನೇ ನಾರ. ನಾರ ಎಂದರೆ **ಪ್ರದ್ಯುಮ್ನ**. ನಾರಾಯಣ ಪ್ರದ್ಯುಮ್ನ ಶಬ್ದಗಳಿಗೆ ಏಕಾರ್ಥತ್ವವದೆ. ಹ್ಯಾಂಗೆಂದರೆ, ಪ್ರಕೃಷ್ಟತಿರೋಭಾವರಹಿತವಾದ ದ್ಯುತಿ ಎಂದರೆ ಜ್ಞಾನವು. ಅತಿರೋಹಿತ ವಿಜ್ಞಾನವು ಯಾವಾತಗೆ ಅದೆಯೋ ಆತನೇ ಪ್ರದ್ಯುತಿ ಎಂತ ಕರಸತಾನೆ. ಪ್ರದ್ಯುತಿ ಎಂದರೆ ವಾಯುದೇವರು. ಆತನಿಂದ ತಿಳಿಯಲಿಕ್ಕೆ ಯೋಗ್ಯನಾದ ಕಾರಣ, ನಾರ ಎಂದರೆ ಪ್ರದ್ಯುಮ್ನ. ಅತಿರೋಹಿತ ವಿಜ್ಞಾನ ವಿಶಿಷ್ಟರಾದ ಕಾರಣ ವಾಯುದೇವರು ನಾರಾ ಎಂತ ಕರಸತ್ತಾರೆ ಎಂತ ಶ್ರೀಮದಾಚಾರ್ಯರ ಉಕ್ತಿ ಇರುತ್ತದೆ. ಈ ಮುಖ್ಯ ಪ್ರಾಣನ ವಿಜ್ಞಾನದಿಂದ ಜ್ಞೇಯತ್ವವಿದ್ದ ಕಾರಣ ಪ್ರದ್ಯುಮ್ನನು ನಾರಾಯಣ ಎಂತ ಕರಸತಾನೆ.

ಅರ ಶಬ್ದವಾಚ್ಯವಾದ ದುಃಖಗಳನ್ನು ನಾಶಮಾಡುತ್ತಾನಾದ ಕಾರಣ ನಾರ ಎಂದರೆ ವಾಯುದೇವರು. ಈ ವಾಯ್ವಂತರ್ಯಾಮಿತ್ವವಿದ್ದದ್ದರಿಂದ **ಸಂಕರ್ಷಣನು** ನಾರಾಯಣ ಎಂತ ಕರಸತಾನೆ. ನಾರಾಯಣ ಸಂಕರ್ಷಣ ಶಬ್ದಗಳಿಗೆ ಏಕಾರ್ಥತ್ವವದೆ. ಹ್ಯಾಗೆಂದರೆ ದೋಷ ಅರ ಶಬ್ದಗಳಿಗೆ ಏಕಾರ್ಥತ್ವವಿದ್ದ ಕಾರಣ ಅರ ಎಂದರೆ ದೋಷ. ಭಕ್ತ ಜನರ ದೋಷನಾಶನಾದ ಕಾರಣ ವಾಯುವು ನಾರ ಶಬ್ದವಾಚ್ಯನು. ಈ ವಾಯ್ವಂತರ್ಯಾಮಿಯಾಗಿ, ಭಗವದುಪಾಸನ ಮಾಡುವ ಭಕ್ತರ ಪಾಪಾಕರ್ಷಣ ಮಾಡುವನಾದ್ದರಿಂದಲೂ, ಇವರಿಗೆ ಆಶ್ರಯಭೂತನಾಗಿ ಇರುವವರಿಂದಲೂ ಇವರಿಗೆ ಸಂಕರ್ಷಣನು ನಾರಾಯಣ ಎಂತ ಕರಸತಾನೆ.

ನಾರ ಶಬ್ದಕ್ಕೆ ವಾಯುವಾಚಕತ್ವವಿದ್ದ ಕಾರಣ, ವಾಯುದೇವರಿಗೆ ಸರ್ವತ್ರವ್ಯಾಪ್ತಿ. ನಾರ ಎಂದರೆ ವಾಯುವು. ನಾರಾಯಣ ವಾಸುದೇವ ಶಬ್ದಗಳಿಗೆ ಏಕಾರ್ಥತ್ವವದೆ. ರಳ ಗತೌ ಎಂತ ಧಾತುವಿದ್ದ ಕಾರಣ ರ ಎಂದರೆ ಗಮನವೆಂತ ಅರ್ಥವು. ಏಕತ್ರಗಮನವು ದಾವಾತಗೆ ಇಲ್ಲವೋ ಆತ ಅರ ಎಂತ ಕರಸತಾನೆ. ಸರ್ವತ್ರ ಗಮನವು ಯಾವಾತಗೆ ಅದೆಯೋ ಆತನು

ನಾರ ಎಂತ ಕರಸತಾನೆ. ಹೀಂಗ ಹೇಳುವುದರಿಂದ ವಾಯುದೇವರಿಗೆ ಸರ್ವತ್ರ ಪ್ರಾಪ್ತಿ ಸಿದ್ಧವಾಯಿತು. ಸರ್ವತ್ರವಸನಶೀಲತ್ವ ಕ್ರೀಡಾದಿ ಗುಣವಿಶಿಷ್ಟತ್ವ ಹೇತುಗಳಿಂದ, ವಾಸುದೇವನು ವಾಯ್ವಂತಸ್ಥನಾದ ಕಾರಣದಿಂದಲೂ ಆಶ್ರಯನಾದ ಕಾರಣದಿಂದಲೂ ನಾರಾಯಣ ಎಂತ ಕರಸತಾನೆ. ಹೀಂಗೆ ಅಂಬೋಣದರಿಂದ ನಾರಾಯಣ ಎಂದರೆ **ವಾಸುದೇವ**ನಂತ ಸಿದ್ಧವಾಯಿತು.

ಇಂಥಾ ನಾರಾಯಣ ಶಬ್ದವಾದ ಅನಿರುದ್ಧ ಪ್ರದ್ಯುಮ್ನ ಸಂಕರ್ಷಣ ವಾಸುದೇವಾಖ್ಯ ಚತುರ್ಮೂರ್ತಿಗಳಿಗೆ ಆಶ್ರಯನಾದವನು ನಾರಾಯಣನು ಎಂಬುವದರಿಂದ ನಾರಾಯಣಗೆ ಅಂಶಿತ್ವವು ಸಿದ್ಧವಾಯಿತು. ಈ ನಾರಾಯಣ ರೂಪವು ಬ್ರಹ್ಮಾಂಡದ ಬಹಿರ್ಭಾಗಸ್ಥ ಅವ್ಯಾಕೃತಾಕಾಶವು ವ್ಯಾಪಿಸಿಕೊಂಡು ವಿಶ್ವತಃ ಚಕ್ಷುಃ, ವಿಶ್ವತೋ ಮುಖೋ, ವಿಶ್ವತೋ ಬಾಹುಃ ವಿಶ್ವತಃ ಪಾದಃ ಅನಂತ ಶೀರ್ಷಾನಂತಾಕ್ಷಾಽನಂತ ಮುಖ್ಯಾಽನಂತ ಬಾಹೋಽನಂತಪಾದ, ಅನಂತಾನಂತಾವಯವಗಳಿಂದ ಪೂರ್ಣವಾದ ಅಂಶಿರೂಪದಲ್ಲಿ, ಅನಿರುದ್ಧಾದಿ ಅನಂತಾನಂತಾಂಶ ರೂಪಗಳು, ಅನಂತಾನಂತ ಗುಣ, ರೂಪ ನಾಮ ಕ್ರಿಯಾಯುಕ್ತವಾಗಿ ಪಾದಾರಂಭಮಾಡಿ ಶಿರಃಪರಿಯಂತ ತೆನಿಯಲ್ಲಿ ಜೋಳಗಳು ಇದ್ದಂತೆ ವ್ಯಾಪಿಸಿಕೊಂಡಿವೆ. ಈ ನಾರಾಯಣನ ಗುಣರೂಪ ಕ್ರಿಯೆಗಳ ಆದ್ಯಂತ ತಿಳಿಯೋ ನಿಮಿತ್ತ ಶ್ರೀ ದೇವಿಯರು ತಾವು ಅನಂತಾಂಶಗಳಿಂದ ಯುಕ್ತರಾಗಿ ಒಂದು ಗುಣ ಗಣನಾಮಾಡಿದಾಗ್ಯೂ, ಅದರಲ್ಲಿ ಅನಂತತ್ವವನ್ನು ಕಂಡು ಬೆರಗಾಗಿ ಆನಂದ ಸಮುದ್ರದಲ್ಲಿ ಮಗ್ನರಾದರು. ಆ ನಾರಾಯಣನು ಜಗತ್‌ಸೃಷ್ಟಿ ಮಾಡಬೇಕೆಂಬ ಇಚ್ಛಾವುಳ್ಳವನಾಗಿ ತನ್ನ ಮೂಲರೂಪ ನಾರಾಯಣನ ದೆಶೆಯಿಂದ ಅನಂತಾವತಾರಗಳಿಗೆ ಆಶ್ರಯವಾದ, ಅವತಾರಾಭಿವ್ಯಕ್ತಿಗೆ ವ್ಯಂಜಕವಾದ ಪ್ರಳಯ ಸಮುದ್ರಶಾಯಿಯಾದ ಕಾರಣ ನಾರಾಯಣ ಅನಂತ ಗುಣಪೂರ್ಣನಾದ ಕಾರಣ, ಬ್ರಹ್ಮನೇ ಮೊದಲಾದ ಅನಂತ ನಾಮಗಳುಳ್ಳ ಪದ್ಮನಾಭರೂಪವನ್ನು ಅಭಿವ್ಯಕ್ತಿ ಮಾಡಿದನು ಎಂತ ತಾತ್ಪರ್ಯ ॥೧॥

## ೨. ಭಾವ ಪ್ರಕಾಶಿಕೆ

ಪ್ರಳಯ ಕಾಲದಲ್ಲಿ ಶ್ರೀಮನ್ನಾರಾಯಣನು ಲಕ್ಷ್ಮೀಸಮೇತನಾಗಿ ಒಂದೇ ರೂಪದಿಂದ ಇರುವನು. ಅವನೇ ಜಗತ್ತಿಗೆ ಮೂಲಕಾರಣನಾಗಿರುವವನು. ಸೃಷ್ಟಿಕಾಲದಲ್ಲಿ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧನೆಂಬ ೪ ರೂಪಗಳನ್ನು ಧರಿಸುವನು. ಈ ೪ ರೂಪಗಳಿಗೂ ಹೆಂಡತಿಯರಾಗುವುದಕ್ಕಾಗಿ ಲಕ್ಷ್ಮೀದೇವಿಯರು ಮಾಯಾ, ಜಯ, ಕೃತಿ, ಶಾಂತಿಯೆಂದು ೪ ರೂಪಗಳನ್ನು ಧರಿಸಿ ಮೇಲೆ ಹೇಳಿದ ವಾಸುದೇವಾದಿ ೪ ರೂಪಗಳಿಗೆ ಪತ್ನಿಯಾಗುವರು. ಈ ನಾಲ್ಕು ರೂಪಗಳಲ್ಲಿ ಮಾಯಾಪತಿಯಾದ ವಾಸುದೇವನು ಅನಂತಾನಂತವಾದ ಭಗವದವತಾರಗಳಿಗೆ ಬೀಜ ಭೂತನಾದವನು. ಜಯಾಪತಿಯಾದ ಸಂಕರ್ಷಣನು ಶೇಷರೂಪದಿಂದ ಶೇಷಾಂತರ್ಗತನಾಗಿ ಸಕಲ ಚೇತನರೊಳಗೂ ಪ್ರವಿಷ್ಟನಾಗಿ ಅಂಶರೂಪಿ ಎಂದೆನಿಸುವನು. ಕೃತಿಪತಿ ಪ್ರದ್ಯುಮ್ನನು ಸಕಲ ಚೇತನರಲ್ಲಿದ್ದು ನಾನಾವಿಧ ಕರ್ಮಗಳನ್ನು ಮಾಡಿ ಮಾಡಿಸುತ್ತ ಕ್ರೀಡಿಸುತ್ತಿರುವನು. ಬ್ರಹ್ಮಾಂಡದ ಒಳಗೂ ಹೊರಗೂ ಶಾಂತಿಪತಿಯಾದ ಅನಿರುದ್ಧನು ವಾಸವಾಗಿರುವನು ॥೧॥

## ೩. ಭಾವದರ್ಪಣ

।ಹರೀತಿ। ಅನಂತಾನಂತ ಚೇತನ ಸಮೂಹದಲ್ಲಿ ಸರ್ಪರೂಪನಾದ ಸಂಕರ್ಷಣ ಆವೇಶನಾಗಿದ್ದಾನೆಂದು ಹೇಳುತ್ತಾರೆ. । ಮೂಲೇತಿ । ವ್ಯಾಲೇತಿ। 'ಅಹಃ ಸಂವತ್ಸರೋ ವ್ಯಾಲ' ಇತಿ ಸಹಸ್ರನಾಮ ಪಾಠಾತ್ । ಬ್ರಹ್ಮಾಂಡಾಂತರ್ಗತ ಅನಿರುದ್ಧ ಇದ್ದಾನೆಂದು ತಿಳಿಯಬೇಕು ॥೧॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

'ಅವತಾರಾನ್' ಇತ್ಯತ್ರ 'ತದಾವೇಶಾನ್ ತಥಾ ಸಮ್ಯಕ್ ಜ್ಞಾತ್ವಾ

ಮುಕ್ತಿಃ ನ ಚಾನ್ಯಥಾ' ಇತಿ ಆರ್ಯವಾಙ್ಮಾದ್ರಯಾ (ವಿ) ತತ್ಸಂಧಿಂ ಆರ ಭತೇ 'ಮೂಲ' ಇತಿ ॥ ಮೂಲ ರೂಪಂ ॥ ಮಾಯಾಲೋಲಃ ತದಾವಿ ರ್ಭೂತಃ ವಾಸುದೇವಃ॥ 'ಅನಂತ'- 'ಏತನ್ನಾನಾವತಾರಾಣಾಂ ನಿಧಾನಂ' ಇತ್ಯುಕ್ತೇಃ ॥ ವ್ಯಾಲಃ ಸರ್ಪಃ॥ತದ್ರೂಪಃ ॥ ಯದ್ವಾವ್ಯಾಲ್ಯಃ ಆವೇಶಃ ॥ ಅನ್ಯತ್ರ ಪ್ರವೇಶಃ ॥ 'ವ್ಯಾಲಃ-ಓಂ' ಪುರೋಳಾಈತ್ತ್ವರ್ಣಶೇ (ಶೋ) ಯಕ್ಷುರಾಸೀದ್ರಾಯೋ ಮತ್ಸ್ಯೋ ನಿಶಿತಾ ಅಪೀವ॥ ಶೃಷ್ಟಿಂ ಚತ್ರುಃ ಭೃಗು ದುಹ್ಯವಶ್ಚ ಸರವಾಯ ಮತರತ್॥ಓಂ॥ ವ್ಯಾಲಃ ಕ್ರೂರಃ ಪ್ರಾಣೀ। ತದ್ವತ್ ಶತ್ರುಮಾರಕಃ॥ ಶಾಂತಿಃ-ತತ್ಪತಿಃ ॥೧॥

## ಕನ್ನಡಾರ್ಥ

'ಅವತಾರನ್' ಎಂಬಲ್ಲಿ 'ಪರಮಾತ್ಮನಾದ ನಾರಾಯಣನ ಅವತಾರ ಗಳನ್ನೂ ಆವೇಶಗಳನ್ನೂ ಯಥಾವತ್ತಾಗಿ ತಿಳಿದರೇ ಮುಕ್ತಿಯಾಗುವುದು. ಇಲ್ಲದಿದ್ದರೆ ಇಲ್ಲ' ಎಂದು ಹೇಳುವ ಶ್ರೀಮಧ್ವಾಚಾರ್ಯರ ವಚನವನ್ನು ಅನು ಸರಿಸಿ, ಆವೇಶಗಳನ್ನು ಹೇಳಲು ಈ ಸಂಧಿಯನ್ನು ಪ್ರಾರಂಭಿಸುತ್ತಾರೆ - 'ಮೂಲ' ಎಂಬ ಪದ್ಯದಿಂದ.

ನಾರಾಯಣನು ಮೂಲರೂಪನು. ಅವನಿಂದ ಮೊದಲು ವಾಸು ದೇವ ರೂಪವು ಪ್ರಾದುರ್ಭೂತವಾಯಿತು. ಈ ವಾಸುದೇವ ರೂಪವು ನಾನಾ ಅವತಾರಗಳಿಗೆ ಕಾರಣವಾದುದು ಎಂದು ಹೇಳಿದುದರಿಂದ 'ಅನಂತ' ಎಂದು ಹೇಳಿದುದು ಅತ್ಯಂತ ಸಂಗತವು. "ಅನಂತಾವತಾರನಾಮಕ" ಎಂಬುದು ವಾಸುದೇವನಿಗೆ, ವ್ಯಾಳರೂಪ ಜಯಾಪತಿ ಸಂಕರ್ಷಣನಿಗೆ ಹೀಗೆ ಉಭಯತ್ರ ಅನ್ವಯಿಸುತ್ತದೆ. ಅಂದರೆ ಶೇಷರೂಪದಿಂದ, ಶೇಷಾಂತ ರ್ಯಾಮಿ ಸಂಕರ್ಷಣರೂಪವು ಪ್ರಾದುರ್ಭೂತವಾಗಿ ಶೇಷನಲ್ಲಿ ಹಾಗೂ ಉಳಿದವರಲ್ಲಿ ಅಂಶರೂಪದಿಂದ ಪ್ರವಿಷ್ಟನಾಗಿರುತ್ತಾನೆ. 'ವ್ಯಾಲ:'-ಸರ್ಪ

ಈ ರೂಪವುಳ್ಳವನಾಗಿ ಎಂದು ಅರ್ಥ. ಅಥವಾ ವ್ಯಾಲನಲ್ಲಿ - ಸರ್ಪನಾದ ಶೇಷನಲ್ಲಿ ಆವೇಶ ಉಳಿದವರಲ್ಲಿ ಪ್ರವೇಶ.

'ವ್ಯಾಲಃ' - ವ್ಯಾಲ ಎಂದರೆ ಭಯಂಕರ ಕ್ರೂರವಾದ ಪ್ರಾಣಿ. ಅದ ರಂತೆ ಶತ್ರುಗಳನ್ನು ಸಂಹರಿಸುವವನಿಗೆ 'ವ್ಯಾಲ' ಎಂದು ಹೆಸರು. ಬೃಹತೀ ಮಂತ್ರಾನುಗುಣವಾದ ಅರ್ಥವಿದು.

'ಶಾಂತಿ ಅನಿರುದ್ಧ' ಎಂಬಲ್ಲಿ ಶಾಂತಾಪತಿ ಅನಿರುದ್ಧ ಎಂದು ಅರ್ಥ ವನ್ನು ತಿಳಿಯಬೇಕು ॥೧॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ಮೂಲ ಅವತಾರ, ಆವೇಶ, ಕಾರಣ, ಕಾರ್ಯ ನಿಜರೂಪ, ಕಥನ, ಜೀವೇ ಶ್ವರ ಭೋಗ ದೃಷ್ಟಾಂತ, ಅಯೋಗ್ಯರ ಸತ್ಕರ್ಮ ಅನುಪಯೋಗದೃಷ್ಟಾಂತ, ಸದ್ಭಕ್ತರ ಪುಣ್ಯವೃದ್ಧಿ, ಕಾಲಾದಿ ಶುದ್ಧಿಗಿಂತ ದೇವರ ಭಕ್ತಿಯಿಂದ ಅಧಿಕ ಶುದ್ಧಿ, ಅನ್ಯದೇವತಾ ಉಪಾಸನಾ ನಿರಾಕರಣ, ನಿಷ್ಕಾಮ ಹರಿಸೇವೆಯಲ್ಲಿ ಕರ್ತವ್ಯತಾ ದೃಷ್ಟಾಂತ. ದುರ್ಜನತ್ಯಾಗ ದೃಷ್ಟಾಂತ, ಜ್ಞಾನ ಜ್ಞೇಯ ಜ್ಞಾತೃಸ್ಥ ರೂಪವರ್ಣನೆ, ಮೊದಲಾದ ಹರಿಕಥೆ ಎಂಬ ವೇದಾಂತಸಾರವನ್ನು ಗುರುಕೃಪೆಯಿಂದ ಯಥಾಶಕ್ತಿ ಹೇಳುತ್ತೇನೆ. ಉತ್ತಮ ಭಕ್ತರು ಆದರದಿಂದ ಈ ೧೯ನೇ ಸಂಧಿಯನ್ನು ಕೇಳತಕ್ಕದ್ದು ॥ಸಂ ಸೂ॥

ಏಳನೇ ಸಂಧಿಯಲ್ಲಿ ಕಾರಣಾಂಶಾವೇಶ ವ್ಯಾಪ್ತಾವತಾರ ಕಾರ್ಯಾವ್ಯಕ್ತ ಎಂದು ದೇವರ ರೂಪಗಳನ್ನು ಸಂಕ್ಷೇಪಿಸಿ ಹೇಳಿದ್ದನ್ನು ಸ್ವಲ್ಪ ವಿವರಿಸುತ್ತಾರೆ. ಮೂಲ ಎಂದು ಮೊದಲು ಐದು ಪದ್ಯದ ತನಕ. ನಾರಾಯಣ ರೂಪವೇ ಮೂಲ ರೂಪವೆನಿಸುವುದು. ಮಾಯಾಲೋಲನೆಂಬ ವಾಸುದೇವ ರೂಪವು ಅನಂತಾವತಾರನಾಮಕವಾದದ್ದು. ವ್ಯಾಳ ರೂಪ ಎಂದರೆ ಸರ್ಪದಂತೆ ದೀರ್ಘಾಕಾರದ ಕಾಲದಲ್ಲಿ ಅಂತರ್ಯಾಮಿ ಜಯಾಪತಿ ಸಂಕರ್ಷಣ ರೂಪ, ಆವೇಶ ರೂಪವೆನಿಸುವುದು. ಅನಂತ ಜೀವ ಸಮೂಹ

ದಲ್ಲಿ ಲೀಲೆ ಎಂಬ ತತ್ತ್ವಕ್ಕೆ ್ರಿಯಾ ಪ್ರೇರಕ ಪ್ರದ್ಯುಮ್ನ ಅಂತರ್ಯಾಮಿ ರೂಪ ವೆನಿಸುವನು. ಬ್ರಹ್ಮಾಂಡವೆಂಬ ಮನೆ ಒಳಹೊರಗೆ ವ್ಯಾಪಿಸಿರುವ ಅನಿ ರುದ್ಧನು ವ್ಯಾಪ್ತರೂಪನೆನಿಸುವನು||೧||

## ಸರ್ವವ್ಯಾಖ್ಯಾನ್ಯಸಾರ ಸಂಗ್ರಹ

ಜಗತ್ತಿನ ಸೃಷ್ಟಿಕಾರ್ಯಕ್ಕೆ ಪ್ರಧಾನ ಕಾರಣನಾದ ಶ್ರೀ ಪರಮಾತ್ಮನ ಮೂಲ ರೂಪವು **ಶ್ರೀಮನ್ನಾರಾಯಣನು.**

ಮೂಲ ಎಂದರೆ, ಜಗತ್ಸೃಷ್ಟಿಗೆ ಪ್ರಧಾನ ಕಾರಣನೆಂದರ್ಥ **ಅರ**= ಎಂದರೆ ದೋಷಗಳು. **ನ**=ನಿಷೇಧಾರ್ಥರೂಪವು ಅಂದರೆ ಯಾವ ದೋಷ ಗಳೂ ಇಲ್ಲದೆ, ನಿರ್ದೋಷಗಳಾದ ಅನಂತಕಲ್ಯಾಣಗುಣ ಸಮೂಹಗಳಿಗೆ **ಅಯಣ**=ಎಂದರೆ ಆಶ್ರಯವುಳ್ಳವನಾದ್ದರಿಂದ **ನಾರಾಯಣನಾಮಕನು** 'ನಾರಾಯಣ' ಶಬ್ದದಿಂದ ಶ್ರೀ ಪರಮಾತ್ಮನು ಅನಂತ ಕಲ್ಯಾಣಗುಣ ಗಣ ಪೂರ್ಣನು, ಸಮಸ್ತ ದೋಷಗಳಿಂದ ವಿದೂರನೆಂದೂ ಅರ್ಥವಾಗುವುದು.

ಆ ನಾರಾಯಣನೇ ಮಾಯಾಪತಿಯಾದ ವಾಸುದೇವ ರೂಪದಿಂದ ಅಭಿವ್ಯಕ್ತನಾದನು. ಈ ವಾಸುದೇವ ರೂಪವೇ ಅನಂತಾನಂತ ಅವತಾರ ರೂಪಗಳ ಅಭಿವ್ಯಕ್ತಿಗೆ ಕಾರಣವಾಗಿದೆ. ಇದರಿಂದಲೇ ಮಾಯಾರಮಣನಾದ ವಾಸುದೇವರೂಪೀ ಶ್ರೀಮನ್ನಾರಾಯಣನನ್ನು **ಮಾಯಾಲೋಲಽಅನಂತ ತವತಾರ ನಾಯಕ**ನೆಂದು ಕರೆದಿರುವರು. ನಾರಾಯಣ ಮತ್ತು ವಾಸುದೇವ ಶಬ್ದಗಳಿಗೆ ಏಕಾರ್ಥತ್ವವಿದೆ. **ರಳಗತೌ** ಎಂಬ ಧಾತುವಿನ ದೆಸೆಯಿಂದ **ರ**=ಎಂದರೆ ಗಮನವೆಂದರ್ಥ. ಏಕತ್ರ ಗಮನವು ಶ್ರೀ ಪರಮಾತ್ಮನಿಗೆ ಇಲ್ಲವಾದ ಕಾರಣದಿಂದ **ನಾರ** ಎಂದು ಕರೆಸುತ್ತಾನೆ. ಇದರಿಂದ ಶ್ರೀ ವಾಯುದೇವರಿಗೆ ಸರ್ವತ್ರ ವ್ಯಾಪ್ತಿ ಸಿದ್ಧವಾಯಿತು. ಸರ್ವ ಕ್ರೀಡಾದಿ ಗುಣ ವಿಶಿಷ್ಟತ್ವದಿಂದ ವಾಸುದೇವನು ವಾಯ್ವಂತಸ್ಥನಾಗಿದ್ದಾನೆ. ವಾಯು ದೇವರಿಗೆ ಆಶ್ರಯನಾದಕಾರಣದಿಂದ ವಾಸುದೇವ ಶಬ್ದವು ನಾರಾಯಣ ಶಬ್ದಾರ್ಥವಾಗಿದೆ.

ಜಯಾ ನಾಮಕಳಾದ ಲಕ್ಷ್ಮೀದೇವಿಯರ ರಮಣನು **ಸಂಕರ್ಷಣ** ನಾಮಕನಾದ ಶ್ರೀಮನ್ನಾರಾಯಣನು. ಸಂಕರ್ಷಣ ರೂಪವು ಮೂಲರೂಪ ದಿಂದ ಅಭಿವ್ಯಕ್ತವಾದ ದ್ವಿತೀಯ ರೂಪವು. ಜಯಾಪತಿ ಸಂಕರ್ಷಣನು ಶೇಷ ರೂಪದಿಂದ ಶೇಷಾಂತರ್ಗತನಾಗಿ ಸಕಲ ಚೇತನರಲ್ಲಿ ಪ್ರವಿಷ್ಟನಾಗಿದ್ದಾನೆ. ಇದರಿಂದ **ವ್ಯಾಳರೂಪ**(ಸರ್ಪರೂಪ), **ಜಯಾರಮಣನು** (ಸಂಕರ್ಷಣನು) **ಆವೇಶನೆನಿಸುವನು** (ಸಕಲ ಜೀವರಲ್ಲಿ ಪ್ರವಿಷ್ಟನಾಗಿದ್ದಾನೆ) ಎಂದಿದ್ದಾರೆ.

ನಾರಾಯಣ ಮತ್ತು ಸಂಕರ್ಷಣ ಶಬ್ದಗಳಿಗೆ ಏಕಾರ್ಥತ್ವವಿದೆ. ಹೇಗೆಂದರೆ **ಅರ** = ಎಂದರೆ ದೋಷಗಳು. ಶ್ರೀವಾಯುದೇವರು ಭಕ್ತಜನರ ದೋಷನಾಶರಾದ ಕಾರಣದಿಂದ **ನಾರ** = ಶಬ್ದವಾಚ್ಯರು. ಇಂತಹ ವಾಯ್ವಂತರ್ಯಾಮಿಯಾಗಿದ್ದು ಭಗವದುಪಾಸನ ಮಾಡುವ ಭಕ್ತರ ಪಾಪಗಳನ್ನು ಅಪಕರ್ಷಣ ಮಾಡುವುದರಿಂದ ನಾರಾಯಣನು **ಸಂಕರ್ಷಣ**ನೆಂದು ಕರೆಯಿಸುತ್ತಾನೆ

ತನ್ನಿಂದ ಸೃಷ್ಟರಾದ ಸಕಲ ತ್ರಿವಿಧ ಚೇತನ ಸಮೂಹದಲ್ಲಿ ವಿಹಾರ ಮಾಡುವವನು **ಪ್ರದ್ಯುಮ್ನ** ನಾಮಕನಾದ ಮೂಲರೂಪೀ ಶ್ರೀಮನ್ನಾರಾಯಣನೇ. ಇದು ಶ್ರೀಮನ್ನಾರಾಯಣನ ತೃತೀಯ ಅಭಿವ್ಯಕ್ತ ರೂಪವು (ತನ್ನಿಂದ ಅಭಿನ್ನವಾದ ರೂಪವು)

ನಾರಾಯಣ ಮತ್ತು ಪ್ರದ್ಯುಮ್ನ ಇವೆರಡು ಶಬ್ದಗಳಿಗೆ ಏಕಾರ್ಥ್ವತ್ವವಿದೆ. ಜ್ಞಾನಾನಂದತಿರೋಧನ ಭಾವ ಲಕ್ಷಣ ಇಲ್ಲದಿರುವುದರಿಂದ ಪ್ರದ್ಯುಮ್ನನಿಗೆ **ನಾರ** ಎಂದು ಹೆಸರು **ದ್ಯುತಿ** = ಎಂದರೆ ಪ್ರಕೃಷ್ಟತಿರೋಧನ ಭಾವ ರಹಿತವಾದ ಜ್ಞಾನವು. ಅಂತಹ ಅತಿರೋಹಿತ ವಿಜ್ಞಾನವು ಯಾವಾತನಿಗಿದೆಯೋ ಅವನನ್ನು **ಪ್ರದ್ಯುತಿ** = ಎಂದು ಕರೆಯುತ್ತಾರೆ. ಶ್ರೀವಾಯುದೇವರು ಅಂಥಹ ಪ್ರದ್ಯುತಿ ನಾಮಕರು. ಈ ಮುಖ್ಯಪ್ರಾಣನ ವಿಜ್ಞಾನದಿಂದ ಶ್ರೀಹರಿಗೆ ಜ್ಞೇಯತ್ವವಿರುವ ಕಾರಣದಿಂದ ಶ್ರೀಮನ್ನಾರಾಯಣನಿಗೆ ಪ್ರದ್ಯುಮ್ನನೆಂದು ಹೆಸರು.

ಚರಾಚರಾತ್ಮಕವಾದ ಬ್ರಹ್ಮಾಂಡದ ಒಳಗೂ ಮತ್ತು ಹೊರಗೂ ಸರ್ವತ್ರ ವ್ಯಾಪ್ತನಾಗಿರುವುದರಿಂದ ಶ್ರೀಮನ್ನಾರಾಯಣನೇ **ಶಾಂತಿಪತಿ**

ಯಾದ **ಅನಿರುದ್ಧನು. ಅಸುಃ** ಎಂದರೆ ಶ್ರೀ ವಾಯುದೇವರು (ಪ್ರಾಣ ಶಬ್ದವಾಚ್ಯರು) **ಅನೋವೈ ಪ್ರಾಣಃ ಎಂತ ಶ್ರುತಿವಾಕ್ಯವಿರುವುದರಿಂದ** ವಾಯುದೇವರಲ್ಲಿ ಅತ್ಯಂತರಾಗಿ **ರುದ್ಧಃ** ಎಂದರೆ, ಅಂತರ್ಯಾಮಿತ್ವದಿಂದ ಬದ್ಧನಾದ ಕಾರಣ, ನಾರಾಯಣ ಮತ್ತು ಅನಿರುದ್ಧ ಶಬ್ದಗಳಿಗೆ ಏಕಾರ್ಥತ್ವ ಸಿದ್ಧವಾಯಿತು.

ಹೀಗೆ ಜಗತ್ಸೃಷ್ಟಿಗೆ ಮೂಲ ಕಾರಣನಾದ ಶ್ರೀಮನ್ನಾರಾಯಣನಿಂದ ಅಭಿವ್ಯಕ್ತವಾದ ಮಾಯಾಪತಿ ವಾಸುದೇವ, ಜಯಾರಮಣ ಸಂಕರ್ಷಣ, ಕೃತಿ ಪತಿ ಪ್ರದ್ಯುಮ್ನ ಮತ್ತು ಶಾಂತಿಪತಿ ಅನಿರುದ್ಧ-ಎಂಬ ಭಗವದ್ರೂಪ ಚತು ಷ್ಟಯಗಳು ಮೂಲರೂಪೀ ನಾರಾಯಣನಿಂದ ಅಭಿನ್ನವಾಗಿ ಜಗದ್ವ್ಯಾಪಾರ ಗಳಲ್ಲಿ ಕಾರ್ಯ-ಕಾರಣ ರೂಪಗಳೆನಿಸುವುವು.

## ವಿಷಯ ವಿಶ್ಲೇಷಣೆ

| ಕ್ರಮ ಸಂಖ್ಯೆ | ಭಗದ್ರೂಪ ಪಂಚಕ | ವ್ಯಾಪಾರ | ವಿಶೇಷ ವಿಷಯ |
|---|---|---|---|
| ೧ | **ಅನಿರುದ್ಧ** | ಸೃಷ್ಟಿಕರ್ತ | ಬ್ರಹ್ಮಾಂಡದಲ್ಲಿ ಅಂತರ್ಬಹಿಶ್ಚ ಸರ್ವತ್ರ ವ್ಯಾಪ್ತನು |
| ೨ | **ಪ್ರದ್ಯುಮ್ನ** | ಸ್ಥಿತಿಕರ್ತ | ಸಕಲ ಚೇತನರಲ್ಲಿ ವಿಹರಿಸುವವನು |
| ೩ | **ಸಂಕರ್ಷಣ** | ಸಂಹಾರ ಕರ್ತ | ಶೇಷಾಂತರ್ಗತನಾಗಿ ಸಕಲ ಚೇತನರಲ್ಲಿ ಪ್ರವಿಷ್ಟನು |
| ೪ | **ವಾಸುದೇವ** | ಮೋಕ್ಷ ಪ್ರದತ್ವ | ಅನಂತಾವತಾರಗಳಿಗೆ ಕಾರಣರೂಪನು |
| ೫ | **ನಾರಾಯಣ** | ಸ್ವರೂಪಾನಂದ ಉಣಿಸುವವನು | ಮೂಲರೂಪೀ ಶ್ರೀ ಪರಮಾತ್ಮ ಜಗದ್ವ್ಯಾಪಾರಗಳಿಗೆ ಪ್ರಧಾನ ಕಾರಣನು |

## ಪದ್ಯ - ೨

**ಐದು ಕಾರಣರೂಪ ಇಪ್ಪ ।**
**ತ್ತೈದು ಕಾರ್ಯಗಳೆನಿಸುವುವು ಆ।**
**ಕೈದು ರೂಪದಿ ರಮಿಸುತಿಪ್ಪನು ಈ ಚರಾಚರದಿ ॥**
**ಭೇದವರ್ಜಿತ ಮೂರ್ಜಗಜ್ಜ ।**
**ನ್ಮಾದಿ ಕಾರಣ ಮುಕ್ತಿದಾಯಕ**
**ಸ್ವೋದರದೊಳಿಟ್ಟೆಲ್ಲರನ ಸಂತೈಪ ಸರ್ವಜ್ಞ ॥ ॥೨॥**

**ಅವತರಣಿಕೆ :**

ಪೂರ್ವೋಕ್ತ ನಾರಾಯಣಾದಿ ಪಂಚರೂಪವ್ಯೂಹಗಳಿಂದ ಸಮಸ್ತ ಜಗತ್ಕಾರ್ಯ ನಡೆಸುತ್ತಾನೆ-ಎಂದು ಹೇಳುತ್ತಾರೆ ॥೨॥

**ಪ್ರತಿಪದಾರ್ಥ :**

**ಐದು ಕಾರಣ ರೂಪ**= ಪೂರ್ವೋಕ್ತ ನಾರಾಯಣ-ವಾಸುದೇವ-ಸಂಕರ್ಷಣ-ಪ್ರದ್ಯುಮ್ನ-ಅನಿರುದ್ಧ-ಎಂಬ ಪ್ರಪಂಚದ ಸೃಷ್ಟ್ಯಾದಿ ವ್ಯಾಪಾರಕ್ಕೆ ಮುಖ್ಯ ಕಾರಣಗಳಾದ ಪಂಚರೂಪಗಳು. **ಇಪ್ಪತ್ತೈದು ಕಾರ್ಯಗಳೆನಿಸುವುವು**= ಒಂದೊಂದು ರೂಪದಲ್ಲಿಯೂ ಪಂಚರೂಪಗಳಂತೆ, ಐದು ಕಾರಣ ರೂಪಗಳಲ್ಲಿ ೫ X ೫ = ೨೫ ರೂಪಗಳು ಕಾರ್ಯ ರೂಪಗೊಳಿಸುವುವು (ತತ್ತ್ವನ್ಯಾಸದಂತೆ, ೨೪ ತತ್ತ್ವಗಳು + ಪ್ರತಿ ತತ್ತ್ವಕ್ಕೂ ಕಾರಣ ಕಾರ್ಯರೂಪವಾದ ಭಗವತ್ತತ್ತ್ವ = ೨೫ ರೂಪಗಳು) **ಆಕೈದು ರೂಪದಿ**= ಮೂವತ್ತು ರೂಪಗಳಿಂದ (೬ × ೫ = ೩೦) (ಕಾರ್ಯ ರೂಪಗಳು = ೨೫ ಕಾರಣ ರೂಪಗಳು = ೫ ಒಟ್ಟು ೨೫ + ೫ = ೩೦ ರೂಪಗಳು) **ಈ ಚರಾಚರದಿ**= ಜಡಚೇತನಾತ್ಮಕವಾದ ಈ ಜಗತ್ತಿನಲ್ಲಿ **ರಮಿಸುತಿಪ್ಪನು**= ಕ್ರೀಡಿಸುವನು. **ಭೇದವರ್ಜಿತ**= ಮೂಲ ರೂಪಕ್ಕೂ ಅವತಾರ ರೂಪಗಳಿಗೂ, ಅಭಿವ್ಯಕ್ತ ರೂಪಗಳಿಗೂ ಪರಸ್ಪರ ಭೇದವಿಲ್ಲದವನು.

**ಮೂಜಗ** = ಸ್ವರ್ಗ, ಮರ್ತ್ಯ, ಪಾತಾಳ ಎಂಬ ಮೂರು ಲೋಕಗಳಿಂದ ಯುಕ್ತವಾದ ಬ್ರಹ್ಮಾಂಡ, ತದ್ಗತ ಸಮಸ್ತ ಚೇತನವರ್ಗ, **ಜನ್ಮಾದಿ ಕಾರಣ** = ಇವುಗಳ ಸೃಷ್ಟಿ, ಸ್ಥಿತಿ, ಲಯ, ನಿಯಮನ, ಜ್ಞಾನ, ಅಜ್ಞಾನ, ಬಂಧ ಮೋಕ್ಷಗಳಿಂದ ಅಷ್ಟ ವಿಧವಾದ ವ್ಯಾಪಾರಗಳಿಗೆ ಮುಖ್ಯ ಕಾರಣನಾದವನು, **ಮುಕ್ತಿದಾಯಕ** = ವಾಸುದೇವರೂಪದಿಂದ ಸಜ್ಜನರಿಗೆ ಮೋಕ್ಷವನ್ನು ಕೊಡುವವನು, **ಸರ್ವಜ್ಞ** = ಸಮಸ್ತವನ್ನು ತಿಳಿದ ಶ್ರೀ ಪರಮಾತ್ಮನು **ಎಲ್ಲರನ** = ಸ್ಥಾವರಜಂಗಮಾತ್ಮಕ ಸಮಸ್ತ ಪ್ರಾಣಿಗಳನ್ನೂ, ಹಾಂಗೇ ಶುದ್ಧ ಜಡಗಳನ್ನೂ **ಸ್ವ ಉದರದೊಳಿಟ್ಟು** = ತನ್ನ ಉದರದಲ್ಲಿ ಧರಿಸಿದವನಾಗಿ, **ಸಂತೈಪ** = ಸಂರಕ್ಷಿಸುತ್ತಾನೆ.

## ವ್ಯಾಖ್ಯಾನಗಳು ೧

## ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಪೂರ್ವೋಕ್ತ ಐದು ರೂಪಗಳಿಂದಲೇ ಜಗತ್ಕಾರ್ಯ ನಡೆಸುತಾನೆ ಎಂತ ಹೇಳುತಾರೆ.

ಪ್ರಪಂಚ ಸೃಷ್ಟ್ಯಾದಿ ವ್ಯಾಪಾರಕ್ಕೆ ಕಾರಣವಾದ ರೂಪಗಳು ಪೂರ್ವೋಕ್ತ ಐದು. ತತ್ತ್ವನ್ಯಾಸರೀತ್ಯಾ ತತ್ತ್ವಗಳು ಇಪ್ಪತ್ತು ನಾಲ್ಕು, ಅವ್ಯಕ್ತ ತತ್ತ್ವಗಳು ಎರಡು. ಅವು ದಾವುವೆಂದರೆ ರಮಾಭಿಮನ್ಯವಾದ ಅವ್ಯಕ್ತ ಒಂದು, ಬ್ರಹ್ಮಾಣೀ ಭಾರತೀ ಅಭಿಮನ್ಯವಾದ ಅವ್ಯಕ್ತ ತತ್ತ್ವ ಒಂದು ಅಂತು ಇಪ್ಪತ್ತೈದು. ಈ ಇಪ್ಪತ್ತೈದು ಕಾರ್ಯಗಳಿಗೆ ಅನಿರುದ್ಧಾದಿ ಪಂಚರೂಪಗಳಿಂದ ಪ್ರತಿ ಒಂದು ರೂಪದಿಂದಲೂ ಅನಿರುದ್ಧಾದಿ ಐದು ರೂಪಗಳು ಅಭಿವ್ಯಕ್ತಿಯಾಗಿ, ಇಪ್ಪತ್ತೈದು ಕಾರ್ಯಗಳಲ್ಲಿ ಪ್ರವೇಶಮಾಡಿ, ಇಪ್ಪತ್ತೈದು/ಕಾರ್ಯರೂಪಗಳೆಂದು ಕರಸೋವಾಗತವೆ. ಈ ವಿದ್ಯಮಾನವಾದ ಬ್ರಹ್ಮಾಂಡದಲ್ಲಿ ಸೃಜ್ಯರಾದ ಚೇತನ ಜೀವರಲ್ಲೂನೂ, ವೃಕ್ಷಾದಿ/ಜಡಜೀವ

ರಲ್ಲೂನೂ, ಸ್ವರೂಪದೇಹದಲ್ಲೂನೂ, ಮೂವತ್ತು ರೂಪಗಳಿಂದ– ಎಂದರೆ, ಕಾರಣರೂಪಗಳು-ಐದು ಕಾರ್ಯರೂಪಗಳು ಇಪ್ಪತ್ತೈದು ಅಂತು ಮೂವತ್ತು ರೂಪಗಳು ಕ್ರೀಡಾಮಾಡತಾ ಇರತಾನೆ. ತನ್ನ ಮೂಲರೂಪಕ್ಕೂ, ಅವತಾರ ರೂಪಗಳಿಗೂ ಮತ್ತು ಅಭಿವ್ಯಕ್ತ ರೂಪಗಳಿಗೂ ಪರಸ್ಪರ ಜ್ಞಾನಾದಿ ಬಲಗಳಿಂದ ಅತ್ಯಂತ ಅಭೇದವುಳ್ಳವನು. ಮೂರು ಲೋಕಗಳು-ಹದಿನಾಲ್ಕು ಲೋಕಗಳೂ ಗ್ರಾಹ್ಯ-ತದ್ಗತ ಜೀವರ ಜನ್ಮ ಎಂದರೆ ಅನಿರುದ್ಧ ರೂಪದಿಂದ ಸೃಷ್ಟಿ, ಪ್ರದ್ಯುಮ್ನರೂಪದಿಂದ ಸ್ಥಿತಿ, ಸಂಕರ್ಷಣರೂಪದಿಂದ ಸಂಹಾರ, ವಾಸುದೇವರೂಪದಿಂದ ಮುಕ್ತಿ ಇವುಗಳಿಗೆ ಕಾರಣನು ಸರ್ವಜ್ಞನಾದ ನಾರಾಯಣರೂಪದಿಂದ ಬ್ರಹ್ಮ ಪ್ರಳಯದಲ್ಲಿ ಸ್ಥಾವರ-ಜಂಗಮಾತ್ಮಕ ಪ್ರಾಣಿಗಳನ್ನು ಹಾಂಗೆ ಯಾವತ್ತೂ ಶುದ್ಧ ಜಡಗಳನ್ನು ತನ್ನ ಉದರದಲ್ಲಿ ಇಟ್ಟವನಾಗಿ ಸಂರಕ್ಷಣ ಮಾಡತಾನೆ.

**ವಿಶೇಷಾರ್ಥ :** ಸರ್ವಜ್ಞ ಎಂದರೆ ಸ್ವ-ಪರಗತ ಅಶೇಷ ವಿಶೇಷ ಸವಾರ್ಥವಿಷಯಕವಾದದ್ದರನ್ನ ತಿಳಿದವ, ಮತ್ತು ಆರೈದು ಎಂದರೆ ಮೂವತ್ತು ರೂಪ ಎಂತಲೂ ತಿಳಿಯಬಹುದು. ಆರನೇ ರೂಪದಿಂದ ಓಂಕಾರಶಬ್ದ ವಾಚ್ಯನು. ಮ್ಯಾಲೆ ಸ್ಥೂಲ ಸೃಷ್ಟಿಗೆ ಅನಿರುದ್ಧ ಎಂತ ಹೇಳಲ್ಪಟ್ಟಿದೆ. ಸೂಕ್ಷ್ಮ ಸೃಷ್ಟಿಗೆ ನಾರಾಯಣ ವಾಸುದೇವ ಸಂಕರ್ಷಣ ಪ್ರದ್ಯುಮ್ನ. ಈ ನಾಲ್ಕು ರೂಪಗಳಿಂದ, ಲಿಂಗ ದೇಹದ ತ್ರಿಗುಣಾತ್ಮಕ ಉಪಾದಾನ ಮಾಡಿದ ಸೃಷ್ಟಿ, ಸೂಕ್ಷ್ಮಸೃಷ್ಟಿ ಒಂದು.

ನಾರಾಯಣ ಅವ್ಯಕ್ತತತ್ತ್ವ ಸೃಷ್ಟಿ ಮಾಡಿದ ಸೃಷ್ಟಿ ಒಂದು ; ವಾಸುದೇವ ಮಹತ್ತತ್ತ್ವ ಸೃಷ್ಟಿ ಮಾಡಿದ ಸೃಷ್ಟಿ ಒಂದು ; ಸಂಕರ್ಷಣ ಅಹಂಕಾರತತ್ತ್ವ ಸೃಷ್ಟಿ ಮಾಡಿದ ಸೃಷ್ಟಿ ಒಂದು ; ಪ್ರದ್ಯುಮ್ನ ಸರ್ವ ಪ್ರಾಣಿಗಳಿಗೆ ಅನಿರುದ್ಧ ಶರೀರ ಸೃಷ್ಟಿ ಮಾಡಿದ ಸೃಷ್ಟಿ ಒಂದು ಅಂತು ನಾಲ್ಕು, ಇಲ್ಲಿವರಗೆ ಸೂಕ್ಷ್ಮಸೃಷ್ಟಿ. ನಂತರ ಅನಿರುದ್ಧ ಲಿಂಗೋಪಾದಾನಕ್ಕೆ ಅನ್ಯವಾದ ಮೂಲಜಡ ಪ್ರಕೃತಿಯಿಂದ ಅನಿರುದ್ಧರೂಪಿ, ಸ್ಥೂಲ ದೇಹಗಳೂ ಸೃಷ್ಟಿಮಾಡಿದ, ಬ್ರಹ್ಮಾಂಡವೂ ಸೃಷ್ಟಿ ಮಾಡಿದ. ಸ್ವರೂಪ ದೇಹದಲ್ಲಿ

ಯಾವತ್ತೂ ರೂಪಗಳು ಇದ್ದೋಪಾದಿಯಲ್ಲಿ ಸ್ಥೂಲದೇಹಗಳಲ್ಲೂನೂ ತಿಳಿಯಬೇಕು. ಈ ಪ್ರಕಾರ ತಿಳೀತಾ ಬಂದರೆ ಕರ್ಮ ವಿಮೋಚನ ಆಗತಾ ಬರತದೆ ಎಂತ ತಾತ್ಪರ್ಯ ॥೨॥

## ೨ ಭಾವಪ್ರಕಾಶಿಕೆ

ಮೇಲಿನ ಪದ್ಯದಲ್ಲಿ ಹೇಳಿದ ನಾರಾಯಣ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬೀ ೫ ರೂಪಗಳು ಕಾರಣರೂಪಗಳೆನಿಸುವುವು. ಘಟಸೃಷ್ಟಿಗೆ ಹೇಗೆ ಮೃತ್ತಿಕೆಯು ಕಾರಣವೋ ಹಾಗೆ ಜಗತ್ಸೃಷ್ಟಿಗೆ ಈ ರೂಪಗಳು ಕಾರಣವು. ನಾರಾಯಣಾದಿ ಒಂದೊಂದು ರೂಪದಲ್ಲೂ ನಾರಾಯಣಾದಿ ೫ ರೂಪಗಳಿದ್ದು ಕಾರ್ಯರೂಪವಾದ ಜಗತ್ತಿನಲ್ಲಿ ಕಾರ್ಯ ರೂಪಗಳಾಗಿರುವುವು. ಅಂತು ನಾರಾಯಣಾದಿ ೫ ಕಾರಣರೂಪಗಳು ಒಂದೊಂದರೊಳಗೆ ೫-೫ರಂತೆ ಕಾರ್ಯರೂಪಗಳು ೨೫, ಹೀಗೆ ೩೦ರೂಪಗಳಿಂದ ಪ್ರಪಂಚದಲ್ಲಿ ವ್ಯಾಪ್ತನಾಗಿ ಆನಂದಪಡುತ್ತಿರುವನು. ಆದರೂ ಈ ರೂಪ ಗಳಿಗೆ ಪರಸ್ಪರ ಭೇದವಿಲ್ಲದಿರುವನು. ಅಂದರೆ ಗುಣಭೇದವಿಲ್ಲವೆಂದರ್ಥ ರೂಪಭೇದಗಳೂ, ನಾಮಭೇದಗಳೂ ಮಾತ್ರ ಉಂಟು. ಭಂಗಾರದಿಂದ ಅನೇಕ ತರಹಾ ಒಡವೆಗಳನ್ನು ಮಾಡಿಸಿದರೆ ಒಡವೆಗಳ ರೂಪಭೇದದಿಂದ ನಾಮಭೇದಗಳು ಮಾತ್ರ ಏರ್ಪಡುವುವೇ ಹೊರ್ತು ಭಂಗಾರದಲ್ಲಿ ಹೇಗೆ ಭೇದವಿರುವುದಿಲ್ಲವೋ ಹಾಗೆಯೇ, ಮೂಲರೂಪ ಅಂಶರೂಪ ಮೊದಲಾದ ಕಾರಣ ಕಾರ್ಯರೂಪಗಳಿಗಾಗಲೀ ರಾಮ, ಕೃಷ್ಣ ಮತ್ಸ್ಯಕೂರ್ಮ ಮೊದಲಾದ ಅವತಾರ ರೂಪಗಳಲ್ಲಾಗಲೀ ರೂಪಭೇದದಿಂದ ನಾಮಭೇದ ಮಾತ್ರ ವಿರುವವೇ ಹೊರತು ಆನಂದಾದಿ ಗುಣಗಳಲ್ಲಿ ಪರಸ್ಪರ ಭೇದವಿಲ್ಲವೆಂದು ತಿಳಿಯಬೇಕು. ಸೃಷ್ಟ್ಯಾದಿಕರ್ತನು. ಆದಿ ಶಬ್ದದಿಂದ ಸಂರಕ್ಷಣ, ಸಂಹಾರ ಮೊದಲಾದವುಗಳನ್ನು ತೆಗೆದುಕೊಳ್ಳಬೇಕು. ಮುಕ್ತಿಯನ್ನು ಕೊಡುವವನು ಎಲ್ಲರನ್ನೂ ತನ್ನ ಹೊಟ್ಟೆಯಲ್ಲಿ ಇಟ್ಟುಕೊಂಡು ಪ್ರಳಯಕಾಲದಲ್ಲೂ ಕೂಡ ಜೀವರನ್ನು ರಕ್ಷಿಸುವನು. ॥೨॥

### ೩ ಭಾವದರ್ಪಣ

ಅನಿರುದ್ಧಾದಿ ಪಂಚಕವೇ ಕಾರಣರೂಪವೆಂತಲೂ, ಅನಿರುದ್ಧನೊಳಗೆ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ, ನಾರಾಯಣ ಹೀಗೆ ಪಂಚ ಭಗವದ್ರೂಪಗಳು ಪಂಚಭಗವದ್ರೂಪಗಳಲ್ಲಿರುವವೆಂದು ಚಿಂತಿಸಿದರೆ ೨೫ ಭಗವದ್ರೂಪಗಳು ಆಗತವೆ. ಇವೇ ಕಾರ್ಯರೂಪಗಳ ಎಂಬರ್ಥ. ಅಹತ್ಯ ಆರೈದು ಎಂದರೆ ಮೂವತ್ತು ರೂಪಗಳಿಂದ ಜಡಚೇತನಗಳಲ್ಲಿದ್ದು ಕ್ರೀಡಾ ಮಾಡುತ್ತಾನೆಂದು ಹೇಳುತ್ತಾರೆ ॥೨॥

### ೪ ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

'ಐದು' ಇತಿ॥ ನಾರಾಯಣಾದಯಃ ಪಂಚ ಪೃಥಕ್ ಪ್ರಕೃತ್ಯಾ ಸಹ ತತ್ವೇಷು ತಿಷ್ಠಂತಿ ಮಿಲಿತ್ವಾ- "ಆರೈದು ತ್ರಿಂಶತಿ "ಮೂಜ್ಜಗ"-ಮೂರು ಲೋಕ "ಭೂಃ, ಭುವಃ, ಸ್ವಃ" ಇತಿ ॥೨॥

### ಕನ್ನಡಾರ್ಥ

ನಾರಾಯಣ ಮುಂತಾದ ಐದು ರೂಪಗಳು ಕಾರಣಗಳು. ನಾರಾಯಣ-ನಾರಾಯಣ. ನಾರಾಯಣ-ವಾಸುದೇವ ಈ ಮುಂತಾದ ಇಪ್ಪತ್ತೈದು ಕಾರ್ಯರೂಪಗಳು, ಇವಲ್ಲದೇ ಪ್ರಕೃತಿಯಿಂದ ಸಹಿತವಾದ ಇಪ್ಪತ್ತೈದು ತತ್ವಗಳಲ್ಲಿರುವ ೨೫ ಶ್ರೀಹರಿಯ ರೂಪಗಳೂ, ನಾರಾಯಣ ಮುಂತಾದ ಐದು ರೂಪಗಳೂ ಸೇರಿ ಮೂವತ್ತು ರೂಪಗಳಾಗುತ್ತವೆ. "ಮೂಜ್ಜಗ" ಭೂಲೋಕ, ಭುವರ್ಲೋಕ, ಸ್ವರ್ಲೋಕವೆಂಬ ಮೂರು ಲೋಕಗಳು.

## 2. ಶ್ರೀಗುರುಹೃದಯ ಪ್ರಕಾಶಿಕೆ

ಮೇಲೆ ಹೇಳಿದ ಈ ಐದು ರೂಪವು ಕಾರಣ ರೂಪವೆನಿಸುವುವು. ಮಹದಹಂಕಾರ ಮನೋಬುದ್ಧಿ ದಶೇಂದ್ರಿಯ ತನ್ಮಾತ್ರ ಐದು, ಪಂಚಭೂತ,

ಜೀವತತ್ತ್ವಸಹ ಸೇರಿ ಇಪ್ಪತ್ತೈದು ತತ್ತ್ವಗಳಲ್ಲಿ ನಿಯಾಮಕ ಇಪ್ಪತ್ತೈದು ರೂಪಗಳು ಕಾರ್ಯರೂಪಗಳೆನಿಸುವುವು. ಹೀಗೆ ಕಾರಣ ಕಾರ್ಯ ಸಹ ಮೂವತ್ತು ರೂಪದಿಂದ ಭೇದವರ್ಜಿತ ಎಂದರೆ ಬೇರೆ ಬೇರೆ ರೂಪಗಳಿದ್ದರೂ ನವನಾರೀ ಕುಂಜರದಂತೆ ಒಂದೇ ಆಗಿರುವ ಮೂರು ಲೋಕಕ್ಕೂ ಜನ್ಮಾದಿಗಳಿಗೆ ಮುಖ್ಯ ಕಾರಣನಾದ ಮೋಕ್ಷಪ್ರದನಾದ ದೇವರು, ಈ ಚರಾಚರ ಪ್ರಪಂಚದಲ್ಲಿ ವಿಹರಿಸುವನು. ತನ್ನ ಹೊಟ್ಟೆಯಲ್ಲಿ ಎಲ್ಲರನ್ನೂ ಇಟ್ಟುಕೊಂಡು ರಕ್ಷಿಸುವನು ಆದ್ದರಿಂದ ಸರ್ವಜ್ಞನು ॥೨॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ನಾರಾಯಣ-ವಾಸುದೇವ-ಸಂಕರ್ಷಣ-ಪ್ರದ್ಯುಮ್ನ-ಅನಿರುದ್ಧ-ಎಂಬ ಮೂಲರೂಪೀ ಶ್ರೀಮನ್ನಾರಾಯಣನ ಐದು ರೂಪಗಳು ಜಗತ್ಸೃಷ್ಟ್ಯಾದಿ ಕಾರ್ಯಗಳಿಗೆ ಕಾರಣಗಳಾಗಿರುವುದರಿಂದ ಈ ಪಂಚರೂಪಗಳೂ **ಕಾರಣ ರೂಪ**ಗಳೆಂದಿನಿಸುವುವು.

ಅವ್ಯಕ್ತಾದ್ಯಾದಿ ಪೃಥ್ವೀ ತತ್ತ್ವಪರ್ಯಂತ ೨೪ ತತ್ತ್ವಾಂತರ್ಗತ ಭಗವದ್ರೂಪಗಳು೨೪ ಪ್ರತಿಯೊಂದು ತತ್ತ್ವದಲ್ಲಿಯೂ, ತತ್ತ್ವನಿಯಾಮಕ ಭಗದ್ರೂಪದಿಂದ ಅಭಿನ್ನವಾದ ಮೂಲರೂಪ ಶ್ರೀಮನ್ನಾರಾಯಣ ಎಂಬ ಭಗವದತ್ತ್ವಾಚ್ಛರೂಪ ಒಂದು=೨೪+೧=೨೫ ರೂಪಗಳು. ಈ ೨೫ ರೂಪಗಳು ತತ್ತ್ವ ಕಾರ್ಯಕ್ಕೆ ಪ್ರೇರಕ ರೂಪಗಳಾಗಿರುವುದರಿಂದ ಅವು **ಕಾರ್ಯರೂಪ**ಗಳೆನಿಸುವುವು.

ಅಲ್ಲಿಗೆ ಕಾರಣರೂಗಳು = ೫
ಮತ್ತು ಕಾರ್ಯರೂಪಗಳು = ೨೫
ಒಟ್ಟು ೩೦ ರೂಪಗಳಾಯಿತು

ಇದನ್ನೇ ದಾಸರಾಯರು **ಆರೈದುರೂಪದಿ**, ಅಂದರೆ ೬×೫=೩೦ ರೂಪಗಳೆಂದು ತಿಳಿಸಿರುತ್ತಾರೆ.

**ವಿಶೇಷಾಂಕ:**

ನಾರಾಯಣಾದಿ ಪಂಚರೂಪಗಳು, ಪ್ರತಿಯೊಂದರಲ್ಲಿಯೂ ಒಂದ

ರೊಳಗೊಂದು ನವನಾರೀ ಕುಂಜರದಂತೆ ಅಭೇದವಾಗಿ ವ್ಯೂಹರೂಪ ದಲ್ಲಿರುವುವು.

ಅಂದರೆ ನಾರಾಯಣ - ನಾರಾಯಣ, ನಾರಾಯಣ - ವಾಸುದೇವ, ನಾರಾಯಣ - ಸಂಕರ್ಷಣ, ನಾರಾಯಣ - ಪ್ರಧ್ಯುಮ್ನ. ನಾರಾಯಣ-ಅನಿರುದ್ಧ = ೫ ವ್ಯೂಹರೂಪಗಳು.

ಇಂತಯೇ ನಾರಾಯಣ - ವಾಸುದೇವ, ವಾಸುದೇವ - ವಾಸುದೇವ, ವಾಸುದೇವ - ಸಂಕರ್ಷಣ, ವಾಸುದೇವ - ಪ್ರದ್ಯುಮ್ನ. ವಾಸುದೇವ-ಅನಿರುದ್ಧ-= ೫ ವ್ಯೂಹ ರೂಪಗಳು.

ಹೀಗೆಯೇ ನಾರಾಯಣ - ಸಂಕರ್ಷಣ, ವಾಸುದೇವ - ಸಂಕರ್ಷಣ. ಸಂಕರ್ಷಣ - ಸಂಕರ್ಷಣ, ಸಂಕರ್ಷಣ - ಪ್ರದ್ಯುಮ್ನ, ಸಂಕರ್ಷಣ-ಅನಿರುದ್ಧ = ೫ ವ್ಯೂಹ ರೂಪಗಳು

ಅಂತೆಯೇ ನಾರಾಯಣ - ಪ್ರದ್ಯುಮ್ನ, ವಾಸುದೇವ - ಪ್ರದ್ಯುಮ್ನ, ಸಂಕರ್ಷಣ - ಪ್ರದ್ಯುಮ್ನ, ಪ್ರದ್ಯುಮ್ನ - ಪ್ರದ್ಯುಮ್ನ, ಪ್ರದ್ಯುಮ್ನ-ಅನಿರುದ್ಧ, = ೫ ವ್ಯೂಹ ರೂಪಗಳು

ಇಂತೆಯೇ ನಾರಾಯಣ - ಅನಿರುದ್ಧ, ವಾಸುದೇವ - ಅನಿರುದ್ಧ, ಸಂಕರ್ಷಣ - ಅನಿರುದ್ಧ, ಪ್ರದ್ಯುಮ್ನ - ಅನಿರುದ್ಧ, ಅನಿರುದ್ಧ-ಅನಿರುದ್ಧ = ೫ ವ್ಯೂಹ ರೂಪಗಳು

ಹೀಗೆ ೨೫ ವ್ಯೂಹ ರೂಪಗಳೇ ಕಾರ್ಯರೂಪಗಳೆನಿಸುವುವು.

ಇಂತು ಮೂವತ್ತು ರೂಪಗಳಿಂದ ಜಡಚೇತನಾತ್ಮಕವಾದ ಈ ಜಗತ್ತಿನಲ್ಲಿ ಬ್ರಹ್ಮಾಂಡದ ಸೂಕ್ಷ್ಮರೂಪವಾದ ಪಿಂಡಾಡರೂಪವಾದ ಸ್ಥೂಲ ದೇಹದಲ್ಲಿ ವ್ಯಾಪ್ತನಾಗಿ ಮೂಲರೂಪೀ ಶ್ರೀಮನ್ನಾರಾಯಣನು ಕ್ರೀಡೆಯಾಡುತ್ತ ಲೀಲಾವಿಹಾರಿಯಾಗಿದ್ದಾನೆ. ಸಮಸ್ತ ತತ್ತ್ವಕಾರ್ಯಗಳೂ ಅವನಿಂದ ಪ್ರೇರಿತವಾಗಿ ನಡೆಯುತ್ತಿರುವುವು.

ಶ್ರೀ ಪರಮಾತ್ಮನ ಕಾರ್ಯರೂಪಗಳಿಗೂ ಕಾರಣರೂಪಗಳಿಗೂ, ಅನಂತಾನಂತ ಅವತಾರ ರೂಪಗಳಿಗೂ ಅಭಿವ್ಯಕ್ತ ರೂಪಗಳಿಗೂ, ಅವನ ಜ್ಞಾನನಂದಾದಿ ಅನಂತ ಕಲ್ಯಾಣಗುಣಗಳಿಗೂ ಅವನ ಅನಂತಾನಂತ ರೂಪ

ವಾದ ಕ್ರಿಯಾವಿಶೇಷಗಳಿಗೂ ಅಂಗೋಪಾಂಗಗಳಿಗೂ ಪರಸ್ಪರ ವ್ಯತ್ಯಾಸವು ಎಂದೆಂದಿಗೂ ಇಲ್ಲ. ಇದರಿಂದ ಶ್ರೀ ಪರಮಾತ್ಮನು **ಭೇದವರ್ಜಿತನು** (ಗುಣ, ರೂಪ, ನಾಮ, ಕ್ರಿಯಾದಿಗಳೆಲ್ಲಕ್ಕೂ ಅಭೇದವು)

ಸ್ವರ್ಗ, ಮರ್ತ್ಯ ಮತ್ತು ಪಾತಾಳಗಳೆಂಬ ಮೂರು ಲೋಕಗಳು **ಮೂಜಗಗಳು.** ಇವುಗಳನ್ನೊಳಗೊಂಡ ಹದಿನಾಲ್ಕು ಲೋಕಗಳಿಂದ ಯುಕ್ತವಾದದ್ದೇ ಈ ಬ್ರಹ್ಮಾಂಡವು. ಇಂತಹ ಬ್ರಹ್ಮಾಂಡದ ಸೃಷ್ಟ್ಯಾದಿ ಕಾರಣನು ಶ್ರೀಮನ್ನಾರಾಯಣನು. ಬ್ರಹ್ಮಾಂಡ ಹಾಗೂ ತದ್ಗತ ಸಮಸ್ತ ಚೇತನರ ಸೃಷ್ಟಿಗೆ ಮೂಲ ಕಾರಣ ರೂಪನು.

೧. ಅನಿರುದ್ಧ ರೂಪದಿಂದ **ಸೃಷ್ಟಿ** ಕಾರ್ಯ.
೨. ಪ್ರದ್ಯುಮ್ನ ರೂಪದಿಂದ **ಸ್ಥಿತಿ** ಕಾರ್ಯ.
೩. ಸಂಕರ್ಷಣ ರೂಪದಿಂದ **ಲಯ** ಕಾರ್ಯ.
೪. ವಾಸುದೇವ ರೂಪದಿಂದ **ಮುಕ್ತಿ ಪ್ರದತ್ವ** ಕಾರ್ಯ.
೫. ನಾರಾಯಣ ರೂಪದಿಂದ ಜಗತ್ತು ಸರ್ವಜೀವರಿಗೆ **ಆಶ್ರಯ ಪ್ರದತ್ವ** ಕಾರ್ಯ ಹೀಗೆ ಸೃಷ್ಟ್ಯಾದಿ ಅಷ್ಟ ಕಾರ್ಯಗಳಿಗೆ ಮುಖ್ಯ ಕಾರಣನಾಗಿ ಅಷ್ಟ ಕರ್ತನೆನಿಸಿದ್ದಾನೆ.

ಸ್ವಗತ ಅಶೇಷ ವಿಶೇಷ ಸಮಾರ್ಥ ವಿಷಯಕವಾದ ಹಾಗೂ ಪರಗತ ವಿಷಯಕವಾದ ಜ್ಞಾನವನ್ನು ಸಂಪೂರ್ಣವಾಗಿ ತಿಳಿದವನಾದ್ದರಿಂದ **ಸರ್ವಜ್ಞನು**

ಮಹಾಪ್ರಳಯ ಕಾಲದಲ್ಲಿ ಚರಾಚರಾತ್ಮಕನಾದ ಸಮಸ್ತ ಬ್ರಹ್ಮಾಂಡ ವನ್ನೇ ನುಂಗಿ ತನ್ನ ಉದರದಲ್ಲಿ ಸಮಸ್ತ ಚೇತನ ವರ್ಗವನ್ನೂ ಹಾಗೂ ಶುದ್ಧ ಜಡಗಳನ್ನೂ (ಅವುಗಳ ಮೂಲರೂಪದಲ್ಲಿ) ಇಟ್ಟುಕೊಂಡು ಸದಾ ಸಂರಕ್ಷಿಸುತ್ತಿರುವ ಸರ್ವಾಶ್ರಯ ಪ್ರದನಾದ ದಯಾಮಯನು!

# ಪದ್ಯ-2

**ಮೂಲ :**

**ಕಾರ್ಯ ಕಾರಣ ಕರ್ತೃಗಳೊಳು ಸ್ವ ।**
**ಭಾರ್ಯರಿಂದೊಡಗೂಡಿ ಕಪಿಲಾ ।**
**ಚಾರ್ಯ ಕ್ರೀಡಿಸುತಿಪ್ಪ ತನ್ನೊಳು ತಾನೆ ಸ್ವೇಚ್ಛೆಯಲಿ ॥**
**ಪ್ರೇರ್ಯನಲ್ಲೆ ರಮಾಬ್ಜಭವ ಭವ ।**
**ರಾರ್ಯ ರಕ್ಷಿಸಿ ಶಿಕ್ಷಿಸುವನು ಸ್ವ ।**
**ವೀರ್ಯದಿಂದಲಿ ದಿವಿಜದಾನವತತಿಯನನುದಿನದಿ ॥ ॥೨॥**

**ಅವತರಣಿಕೆ :**

ಕಾರ್ಯರೂಪಗಳಲ್ಲಿ ಕರ್ತೃಗಳಲ್ಲಿ ಶ್ರೀದೇವಿಯರ ಸಹಿತನಾಗಿ ತನ್ನ ಸಂಕಲ್ಪಾನುಸಾರ ವಿಹರಿಸುತ್ತಾ ಬಿಂಬರೂಪನಾದ ಶ್ರೀ ಪರಮಾತ್ಮನು ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಾ ದೇವತೆಗಳಿಗೆ ರಕ್ಷಣೆ, ದೈತ್ಯರಿಗೆ ಶಿಕ್ಷೆ ನೀಡುವನೆಂದು ತಿಳಿಸುತ್ತಾರೆ ॥೩॥

**ಪ್ರತಿಪದಾರ್ಥ :**

**ಕಾರಣ** = ಜಗತ್ಸೃಷ್ಟ್ಯಾದಿ ವ್ಯಾಪಾರಗಳಿಗೆ ಕಾರಣಗಳಲ್ಲಿ, **ಕಾರ್ಯ** = ಸೃಷ್ಟಿ. ಸ್ಥಿತಿ, ಲಯಾದಿ ಕ್ರಿಯೆಗಳಲ್ಲಿ, **ಕರ್ತೃಗಳೊಳು** — ಸಕಲ ತತ್ತ್ವ ನಿಯಾಮಕ ದೇವತೆಗಳು, ದೈತ್ಯರು, ದೇಹೇಂದ್ರಿಯಗಳಲ್ಲಿ ಪ್ರಕಾಶತೋ ವ್ಯಾಪ್ತನಾದ ಜೀವ, ಇವರುಗಳಲ್ಲಿ, **ಸ್ವಭಾರ್ಯರಿಂದ ಒಡಗೂಡಿ** — ಅಭಿವ್ಯಕ್ತವಾದ ರಮಾರೂಪಗಳಿಂದ ಸಹಿತನಾಗಿ, **ಕಪಿಲಾಚಾರ್ಯ** — ಜ್ಞಾನರೂಪಿಯಾದ ಪರಮಾತ್ಮನು, **ಸ್ವೇಚ್ಛೆಯಲಿ**—ತನ್ನ ಮನಸ್ಸಿಗೆ ಬಂದಂತೆ ಅಂದರೆ ಸತ್ಯಸಂಕಲ್ಪಾನುಸಾರವಾಗಿ, **ತನ್ನೊಳುತಾನೇ**—ಕಾರಣ ವಸ್ತುಗಳು. ಕಾರ್ಯ ಕರ್ತೃಗಳಲ್ಲಿ ವಿದ್ಯಮಾನವಾಗಿರುವ ತನ್ನದೇ ಭಗದ್ರೂಪಗಳಲ್ಲಿ, **ಕ್ರೀಡಿಸು,**

**ತಿಪ್ಪ** — ರಮಣ ಮಾಡುತ್ತಾನೆ (ಸ್ವರಮಣ ನಾಮಕನು), **ಪ್ರೇರ್ಯನಲ್ಲಿ** = ತನ್ನಿಂದ ಪ್ರೇರಿತರಾದ, **ರಮಾ** — ಶ್ರೀ ಲಕ್ಷ್ಮೀದೇವಿಯರು, **ಅಬ್ಜಭವ** — ಶ್ರೀ ಪರಮಾತ್ಮನ ನಾಭೀ ಕಮಲೋದ್ಭವರಾದ ಬ್ರಹ್ಮದೇವರು, **ಭವರ** — ರುದ್ರದೇವರು, **ಆರ್ಯ** — ಇವರೇ ಮೊದಲಾದ ಸರ್ವರಿಗೆ ಸ್ವಾಮಿಯಾದ ಶ್ರೀ ಪರಮಾತ್ಮನು, **ಅನುದಿನದಿ**—ಯಾವಾಗಲೂ, **ದಿವಿಜದಾನವತತಿಯ**— ದೇವತೆಗಳು ಮತ್ತು ದೈತ್ಯರ ಸಮೂಹವನ್ನು **ಸ್ವವೀರ್ಯದಿಂದಲಿ** — ತನ್ನ ಸಾಮರ್ಥ್ಯದಿಂದ (ಇಚ್ಛಾನುಸಾರ ಶಕ್ತಿ), **ರಕ್ಷಿಸಿ** — ದೇವತಾವರ್ಗವನ್ನು ಸಂರಕ್ಷಿಸುವನು, **ಶಿಕ್ಷಿಸುವನು** — ದೈತ್ಯರ ಸಮೂಹವನ್ನು ಶಿಕ್ಷಿಸುವನು॥೩॥

## ವ್ಯಾಖ್ಯಾನಗಳು

# ೧ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಪೂರ್ವೋಕ್ತ ಪ್ರಕಾರ ಸ್ವರೂಪದಲ್ಲಿ, ಸ್ಥೂಲದಲ್ಲಿ ವ್ಯಾಪಾರಗಳ ಮಾಡಿಸಿ ದೇವತೆಗಳ ರಕ್ಷಣೆ ದೈತ್ಯರ ಶಿಕ್ಷೆ ಮಾಡತಾನೆ ಎಂತ ಹೇಳತಾರೆ.

ಸೂಕ್ಷ್ಮಸೃಷ್ಟಿಗೂನೂ, ಸ್ಥೂಲ ಸೃಷ್ಟಿಗೂನೂ ಕಾರಣಗಳು ಎರಡು. ಸೂಕ್ಷ್ಮಸೃಷ್ಟಿ ಅನಿರುದ್ಧದೇಹಪರಿಯಂತರವೇ. ಇದಕ್ಕೆ ಉಪಾದಾನ ಕಾರಣ ಲಿಂಗದೇಹ. ಸ್ಥೂಲಸೃಷ್ಟಿಗೆ ಉಪಾದಾನ ಕಾರಣ ಅನ್ಯವಾದ ಮೂಲ ಜಡ ಪ್ರಕೃತಿ. ಇದರಿಂದ ಬ್ರಹ್ಮಾಂಡ ನವಾವರಣ ಲೋಕಗಳು, ಪ್ರಾಣಿಗಳ ಸ್ಥೂಲದೇಹ ಇವುಗಳ ಸೃಷ್ಟಿ. ಅಂತು ಉಪಾದಾನ ಕಾರಣಗಳು ಎರಡು ಎಂತ ಅರ್ಥ. ಲಿಂಗೋಪಾದಾನಕಾರ್ಯ ಅನಿರುದ್ಧ ಶರೀರದವರೆಗೂ. ಮೂಲ ಜಡಪ್ರಕೃತಿ ಉಪಾದಾನಕಾರ್ಯ ಬ್ರಹ್ಮಾಂಡಾದಿಗಳು. ಈ ಕಾರಣ-ಕಾರ್ಯಗಳಲ್ಲಿ ಅನಾದಿಕರ್ಮವನ್ನನುಸರಿಸಿ ದೇಹದ್ವಾರಾ ಪಾಪಪುಣ್ಯ ಭೋಗ ಮಾಡತಕ್ಕ ಕರ್ತೃಗಳಾದ ಜೀವರೊಳು ಈ ಯಾವತ್ತರಲ್ಲಿ, ಪೂರ್ವೋಕ್ತ ಮೂವತ್ತು ರೂಪಗಳು-(ಹಾಂಗೆ ರಮಾರೂಪಗಳು) ಅಭಿವ್ಯಕ್ತಿ- ಈತನ

ಪತ್ನೀರಿಂದ ಸಹಿತನಾಗಿ ಜ್ಞಾನರೂಪಿಯಾದ ಪರಮಾತ್ಮ, ತನ್ನ ಇಚ್ಛಾದಿಂದಲಿ ತನ್ನಲ್ಲಿ ಇರತಕ್ಕ ತನ್ನ ಮನಾದಿ ಇಂದ್ರಿಯಗಳಲ್ಲಿ ತತ್ತ್ವಾಭಿಮಾನಿ ದೇವತಾನಾಮಗಳಿಂದ ತಾನೇ ರಮಣಮಾಡತಾ ಇರತಾನೆ. ಅಂದರೆ ಸ್ವರಮಣ ಎಂತ ಅರ್ಥ. ಇಂಥಾ ಪರಮಾತ್ಮ ಆಯಾ ಜೀವರ ಸ್ವರೂಪ ಬಾಹ್ಯಾ ಮನೋ ಇಂದ್ರಿಯಾದಿಗಳಲ್ಲಿ ಇದ್ದು, ಲಕ್ಷ್ಮಿದೇವೇರು, ಬ್ರಹ್ಮದೇವರು, ರುದ್ರದೇವರು ಇವರೇ ಮೊದಲಾದ ತೃಣಾಂತ ಸರ್ವ ಪ್ರಾಣಿಗಳಿಗೆ ಸ್ವಾಮಿಯಾದ ಜ್ಞಾನರೂಪಿಯಾದ ಪರಮಾತ್ಮನು ಅವರವರ ಸ್ವರೂಪ ಜ್ಞಾನವನ್ನನುಸರಿಸಿ, ಮುಕ್ತಿ ಯೋಗ್ಯರಲ್ಲಿ ಸಮೀಚೀನ ಜ್ಞಾನ, ತಮೋ ಯೋಗ್ಯರಲ್ಲಿ ವಿಪರೀತ ಜ್ಞಾನ. ಈ ಪ್ರಕಾರ ಸ್ವರೂಪಯೋಗ್ಯತಾವನ್ನು ಅನುಸರಿಸಿ ಪ್ರೇರಕನು ಸ್ವರೂಪದಲ್ಲಿ ತಾನೇ ಆಗಿನ್ನೂ, ಸ್ಥೂಲ ದೇಹದಲ್ಲಿ ದೇವತೆಗಳ ದ್ವಾರಾ ಪ್ರತಿದಿನದಲ್ಲೂ ಪ್ರೇರಕನಾಗಿನ್ನೂ. ತನ್ನ ಸಾಮರ್ಥ್ಯದಿಂದ ದೇವತೆಗಳ. ತೃಣಾಂತ ಮುಕ್ತಿಯೋಗ್ಯರ ಈ ಸಮೂಹವನ್ನು ಸಂರಕ್ಷಣ ಮಾಡಿ. ದೈತ್ಯರು (ತೃಣಾಂತ ಇವರುಗಳನ್ನ) ನರಕದಲ್ಲಿ ಶಿಕ್ಷೆ ಮಾಡತಾನೆ ಎಂತ ತಾತ್ಪರ್ಯ.

**ವಿಶೇಷಾರ್ಥ :** ಕಪಿಲ ಎಂದರೆ **ಸಂಸಾರಕಂಪಲಯಹೇತುತ್ವಾತ್ಕಪಿಲಃ । ಇತ್ಯಸ್ಮಿನ್ನರ್ಥೇ ವಿಪ್ರತಿಪತಿರ್ನಾಸ್ತೀತ್ಯಾಹ । ಸಾಂಖ್ಯೇತಿ। ಸಾಂಖ್ಯಶಾಸ್ತ್ರಂ ಕೃತ್ವಾ ಪ್ರವರ್ತಕತ್ವೇನ ತದಾಚಾರ್ಯಾಣಾಂ ಪುರುಷಾಣಾಂ ಪರಮಗುರುತ್ವೇನ ತೈಃ ಸು ಸಮಂತೋಽವಿಪ್ರತಿಪನ್ನಃ ಕುತರ್ಕಾ ಖಾಹಿತ ಸಾಂಖ್ಯ ಕರ್ತಾ ನಾಯಮಿತ್ಯಾಹ । ಸಿದ್ಧೇತಿ ಸಿದ್ಧಾ ಮುಕ್ತಾಃ ತೇಷಾಂ ಗಣಸ್ಯಾಧೀಶಃ ಅನ್ಯಕಪಿಲಸ್ಯ ತದಭಾವಾತ್** ॥ ಎಂತ ಅನುಸಂಧಾನ ಮಾಡಿ ಕಾರ್ಯ ಮಾಡತಾ ಬಂದರ ಕರ್ಮವಿಮೋಚನ ಆಗತಾ ಬರತದೆ. ಕರ್ಮ ಉತ್ಪತ್ತಿ ಆದಿಯಲ್ಲಿ ಜೀವನಲ್ಲಿ, ಅಂತ್ಯದಲ್ಲಿ ಸ್ಥೂಲದೇಹದಲ್ಲಿ, ಎಂತ ತಾತ್ಪರ್ಯ ॥೩॥

**ಭಾವಪ್ರಕಾಶಿಕೆ**

ಕಾರ್ಯವಾದ ಒಂದೊಂದು ಪದಾರ್ಥಗಳಿಗೂ ಕಾರಣ ಕತೃಗಳ ಇದ್ದೇ

ಇರುವರು. ಘಟವು ಕಾರ್ಯವು, ಇದಕ್ಕೆ ಮೃತ್ತಿಕೆಯು ಕಾರಣ. ಅವಾಂತರ ಕಾರಣ ದಂಡ ಮೊದಲಾದುವು. ಕರ್ತಾ ಕುಂಬಾರನು. ಮಕ್ಕಳಿಗೆ ರೇತಸ್ಸು ಕಾರಣ. ಸ್ತ್ರೀ ಅವಾಂತರ ಕಾರಣ. ಪುರುಷನು ಕರ್ತ. ಹೀಗ ಊಹಿಸಿ ಕೊಳ್ಳಬೇಕು. ಈ ಪ್ರಕಾರ ಕಾರ್ಯವಸ್ತು, ಕಾರಣವಸ್ತು, ಕರ್ತೃಗಳು ಇವರಲ್ಲಿದ್ದು ಸ್ವೇಚ್ಛೆಯಿಂದ ಶ್ರೀ ಹರಿಯು ರಮಿಸುವನು. ಬ್ರಹ್ಮಾದಿ ಸಕಲರಿಗೂ ಪ್ರೇರಕನು ತಾನೇ. ತನಗೆ ಪ್ರೇರಕರು ಮತ್ತಾರೂ ಇಲ್ಲ. ಲಕ್ಷ್ಮೀ,ಬ್ರಹ್ಮ. ವಾಯು. ರುದ್ರ ಮೊದಲಾದವರಿಗೆ ಸ್ವಾಮಿ ಎನಿಸಿದ ಶ್ರೀ ಹರಿಯು ದೇವಸಂಘವನ್ನು ರಕ್ಷಿಸುತ್ತಾ, ದೈತ್ಯಸಂಘವನ್ನು ಶಿಕ್ಷಿಸುತ್ತಾ ಕ್ರೀಡಿಸುವನು ॥೩॥

## ೩ ಭಾವದರ್ಪಣ

ಕಾರ್ಯಕಾರಣವಸ್ತುಗತನಾಗಿ ಬ್ರಹ್ಮಾದಿದೇವತೆಗಳನ್ನ ಮಾನವ ದಾನವರಗಳನ್ನ ಸಹ ಶಿಕ್ಷಾ ರಕ್ಷಣ ಮಾಡುತ್ತಾನೆಂದು ಹೇಳುತ್ತಾರೆ. ಕಾರ್ಯೇತಿ ಕಪಿಲಾಚಾರ್ಯೇತಿ. "ಮಹರ್ಷಿಃಕಪಿಲಾಚಾರ್ಯ" ಇತಿ ಸಹಸ್ರನಾಮ ಪಾಠಾತ್। ತತಿ = ಸಮೂಹ. ॥೩॥

## ೪ ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

ಕಾರ್ಯ ಇತಿ॥ "ಕಾರಣಂ" *ಓಂ॥ ರಣಂತಿ ಸಪ್ತಸಿ-ಧವಃ (ಸಂಸದಃ) ಇಂದ್ರಂಸುತೇ ಹವಾಮಹೇ ತ್ರಿಕದ್ರುಕೇಷು ಚೇತನಮ್॥ ದೇವಾಸೋಯಜ್ಞ ಮತ್ನತ ತಮಿದ್ವರ್ಧಂತು ॥ಓಂ॥ *ಕಂ ಸವನತ್ರಯಮ್॥ ತತ್ರ ಅಧ್ವರ್ಯ್ವಾದಿ ಶಬ್ದ ವಿಷಯಃ ಕಾರಣಂ॥ "ಗುಣಪ್ರಕೃತಿ ಜೀವಗಃ"॥ ಕಪಿಲಾ ಚಾರ್ಯಃ ಓಂ॥ ಶಿಷ್ಯಂಧಸಃ ದಾನಾ ಮೃಗೋನ ವಾರಣಃ ಪುರುತ್ರಾಚರಥಂ ದಧೇನ ಕಿಷ್ಟ್ವಾ ನಿಯುಮದಾಸುತೇ ಗಮೋ ಮಹಾಂಶ್ಚರಸಿ ।ಓಂ।* ಸುಖ ಪಾತ್ರತ್ವಾತ್ ಕಪಿಃ॥ ಲಾತಿ ಅನುಗ್ರಹ್ಣಾತಿಶಿಷ್ಯಾನ್ ಇತಿಲಃ॥ ಗತೇಃ ಆಚರಚೇಯತ್ವಾತ್ ಆಚಾರ್ಯಃ॥ "ತನ್ನೊಳು"-ಸ್ವರತೇಃ॥ ನ ಹ್ಯನ್ಯರತಿಃ"

ಇತ್ಯುಕ್ತೇಃ॥ "ಪ್ರೇರ್ಯನಲ್ಲ" ಪ್ರೇರಣಾನರ್ಹ ॥ ಭವರತಾನ್॥ "ಆರ್ಯ" ಇತಿ ಪದಂ॥ "ಶಿಕ್ಷಿಸುವುದು" ಶಾಸ್ತಿ ಅನ್ಯಾನ್ ಶಿಕ್ಷಯತಿ ॥೩॥

## ಕನ್ನಡಾರ್ಥ

"ಕಾರಣ" ಸವನತ್ರಯಕ್ಕೆ ಎಂದು ಹೆಸರು. ಈ ಸವನಗಳಲ್ಲಿ ಅಧ್ವರ್ಯು ಮುಂತಾದವರ ಶಬ್ದಗಳಿಗೆ ವೈದಿಕ ಮಂತ್ರಗಳಿಗೆ ಮುಖ್ಯವೃತಿಯಿಂದ ಮುಖ್ಯವಾಗಿ ಪ್ರತಿಪಾದಿತನಾದವನು. ಮತ್ತು ಪ್ರಕೃತಿ ಜೀವರಲ್ಲಿ ರುವವನು.

"ಕಪಿಲಾಚಾರ್ಯ" ಸುಖವನ್ನೇ ಸ್ವೀಕರಿಸುವವ, ಶಿಷ್ಯರನ್ನು ಅನುಗ್ರಹಿಸುವವ ಅನುಕರಣೀಯ ಗತಿಯುಳ್ಳವನು. "ಪರಮಾತ್ಮನಿಗೆ ಅನ್ಯರಿಂದ ರತಿಯಿಲ್ಲ" ಎಂದು ಹೇಳಿರುವುದರಿಂದ "ತನ್ನೊಳು ತಾನೇ" ಎಂದು ಅತಿ ಸಮಂಜಸ. ಭವರ ಆರ್ಯ ಎಂದು ಪದಚ್ಛೇದ, ಅನ್ಯರನ್ನು ಶಾಸನ ಮಾಡುವವನು ॥೩॥

## ೫ ಶ್ರೀಗುರು ಹೃದಯ ಪ್ರಕಾಶಿಕೆ

ಕಾರಣವೆಂಬ ಇಪ್ಪತ್ತುನಾಲ್ಕು ತತ್ತ್ವಗಳಲ್ಲೂ, ಕಾರ್ಯವೆಂಬ ದೇಹದಲ್ಲೂ, ಕರ್ತೃವೆಂಬ ಅಧೀನ ವ್ಯಾಪಾರವುಳ್ಳ ಜೀವನಲ್ಲೂ ಸಹ ಕಪಿಲಾಚಾರ್ಯನೆಂಬ ಸುಖಸಾರಭೋಕ್ತೃವಾಗಿ, ಇತರರಿಗೆ ತದ್ಯೋಗ್ಯಸುಖ ದುಃಖ ಕೊಡುವ ದೇವರು ತನ್ನಲ್ಲಿ ತಾನೇ ಸ್ವೇಚ್ಛೆಯಿಂದ ವಿಹರಿಸುತ್ತಿರುವನು. ಮತ್ತೊಬ್ಬರಿಂದ ಹೇಳಿಸಿಕೊಳ್ಳುವನಲ್ಲ. ರಮಾ ಬ್ರಹ್ಮಾದಿಗಳಿಗೆ ಶ್ರೇಷ್ಠನು. ಸ್ವಸಾಮರ್ಥ್ಯದಿಂದ ದಿವಿಜರೆಂಬ ದೇವಾದಿ ಸಜ್ಜನರನ್ನು ರಕ್ಷಿಸಿ. ದಾನವತತಿ ಎಂಬ ಅಸುರರ ಸಮೂಹವನ್ನು ಸದಾ ಶಿಕ್ಷಿಸುವನು ॥ ೩॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಪ್ರತಿಕ್ರಿಯೆಯೂ ನಡೆಯುವ ಸಂದರ್ಭದಲ್ಲಿ ಮೂರು ಅಂಶಗಳು

ಗಮನೀಯ-(೧) ಕಾರಣ (೨) ಕಾರ್ಯ ಮತ್ತು (೩) ಕರ್ತೃ.

ಒಂದು ಕಾರ್ಯ ನಡೆಯಬೇಕಾದರೆ ಅದಕ್ಕೆ ಹೇತುಭೂತವಾದ ವಸ್ತು ಇರಲೇಬೇಕು. ಇದೇ **ಕಾರಣವು.** ಕಾರಣವಿಲ್ಲದೇ ಒಂದು ಕ್ರಿಯೆ ನಡೆಯುವುದಿಲ್ಲ.

ಘಟದ ನಿರ್ಮಾಣಕ್ಕೆ ಮೃತ್ತಿಕೆಯು ಕಾರಣವು. ಇದಕ್ಕೆ ಉಪಾದಾನ ಕಾರಣವೆಂದು ಹೆಸರು. ದಂಡ, ಕುಲಾಲಚಕ್ರ ಇತ್ಯಾದಿಗಳು ಅವಾಂತರ ಕಾರಣಗಳು.

ಸೃಷ್ಟಿಕ್ರಿಯೆಗೆ ಎರಡು ಉಪಾದಾನ ಕಾರಣಗಳಿವೆ.

(೧) ಸೂಕ್ಷ್ಮಸೃಷ್ಟಿಗೆ ಲಿಂಗದೇಹವೇ ಉಪಾದಾನ ಕಾರಣವು ಅನಿರುದ್ಧ ದೇಹದ ನಿರ್ಮಾಣಕ್ಕೂ ಲಿಂಗೋಪಾದಾನವೇ ಕಾರಣವು.

(೨) ಸ್ಥೂಲ ಸೃಷ್ಟಿಗೆ ಮೂಲಜಡಪ್ರಕೃತಿಯೇ ಉಪಾದಾನ ಕಾರಣವು. ಸರ್ವಶಕ್ತನಾದ ಶ್ರೀ ಪರಮಾತ್ಮನು ಕಾರಣ ವಸ್ತುಗಳಲ್ಲಿ **ಕಾರಣ ರೂಪದಿಂದ ಇದ್ದಾನೆ.**

ಕಾರಣದ ದೆಶೆಯಿಂದ ನಡೆಯುವ ಕ್ರಿಯೆಯೇ **ಕಾರ್ಯವು.** ಘಟನಿರ್ಮಾಣವು ಕಾರ್ಯವೆನಿಸುವುದು. ಅಂತೆಯೇ ಲಿಂಗದೇಹದ ಉಪಾದಾನ ಕಾರಣದಿಂದ ಅನಿರುದ್ಧ ದೇಹದ ಸೃಷ್ಟಿ ಮತ್ತು ಮೂಲ ಜಡ ಪ್ರಕೃತಿಯ ಕಾರಣದಿಂದ ಸ್ಥೂಲ ಸೃಷ್ಟಿಗಳ ಕಾರ್ಯಗಳು. ಇಂತಹ ಕಾರ್ಯಗಳಲ್ಲಿ **ಕಾರ್ಯನಾಮಕನಾಗಿ, ಕಾರ್ಯರೂಪನಾಗಿ ಇದ್ದಾನೆ.**

ಆ ಕಾರ್ಯವು ಯಾವಾತನಿಂದ ನಡೆಯಿಸಲ್ಪಡುವುದೋ, ಅವನಿಗೆ **ಕರ್ತೃ** ಎಂದು ಹೆಸರು. ಘಟನಿರ್ಮಾಣ ಕಾರ್ಯದಲ್ಲಿ ಕುಂಬಾರನೇ ಕರ್ತನು. ಸೂಕ್ಷ್ಮ ಸೃಷ್ಟಿ ಹಾಗೂ ಸ್ಥೂಲ ಸೃಷ್ಟಿಗಳೆಂಬ ಕಾರ್ಯಕ್ಕೆ ಪ್ರಧಾನಕರ್ತನು ಶ್ರೀ ಪರಮಾತ್ಮನೇ.

ಹೀಗೆ ಕಾರಣ ವಸ್ತುಗಳಲ್ಲಿ. ನಡೆಯುವ ಕಾರ್ಯಗಳಲ್ಲಿ ಕರ್ತೃಗಳಾದ ತತ್ತ್ವಾಭಿಮಾನಿ ದೇವತೆಗಳಲ್ಲಿ, ದೈತ್ಯರಲ್ಲಿ. ಕರ್ಮಾನುಭವಕ್ಕೆ ವಿಷಯನಾದ

ಜೀವನಲ್ಲಿ ಶ್ರೀ ಪರಮಾತ್ಮನು ಕಾರಣ - ಕಾರ್ಯ - ಕರ್ತೃ - ವಾಚ್ಯನಾಗಿ ಆಯಾಯಾ ರೂಪಗಳಿಂದಲೇ ವಿದ್ಯಮಾನನಾಗಿದ್ದಾನೆ. ಪ್ರತಿ ಕಾರ್ಯದಲ್ಲಿಯೂ ಶ್ರೀ ಹರಿಯು ತನ್ನ ಪತ್ನಿಯಾದ ಶ್ರೀ ಲಕ್ಷ್ಮೀದೇವಿಯರ ಆಯಾಯ ಅಭಿವ್ಯಕ್ತ ರೂಪಗಳ ಸಹಿತನಾಗಿದ್ದು ಬಿಂಬಕ್ರಿಯಾದ್ವಾರಾ ಪ್ರಧಾನ ಕಾರಣನಾಗಿದ್ದು, ಸಕಲ ಕಾರ್ಯಗಳನ್ನೂ ಮಾಡಿ ಮಾಡಿಸುತ್ತಾ ಮುಖ್ಯ ಕರ್ತೃವೆನಿಸುವನು.

ಅವನೇ **ಕಪಿಲಾಚಾರ್ಯ**ನೆಂಬ ಹೆಸರಿನಿಂದ ವಿದ್ಯಮಾನದಾಗಿದ್ದಾನೆ. **ಕಪಿಲ**-ಎಂದರೆ ಸುಖವನ್ನೇ (ಕಂ) ಸ್ವೀಕರಿಸುವವನು ಎಂದರ್ಥ. ಶಿಷ್ಯರನ್ನು ಅನುಗ್ರಹಿಸುವ ಅನುಕರಣೀಯ ಗತಿಯುಳ್ಳವನಾದ್ದರಿಂದ **ಆಚಾರ್ಯ ನಾಮಕನು.**

**"ಸಂಸಾರಕಂಪಲಯ ಹೇತುತ್ವಾತ್ಕಪಿಲಃ**- ಎಂದು ನಿರ್ವಚನವಿದೆ. ಕಪಿಲಾರ್ಯನಾಮಕನಾದ ಶ್ರೀಪರಮಾತ್ಮನು **ಸ್ವರಮಣನು**. ಅವನಿಗೆ ಅನ್ಯರಿಂದ ರತಿ ಬೇಕಿಲ್ಲ. ಸ್ವಾನಂದ ಪರಿಪೂರ್ಣನು. ಕಾರಣ-ಕಾರ್ಯ-ಕರ್ತೃಗಳಲ್ಲಿರುವ ತನ್ನ ಭಗವದ್ರೂಪಗಳಲ್ಲಿಯೇ ತಾನೇ ಸ್ವತಂತ್ರನಾಗಿ ರಮಣ ಮಾಡುವನು. ಇದರಿಂದ ಅವನಿಗೆ **ಸ್ವರತ**ನೆಂತ ನಾಮ.

ಶ್ರೀಪರಮಾತ್ಮನ ನಿತ್ಯಾವಿನಿಯೋಗಿನಿಯಾದ ಶ್ರೀರಮಾದೇವಿ, ಅವನ ಪ್ರಥಮಾಂಗಭೂತರಾದ ಶ್ರೀಪದ್ಮನಾಭನ ನಾಭೀಕಮಲದಲ್ಲಿ ಉದ್ಭವರಾದ ಶ್ರೀಬ್ರಹ್ಮದೇವರು, ದ್ವಿತೀಯಾಂಗಭೂತರಾದ ಶ್ರೀ ರುದ್ರದೇವರು **(ರಮಾ, ಅಬ್ಜಭವ, ಭವ)** ಇತ್ಯಾದಿ ಸಮಸ್ತ ದೇವತಾಗಣಕ್ಕೆ ಸ್ವಾಮಿಯಾದ್ದರಿಂದ ಅವನಿಗೆ **ಆರ್ಯ**ನೆಂದು ಹೆಸರು. ಅಂದರೆ "ಪೂಜ್ಯ"ನೆಂದರ್ಥ ಸಕಲ ಚೇತನರೂ ಆ ಪೂಜ್ಯನಿಂದ **ಪ್ರೇರ್ಯ**ರು

ಸಮಸ್ತ ದೇವತಾ ಸಮೂಹ, ದೈತ್ಯಗಣಗಳಲ್ಲಿ, ಅಂತರ್ಯಾಮಿಯಾಗಿದ್ದು, ರಮಾರೂಪಗಳಿಂದ ಕೂಡಿಕೊಂಡು ತನ್ನ ಭಗವದ್ರೂಪಗಳಲ್ಲಿಯೇ ಸ್ವೇಚ್ಛೆಯಿಂದ, ಅಂದರೆ ಸರ್ವತಂತ್ರ ಸ್ವತಂತ್ರನಾಗಿ ತನ್ನ ಸಂಕಲ್ಪಾನುಸಾರ ವಿಹಾರ ಮಾಡುತ್ತಿರುವನು **(ಕ್ರೀಡಿಸುತಿಪ್ಪ)** ಸರ್ವ ಕಾರ್ಯಗಳಿಗೂ ಪ್ರೇರಕನಾದ ಶ್ರೀ ಪರಮಾತ್ಮನು ತನ್ನಿಂದ ಪ್ರೇರಿತರಾದ ದೇವತೆಗಳಿಗೆ ರಕ್ಷಣೆ

ಯನ್ನು ನೀಡುವನು. ದುರ್ಜನರೂ, ಭಗವದ್ವೇಷಿಗಳೂ ಆದ ದೈತ್ಯರನ್ನು ಅವರ ದುಷ್ಕರ್ಮಗಳಿಗೆ ತಕ್ಕಂತೆ ನರಕಾದಿಗಳಲ್ಲಿ ಶಿಕ್ಷೆ ಕೊಟ್ಟು ಶಿಕ್ಷಿಸುವನು. ಹೀಗೆ ಸರ್ವಕರ್ತನಾದ ಸರ್ವೇಶನು ಶಿಕ್ಷಕ-ರಕ್ಷಕನಾಗಿದ್ದಾನೆಂದು ತಿಳಿಸುತ್ತಾರೆ ॥೩॥

## ಪದ್ಯ-೪

**ಮೂಲ:**

**ಈ ಸಮಸ್ತ ಜಗತ್ತಿನೊಳಗಾ ।**
**ಕಾಶದೊಳಗಿರುತಿಪ್ಪ ವ್ಯಾಪ್ತಾ ।**
**ವೇಶನವತಾರಾಂತರಾತ್ಮಕನಾಗಿ ಪರಮಾತ್ಮ ॥**
**ನಾಶರಹಿತ ಜಗತ್ತಿನೊಳಗವ ।**
**ಕಾಶದನು ತಾನಾಗಿ ಯೋಗೀ ।**
**ಶಾಶಯಸ್ಥಿತ ತನ್ನೊಳೆಲ್ಲರನಿಟ್ಟು ಸಲಹುವನು ॥೪॥**

**ಅವತರಣಿಕೆ:**

ನಾಶರಹಿತನಾದ ಜಗನ್ನಾಥನು ಸರ್ವತ್ರವ್ಯಾಪ್ತನಾಗಿ ಸಮಸ್ತಕ್ಕೂ ಅವಕಾಶನಾಗಿ ಆಧಾರಭೂತನಾಗಿದ್ದಾನೆಂದು ತಿಳಿಸುತ್ತಾರೆ॥೪॥

**ಪ್ರತಿಪದಾರ್ಥ**

**ಈ ಸಮಸ್ತ ಜಗತ್ತಿನೊಳಗೆ** = ಚತುರ್ದಶ ಭುವನಾತ್ಮಕನಾದ ಸಮಗ್ರ ಬ್ರಹ್ಮಾಂಡದಲ್ಲಿ, **ಆಕಾಶದೊಳಗೆ** = ಸರ್ವತ್ರವ್ಯಾಪ್ತವಾಗಿರುವ ಜಡಾಕಾಶದಲ್ಲಿ, **ವ್ಯಾಪ್ತಿ**–ಪೂರ್ಣವ್ಯಾಪ್ತನಾಗಿ, **ಆವೇಶ**— ಸಕಲ ಚೇತನರಲ್ಲಿ ಬಿಂಬರೂಪದಿಂದ ಪ್ರವೇಶಿಸಿದವನಾಗಿ **ಅವತಾರ**— ಶ್ರೀವಾಸುದೇವ ರೂಪ

ದಿಂದ ಅಭಿವ್ಯಕ್ತವಾದ ಅನಂತವಾದ ಅವತಾರರೂಪಗಳಿಂದ, **ಅಂತರಾತ್ಮಕ ನಾಗಿ** = ಜೀವಾಂತರ್ಗತನಾಗಿ, **ಪರಮಾತ್ಮ** = ಸರ್ವೋತ್ತಮನಾದ ಶ್ರೀಹರಿಯು, **ಇಪ್ಪ** = ವಿದ್ಯಮಾನನಾಗಿದ್ದಾನೆ, **ನಾಶರಹಿತ** = ಅನಾದ್ಯನಂತ ಕಾಲಕ್ಕೂ ಚತುರ್ವಿಧವಾದ ಯಾವ ನಾಶವೂ ಇಲ್ಲದಿರುವ ಶಾಶ್ವತರೂಪ ನಾದ ಶ್ರೀಪರಮಾತ್ಮನು, **ಜಗತ್ತಿನೊಳಗೆ** = ಪ್ರಪಂಚದಲ್ಲಿ(ಪಿಂಡಾಂಡ ರೂಪ ವಾದ ಸ್ಥೂಲದೇಹದಲ್ಲಿ ಸಮಗ್ರವಾಗಿ), **ಅವಕಾಶದನು** = ಅವಕಾಶಪ್ರದ ವಾಗಿ (ಸಕಲ ಕ್ರಿಯಾ ವಿಶೇಷಗಳಿಗೂ ಎಡೆಯನ್ನು ಕೊಡುತ್ತಾ) **ತಾನಾಗಿ**– ಸ್ವಯಂ ಸ್ವತಂತ್ರನಾಗಿ, **ಯೋಗೀಶ** = ಭಗವದ್ಭಕ್ತರಾದ ಜ್ಞಾನಿಗಳಿಗೆ [ಮುನಿ ಯೋಗಿಗಳಿಗೆ] ಒಡೆಯನೂ, **ಆಶ್ರಯಸ್ಥಿತ** = ಆಶ್ರಯದಾತನಾಗಿಯೂ ಆಗಿದ್ದು, **ತನ್ನೊಳು** = ತನ್ನ ಉದರದಲ್ಲಿ, **ಎಲ್ಲರನು** = ಮುಕ್ತಾಮುಕ್ತ ಸಮಸ್ತ ಜೀವರನ್ನೂ, **ಇಟ್ಟು** = ಆಶ್ರಯ ಕೊಟ್ಟು ಇಟ್ಟುಕೊಂಡು **ಸಲಹು ವನು** = ಸಂರಕ್ಷಿಸುತ್ತಾನೆ ॥೪॥

## ವ್ಯಾಖ್ಯಾನಗಳು

## ೧ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಈ ಪೂರ್ವೋಕ್ತ ಪರಮಾತ್ಮ ಒಬ್ಬನೇ ಸಮಸ್ತಕ್ಕೂ ಆಧಾರನಾಗಿ ಇದ್ದಾನೆ ಅಂತ ಹೇಳುತ್ತಾರೆ.

ಜಡಾಕಾಶದಲ್ಲಿ ಸಮಸ್ತ ಜಡದ್ರವ್ಯಗಳು ಸಮಸ್ತರ ಸ್ಥೂಲದೇಹ ಹಾಂಗೆ ಈ ವ್ಯಾಪಿಸಿರುವ ಆಕಾಶದಲ್ಲೂ ತತ್ಸೃಷ್ಟ್ವಾ ತದನುಪ್ರಾವಿಶತ್ ಎಂಬುವ ಶ್ರುತಿರೀತ್ಯಾ ತದಾಕಾರನಾಗಿ ಸಾವಯುವನಾಗಿ ಪೂರ್ವೋಕ್ತ ಮೂವತ್ತು ರೂಪಗಳಿಂದ ಇರ್ತೋವನಾಗಿದ್ದಾನೆ. ಅನಾದ್ಯನಂತಕಾಲಕ್ಕೂ ನಾಶ ಇಲ್ಲದ ಈಶ್ವರನಿಂದ ರಚಿತವಲ್ಲದ ತ್ರಿವಿಧ ಜೀವಸ್ವರೂಪದೊಳು, ಪರಂ ಆತ್ಮ ಎಂತ ಪದ. ಪರಂ ಎಂದರೆ ಜಡೇಂದ್ರಿಯಗಳಿಗೆ ಅನ್ಯವಾದ ಸ್ವರೂಪೇಂದ್ರಿಯಗಳನ್ನು,

ಆತ್ಮ ಎಂದರೆ ನಿಯಮನ ಮಾಡೋ ವಿಷಯದಲ್ಲಿ ಸ್ವಾಮಿಯಾದವ ಪರಮಾತ್ಮ. ಇಂಥಾ ಶ್ರೀಹರಿ ಜೀವನ ಮಧ್ಯದಲ್ಲೇನು, ಜೀವೇಂದ್ರಿಯಗಳ ಇನ್ನೂ ಯಾವತ್ತೂ ತತ್ತ್ವಗಳ ಮಧ್ಯದಲ್ಲೇನು, ನಿಯಾಮಕನಾದವ, ಈ ಪ್ರಕಾರ ಜೀವರಿಗೆ ಬಿಂಬನಾಗಿ ಅನಾದ್ಯಂನತಕಾಲಕ್ಕೂ ಅವಿಯೋಗನಾಗಿ ಇದ್ದಾನೆ ಮತ್ತು ಶ್ರೀ ವಾಸುದೇವ ರೂಪದಿಂದ ಹೊರಟ ಆಯಾ ಜೀವಾಕಾರ ಅವತಾರ ರೂಪಗಳಿಂದ ಆಯಾ ಜೀವರಲ್ಲಿ ಪ್ರವೇಶಮಾಡಿ ನಿತ್ಯಬಿಂಬನಾದ ತನ್ನ ರೂಪದ ಕೂಡಾ ಕೂಡಿಕೊಂಡು, ಜೀವಸ್ವರೂಪದಲ್ಲಿ ತದ್ಗತ ತತ್ತ್ವಗಳಿಗೆ ತಾನೇ ನಿಯಾಮಕನಾಗಿ ಇಚ್ಛಾದಿಗಳ ಉತ್ಪತ್ತಿ ಮಾಡಿ, ಆ ಉತ್ಪನ್ನವಾದ ಇಚ್ಛಾದಿಗಳ ಕಾರ್ಯ ನಡಿಯಬೇಕಾದರೆ ಸ್ಥೂಲದೇಹದಲ್ಲಿ ಬಿಂಬನಾಗಿ ಇದ್ದು, ಬ್ರಹ್ಮಾದಿ ತತ್ತ್ವದೇವತೆಗಳ ದ್ವಾರಾ ಸ್ಥೂಲೇಂದ್ರಿಯಗಳಿಂದ ಕ್ರಿಯಾದಿಗಳು ಆಗುವಂತೆ ಅವಕಾಶ ಕೊಡತಾನೆ. ಎಂದರೆ ಇಚ್ಛಾಮಾತ್ರವೇ ಸ್ವರೂಪದಲ್ಲಿ ದಶೇಂದ್ರಿಯಾದಿಗಳ ಕ್ರಿಯಾಕ್ಕೆ ಅಲ್ಲಿ ಅವಕಾಶವಿಲ್ಲ. ಕ್ರಿಯಾವಕಾಶ ಸ್ಥೂಲದೇಹೇಂದ್ರಿಯಾದಿಗಳಲ್ಲಿ ಸ್ವರೂಪ ಬಿಂಬನ ಕಾರ್ಯ ಪೃಥಕ್ ಆಗಿ ಲಿಂಗ ಭಂಗಾನಂತರ ಈ ತ್ರಿಗುಣ ಕಾರ್ಯ ಪ್ರವಿಷ್ಟರೂಪದಿಂದ ಎಂತ ಅರ್ಥ. ಭಗವದ್ಭಕ್ತರಾದ ಜ್ಞಾನಿಗಳಿಗೆ ಸ್ವಾಮಿ ಹಾಂಗೂ ಆಶ್ರಯನಾಗಿ ತನ್ನ ಭಕ್ತರನ್ನೂ ದ್ವೇಷಿಗಳನ್ನೂ ಇನ್ನೂ ಸಮಸ್ತ ಪದಾರ್ಥಗಳನ್ನೂನು ಪ್ರಳಯ ಕಾಲದಲ್ಲಿ ನಾರಾಯಣ ರೂಪದೊಳು ಇಟ್ಟವನಾಗಿ ಸಂರಕ್ಷಿಸತಾನೆ ಎಂತ ತಿಳಿಯತು ಬಂದರೆ ಕರ್ಮವಿಮೋಚನ ಆಗತದೆ ಎಂತ ತಾತ್ಪರ್ಯ ॥೪॥

## ೨. ಭಾವ ಪ್ರಕಾಶಿಕೆ

ಉದಕ, ಆಕಾಶ, ಪರ್ವತ ಮೊದಲಾದ ಜಡಗಳಲ್ಲೂ. ಬ್ರಹ್ಮದೇವರ ಮೊದಲು ತೃಣಜೀವರವರೆಗೂ ಎಲ್ಲಾ ಚೇತನರುಗಳಲ್ಲೂ ತದ್ರೂಪ ತದಾಕಾರನಾಗಿ ವ್ಯಾಪಿಸಿಕೊಂಡಿರುವ ರೂಪಕ್ಕೆ ವ್ಯಾಪ್ತರೂಪವೆಂದು ಹೆಸರು. ಬಲರಾಮ, ಪ್ರದ್ಯುಮ್ನ, ಸಾಂಬ ಮೊದಲಾದವರಲ್ಲಿ ಪ್ರವಿಷ್ಟವಾದ ಶ್ರೀ ಹರಿಯ ಭಿನ್ನಾಂಶಗಳಿಗೆ ಆವೇಶರೂಪವೆಂದು ಹೆಸರು. ರಾಮಕೃಷ್ಣಾದಿ

ಗಳು ಆವತಾರ ರೂಪಗಳು. ಸರ್ವ ಪ್ರಾಣಿಗಳ ಅಂತರ್ಯಾಮಿ ರೂಪವು ಅಂತರಾತ್ಮಕವು. ಹೀಗೆ ೪ ಪ್ರಕಾರವಾಗಿ ಈ ಜಗತ್ತಿನಲ್ಲಿ ಸರ್ವತ್ರ ವ್ಯಾಪಿಸಿ ಕೊಂಡಿರುವನು, ಆದರೂ ಎಲ್ಲರ ಕಣ್ಣಿಗೆ ಗೋಚರನಾಗನು ಕಣ್ಣಿಗೆ ಕಾಣದ ಮೇಲೆ ಇಲ್ಲವೆಂದೇಕೆ ಹೇಳಬಾರದೆಂದರೆ, ಯೋಗೀಶಾಶಯ ಸ್ಥಿತನೆಂದರು, ಯೋಗಿಗಳು ತಮ್ಮ ಹೃದಯಾಕಾಶದಲ್ಲಿ ಪರಮಾತ್ಮನನ್ನು ನೋಡುತ್ತಿರು ವರು. ನಾವು ಕಾಣದ ಮಾತ್ರದಿಂದ ಪರಮಾತ್ಮನೇ ಇಲ್ಲವೆಂದು ಹೇಳಬ ಹುದೇ? ಇಂಡಿಯಾದೇಶದ ಚಕ್ರವರ್ತಿಯನ್ನು ನಾವು ನೋಡದ ಮಾತ್ರ ದಿಂದ ಚರ್ಕವರ್ತಿಯೇ ಇಲ್ಲವೆಂದು ಹೇಳಲಾದೀತೇ? ನೋಡಿದವರು ಬಹು ಜನರಿರುವುದರಿಂದ ಹಾಗೆ ಹೇಳಲು ಆಗುವುದಿಲ್ಲ. ಚಕ್ರವರ್ತಿಯನ್ನು ಕಾಣಬೇಕಾದರೆ ಅದಕ್ಕೆ ತಕ್ಕ ಪ್ರಯತ್ನಗಳನ್ನು ಯಾವರೀತಿ ಮಾಡಬೇಕೋ ಅದರಂತೆ ಪರಮಾತ್ಮನನ್ನು ಕಾಣುವುದಕ್ಕೆ ಬೇಕಾದ ತಪಸ್ಸು ಮೊದಲಾದುವು ಗಳನ್ನು ಮಾಡಿ ಸಾಧಿಸಬೇಕೆಂದು ತಾತ್ಪರ್ಯ. ನಾಶರಹಿತನೆಂದರೆ ಜೀವರಿಗೂ ನಾಶವಿಲ್ಲ, ಪರಮಾತ್ಮನಿಗೂ ನಾಶವಿಲ್ಲ. ಪರಮಾತ್ಮನಲ್ಲಿ ವಿಶೇಷವೇನೆಂ ದರೆ, ಜೀವನಿಗೆ ನಾಶವಿಲ್ಲದಿದ್ದರೂ. ಜೀವರಿಗೆ ಬರತಕ್ಕ ಸ್ಥೂಲಶರೀರಗಳಿಗೆ ನಾಶವುಂಟು. ಕಡೆಗೆ ಲಿಂಗಶರೀರನಾಶವಾಗುವುದು. ಪರಮಾತ್ಮನಿಗೆ ಇಂಥಾ ನಾಶವೂ ಇಲ್ಲ. ಪರಮಾತ್ಮನ ಶರೀರಕ್ಕೂ ಪರಮಾತ್ಮನಿಗೂ ಭೇದವಿಲ್ಲ. ಜೀವರಿಗೂ ಜಡದೇಹಗಳಿಗೂ ಭೇದವುಂಟು, ಆದ್ದರಿಂದ ಜೀವರಿಗೆ ದೇಹ ನಾಶವುಂಟು, ಪರಮಾತ್ಮನಿಗಿಲ್ಲ. ಇಂತಹಾ ಶ್ರೀಪರಮಾತ್ಮನು ಎಲ್ಲರಿಗೂ ತನ್ನೊಳಗೆ ವಾಸಮಾಡಲು ಅವಕಾಶಕೊಟ್ಟು ಒಳಗಿಟ್ಟುಕೊಂಡು ರಕ್ಷಿಸು ವನು ॥೪॥

## ೩. ಭಾವ ದರ್ಪಣ

ಆವೇಶಕ ಅವತಾರಾತ್ಮಕ ಅಂತರ್ಯಾಮಿ ತಾನಾಗಿ ಆಕಾಶಧಾಗೆ ವ್ಯಾಪಿಸಿ ಸಮಸ್ತರನ್ನು ತನ್ನೊಳಗಿಟ್ಟು ರಕ್ಷಿಪನೆಂದು ಹೇಳುತ್ತಾರೆ. ಈ ಸಮಸ್ತ ಯೋಗೀಶಾಶಯಸ್ಥಿತ ಯೋಗಿಶ್ರೇಷ್ಠರ ಮನಸ್ಸಿನಲ್ಲಿ ಇದ್ದವ ಎಂಬರ್ಥ ॥೪॥

## ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದಿ

"ಈ ಸಮಸ್ತ" ಇತಿ॥ "ಆವೇಶ"-ಅನ್ಯಗತಃ॥ "ಆಶಯ"-ಮನಸ್ಸು ॥೪॥

## ಕನ್ನಡಾರ್ಥ

'ಆಕಾಶವತ್ ಸರ್ವಗತಃ' ಎಂದು ಮುಂತಾಗಿ ಹೇಳಲಾದ ಪರಮಾತ್ಮನು ತನ್ನ ವ್ಯಾಪ್ತರೂಪ, ಅಂತರ್ಯಾಮಿ ರೂಪ, ಅಂಶಾವತಾರ., ಆವೇಶ ಮುಂತಾದುವುಗಳಿಂದ ಜಗತ್ತನ್ನು ತನ್ನ ಉದರದಲ್ಲಿಟ್ಟು ಸಲಹುವನು, ಎಂದು ಈ ಪದ್ಯದಲ್ಲಿ ಹೇಳುತ್ತಾರೆ. ತನ್ನ ಅಂಶ ಅವತಾರಗಳನ್ನು ಬಿಟ್ಟು, ಮಿಕ್ಕ ದೇವತೆಗಳಲ್ಲಿ ಆವೇಶವನ್ನು ಇಡುತ್ತಾನೆ. 'ಯೋಗೀಶಾಶಯ' ಯೋಗಿಗಳ ಹೃದಯ ಮನಸ್ಸು ॥೪॥

## ೪. ಶ್ರೀ ಗುರುಹೃದಯ ಪ್ರಕಾಶಿಕೆ

ಈ ಸಮಸ್ತ ಜಗತ್ತಿನಲ್ಲೂ ದೇವರು ಆಕಾಶದಂತೆ ನಿರ್ಲೇಪನಾಗಿ ವ್ಯಾಪಿಸಿರುವನು. ವ್ಯಾಪ್ತನೆಂದು, ಆವೇಶ ಎಂದು ಅವತಾರ ಎಂದು, ಅಂತರ್ಯಾಮಿ ಎಂದು ಅನೇಕ ರೂಪಗಳಿಂದ ಕರೆಸುವನು, ಆದ್ದರಿಂದಲೇ ಜಗತ್ತಿನ ಸ್ಥೂಲರೂಪ ನಾಶವಾದರೂ, ಯೋಗೀಶಾಶಯ ಸ್ಥಿತ ಎಂಬ ಜ್ಞಾನಿಶ್ರೇಷ್ಠರ ಮನಸ್ಸಿಗೆ ಗೋಚರನಾದ ಪರಮಾತ್ಮ, ನಾಶರಹಿತ ಆಕಾಶದಂತೆ ತಾನು ಅಂತರ್ಬಹಿಶ್ಚ ಇದ್ದರೂ, ಇತರರು ಇರುವುದಕ್ಕೂ ಅವಕಾಶ ಕೊಟ್ಟುಕೊಂಡು ತನ್ನೊಳಗೆ ಎಲ್ಲರನ್ನೂ ಇಟ್ಟು ರಕ್ಷಿಸುತ್ತಿರುವನು. ॥೪॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಚರಾಚರಾತ್ಮಕದಾದ ಈ ಜಗತ್ತಿನಲ್ಲಿ ಸರ್ವತ್ರ ವ್ಯಾಪ್ತವಾಗಿರುವ ಜಡಾವಕಾಶದಲ್ಲಿದ್ದು ಜಗದ್ಗತ ಸಕಲ ವಸ್ತುಗಳಿಗೂ ಅವಕಾಶಪ್ರದನಾಗಿದ್ದಾನೆ.

**'ಆಕಾಶವತ್ ಸರ್ವಗತ:'**- ಎಂಬ ವಚನಾನುಸಾರ ಆಕಾಶದಂತೆ ಸರ್ವ ವಸ್ತುಗಳಲ್ಲಿ ವ್ಯಾಪಿಸಿಕೊಂಡಿದ್ದು ಅವುಗಳ ಅಸ್ತಿತ್ವಕ್ಕೆ ಮುಖ್ಯ ಕಾರಣ ನೆನಿಸಿದ್ದಾನೆ.

**ಪರಂ**— ಎಂದರೆ, ದೇಹಗತ ಜಡೇಂದ್ರಿಯಗಳಿಗೆ ಅನ್ಯವಾದ ಸ್ವರೂಪೇಂದ್ರಿಯಗಳನ್ನು **ಆತ್ಮ**—ಎಂದರೆ ನಿಯಮನ ಮಾಡುವ ವಿಷಯದಲ್ಲಿ ಸ್ವಾಮಿಯಾದವನು ಎಂದು, **ಪರಮಾತ್ಮ**—ಶಬ್ದದ ಅರ್ಥವು ಸರ್ವೋಚ್ಚ-ನಾಗಿ, ಸಕಲ ಜೀವರ ಅಂತರ್ಯಾಮಿಯಾಗಿರುವುದರಿಂದ "ಪರಮಾತ್ಮ" ನಾಮಕನು-

ಅಂತಹ ಪರಮಾತ್ಮನು ನಾನಾ ಪ್ರಕಾರಗಳಲ್ಲಿ ವಿದ್ಯಮಾನನಾಗಿದ್ದಾನೆ.

(೧) ವ್ಯಾಪ್ತರೂಪಗಳಿಂದ (೨) ಆವೇಶ ರೂಪಗಳಿಂದ (೩) ಅವಕಾಶ ರೂಪಗಳಿಂದ (೪) ಅಂತರಾತ್ಮಕನಾಗಿ- ಹೀಗೆ ಅನಂತಪ್ರಕಾಶ.

(೧) ಜಗತ್ತಿನಲ್ಲಿ ಸರ್ವಜಡವಸ್ತುಗಳ ಕಣ ಕಣಗಳಲ್ಲಿ, ಅಣುರೇಣು ತೃಣಕಾಷ್ಠ ಪರಿಪೂರ್ಣನಾಗಿ ವ್ಯಾಪಿಸಿದ್ದಾನೆ. ಜೀವರ ಸ್ಥೂಲದೇಹಗತ ಸಕಲೇಂದ್ರಿಯಗಳಲ್ಲಿ ಅವನ ವ್ಯಾಪ್ತಿ ರೂಪಗಳನ್ನು ತಿಳಿಯಬೇಕು.

(೨) ಸಕಲ ತ್ರಿವಿಧ ಜೀವರಲ್ಲಿ ಬಿಂಬರೂಪದಿಂದ ಪ್ರವಿಷ್ಟನಾಗಿದ್ದಾನೆ, ಬಲರಾಮ. ಪ್ರದ್ಯುಮ್ನ ಸಾಂಬ ಇತ್ಯಾದಿ ಜೀವರುಗಳಲ್ಲಿ ಪ್ರವಿಷ್ಟನಾಗಿರುವ ಶ್ರೀಹರಿಯ ವಿಭೂತಿ ರೂಪಗಳಿಗೆ ಆವೇಶರೂಪಗಳೆಂದು ಕರೆಯುವರು. ಶ್ರೀಹರಿಯ ವಿಶೇಷ ಸನ್ನಿಧಾನಯುಕ್ತವಾದ ರೂಪಗಳು.

(೩) ವಾಸುದೇವರೂಪದಿಂದ ಅಭಿವ್ಯಕ್ತವಾದ ರೂಪಗಳು, ಮತ್ಸ್ಯಾದಿ ರೂಪಗಳು, ಕಪಿಲ, ಹಯಗ್ರೀವ. ವೇದವ್ಯಾಸ ಮೊದಲಾದ ಜ್ಞಾನ ಪ್ರಭೋದಕ ರೂಪಗಳೆಲ್ಲವೂ ಅವತಾರ ರೂಪಗಳು.

(೪) ಸರ್ವ ಚೇತನರಲ್ಲಿ ಜೀವಾಕಾರನಾಗಿ. ಜೀವನಾಮಕವಾಗಿ, ಜೀವಾಂತರ್ಯಾಮಿಯಾಗಿರುವ ಆಯಾಯಾ ಜೀವರಿಂದ ಅತ್ಯಂತ ಭಿನ್ನಗಳಾದ ರೂಪಗಳು, ಅಂತರಾತ್ಮಕ ರೂಪಗಳು.

ಅನಂತಾವತಾರ ಮತ್ತು ರೂಪಾತ್ಮಕನಾದ ಶ್ರೀ ಪರಮಾತ್ಮನು **ನಾಶರಹಿತನು** ಅನಾದ್ಯನಂತ ಕಾಲದಿಂದಲೂ ಶಾಶ್ವತನಾಗಿ, ಶಶ್ವದೇಕ ಪ್ರಕಾರನಾಗಿ, ನಿರ್ವಿಕಾರನಾಗಿರುವನು. ಅಂತಹ ಅಚ್ಯುತನಿಗೆ ಚತುರ್ವಿಧ ವಾದ ದೇಹನಾಶಗಳಿಲ್ಲ. ಜೀವರು ಅನಾದಿ ನಿತ್ಯರಾದರೂ, ಅವರಿಗೆ ಸ್ಥೂಲ ದೇಹ, ಅನಿರುದ್ಧ ದೇಹ, ಲಿಂಗದೇಹಗಳ ನಾಶವುಂಟು. ಜ್ಞಾನಾನಂದಾತ್ಮಕ ನಾದ ಶ್ರೀ ಹರಿಯು ನಾಶರಹಿತನು.

ನಾಶರಹಿತನಾದ ಶ್ರೀಮನ್ನಾರಾಯಣನು. ಈ ಜಗತ್ತಿನಲ್ಲಿ ಸರ್ವತ್ರ ವ್ಯಾಪಿಸಿಕೊಂಡು ಜಗತ್ತಿನಲ್ಲಿರುವ ಸಮಸ್ತ ವಸ್ತುಗಳಿಗೂ ಅವಕಾಶಪ್ರದ ನಾಗಿದ್ದಾನೆ, ದೇಹೇಂದ್ರಿಯಗಳ ವ್ಯಾಪಾರಕ್ಕೆ, ಮನಸ್ಸು ಬುದ್ಧಿಗಳ ಕ್ರಿಯಾ ವಿಶೇಷಗಳಿಗೆ ಅವಕಾಶ ಅಥವಾ ಎಡೆಯನ್ನು ಕೊಟ್ಟು, ಅವುಗಳಿಗೆ ಸ್ವಯಂ ಆಶ್ರಯದಾತನಾಗಿದ್ದಾನೆ. ಹೀಗೆ ಸಮಸ್ತ ಜಡಗಳಲ್ಲಿ, ಚೇತನರಲ್ಲಿ ವ್ಯಾಪ್ತ ನಾಗಿದ್ದು ಸಕಲ ವ್ಯಾಪಾರಗಳನ್ನು ತಾನೇ ಮಾಡಿ ಮಾಡಿಸುತ್ತಿದ್ದರೂ ನಮ್ಮ ಕಣ್ಣಿಗೆ ಗೋಚರನಾಗುವುದಿಲ್ಲ. ಆದರೆ ಯೋಗಿಗಳಾದ ಜ್ಞಾನಿಗಳ ಅಂತಃ ಚಕ್ಷುಗಳಿಗೆ ಗೋಚರನಾಗುವನು. ಯೋಗಿಗಳ ಧ್ಯಾನಕ್ಕೆ ವಿಷಯನು ಅವರ ಜ್ಞಾನಕ್ಕೆ ಗೋಚರನು, ಅವರಿಗೆ ಸರ್ವ ಪ್ರಕಾರಗಳಲ್ಲಿಯೂ ನಿಯಾಮ ಕನು. ಇದರಿಂದ **ಯೋಗೀಶನು** ಜ್ಞಾನಿಗಳಾದ ಭಗದ್ಭಕ್ತರಿಗೆ ಆಶ್ರಯ ದಾತನು. ಆಧಾರಭೂತನು. ಇದರಿಂದ **ಆಶಯಸ್ಥಿತನೆ**ನಿಸಿದ್ದಾನೆ.

ಪ್ರಳಯಾನಂತರ, ಸಕಲ ಶುದ್ಧ ಜಡಗಳನ್ನು ಅವುಗಳ ಮೂಲ ರೂಪ ದಲ್ಲಿ ಸೇರಿಸಿ, ಮುಕ್ತಾಮುಕ್ತ ಸಮಸ್ತ ತ್ರಿವಿಧ ಜೀವರಾಶಿಗಳನ್ನು ತನ್ನ ಉದರ ದಲ್ಲಿಟ್ಟುಕೊಂಡು ಸಂರಕ್ಷಿಸುವ ಕಡುದಯಾಸಾಗರನು.। ॥೪॥

## ಪದ್ಯ – ೫

**ಮೂಲ:**

**ದಾರು ಪಾಷಾಣಗತ ಪಾವಕ ।**
**ಬೇರೆ ಬೇರಿಪ್ಪಂತೆ ಕಾರಣ ।**
**ಕಾರ್ಯಗಳ ಒಳಗಿದ್ದು ಕಾರಣಕಾರ್ಯನೆಂದೆನಿಸಿ ॥**
**ತೋರಿಕೊಳ್ಳದೆ ಎಲ್ಲರೊಳು ವ್ಯಾ ।**
**ಪಾರಮಾಡುವ ಯೋಗ್ಯತೆಗಳನು ।**
**ಸಾರ ಫಲಗಳನುಣಿಸಿ ಸಂತೈಸುವ ಕೃಪಾಸಾಂದ್ರ ॥೫॥**

**ಅವತರಣಿಕೆ:**

ಕಾರ್ಯ ಕಾರಣ ರೂಪಗಳಿಂದ ಸಕಲ ಚೇತನರಲ್ಲಿ ವ್ಯಾಪಾರ ನಡೆಯಿಸುವ ಪರಮಾತ್ಮನು ಒಬ್ಬನೇ ಆದರೂ, ಬೇರೆ ಬೇರೆ ರೂಪಗಳಿಂದ ಇದ್ದು, ಆಯಾಯಾ ಜೀವರ ಯೋಗ್ಯತಾನುಸಾರ ಫಲಗಳನ್ನು ಕೊಡುವನೆಂದು ತಿಳಿಸುತ್ತಾರೆ ॥೫॥

**ಪ್ರತಿಪದಾರ್ಥ:**

**ದಾರು** = ಕಟ್ಟಿಗೆ (ಮರ), **ಪಾಷಾಣ** = ಕಲ್ಲು. **ಗತ** = ಇವುಗಳಲ್ಲಿರುವ, **ಪಾವಕ** = ಅಗ್ನಿಯು, **ಬೇರೆ ಬೇರೆ ಇಪ್ಪಂತೆ** = ಭಿನ್ನ ಅಧಿಷ್ಠಾನಗಳಾದ ಕಾರಣದಿಂದ ಬೇರೆ ಬೇರೆಯಾಗಿ ಇರುವೋಪಾದಿಯಲ್ಲಿ, **ಕಾರಣ** = ಕ್ರಿಯೆಗೆ ಹೇತು ರೂಪವಾದ ಕಾರಣ ವಸ್ತುಗಳಲ್ಲಿ, **ಕಾರ್ಯಗಳ** = ಆಯಾಯಾ ಕಾರಣಗಳಿಗನುಸಾರವಾಗಿ ನಡೆಯುವ ಕ್ರಿಯೆಗಳಲ್ಲಿ **ಒಳಗಿದ್ದು** = ಅವುಗಳಲ್ಲಿ ವ್ಯಾಪಿಸಿಕೊಂಡಿದ್ದು (ದಾರುಪಾಷಾಣಗತ ಅಗ್ನಿಯಂತೆ) **ಕಾರಣ** = ಕಾರಣ ವಸ್ತುಗಳಲ್ಲಿ ಕಾರಣನಾಮಕನಾಗಿಯೂ, **ಕಾರ್ಯನೆಂದೆನಿಸಿ** = ಕಾರ್ಯಗಳಲ್ಲಿ ಕಾರ್ಯನಾಮಕನಾಗಿದ್ದು, ಅದೇ ಹೆಸರುಗಳಿಂದ

ಕರೆಯಿಸಿಕೊಳ್ಳುತ್ತಾ. **ತೋರಿಕೊಳ್ಳದೆ**= ತಾನು ಮಾತ್ರ ಗೋಚರನಾಗದೇ **ಎಲ್ಲರೊಳು**= ಅಧಿಷ್ಠಾನಭೂತರಾದ ಸಮಸ್ತ ತ್ರಿವಿಧಜೀವರುಗಳಲ್ಲಿ. **ವ್ಯಾಪಾರ ಮಾಡುವ** ಚಿಂಚಕ್ರಿಯಾದ್ವಾರ ಕಾರ್ಯಗಳನ್ನು ಮಾಡಿ, ಮಾಡಿಸುತ್ತಾನೆ. **ಯೋಗ್ಯತೆಗಳನುಸಾರ** = ಆಯಾಯಾ ಜೀವರ ಯೋಗ್ಯತೆ ಮತ್ತು ಅನಾದಿಕರ್ಮಾನುಸಾರವಾಗಿ, **ಫಲಗಳನು**= **ಕರ್ಮ** ಜನಿತ ಫಲಗಳನ್ನು **ಉಣಿಸಿ**= ಜೀವರ ಅನುಭೋಗಕ್ಕೆ ತಂದುಕೊಟ್ಟವನಾಗಿ, **ಕೃಪಾಸಂದ್ರ** ದಯಾಸಾಂದ್ರನಾದ ಶ್ರೀ ಪರಮಾತ್ಮನು, **ಸಂತೈಸುವ**= ಜೀವರನ್ನ ಸಂರಕ್ಷಿಸುತ್ತಾನೆ. ॥೫॥

## ವ್ಯಾಖ್ಯಾನಗಳು

## ೧ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಎಲ್ಲರೊಳು ವ್ಯಾಪಾರ ಮಾಡತಕ್ಕ ಪರಮಾತ್ಮ ಒಬ್ಬನೇ ಆದರೂ, ಬ್ಯಾರೆ ಬ್ಯಾರೆ ರೂಪಗಳಿಂದ ಇದ್ದು ಫಲಗಳ ಸರ್ವರಿಗೂ ಸಮಾನವಾಗಿ ಕೊಡೋದಿಲ್ಲ ಎಂತಲೂ, ಪರಮಾತ್ಮನಿಗೂ ಅವನ ರೂಪಗಳಿಗೂ ಅಭೇದ ಚಿಂತಿಸಬೇಕು ಎಂತಲೂ ಹೇಳತಾರೆ.

ಅಗ್ನಿ, ಈ ಅಗ್ನಿಗೆ ಅಧಿಷ್ಠಾನಗಳು ಕಟ್ಟಿಗಿ ಒಂದು, ಕಲ್ಲು ಒಂದು, ಅಂತು ಎರಡು. ಈ ಉಭಯಾಧಿಷ್ಠಾನಗಳಲ್ಲಿ ಅಗ್ನಿ ಅಧಿಷ್ಠಾನಗಳು ಬ್ಯಾರೆ ಬ್ಯಾರೆ ಆದ್ದರಿಂದ ಅಗ್ನಿ ಒಂದೇ ಆದಕಾಲಕ್ಕೂ. ಅಧಿಷ್ಠಾನವಿವಕ್ಷಾದಿಂದ ಬ್ಯಾರೆ ಬ್ಯಾರೆ ಆಗಿ ಇದ್ದಾನೆ. ಇದ್ದಾನೆ ಎಂಬುದಕ್ಕೆ ದಾರು ಮಂಥನದಿಂದಲೂ, ಕಲ್ಲು ಪರಸ್ಪರ ಬಲವಾದ ಸ್ಪರ್ಶದಿಂದಲೂ ಅಗ್ನಿ ಕಾಣಿಸೋದಾಗತದೆ. ಇದರೋಪಾದಿಯಲ್ಲಿ ಒಂದೇ ಅಗ್ನಿ ಎರಡು ಅನುಷ್ಠಾನದಲ್ಲಿ ಬ್ಯಾರೆ ಬ್ಯಾರೆ ಇದ್ದೋಪಾದಿಯಲ್ಲಿ, ಅಸದೃಶನಾದ ಸರ್ವೋತ್ತಮನಾದ ಪರಮಾತ್ಮ, ಪೂರ್ವೋಕ್ತ ಲಿಂಗೋಪಾದಾನ ಕಾರಣ ಒಂದು, ಮೂಲ ಜಡ ಪ್ರಕೃತ್ಯಾಖ್ಯ ಉಪಾದಾನ ಕಾರಣ ಒಂದು, ಇವು ಎರಡೂ ಕಾರಣಗಳು.

ಕಾರ್ಯಗಳು ಎರಡು. ಅವು ದಾವವೆಂದರೆ ಲಿಂಗಕಾರಣದ ಕಾರ್ಯ ಅನಿರುದ್ಧ ಶರೀರದವರೆಗೂ, ಮೂಲಜಡಪ್ರಕೃತಿಕಾರಣದ ಕಾರ್ಯ ಮಹದಾದಿಗಳು, ಬ್ರಹ್ಮಾಂಡಲೋಕಗಳು, ಅಂಡಾವರಣಗಳು, ಪ್ರಾಣಿಗಳ ಸ್ಥೂಲದೇಹ ಗಳೊಳು, ಅಂತು ಎರಡು ಕಾರ್ಯಗಳು. ಕಾರಣದ್ವಯ, ಕಾರ್ಯದ್ವಯ ಇವುಗಳಲ್ಲಿ ದಾರು-ಪಾಶಾಣಗತ ಅಗ್ನಿ ಸದೃಶನಾಗಿದ್ದು, ಅದೃಶ್ಯನಾಗಿದ್ದು ಕಾರಣಗಳಲ್ಲಿ ಕಾರಣವಾಚ್ಯನಾಗಿನ್ನೂ, ಕಾರ್ಯಗಳಲ್ಲಿ ಕಾರ್ಯಶಬ್ದವಾಚ್ಯ ನಾಗಿನ್ನೂ, ತದ್ವಾಚ್ಯನೆಂದೆನಿಸಿ ಹಾಂಗೆ ಅಧಿಷ್ಠಾನಭೂತರಾದ ಸರ್ವಜೀವರಲ್ಲಿ ಪೂರ್ವೋಕ್ತಪ್ರಕಾರ ಕಾಣಿಸದೆ ಇದ್ದು. ಅನಾದಿಸ್ವರೂಪಯೋಗ್ಯತಾನುಸಾರ. ಅನಾದಿಕರ್ಮಾನುಸಾರ ಆಯಾ ಜೀವರ ಸ್ಥೂಲದೇಹೇಂದ್ರಿಯಾದಿಗಳಿಂದ ಕಾರ್ಯಗಳ ಮಾಡಿಸಿ, ಆಯಾ ಕರ್ಮಜನಿತ ಫಲಗಳ ಉಣಿಸಿ, ವೈಷಮ್ಯನೈರ್ಘೃಣ್ಯ ಶೂನ್ಯನಾದ, ಕೃಪಾಸಮೂಹವುಳ್ಳ, ಪರಮಾತ್ಮ ಅವರವರ ಸ್ವರೂಪ ಯೋಗ್ಯತಾನುಸಾರ ಪರಿಯವಸಾನಕ್ಕೆ ರಕ್ಷಿಸುತಾನೆ ಎಂತ ತಿಳದು ಉಪಾಸನಾ ಮಾಡತಾ ಬಂದರೆ ಕರ್ಮ ವಿಮೋಚನಿಯಾಗತದೆಂತ ತಾತ್ಪರ್ಯ ॥೫॥

## ೨ ಭಾವಪ್ರಕಾಶಿಕೆ

ಕಾಷ್ಠದಲ್ಲೂ ಕಲ್ಲುಗಳಲ್ಲೂ ಸಹ ಅಗ್ನಿಯು ಇದ್ದೇ ಇರುವನು. ಆದರೂ ಎಲ್ಲರಿಗೂ ಕಾಣವುದಿಲ್ಲ. ಕಾಷ್ಟವನ್ನು ಮಥನ ಮಾಡಿದರೆ ಅಗ್ನಿಯು ಕಾಣುವುದು. ಕಲ್ಲಿನಿಂದ ಕಲ್ಲನ್ನು ಹೊಡೆದರೆ ಅಗ್ನಿಯು ಉತ್ಪತ್ತಿ ಯಾಗುವುದು ಇವುಗಳಲ್ಲಿ ಕಟ್ಟಿಗೆಯು ಕಾರಣವು. ಅಗ್ನಿಯು ಕಾರ್ಯವೂ ಆಗಿರುವುವು. ಇದರಂತೆ ಕಲ್ಲು ಕಾರಣ. ಕಾರ್ಯವು ಅಗ್ನಿ, ಅಗ್ನಿಗಳಿಗೆ ಪರಸ್ಪರ ಭೇದವಿಲ್ಲ. ಕಾರಣ ವಸ್ತು ಬೇರೆ, ಕಾರ್ಯವಸ್ತು ಬೇರೆಯಾಗಿ ಕಾಣುವುವು. ಕಾಷ್ಟದಲ್ಲಿರುವ ಅಗ್ನಿಯು ಕಾಷ್ಟಕ್ಕೆ ಸಂಬಂಧವಿಲ್ಲದೆ ಹೇಗೆ ನಿರ್ಲಿಪ್ತವಾಗಿರುವುದೋ ಹಾಗೆ ಪರಮಾತ್ಮನು ಕಾರ್ಯ ಕಾರಣ ವಸ್ತುಗಳಲ್ಲಿ ನಿರ್ಲಿಪ್ತನಾಗಿರುವನು. ಕಾಷ್ಟದಲ್ಲಿರುದ ಅಗ್ನಿಯನ್ನು ಯಾರೂ ಕಾಣುವಂತಿಲ್ಲ. ಮಥನಮಾಡಿದರೆ ಗೋಚರಿಸುವುದು. ಆದರಂತೆ

ಪರಮಾತ್ಮನನ್ನು ಎಲ್ಲರೂ ಕಾಣಲಾರರು. ಯೋಗಿಗಳು ಯೋಗಾರೂಢರಾಗಿ ಹೃದಯಾಕಾಶದಲ್ಲಿ ಕಾಣುವರು. ಈ ಪ್ರಕಾರ ಪ್ರತಿಯೊಂದು ಕಾರಣ ವಸ್ತುವಿನಲ್ಲಿಯೂ, ಕಾರ್ಯ ವಸ್ತುವಿನಲ್ಲಿಯೂ ಸಹ ತದಾಕಾರನಾಗಿ, ತಚ್ಛಬ್ದ ವಾಚ್ಯನಾಗಿದ್ದು ಅವರವರ ಕರ್ಮಗಳನ್ನು ತಾನು ಮಾಡಿ ಅವರಿಂದಲೂ ಮಾಡಿಸುವನು. ಮತ್ತೂ ಆ ಕರ್ಮ ಸಂಬಂಧವಾದ ಫಲಗಳನ್ನು ಅವರವರ ಯೋಗ್ಯತಾನುಸಾರ ಅವರವರಿಗೆ ಉಣಿಸುವನು. ಆದ್ದರಿಂದಲೇ ಕೃಪಾಸಾಂದ್ರನೆಂದರು. ಜೀವರ ಉದ್ಧಾರಕ್ಕೋಸ್ಕರವೇ ಕರ್ಮಗಳನ್ನು ತಾನು ಮಾಡಿ ಫಲವನ್ನು ಜೀವರಿಗೆ ಉಣಿಸುವುದರಿಂದ ಕರುಣಾಪೂರ್ಣನೆಂದು ಹೇಳಿದರೆಂದು ತಾತ್ಪರ್ಯ. ॥೫॥

### ೩ ಭಾವ ದರ್ಪಣ

ಪುನಃ ದಾರ್ಢ್ಯಹುಟ್ಯೋ ಉದ್ದಿಶ್ಯ ಕಾಷ್ಠಪಾಷಾಣಗತ ಅಗ್ನಿಯೋಪಾದೇಲಿ ವ್ಯಾಪಿಸಿರುವನೆಂದು ಹೇಳುತ್ತಾರೆ. ದಾರುಪಾಷಾಣೇತಿ ॥೫॥

### ೪ ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

"ದಾರು" ಇತಿ॥ ಗತಪದಂ ಪೂರ್ವತ್ರಅಪಿ ಯೋಜ್ಯಂ॥ ಸಾಂದ್ರ= ನಿಬಿಡ ॥೫॥

## ಕನ್ನಡಾರ್ಥ

"ದಧಿಸ್ಥಘೃತವಚ್ಚೈವಕಾಷ್ಠಸ್ಥಾನಲವತ್ ತಥಾ" ಎಂದು ಮುಂತಾಗಿ ಹೇಳಿದಂತೆ ದೃಷ್ಟಾಂತಪುರಸ್ಸರವಾಗಿ ಕಾರ್ಯಕಾರಣಗಳಲ್ಲಿ ಶ್ರೀಹರಿಯು ತತ್ತನ್ನಾಮಕನಾಗಿ, ಅಂತರ್ಯಾಮಿಯಾಗಿ. ಅವಿದಿತವಾಗಿ ವ್ಯಾಪಾರ ಮಾಡಿಸುತ್ತಾ ಅವರವರ ಯೋಗ್ಯತೆಯಂತೆ ಫಲಗಳನ್ನು ಜೀವರಿಗೆ ಅನುಭವಮಾಡಿಸುವನೆಂದು ಈ ಪದ್ಯದಿಂದ ತಿಳಿಸುತ್ತಾರೆ.

ಗತ ಎಂಬ ಪದವನ್ನು ವ್ಯಾಕರಣ ಶಾಸ್ತ್ರದ ನಿಯಮಾನುಸಾರವಾಗಿ ಪೂರ್ವಪದದ ಮುಂದೆಯೂ ಅನ್ವಯಿಸಿ "ದಾರುಗತ". "ಪಾಷಾಣಗತ" ಎಂದು ಅರ್ಥ ಮಾಡಬೇಕು.

"ಕೃಪಾಸಾಂದ್ರ" = ಕೃಪಾಪೂರ್ಣ ಘನ ॥೫॥

# 5. ಶ್ರೀಗುರುಹೃದಯ ಪ್ರಕಾಶಿಕೆ

ದಾರು ಎಂಬ ಅರಣೀಮರ, ಪಾಷಾಣವೆಂಬ ಕಲ್ಲು ಇವುಗಳಲ್ಲಿರುವ ಅಗ್ನಿದೇವತೆ ಒಬ್ಬನೇ ಆದರೂ, ಬೇರೆ ಬೇರೆ ಅನೇಕ ರೂಪಗಳಿಂದ ಇರುವಂತೆ ಕಾರಣ ಕಾರ್ಯ ಎಂದು ಹೆಸರುಳ್ಳವನಾಗಿ, ತನ್ನ ಸ್ವತಂತ್ರರೂಪವನ್ನು ಇತರರಿಗೆ ತೋರಿಸಿಕೊಳ್ಳದೆ ಎಲ್ಲರ ಕಾರ್ಯ ವ್ಯಕ್ತಿಮಾಡುತ್ತಾ ಅವರವರ ಯೋಗ್ಯತಾನುಸಾರ ಸುಖದುಃಖವೆಂಬ ಫಲಗಳನ್ನು ಉಣಿಸುವನು, ಆದ್ದರಿಂದ ಕೃಪಾ ನಿಧಿಯು ॥೫॥

# ಸರ್ವವ್ಯಾಖ್ಯಾನಸಾರ ಸಂಗ್ರಹ

**ದಾರು**-ಎಂದರೆ, ಕಟ್ಟಿಗೆ (ಮರ) ಎಂದರ್ಥ. ಯಾಗಾದಿಗಳಲ್ಲಿ ಅಗ್ನಿಯನ್ನು ಉತ್ಪತ್ತಿಮಾಡುವುದಕ್ಕಾಗಿ, ಅರಣೀ-ಎಂಬ ಅಶ್ವತ್ಥವೃಕ್ಷದ ಕಾಷ್ಠದಿಂದ ಚೆನ್ನಾಗಿ ಉಜ್ಜಿದಾಗ. ಉಂಟಾಗುವ ಮಂಥನಕಾರ್ಯದಿಂದಾಗಿ ಅರಣಿಗತ ಅಗ್ನಿಯು ಗೋಚರವಾಗುವುದು.

**ಪಾಷಾಣ**-ಎಂದರೆ, ಕಲ್ಲು ಎಂದರ್ಥ. ಒಂದು ಕಲ್ಲನ್ನು ಇನ್ನೊಂದು ಕಲ್ಲಿಗೆ ಬಲವಾಗಿ ಹೊಡೆದಾಗ, ಘರ್ಷಣೆಯಿಂದ ಬೆಂಕಿಯು ಕಿಡಿಯು ಉತ್ಪತ್ತಿಯಾಗುವುದು.

ಈ ದೃಷ್ಟಾಂತದಲ್ಲಿ (೧) ದಾರು ಅಗ್ನಿಯ ಉತ್ಪತ್ತಿಗೆ ಕಾರಣವು. ಅಗ್ನಿಯು ಉತ್ಪತ್ತಿಕಾರ್ಯವು.

(೨) ಕಲ್ಲು ಕಾರಣವು. ಅಗ್ನ್ಯುತ್ಪತ್ತಿ ಕಾರ್ಯವು.

ದಾರು ಮತ್ತು ಪಾಷಾಣಗಳೆಂಬ ಅಧಿಷ್ಠಾನಗಳು ಬೇರೆ ಬೇರೆ. ಆದರೆ ಅವುಗಳಲ್ಲಿ ಅಗೋಚರವಾಗಿರುವ ಅಗ್ನಿಯು ಒಂದೇ. ಕಾರ್ಯರೂಪವಾದ ಮಂಥನ ಮತ್ತು ಘಟ್ಟಣೆ ಬೇರೆ ಬೇರೆಯಾಗಿವೆ.

ಅಂತೆಯೇ ಸರ್ವತ್ರ ವ್ಯಾಪ್ತನಾದ ಶ್ರೀ ಪರಮಾತ್ಮನು ಕಾರಣ ವಸ್ತುಗಳಲ್ಲಿ **ಕಾರಣವಾಚ್ಯನಾಗಿಯೂ**, ಕಾರ್ಯಗಳಲ್ಲಿ **ಕಾರ್ಯವಾಚ್ಯನಾಗಿಯೂ**, ಕಾರಣ-ಕಾರ್ಯನಾಮಕನಾಗಿದ್ದಾನೆ.

ಕಾರಣಾಧಿಷ್ಠಾನಗಳು ಎರಡು :

(೧) ಸ್ವರೂಪದೇಹಕ್ಕೆ ಲಿಂಗೋಪದಾನ ಕಾರಣ.

(೨) ಮೂಲ ಜಡ ಪ್ರಕೃತ್ಯಾಖ್ಯ ಉಪಾದಾನ ಕಾರಣ.

ಕಾರ್ಯಗಳು ಎರಡು ಪ್ರಕಾರ :

(೧) ಲಿಂಗೋಪಾದಾನ ಕಾರಣದಿಂದ ಅನಿರುದ್ಧ ಶರೀರದ ಸೃಷ್ಟಿ.

(೨) ಮೂಲಜಡ ಪ್ರಕೃತಿ ಕಾರಣದಿಂದ, ಮಹದಾದಿ ತತ್ತ್ವಗಳ ಸೃಷ್ಟಿ. ಬ್ರಹ್ಮಾಂಡ ಲೋಕಗಳ ನಿರ್ಮಾಣ, ಅಂಡಾವರಣಗಳ ಸೃಷ್ಟಿ, ಸಕಲ ಪ್ರಾಣಿಗಳ ಸ್ಥೂಲ ಶರೀರಗಳ ನಿರ್ಮಾಣ.

ಹೀಗೆ ಕಾರಣದ್ವಯ, ಕಾರ್ಯದ್ವಯಗಳಲ್ಲಿ ದಾರು ಪಾಷಾಣಗತ ಅಗ್ನಿಯಂತೆ, ಕಾರಣ ಕಾರ್ಯ ರೂಪನಾದ ಆ ಕಮಲನಾಭನು ಯಾರಿಗೂ ಗೋಚರವಾಗದಂತೆ ಅವ್ಯಕ್ತನಾಗಿದ್ದಾನೆ. ಆದರೆ ಮಂಥನ ಕಾರ್ಯ, ಘಟ್ಟಣಾಕಾರ್ಯಗಳಿಂದ ಅಗ್ನಿಯು ಗೋಚರವಾಗುವಂತೆ, ಸತ್ಸಾಧನಾ ರೂಪವಾದ ಉಪಾಸನಾದಿಗಳ ದ್ವಾರಾ, ಗೋಚರಿಸುವನು.

ಸಮಸ್ತ ತ್ರಿವಿಧ ಜೀವರುಗಳಲ್ಲಿ ಅವ್ಯಕ್ತನಾಗಿದ್ದು, ಸ್ವಯಂ ಬಿಂಬ ಕ್ರಿಯಾ ದ್ವಾರಾ ಸಕಲ ವ್ಯಾಪಾರಗಳನ್ನೂ ಮಾಡಿ ಮಾಡಿಸುತ್ತಿರುವನು. ಆಯಾಯಾ ಜೀವರ ಸ್ವರೂಪಯೋಗ್ಯತೆ, ಅನಾದಿ ಕರ್ಮಗಳಿಗನುಸಾರವಾಗಿ ಕರ್ಮಜನಿತ ಫಲಗಳನ್ನು ಅವರಿಗೆ ಉಣಿಸುವನು. ಅವರ ಕರ್ಮ ಬಂಧನವನ್ನು ಕಳೆದು ಸಂರಕ್ಷಿಸುವ ಸ್ವಾಮಿಯು ಪರಮ ಕೃಪಾಸಾಂದ್ರನು ॥೫॥

## ಪದ್ಯ-೬

**ಮೂಲ :**

**ಊರ್ಮಿಗಳವೋಲಿಪ್ಪ ಕರ್ಮವಿ ।**
**ಕರ್ಮ ಜನ್ಯ ಫಲಾಫಲಂಗಳ ।**
**ನಿರ್ಮಲಾತ್ಮನು ಮಾಡಿ ಮಾಡಿಸಿ ಉಂಡುಣಿಸುತಿಪ್ಪ ॥**
**ನಿರ್ಮಮ ನಿರಾಮಯ ನಿರಾಶ್ರಯ ।**
**ಧರ್ಮವಿದ್ಧರ್ಮಾತ್ಮ ಧರ್ಮಗ ।**
**ದುರ್ಮತಿಯ ಜನರೊಲ್ಲನಪ್ರತಿಮಲ್ಲ ಶ್ರೀನಲ್ಲ ॥೬॥**

**ಅವತರಣಿಕೆ :**

ತರಂಗದೋಪಾದಿಯಲ್ಲಿರುವ ಸಕಲ ಕರ್ಮಗಳನ್ನೂ ಶ್ರೀ ಪರಮಾತ್ಮನೇ ಮಾಡಿ ಮಾಡಿಸುವನು, ಅಪ್ರತಿಮಲ್ಲನಾದ ಶ್ರೀ ನಲ್ಲನು ದುರ್ಜನರಿಗೆ ಎಂದೆಂದಿಗೂ ಅನುಗ್ರಹಿಸುವುದಿಲ್ಲವೆಂದು ತಿಳಿಸುತ್ತಾರೆ ॥೬॥

**ಪ್ರತಿಪದಾರ್ಥ :**

**ನಿರ್ಮಲಾತ್ಮನು**= ಸಮಸ್ತ ದೋಷವಿದೂರನಾದ ಶ್ರೀ ಪರಮಾತ್ಮನು **ಊರ್ಮಿಗಳವೋಲಿಪ್ಪ**= ಒಂದಾದ ಮೇಲೆ ಮತ್ತೊಂದು ಬರುತ್ತಿರುವ ಪ್ರವಾಹಗತ ತರಂಗಗಳಂತೆ, **ಕರ್ಮ**= ಸತ್ಕರ್ಮಗಳು (ಪುಣ್ಯ), **ವಿಕರ್ಮ**— ದುಷ್ಕರ್ಮಗಳು (ಪಾಪ). **ಜನ್ಯ**= ಇವುಗಳಿಂದ ಜನಿತವಾದ, **ಫಲ**= ಪುಣ್ಯ ರೂಪವಾದ ಫಲಗಳನ್ನು. **ಅಫಲಂಗಳ**= ಪಾಪರೂಪವಾದ ಫಲಗಳನ್ನು. **ಮಾಡಿ**= ಪ್ರಥಮತಃ ತಾನೇ ಬಿಂಬ ಕ್ರಿಯಾದ್ವಾರಾ ಮಾಡಿ, **ಮಾಡಿಸಿ**= ಜೀವರ ದ್ವಾರಾ ಮಾಡಿಸಿ, **ಉಂಡು**= ಸ್ವಾಖ್ಯ ಫಲಗಳನ್ನು ತಾನು ಸ್ವೀಕರಿಸಿ, **ಉಣಿಸುತಿಪ್ಪ**= ತದ್ವಾರಾ ಜೀವ ಭೋಗ್ಯ ರಸವನ್ನು ಜೀವರಿಗೆ ಉಣಿಸು ವನು (ಬಿಂಬ ಕ್ರಿಯಾದ್ವಾರಾ, ಪ್ರತಿ ಬಿಂಬರಲ್ಲಿ ಕ್ರಿಯಾಭಿವ್ಯಕ್ತಿ)

**ನಿರ್ಮಮ** = ಭಕ್ತರಲ್ಲಿ ಮಮತೆಯಾಗಲೀ- ದೈತ್ಯರಲ್ಲಿ ದ್ವೇಷವಾಗಲೀ ಸಕಲ ವೈಷಮ್ಯವಿಲ್ಲದಿರುವ, **ನಿರಾಮಯ** = ರೋಗಾದ್ಯುಪದ್ರವಗಳಾಗಲೀ, ಭಯವ್ಯಸನಾದಿಗಳಾಗಲೀ ಇಲ್ಲದಿರುವವನು. **ನಿರಾಶ್ರಯ** = ತನಗೆ ತಾನೇ ಆಶ್ರಯನಾದವನು (ತನಗೆ ಇತರ್‍ಯಾರ ಆಶ್ರಯವೂ ಬೇಕಿಲ್ಲದಿರುವ) **ಧರ್ಮವಿತ್** = ಸರ್ವ ಧರ್ಮಗಳನ್ನು ತಿಳಿದವನು, **ಧರ್ಮಾತ್ಮ** = ಧರ್ಮ ಸ್ವರೂಪಿಯಾದವನು, **ಧರ್ಮಗ** = ಧರ್ಮಗಳಲ್ಲಿ ತದ್ವಾಚ್ಯನಾಗಿ, ಅದರಲ್ಲಿ ಅಂತರ್ಗತನಾಗಿರುವ, ಶ್ರೀ ಪರಮಾತ್ಮನು, **ದುರ್ಮತಿಯ** = ದುಷ್ಟ ಸ್ವಭಾವದವರಾದ ಅಸುರರ, **ಜನರ ಒಲ್ಲನು** = ತಮೋ ಯೋಗ್ಯ ಜೀವರಿಂದ ದೂರವಾಗಿದ್ದು, ಅವರಿಗೆ ಅನುಗ್ರಹ ಮಾಡುವುದಿಲ್ಲ. **ಶ್ರೀನಲ್ಲ** = ಶ್ರೀ ಲಕ್ಷ್ಮೀಪತಿಯಾದ ಶ್ರೀ ಹರಿಯು, **ಅಪ್ರತಿಮಲ್ಲ** = ಅಸದೃಶ ಪರಾಕ್ರಮಿ ಯಾಗಿದ್ದಾನೆ (ಅಸಮಾನಶೂರನು)

## ವ್ಯಾಖ್ಯಾನಗಳು

## ೧ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಪರಮಾತ್ಮ ಎಂಥಾವನೆಂದರೆ ಅದರನ್ನ ಹೇಳಿ, ಬಿಂಬಕ್ರಿಯಾ ವಿಚಾರವನ್ನೂ ಹೇಳುತಾರೆ.

ಮಮತಾರಹಿತ ಎಂದರೆ ತನ್ನ ಭಕ್ತರಲ್ಲಿ ಮಮತಾ, ದ್ವೇಷಿಗಳಲ್ಲಿ ದ್ವೇಷಾ, ಇಂಥಾ ಮಮತಾದ್ವೇಷಾತ್ಮಕ ವೈಷಮ್ಯದಿಂದ ಶೂನ್ಯನಾದವನು. ರೋಗಾದ್ಯುಪದ್ರವಗಳು ಭಯ ವ್ಯಸನಾದಿಗಳು ಇಲ್ಲದವನು, ತನಗೆ ಯಾರೂ ಆಶ್ರಯ ಇಲ್ಲದೆ ತನಗೆ ತಾನೇ ಆಶ್ರಯನಾದವನು- ಸರ್ವಧರ್ಮವನ್ನೂ, ತಿಳಿದವನು. ಧರ್ಮಸ್ವರೂಪಿಯಾದವನು. ಧರ್ಮಗಳಲ್ಲಿ ತದ್ವಾಚ್ಯನಾಗಿ ಸಾಕ್ಷಿಯಾಗಿ ಇರತಕ್ಕವನು. ತನ್ನಲ್ಲಿ ದ್ವೇಷಮಾಡತಕ್ಕ ದೈತ್ಯರಿಗೆ ಪ್ರತ್ಯಕ್ಷ ನಾಗದೆ ಅವರಿಗೆ ದೂರನಾಗಿ ಇರತಕ್ಕವನು: ಅಸದೃಶನಾದವ, ಶೂರನಾದವ. ಲಕ್ಷ್ಮೀಪತಿಯಾದವನು. ಇಂಥಾ ದೋಷದೂರನಾದ ಪರಮಾತ್ಮನು ಜೀವ

ದೇಹಾಂತರ್ಗತನಾಗಿ, ತದಾಕಾರನಾಗಿ ಬಿಂಬನಾಗಿ ಇದ್ದು, ಜೀವರು ಬಿಂಬ ಕ್ರಿಯಾದ್ವಾರಾ ಸ್ಥೂಲದೇಹದಿಂದ ಮಾಡಿದ ಕರ್ಮಗಳು, ತತ್ಕರ್ಮಫಲ ಭೋಗಗಳು ತರಂಗದೋಪಾದಿಯಲ್ಲಿ ಒಂದರ ಹಿಂದೆ ಒಂದು ಭೋಗಕ್ಕೆ ಬರತಾ ಇರತಕ್ಕ ಪುಣ್ಯಕರ್ಮ ಪಾಪಕರ್ಮ ಇವೆರಡೂನೂ ಪ್ರಥಮತಃ ತಾನು ಮಾಡಿ ನಂತರ ಜೀವರಿಂದ ಮಾಡಿಸಿ, ಈ ಪಾಪಪುಣ್ಯ ಕರ್ಮದಿಂದ ಜನಿತವಾದ ಪುಣ್ಯ ಫಲವೇನು, ಪಾಪಫಲವೇನು, ಜೀವಭುಕ್ತಾಗತ ತನ್ನ ಸ್ವಾಖ್ಯಫಲಗಳ ಉಂಡು, ತದ್ದ್ವಾರಾ ಜೀವಭೋಗ್ಯ ಜೀವರಿಗೆ ಉಣಸತಾನೆ ಎಂತ ತಾತ್ಪರ್ಯ.

**ತಾತ್ಪರ್ಯ**- ಮಮತಾದ್ವೇಷಶೂನ್ಯ ಎಂದರೆ, ಆಯಾ ಅಧಿಷ್ಠಾನಾನುಸಾರವಾಚ್ಯ ಎಂಬೋಣದರಿಂದ ಆದರದರ ಸ್ವಭಾವಗಳ ವ್ಯಕ್ತಮಾಡತಾನೇ ಹೊರ್‍ತು ಅನ್ಯಥಾವಲ್ಲ. ದ್ವೇಷಸ್ವಭಾವರಲ್ಲಿ ದ್ವೇಷ, ಭಕ್ತಿಸ್ವಭಾವರಲ್ಲಿ ಅಂತಃಕರಣ ಮಾಡತಾ ಇರತಾನೆಂತ ತಿಳಿಕೋಬೇಕು ಎಂತ ತಾತ್ಪರ್ಯ ॥೬॥

## ೨ ಭಾವ ಪ್ರಕಾಶಿಕೆ

ಸಮುದ್ರದಲ್ಲಿ ಅಲೆಗಳು ಒಂದರ ಮೇಲೊಂದು ಬರುವಂತೆ ಅಪಾರವಾದ ಕರ್ಮಾಕರ್ಮಗಳನ್ನು ಪ್ರತಿ ಕ್ಷಣದಲ್ಲೂ ಜೀವರು ಮಾಡುತ್ತಿರುವರು. ಕರ್ಮವೆಂದರೆ ಸತ್ಕರ್ಮಗಳನ್ನು ಮಾಡುವುದೆಂದರ್ಥ. ಅಕರ್ಮವೆಂದರೆ ಮಾಡಬೇಕಾದ್ದನ್ನು ಬಿಡುವುದು, ಮತ್ತು ಮಾಡಬಾರದುದನ್ನು ಮಾಡುವುದೆಂದರ್ಥ. ಕರ್ಮಾಕರ್ಮಗಳೆಂದರೆ ಒಟ್ಟಿನಲ್ಲಿ ಪುಣ್ಯಪಾಪಗಳೆಂದರ್ಥ. ಹೀಗೆ ಫಲಾಫಲಗಳೆಂದರೂ ಸುಖದುಃಖಗಳೆಂದರ್ಥ. ಫಲವೆಂದರೆ ಪುಣ್ಯ ಫಲ, ಅಫಲವೆಂದರೆ ಸುಖವಲ್ಲದಿರುವಿಕೆ ; ಅದಕ್ಕೆ ವಿರುದ್ಧವಾದ ದುಃಖವೆಂದರ್ಥ. ನಿರ್ದೋಷಿಯಾದ ಶ್ರೀಹರಿಯು ಸಕಲ ಪ್ರಾಣಿಗಳಲ್ಲೂ ಇದ್ದು ಪುಣ್ಯಪಾಪ ಕರ್ಮಗಳನ್ನು ಮಾಡಿ, ಮಾಡಿಸಿ, ತಜ್ಜನ್ಯ ಫಲಾಫಲಗಳನ್ನು, ತಾನುಂಡು ಜೀವರಿಗುಣಿಸುವನು. ಪರಮಾತ್ಮನು ಜೀವನ ಯೋಗ್ಯತಾನುಸಾರ ಫಲವನ್ನು ಕೊಡುವವನೇ ಹೊರತು, ಇವರು ನಮ್ಮವರು, ಇವರು ಪರಕೀಯರು ಎಂಬ ಅಭಿಮಾನದಿಂದ ಸುಖ ದುಃಖ

ಗಳನ್ನು ಕೊಡಿಸುವವನಲ್ಲ. ಯಾವಾಗಲೂ ಯಾವ ವಿಧವಾದ ರೋಗಾದಿಗಳನ್ನೂ ಅನುಭವಿಸುವವನಲ್ಲ. ತಾನು ಎಲ್ಲರಿಗೂ ಆಶ್ರಯನೇ ಹೊರತು ಮತ್ತೊಬ್ಬರ ಆಶ್ರಯವು ಪರಮಾತ್ಮನಿಗೆ ಬೇಕಾಗಿಲ್ಲ. ಧರ್ಮ ಸೂಕ್ಷ್ಮವನ್ನು ತಿಳಿದವನು. ಮಮತಾ ಬಿಡುವುದು. ಇವು ಸಾಮಾನ್ಯರಾದ ಭಗವದ್ಭಕ್ತರಲ್ಲಿ ಇದ್ದೇ ಇರುವುವು. ಪರಮಾತ್ಮನಲ್ಲಿ ಈ ಗುಣಗಳನ್ನು ಹೇಳುವುದರಿಂದ ವಿಶೇಷವೇನೆಂದರೆ, ಭಗವದನುಗ್ರಹದಿಂದ, ಹೇಳಿದವರಿಗೆ ಈ ಗುಣಗಳು ಬರುವುವು. ಪರಮಾತ್ಮನಲ್ಲಿ ಈ ಗುಣಗಳು ಸಹಜವಾಗಿ ಇರುವುವೆಂಬ ಭಾವ. ಧರ್ಮಸೂಕ್ಷ್ಮವನ್ನು ಪರಮಾತ್ಮನೇ ತಿಳಿದವನು. ಅವನ ಉಪದೇಶದಿಂದ ಮಿಕ್ಕವರು ತಿಳಿಯಬೇಕು. ಸ್ವಯಂ ಧರ್ಮಸ್ವರೂಪನು ಧರ್ಮಾತ್ಮರಿಂದ ಲಭ್ಯನು, ಎದಿರಿಲ್ಲದವನು, ಲಕ್ಷ್ಮೀಪತಿಯು, ಮಿಥ್ಯಾಜ್ಞಾನ, ಅನ್ಯಥಾಜ್ಞಾನ ಯಾರಲ್ಲಿ ಇರುತ್ತದೋ ಅವರು ದುರ್ಮತಿಗಳು ಇಂತಹ ದುರ್ಮತಿಗಳು ಮಾಡಿದ ಪೂಜಾದಿಗಳನ್ನು ಸ್ವೀಕರಿಸುವುದಿಲ್ಲ. ॥೬॥

## ೩ ಭಾವದರ್ಪಣ

ಊರ್ಮಿ ಎಂದರೆ ತೆರೆ. ಅದರ ಹಾಗೆಂದು ದೃಷ್ಟಾಂತ ಕೊಡುತ್ತಾರೆ, ಊರ್ಮಿರ್ಇತಿ. ಓಲ್=ಹಾಗೆ, ನಿರ್ಮಮ=ಮಮಕಾರ ಶೂನ್ಯ, ನಿರಾಮಯ= ರೋಗಶೂನ್ಯ, ನಿರಾಶ್ರಯ=ಆಶ್ರಯ ಶೂನ್ಯ, ಧರ್ಮವಿದಿತಿ, "ಧರ್ಮವಿದುತ್ತಮ" ಇತಿಸಹಸ್ರನಾಮ ಪಾಠಾತ್. ಧರ್ಮವಿತ್=ಧರ್ಮವನ್ನು ತಿಳಿದವ ಧರ್ಮಾತ್ಮಾ= ಧರ್ಮಸ್ವರೂಪ, ಧರ್ಮಗ=ಧರ್ಮಸ, ದುರ್ಮತಿ ಜನರೊಲ್ಲ= ದುಷ್ಟರನ್ನ ಒಲ್ಲ ಎಂಬರ್ಥ. ಶ್ರೀನಲ್ಲ=ಶ್ರೀಪತಿ ॥೬॥

## ೪ ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

"ಊರ್ಮಿ" ತೆರೆ॥ ಅಲೇಪಂ ವಕ್ತಿ 'ನಿರ್ಮಲ' ಇತಿ॥ 'ಉಂಡು' ವಿವೃತ ಮೇತತ್॥ ಅಸ್ವೀಯೇ ಸ್ವೀಯತ್ವ (ಬುದ್ಧಿ) ರಾಹಿತ್ಯಂ ನಿರ್ಮಮ

ತ್ವಪ್॥ 'ನಿರಾಶ್ರಯು' ಇತಿ ವೈದಿಕ ನಿಲಯುನ ಪದಾರ್ಥಃ ॥ 'ಧರ್ಮವಿತ್' *ಓಂ॥ ಸ್ತೋತೃಭ್ಯ ಇಂದ್ರ ಮೃಳಯ ಭದ್ರ ಭದ್ರಂನ ಆಭರೇಷಮೂರ್ಜಂ (ರ್ಜೇ) ಶತಕ್ರತೋ ಯದಿಂದ್ರ ಮೃಳಯಾಸಿನಃ ಸನೋ ವಿಶ್ವಾನ್ಯಾಭರಃ ॥ಓಂ॥ *ಧ್ರಿಯತೇ ಇತಿ ಧರ್ಮಃ ಅಭೀಷ್ಟ ಸಮೂಹಃ॥ ತಂ ಪ್ರಾಪಯತಿ ಇತಿ ಧರ್ಮವಿತ್॥ 'ಧರ್ಮಾತ್ಮಾ'*ಓಂ॥ ವಿರೋಚನಾ ದಧದ್ರತ್ನಾ (ಚಿ) ಸಿದಾಶುಷೇ ಸ್ತೋತೃಭ್ಯ ಇಂದ್ರಮರ್ಚತ ಅತೇ ದಧಾ ಮೀಂದ್ರಿಯ ಮುತ್ಥಾ ವಿಶ್ವಾ ಶತಕ್ರತೋ॥ ॥ಓಂ॥ *॥ರತ್ನಾನಿ ಯಜಮಾನೇ ಆ ದಧಾತಿ ಇತಿ ಧಮಃ॥ 'ಅಪ್ರತಿಮಲ್ಲ' ಅಪ್ರತಿದ್ವಂದ್ವ ॥'ನಲ್ಲ'ನಾಥಃ ॥ ॥೬॥

## ಕನ್ನಡಾರ್ಥ

ಹಿಂದಿನ ಪದ್ಯದಲ್ಲಿರುವ "ತೋರಿಕೊಳ್ಳದೆ ಎಲ್ಲರೊಳು ವ್ಯಾಪಾರ ಯೋಗ್ಯತೆಗಳನುಸಾರ ಫಲಗಳನುಣಿಸಿ ಸಂತೈಸುವ ಕೃಪಾಸಾಂದ್ರ ಎಂಬುದನ್ನೇ ಇನ್ನೂ ವಿವರಿಸುತ್ತಾರೆ ಈ ಪದ್ಯದಿಂದ

'ಊರ್ಮಿ' ತೆರೆ. ಕರ್ಮ ವಿಕರ್ಮಗಳನ್ನು ಮಾಡಿ ಮಾಡಿಸಿದರೂ 'ಲೇಪವಿಲ್ಲ'ವೆಂದು ಹೇಳುತ್ತಾರೆ, 'ನಿರ್ಮಲ'ವೆಂಬ ಪದದಿಂದ 'ಉಂಡು' ಪರಮಾತ್ಮನ ಸ್ಥೂಲ ಸೂಕ್ಷ್ಮ ಭೋಜನಕ್ರಮವನ್ನು ಬಣ್ಣಿಸುವಾಗ ಭೋಜನ ಸಂಧಿಯಲ್ಲಿ ನಿರೂಪಿಸಿರುತ್ತಾರೆ. ಪರಕೀಯ ವಸ್ತುಗಳಲ್ಲಿ ತನ್ನದೆಂಬ ಅಭಿಮಾನವಿಲ್ಲದಿರುವುದು ನಿರ್ಮಮತ್ವವೆನಿಸುತ್ತದೆ. 'ನಿರಾಶ್ರಯು' ಇದು ವೇದಗಳಲ್ಲಿ ಉಕ್ತವಾದ 'ಅನಿಲಯುನ' ಎಂಬ ಪದದ ಅರ್ಥಾನುವಾದ.

"ಧರ್ಮವಿತ್"-ಅಭೀಷ್ಟ ಸಮೂಹವು ಧರ್ಮ ; ಅದನ್ನು ಹೊಂದಿಸಿ ಕೊಡುವವನು ಧರ್ಮವಿತ್,

ಧರ್ಮಾತ್ಮಾ-ಧರ್ಮ-ರತ್ನ ಮುಂತಾದ ದ್ರವ್ಯಗಳನ್ನು, ಯಜ್ಞಾದಿಗಳನ್ನು ಮಾಡುವ ಯಜಮಾನ ಮುಂತಾದವರಲ್ಲಿ ಅನುಗ್ರಹಿಸುವನು.

'ಅಪ್ರತಿಮಲ್ಲ' ಅಪ್ರತಿ ದ್ವಂದ್ವ, 'ನಲ್ಲ'ನಾಥ ॥೬॥

## ೫ ಶ್ರೀಗುರು ಹೃದಯ ಪ್ರಕಾಶಿಕೆ

ಪುನಶ್ಚ ಜೀವರ ಕರ್ತೃತ್ವ ಭೋಕ್ತೃತ್ವಶಕ್ತಿ ಶ್ರೀ ಹರಿಯಿಂದಲೇ ವ್ಯಕ್ತಿಯಾಗುವುದರಿಂದ ಸ್ವತಂತ್ರ, ಸರ್ವಕರ್ತಾ, ಸರ್ವಸಾರ ಭೋಕ್ತನು ಆ ಸ್ವಾಮಿ ಎಂದು ಸದೃಷ್ಟಾಂತವಾಗಿ ಎರಡು ಪದ್ಯಗಳಿಂದ ತಿಳಿಸುತ್ತಾರೆ, ಊರ್ಮಿ ಎಂದು. ಊರ್ಮಿ ಎಂಬ ಸಮುದ್ರದ ಅಲೆಗಳಂತಿರುವ ಕರ್ಮ ವಿಕರ ವೆಂಬ ಪುಣ್ಯ-ಪಾಪಗಳನ್ನು ತಾನು ಸರ್ವತ್ರ ವ್ಯಕ್ತಿ ಮಾಡಿ ತತ್ಫಲಗಳೆಂಬ ಸುಖ-ದುಃಖಗಳನ್ನು ಸದಾ ಉಂಡುಣಿಪ ಎಂದರೆ ಭೋಕ್ತೃಶಕ್ತಿ ವ್ಯಕ್ತಿ ಮಾಡಿ ಉಣಿಸುವನು ಎಂದರ್ಥ. ನಿರ್ಮಮ ಎಂದರೆ ಅಭಿಮಾನರಹಿತನು ಆದ್ದರಿಂದ ನಿರಾಮಯ ಅಂದರೆ ರೋಗಾದಿ ಸರ್ವದೋಷದೂರನು, ಇತರಾಧಾರ ರಹಿತನು, ಪರೋಪಕಾರ ರೂಪಧರ್ಮ ಬಲ್ಲವನು, ಆ ಧರ್ಮ ಸ್ವರೂಪನು, ಧರ್ಮವೆಂಬ ಅದೃಷ್ಟದಲ್ಲಿರುವನು, ದುರ್ಮತಿಜನರೊಲ್ಲ ಅಂದರೆ ಸ್ವಾಭಾವಿಕ ದುರ್ಬುದ್ಧಿಯುಳ್ಳವರನ್ನು ಸುಬುದ್ಧಿವಂತರನ್ನು ಮಾಡಿದರೆ ಸ್ವರೂಪವೇ ನಾಶ ಮಾಡಿದಂತೆ ಆಗುವುದರಿಂದ ಅದನ್ನು ಮಾಡಲೊಲ್ಲ ಶ್ರೀನಲ್ಲ ಎಂದರೆ ತ್ರಿಗುಣಾಭಿಮಾನಿ ಲಕ್ಷ್ಮೀಪತಿಯಾದ್ದರಿಂದ ಬಾಹ್ಯಸುಬುದ್ಧಿ ದುರ್ಬುದ್ಧಿ ವ್ಯತ್ಯಾಸ ಮಾಡಬಲ್ಲನೆಂದರ್ಥ ॥೬॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಶುಭ ಅಶುಭ ಸಮಸ್ತಕರ್ಮಗಳೂ ಬಿಂಬನಾದ ಶ್ರೀ ಹರಿಯಿಂದ ಪ್ರೇರಿತ ವಾಗಿ, ದೇಹೇಂದ್ರಿಯಗಳ ದ್ವಾರಾ ನಡೆಯುತ್ತಿರುವುವು, ಇವು ಸಮುದ್ರ ದಲ್ಲಿ ಅಲೆಗಳು ಒಂದಾದ ಮೇಲೆ ಮತ್ತೊಂದು ಪ್ರವಾಹರೂಪವಾಗಿ ಬರುತ್ತಿರುವಂತೆ ಪರಂಪರೆಯಾಗಿ ನಡೆಯುತ್ತಿರುವುವು.

**ಕರ್ಮ**—ವೆಂದರೆ ಸತ್ಕರ್ಮಗಳು, ವಿಧ್ಯುಕ್ತವಾಗಿ ಆಚರಿಸಲ್ಪಡುವ ಕ್ರಿಯೆಗಳು, ಸುಕರ್ಮಜನ್ಯವಾದ ಫಲಗಳು, ಪುಣ್ಯ ಫಲಗಳು.

**ವಿಕರ್ಮ**—ವೆಂದರೆ ನಿಷಿದ್ಧ ರೂಪದಲ್ಲಿರುವ ದುಷ್ಕರ್ಮಗಳು. ವಿಕರ್ಮಜನಿತ ಫಲಗಳು ಪಾಪ ಫಲಗಳು.

ಬಿಂಬರೂಪನಾದ ಶ್ರೀ ಹರಿಯು ನಿರ್ದೋಷನು. ಅವನಿಂದಲೇ ಪ್ರೇರಿತವಾಗಿ ಸಕಲ ಶುಭಾಶುಭ ಕರ್ಮಗಳು ನಡೆಯುತ್ತಿದ್ದರೂ, ಆ ಕರ್ಮಗಳಿಂದಾಗಲೀ, ಆ ಕರ್ಮಜನಿತ ಫಲಗಳಿಂದಾಗಲೀ, ಅವನಿಗೆ ಸರ್ವಥಾ ಲೇಪವಿಲ್ಲ. ಇದರಿಂದ **ನಿರ್ಮಲಾತ್ಮನು**. ನಿರ್ಮಲಾತ್ಮನಾದ ಆ ನಿರಂಜನನು ದೇಹೇಂದ್ರಿಯಗಳಲ್ಲಿ ವ್ಯಾಪ್ತನಾಗಿದ್ದು, ಜೀವರಲ್ಲಿ ಅಂತರ್ಯಾಮಿಯಾಗಿದ್ದು, ಆಯಾಯಾ ಜೀವರ ಅನಾದಿ ಕರ್ಮಗಳಿಗನುಸಾರವಾಗಿ. ಸಮಸ್ತ ಕರ್ಮ ವಿಕರ್ಮಗಳನ್ನು ಬಿಂಬಕ್ರಿಯಾದ್ವಾರಾ ತಾನೇ ಮಾಡಿ, ದೇವದೈತ್ಯರ ದ್ವಾರಾ ಮಾಡಿ ಮಾಡಿಸಿ, ಆಯಾಯಾ ಕರ್ಮಗಳ ಫಲಗಳನ್ನು ಜೀವರಿಗೆ ಉಣಿಸುವನು.

ಬಿಂಬಕ್ರಿಯಾದಿಂದ ಪ್ರತಿಬಿಂಬರಲ್ಲಿ ಕ್ರಿಯಾಭಿವ್ಯಕ್ತಿಯಾಗುವುದರಿಂದ, ಕರ್ಮಾಂತರ್ಗತ, ತಜ್ಜನಿತ ಫಲಾಂತರ್ಗತ ಸ್ವಾಖ್ಯರಸಗಳನ್ನು ತಾನು ಸ್ವೀಕರಿಸುವನು. ಸ್ವಸ್ವರೂಪಭೂತರಸ ಸ್ವೀಕಾರದಿಂದ ಉಣ್ಣುವನು, ಬಿಂಬನು ಉಂಡರೇ, ಪ್ರತಿ ಬಿಂಬಭೂತರಾದ ಜೀವರಿಗೆ ತದನುಸಾರವಾದ ಕರ್ಮ ಫಲಾನುಭವ ಉಂಟಾಗುವುದು. ಇಂತು ನಿರ್ಮಲಾತ್ಮನು ಸಕಲ ಕರ್ಮಗಳನ್ನೂ ಮಾಡಿ, ಮಾಡಿಸಿ, ತಜ್ಜನ್ಯ ಫಲಗಳನ್ನು ಉಂಡು ಜೀವರಿಗೆ ಉಣಿಸುವನು.

ಸರ್ವ ಕರ್ಮ ಪ್ರೇರಕನಾದ ಆ ನಿರ್ಮಲಾತ್ಮನಿಗೆ ವೈಷಮ್ಯ, ನೈರ್ಘೃಣ್ಯಾದಿ ದೋಷಗಳಿಲ್ಲ. ಆಯಾಯಾ ಜೀವರ ಯೋಗ್ಯತೆಗನುಗುಣವಾಗಿ ಫಲಪ್ರದನಾಗಿದ್ದಾನೆ. ಅವನಿಗೆ ಮಮತೆಯಾಗಲೀ, ದ್ವೇಷವಾಗಲೀ ಇಲ್ಲ. ಇದರಿಂದ ನಿಷ್ಪಕ್ಷಪಾತಿಯಾದ ಶ್ರೀ ಹರಿಯು **ನಿರ್ಮಮನು**, ರೋಗಾದಿ ಉಪದ್ರವಗಳಾಗಲೀ, ಯಾವಾಗಲೂ ಅವನಿಗಿಲ್ಲ, ಇದರಿಂದ **ನಿರಾಮಯನು**.

ನಿರ್ಮಮನೂ, ನಿರಾಮಯನೂ ಆದ ಶ್ರೀ ಪರಮಾತ್ಮನಿಗೆ ಅನ್ಯರ ಆಶ್ರಯವಾಗಲೀ, ಸಹಾಯವಾಗಲೀ ಬೇಕಿಲ್ಲ. ಪೂರ್ಣಪರಾಪೇಕ್ಷ ರಹಿತನು. ತನಗೆ ತಾನೇ ಆಶ್ರಯನು ಇದರಿಂದ **ನಿರಾಶ್ರಯನೆನಿಸಿದ್ದಾನೆ.**

ನಿರಾಶ್ರಯನಾದ ಶ್ರೀ ಹರಿಗೆ ಯಾವುದು ಧರ್ಮ, ಯಾವುದು ಅಧರ್ಮ ವೆಂಬ ಧರ್ಮಾ ಧರ್ಮ ವಿವೇಚನೆ ಸಂಪೂರ್ಣವಾಗಿ ಇದೆ. ಧರ್ಮ ಸೂಕ್ಷ್ಮ ವನ್ನು ಅರಿತವನು. ಅವನೇ ಧರ್ಮ ಸ್ವರೂಪಿಯು, ಯುಗ ಯುಗಗಳಲ್ಲಿ ಅವತರಿಸಿ, ಧರ್ಮವನ್ನು ಸಂರಕ್ಷಣ ಮಾಡುವ ಧರ್ಮಪ್ರಭುವು. ಇದರಿಂದ ಅವನಿಗೆ **ಧರ್ಮವಿತ್ ಮತ್ತು ಧರ್ಮ**-ನೆಂದೇ ಹೆಸರು. ಧರ್ಮಶಬ್ದ ವಾಚ್ಯನಾಗಿದ್ದಾನೆ.

ಸರ್ವ ಧರ್ಮ ಸಾಕ್ಷಿಯಾಗಿರುವುದರಿಂದ **ಧರ್ಮಗನು.**

ಅಸಹಾಯಶೂರನಾದ ಅಪ್ರತಿಮನು. ಅಸದೃಶ ಪರಾಕ್ರಮಿಯು, ಇದರಿಂದ **ಅಪ್ರತಿಮಲ್ಲನು.**

ಅಪ್ರತಿಮಲ್ಲನಾದ ಶ್ರೀ ಪರಮಾತ್ಮನು **ಶ್ರೀ ನಲ್ಲನು.** ಅಂದರೆ, ಶ್ರೀ ಲಕ್ಷ್ಮೀರಮಣನು. ದುಷ್ಟ ಸ್ವಭಾವವುಳ್ಳ ತಮೋ ಯೋಗ್ಯ ಚೇತನರು, **ದುರ್ಮತಿಗಳು.** ಅವರು ಭಗವದ್ವೇಷಿಗಳಾದ್ದರಿಂದ, ಅವರ ಸೇವಾದಿ ಗಳನ್ನು ಸ್ವೀಕರಿಸುವುದಿಲ್ಲ. ಅವರು ಭಗವದನುಗ್ರಹಕ್ಕೆ ಪಾತ್ರರಲ್ಲದ ಕಾರಣ ಅವರಿಂದ ದೂರವಿರುವನು. ಇದರಿಂದ ದುರ್ಮತಿಯು ಜನರನ್ನು **ಒಲ್ಲನೆಂದರ್ಥ.**

ಇಂತು ಬಿಂಬರೂಪನಾದ ಶ್ರೀ ಹರಿಯಿಂದ ಪ್ರೇರಿತವಾದ ಸಮಸ್ತ ಕರ್ಮಗಳೂ, ಪ್ರತಿಬಿಂಬರಾದ ಜೀವರಲ್ಲಿ ಅಭಿವ್ಯಕ್ತವಾಗಿ, ತಜ್ಜನ್ಯ ಫಲ ಗಳನ್ನು ಬಿಂಬನು ತಾನುಂಡು (ಸ್ವಾಖ್ಯ ರಸಸ್ವೀಕಾರ ದ್ವಾರಾ) ಜೀವರಿಗೆ ಉಣಿಸುವನು ಎಂದು ಸರ್ವಶುಭ ಲಕ್ಷಣೋಪೇತನಾದ ಶ್ರೀ ಪರಮಾತ್ಮನ ಗುಣ ಗಳನ್ನು ಕೊಂಡಾಡಿದ್ದಾರೆ ॥೬॥

## ಪದ್ಯ - ೭

**ಮೂಲ:**

**ಜಲದ ವಡಬಾನಳಗಳಂಬುಧಿ ।**
**ಜಲವನೆಸುಂಬುವುವಬ್ದ ಮಳೆಗರೆ ।**

**ದಿಳೆಗೆ ಶಾಂತಿಯ ನೀವುದನಲನು ತಾನೆ ಭುಂಜಿಪುದು ॥**
**ತಿಳಿವುದೀಪರಿಯಲ್ಲಿ ಲಕುಮಿೀ ।**
**ನಿಲಯ ಗುಣಕೃತ ಕರ್ಮಜ ಫಲಾ ।**
**ಫಲಗಳುಂಡುಣಿಸುವನು ಸರ್ವಗ ಸರ್ವಜೀವರಿಗೆ ॥** ॥೭॥

**ಅವತರಣಿಕೆ:**

ಲಕುಮೀಪತಿಯು ಜೀವರಿಗೆ ಫಲಾಫಲಗಳನ್ನು ಉಣಿಸುವುದರಿಂದ, ಅವನಿಗೆ ಯಾವ ವಿಧವಾದ ಸ್ವಪ್ರಯೋಜನವೂ ಇಲ್ಲವೆಂದು ಸುಂದರವಾದ ಉಪಮಾನದ್ವಾರಾ ತಿಳಿಸುತ್ತಾರೆ. ॥೭॥

**ಪ್ರತಿಪದಾರ್ಥ**

**ಅಂಬುಧಿ ಜಲವನು** = ಸಮುದ್ರದ ನೀರನ್ನು, **ಜಲದ** = ಮೇಘವೇನು **ವಡಬಾನಳಗಳು** = ಸಮುದ್ರದಲ್ಲಿರುವ ವಡಬ ಸಾಂಕೇತವಾದ ಅಗ್ನಿಯೇನು, **ಉಂಬುವುವು** = ಇವೆರಡೂ ಪಾನ ಮಾಡುವುವು. **ಅಬ್ದ** = ಮೇಘವು, **ಮಳೆಗರೆದು** ತಾನು ಪಾನ ಮಾಡಿದ ಉದಕವನ್ನು ಮಳೆಯ ರೂಪದಲ್ಲಿ ಸುರಿಸಿ. **ಇಳೆಗೆ** = ಭೂಮಿಗೆ, **ಶಾಂತಿಯನೀವುದು** = ತಂಪನ್ನುಂಟು ಮಾಡುವುದು, **ಅನಲನು** = ಸಮುದ್ರಗತ ವಡಬಾಗ್ನಿಯು, **ತಾನೆ ಭುಂಜಿಪುದು** = ಸಮುದ್ರದ ಜಲವನ್ನು ತಾನೇ ಭುಂಜಿಸುವುದು, **ಈ ಪರಿಯಲ್ಲಿ** = ಈ ಪ್ರಕಾರವಾಗಿ, **ತಿಳಿವುದು** = ಈಶಭುಕ್ತ ಬೇರೆ, ಜೀವ ಭುಕ್ತ ಬೇರೆ ಎಂದು ತಿಳಿಯಬೇಕು. **ಸರ್ವಗ** = ಸರ್ವತ್ರ ವ್ಯಾಪ್ತನಾದ, **ಲಕುಮಿೀ ನಿಲಯ** = ಲಕ್ಷ್ಮೀಪತಿಯಾದ ಶ್ರೀ ನಾರಾಯಣನು **ಗುಣಕೃತ** = ತ್ರಿಗುಣಗಳಿಂದ ಮಾಡಲ್ಪಟ್ಟ, **ಕರ್ಮಜ** = ಕರ್ಮಗಳಿಂದ ಜನಿತವಾದ, **ಫಲಾಫಲಂಗಳ** = ಪುಣ್ಯಫಲ. ಪಾಪಫಲಗಳನ್ನು, **ಸರ್ವಜೀವರಿಗೆ** = ಸಮಸ್ತ ತ್ರಿವಿಧಜೀವರಿಗೆ, **ಉಂಡು** = ವಡಬಾಗ್ನಿಯಂತೆ ಸ್ವಾಖ್ಯರಸಗಳನ್ನು ತಾನು ಸ್ವೀಕರಿಸಿ, **ಉಣಿಸುವನು** = ಮೇಘಗಳಂತೆ ಜೀವಭುಕ್ತರಸವನ್ನು ಉಣಿಸುವನು ॥೭॥

## ವ್ಯಾಖ್ಯಾನಗಳು

# ೧ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಜೀವರಿಗೆ ಫಲಾಫಲಂಗಳ ಉಣಿಸೋದರಿಂದ ಸ್ವಪ್ರಯೋಜ ಏನಾದರೂ ಉಂಟೇ ಎಂದರೆ ಸ್ವಪ್ರಯೋಜನವಿಲ್ಲ, ಪರಪ್ರಯೋಜನ ಎಂತ ಹೇಳತಾರೆ.

ಸಮುದ್ರೋದಕವನ್ನು ಮೇಘವೇನು, ಸಮುದ್ರದಲ್ಲಿರುವ ವಡಬ ಸಾಂಕೇತ ಅಗ್ನಿಯೇನು ಇವು ಎರಡೂ ಭೋಜನಮಾಡೋವಾಗತವೆ, ಈ ಪಾನ ಮಾಡಿದ ಮೇಘ, ವಡಬಾನಳ ಈ ಎರಡರ ಒಳಗೆ, ಮೇಘ ತಾನು ಪಾನ ಮಾಡಿದ ಉದಕವನ್ನು ತನ್ನಲ್ಲಿ ಇಟ್ಟುಕೊಳ್ಳಧಾಂಗೆ ಮಳೆ ಸುರಿಸಿ ಭೂಮಿಗೆ ತಂಪು ಉಂಟು ಮಾಡೋದಾಗತದೆ. ಮತ್ತೊಂದಾದ ಸಮುದ್ರೋದಕ ಪಾನ ಮಾಡಿದ ವಡಬ ಎಂಬ ಅಗ್ನಿಯು, ಮೇಘದೋಪಾದಿಯಲ್ಲಿ ಭೂಮಿಗೆ ಕೊಡದೆ ತಾನೇ ಭೋಜನ ಮಾಡೋದಾಗತದೆ. ಅನ್ಯರಿಗೆ ಕೊಡೋದಿಲ್ಲ ಎಂತ ತಾತ್ಪರ್ಯ. ಈ ಪ್ರಕಾರ ಪರಮಾತ್ಮಭುಕ್ತ ಬ್ಯಾರೆ, ಜೀವಭುಕ್ತ ಬ್ಯಾರೆ ಎಂತ ತಿಳಿಯಬೇಕು. ಸರ್ವತ್ರವ್ಯಾಪ್ತನಾದ ಲಕ್ಷ್ಮೀಪತಿಯಾದ ನಾರಾಯಣ ದೇವರು, ತ್ರಿಗುಣಗಳಿಂದ ಮಾಡಲ್ಪಟ್ಟ ಕರ್ಮದಿಂದ ಜನಿತವಾದ ಪುಣ್ಯಫಲಗಳ ಪಾಪಫಲಗಳ, ಸಮಸ್ತಜೀವರಿಗೆ ಅವರವರ ಯೋಗ್ಯತಾನುಸಾರ, ಪೂರ್ವೋಕ್ತ ವಡಬಾಗ್ನಿಯೋಪಾದಿಯಲ್ಲಿ ಅನ್ಯರಿಗೆ ಭೋಗ ಯೋಗ್ಯವಲ್ಲದ ತನ್ನ ಸ್ವಾಖ್ಯಗಳ ತಾನು ಉಂಡು, ಜೀವ ಭುಕ್ತ, ಮೇಘವರ್ಷಿಸಿ ಭೂಮಿಗೆ ಶಾಂತಿಕೊಟ್ಟೋಪಾದಿಯಲ್ಲಿ ಉಣಿಸತಾನೆ ಎಂತ ತಾತ್ಪರ್ಯ.

**ತಾತ್ಪರ್ಯ**-ಮೇಘ, ವಡಬಾಗ್ನಿ ಸದೃಶ, ಭಗವದ್ರೂಪಗಳು ; ಕರ್ಮ ಸದೃಶ ಸಮುದ್ರೋದಕ. ಇದರಲ್ಲಿ ವಡಬಾಗ್ನಿ ಪಾನ ಮಾಡಿದ ಉದಕ ಒಂದು, ಮೇಘಪಾನ ಮಾಡಿದ ಉದಕ ಒಂದು, ಮೇಘಪಾನ ಮಾಡಿದ ಉದಕ ಸದೃಶ ಜೀವರು ಅರ್ಪಿಸಿದ ಜಡಕರ್ಮ. ವಡಬಾಗ್ನಿ ಪಾನ ಮಾಡಿದ ಉದಕ

ಸದೃಶ. ಪರಮಾತ್ಮನ ಸ್ವಾಖ್ಯಕರ್ಮ. ಜೀವಭುಕ್ತ ಕರ್ಮದಲ್ಲಿ ವಿದ್ಯಮಾನವಾದ ಸ್ವಾಖ್ಯಕರ್ಮ ವಡಬಾಗ್ನಿಯೋಪಾದಿಯಲ್ಲಿ ತಾನೇ ಭೋಜನ ಮಾಡತಾನೆ. ಜೀವಭುಕ್ತಕರ್ಮವನ್ನ ಭೂಸದೃಶರಾದ ಜೀವರಿಗೆ ಮೇಘ ಸದೃಶನಾದ ಪರಮಾತ್ಮ ಸೃಷ್ಟಿ ಸಾಂಕೇತದಿಂದ ಭೋಗಿಸೋದಕ್ಕೆ ಕೊಡತಾನೆ. ಜೀವಭುಕ್ತ ಬ್ಯಾರೆ, ಈಶಭುಕ್ತ ಬ್ಯಾರೆ ಎಂಬೋದಕ್ಕೆ ಮಾತ್ರ ದೃಷ್ಟಾಂತ. ಸ್ವೀಕಾರ ಮಾಡಿದ್ದರ ಒಳಗೆ ತನ್ನದು ತನ್ನಲ್ಲಿ ಇಟ್ಟುಕೊಂಡು. ಅನ್ಯರದು ಅನ್ಯರಿಗೆ ಕೊಡತಾನೆ ಎಂತ ತಾತ್ಪರ್ಯ. ॥೬॥

## ೨. ಭಾವ ಪ್ರಕಾಶಿಕೆ

ಸಮುದ್ರದಲ್ಲಿರುವ ಉದಕವನ್ನು, ಮೇಘ ಮತ್ತು ಬಡಬಾಗ್ನಿ ಇವೆರಡು ಪಾನಮಾಡುವುವು. ಅದರಲ್ಲಿ ಮೇಘವು ತಾನು ಪಾನ ಮಾಡಿದ ಉದಕವನ್ನು ಮಳೆಗರೆದು ಭೂಮಿಗೆ ತಂಪು ಮಾಡಿ ಜನರನ್ನು ಆನಂದಪಡಿಸುವನು, ಬಡಬಾಗ್ನಿಯು, ತಾನು ಪಾನ ಮಾಡಿದ ಉದಕವನ್ನು ತಾನೇ ಜೀರ್ಣಿಸಿಕೊಳ್ಳುವುದು. ಅಂದರೆ ಆ ನೀರನ್ನು ತಾನೇ ಸುಟ್ಟು ಬಿಡುವುದು, ಹೀಗೆ ಬಡಬಾಗ್ನಿಯಲ್ಲಿಯೂ, ಮೇಘದಲ್ಲಿಯೂ, ಇರುವ ಪ್ರತ್ಯೇಕ ಪ್ರತ್ಯೇಕವಾದ ಎರಡು ಗುಣಗಳು ಪರಮಾತ್ಮನೊಬ್ಬನಲ್ಲೇ ಇರುವುವೆಂದು ಎರಡು ಉಪಮಾನಗಳನ್ನು ಕೊಟ್ಟಿರುವರು. ಜೀವರು ಮಾಡುವ ಕರ್ಮಜನ್ಯವಾದ ಶುಭ ಫಲವನ್ನು ಪರಮಾತ್ಮನು ಸ್ವೀಕರಿಸಿ, ಸಮುದ್ರೋದಕವನ್ನು ಪಾನ ಮಾಡಿದ ಮೇಘವು, ಮಳೆಕರೆದು ದಿವ್ಯವಾದ ಉದಕದಿಂದ ಜನರನ್ನು ತೃಪ್ತಿಬಡಿಸುವಂತೆ ಜೀವರಿಗೆ ಇಮ್ಮಡಿಯಾದ ಸುಖವನ್ನು ಕೊಟ್ಟುಧ್ಧರಿಸುವನು. ಬಡಬಾಗ್ನಿಯು ತಾನು ಪಾನ ಮಾಡಿದ ಉದಕವನ್ನು ಸುಟ್ಟು ಬಿಡುವಂತೆ ಪರಮಾತ್ಮನು ತಾನು ಸ್ವೀಕರಿಸಿದ ಪಾಪ ಫಲವನ್ನು ಸುಟ್ಟು ಬಿಡುವನು. ಪಾಪಿಗಳಲ್ಲಿರುವ ಪಾಪಕರ್ಮಗಳನ್ನು ಅಲ್ಲೇ ಬಿಟ್ಟು, ಪುಣ್ಯವನ್ನು ಮಾತ್ರ ಸ್ವೀಕರಿಸಿ, ಸಜ್ಜನರಿಗೆ ಆ ಪುಣ್ಯವನ್ನು ಹಂಚುವನು. ಈ ವಿಷಯದಲ್ಲಿಯೂ ಮೇಘದ ಉಪಮಾನವನ್ನು ತೆಗೆದುಕೊಳ್ಳಬೇಕು. ಮೇಘವು ಸಮುದ್ರದಲ್ಲಿ

ರುವ ಎಲ್ಲಾ ಉದಕವನ್ನೂ ಸ್ವೀಕರಿಸುವುದಿಲ್ಲ. ಸಮುದ್ರದ ಯೋಗ್ಯತೆ ಮೀರಿ ಬರುವ ಉದಕವನ್ನು ಪಾನ ಮಾಡುವುದು, ಪರಮಾತ್ಮನು ಹಾಗೆ ದೈತ್ಯರಲ್ಲಿ ಪಾಪವನ್ನು ಬಿಟ್ಟು, ಅವರಿಗೆ ಮೀರಿದ ಪುಣ್ಯವನ್ನು ಗ್ರಹಿಸಿ, ಮೇಘವು ಮಳೆಗರೆದು ಜನರಿಗೆ ಸುಖಕೊಡುವಂತೆ ಸಜ್ಜನರಿಗೆ ಆ ಪುಣ್ಯವನ್ನು ಕೊಡುವನೆಂಬ ತಾತ್ಪರ್ಯ ॥೭॥

**೩ ಭಾವ ದರ್ಪಣ**

ಸಮಸ್ತ ಕರ್ಮಜ ಪುಣ್ಯಾಪುಣ್ಯಗಳನ್ನು ಶ್ರೀಹರಿಗೆ ಸಮರ್ಪಿಸಿದರೆ ಯಾವತ್ತೂ ಪಾಪಗಳನ್ನು ಬಡಬಾಲನೋಪಾದೇಲಿ ಭಸ್ಮಮಾಡಿ ಯಾವತ್ತೂ ಪುಣ್ಯ ಸ್ವೀಕರಿಸಿ ಅನಂತ ಫಲ ಮಾಡಿ ಮೇಘದೋಪಾದೇಲಿ ಕೊಡುತ್ತಾನೆಂದು ದೃಷ್ಟಾಂತದ್ವಯದಿಂದ ಹೇಳುತ್ತಾರೆ. ಜಲದ ಇತಿ. ತದುಕ್ತಂ ವಿಷ್ಣುರಹಸ್ಯೇ. "ಗೃಹ್ಣಾತಿಹಿ ಹರಿಃ ಪುಣ್ಯಂ ಪಾಪಂ ಭಸ್ಮೀಕರೋತಿಚೇತಿ", ಜಲದ = ಮೇಘ, ಬಡಬಾನಲ = ಸಮುದ್ರಸ್ಥ ಅಗ್ನಿ, ಅಂಬುಧಿ = ಜಲಧಿ, ಅಬ್ದ = ಮೇಘ, ಸರ್ವಗ = ಸರ್ವಾಂತರ್ಯಾಮಿ. ॥೭॥

**೪ ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ**

"ಜಲದ" ಇತಿ॥ "ಉಂಡು" ಇತಿ ಪೂರ್ವಪದಂ॥ ದುಷ್ಫಲಂ ಪರಂ ಆಶಂಕ್ಯನ ಇತ್ಯತ್ರ ಅಯಂ ದೃಷ್ಟಾಂತಃ ॥ (ದೃಷ್ಟಾಂತ ಯುಗಂ ಚ)॥ "ಜಲದ" = ಮೇಘಃ "ಮಳೆ" ಮೇಘಂ ಕೃತ್ವಾ ಪ್ರವರ್ಷತಿ ಇತ್ಯುಕ್ತೇಃ॥ "ವಾಡವಃ॥"—ಸಮುದ್ರೋದಪಾಯೀ ಪ್ರಸಿದ್ಧಃ॥ "ತಿಳಿವುದು" ಉಕ್ತ ಭಂಗ್ಯಾ ॥೭॥

## ಕನ್ನಡಾರ್ಥ

ಕರ್ಮವಿಕರ್ಮಜನ್ಯ ಫಲಗಳಲ್ಲಿ ಸ್ವಶುಭಸಾರ ಭಾಗವನ್ನು ತಾನೇ ಸ್ವೀಕರಿಸಿ ಮಿಕ್ಕ ಭಾಗವನ್ನು ಅವರವರಿಗೆ ಯೋಗ್ಯತಾನುಗುಣವಾಗಿ ಶ್ರೀ

ಹರಿಯು ಹಂಚುವನು, ಈ ವಿಷಯದಲ್ಲಿ ವಡವಾನಲ-ಮೇಘ ದೃಷ್ಟಾಂತಗಳನ್ನು ತಿಳಿಸುತ್ತಾರೆ ಈ ಪದ್ಯದಿಂದ "ಉಂಡು"— ಎಂಬುದು ಪೂರ್ವದಲ್ಲಿ ಹೇಳಲ್ಪಟ್ಟಿದೆ ಪರಮಾತ್ಮನಲ್ಲಿ ಪಾಪಫಲವಿದೆಯೆಂದು ಸಂಶಯ ಬಂದರೆ ಅದನ್ನು ಪರಿಹರಿಸಿ ಆ ದುಷ್ಫಲವು ಅವನಿಗಿಲ್ಲವೆಂದು ತಿಳಿಸಲು ಈ ದೃಷ್ಟಾಂತ (ಮೇಘದ) ಸಮುದ್ರದ ನೀರೇ ಸೂರ್ಯನ ಮುಖಾಂತರ ಮೇಘವಾಗಿ ಮಳೆಯಾಗುವುದೆಂಬುದು ಪ್ರಸಿದ್ಧವಾದುದು. ಹಿಂದೆ ಹೇಳಿದ ಪ್ರಕಾರಗಳಿಂದ ಉಂಡುಣಿಸುವ ಕ್ರಮವನ್ನು ತಿಳಿಯಬೇಕು. ॥೭॥

## ಶ್ರೀ ಗುರುಹೃದಯ ಪ್ರಕಾಶಿಕೆ

ಜೀವೇಶ್ವರ ಭೋಗವನ್ನು ದೃಷ್ಟಾಂತದಿಂದ ತಿಳಿಸುತ್ತಾರೆ, ಜಲದ ಎಂದು. ಜಲದ ಎಂಬ ಮೇಘವು ಅಂಬುಧಿ ಎಂಬ ಸಮುದ್ರದ ಜಲವನ್ನು ಕುಡಿದು ಇಳೆ ಎಂಬ ಭೂಮಿಗೆ ಶಾಂತಿ ಎಂಬ ತೃಪ್ತಿಯನ್ನು ಕೊಡುವಂತೆ, ಲಕ್ಷ್ಮೀನಿಲಯನಾದ ದೇವರು ಗುಣಕೃತ ಪುಣ್ಯಪಾಪಜನ್ಯ ಫಲಾಫಲವೆಂಬ ಸುಖದುಃಖಗಳನ್ನು ತಾನು ತೆಗೆದುಕೊಂಡು, ತದ್ಯೋಗ್ಯಜೀವರಿಗೆ ಉಣಿಸಿ ತಾನು ನಿರ್ಲೇಪನಾಗಿರುವನೆಂದು ತಿಳಿವುದು. ಬಡಬಾನಲವೆಂಬ ಸಮುದ್ರದಲ್ಲಿರುವ ಕುದುರೆ ಮುಖದ ಅಗ್ನಿಯು ಸಮುದ್ರದ ಜಲವನ್ನು ತಾನೇ ಕುಡಿವಂತೆ, ಜೀವರು ಸ್ವಯೋಗ್ಯ ಸುಖದುಃಖಗಳನ್ನು ತಾವೇ ಅನುಭವಿಸುವರೆಂದು ಸರ್ವತ್ರ ತಿಳಿಯುವುದು ॥೭॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಸಮುದ್ರದ ನೀರು ಸೂರ್ಯನ ತಾಪದಿಂದ ಆವಿಯಾಗಿ, ಮೇಲಕ್ಕೇರಿ, ಮೇಘಗಳು ಉಂಟಾಗುವುವು. ಭೂಮಿಗೆ ಮಳೆಯನ್ನು ಸುರಿಸುವ ಮೇಘಗಳಿಗೆ **ಜಲದ**-ಎಂದು ಹೆಸರು. ಜಲ-ಎಂದರೆ, ನೀರು ದ-ಎಂದರೆ ಕೊಡುವ ಮೇಘಗಳೆಂದರ್ಥ. ಸಮುದ್ರದಲ್ಲಿ **ವಡಬಾಗ್ನಿ** ಎಂಬ ಅಗ್ನಿ ಇರುವುದು.

ಇದು ಸಮುದ್ರೋದಕವನ್ನು ಪಾನ ಮಾಡುವುದು.

ಹೀಗೆ ಮೇಘ ಮತ್ತು ವಡಬಾಗ್ನಿಗಳೆರಡೂ ಸಮುದ್ರೋದಕವನ್ನು ಪಾನ ಮಾಡುವುವು, ಅವುಗಳಿಗಿರುವ ವ್ಯತ್ಯಾಸವೇನೆಂದರೆ-

(೧) ಮೇಘವು ಸೂರ್ಯನ ತಾಪದಿಂದ ಸಮುದ್ರೋದಕವನ್ನು ಪಾನ ಮಾಡಿ. ತನ್ನಲ್ಲಿರುವ ನೀರನ್ನು ಮಳೆಯ ರೂಪದಲ್ಲಿ ಪುನಃ ಭೂಮಿಗೇ ಸುರಿಸಿ, ತಂಪನ್ನುಂಟು ಮಾಡುವುದು.

(೨) ವಡಬಾಗ್ನಿಯು ತಾನು ಪಾನ ಮಾಡಿದ ಉದಕವನ್ನು ಬಿಟ್ಟು ಕೊಡದೇ ತಾನೇ ಭಕ್ಷಿಸುವುದು,

ಸತ್ವಾದಿ ತ್ರಿಗುಣಗಳಿಂದ ಜನಿತವಾದ ಶುಭಾಶುಭವಾದ ಸಮಸ್ತ ಕರ್ಮಗಳನ್ನೂ ಲಕ್ಷ್ಮೀರಮಣನಾದ ಶ್ರೀಪರಮಾತ್ಮನೇ ಮಾಡಿ ಮಾಡಿಸು ತ್ತಿರುವನು.

ಜೀವರದ್ವಾರಾ ಬಿಂಬಕ್ರಿಯಾರೂಪದಲ್ಲಿ ಮಾಡಲ್ಪಟ್ಟ ಶುಭ ಕರ್ಮ ಗಳನ್ನು, ಅವನಿಗೆ ಅರ್ಪಿಸಿದರೆ, ಅವುಗಳನ್ನು ಮೇಘಗಳಂತೆ ತಾನೇ ಸ್ವೀಕರಿಸಿ. ತಜ್ಜನ್ಯ ಫಲ ರೂಪವಾದ ಪುಣ್ಯವನ್ನು ಮೇಘಗಳು ತಾವು ಪಾನ ಮಾಡಿದ ಸಮುದ್ರೋದಕವನ್ನು, ಭೂಮಿಗೇ ಮಳೆಯ ರೂಪದಲ್ಲಿ ಸುರಿಸುವಂತೆ, ಜೀವರಿಗೇ ಅನಂತಮಡಿ ಮಾಡಿಕೊಟ್ಟು ಶಾಂತಿಯನ್ನೀವನು.

ಅಪಾರ ಕರ್ಮ ಸಮೂಹಗಳು ಸಮುದ್ರೋದಕ ಸದೃಶ. ಕರುಣಾಳು ವಾದ ಶ್ರೀ ಪರಮಾತ್ಮನು ಮೇಘಸದೃಶ. ಮೇಘದಿಂದ ಮಳೆಯು ಭೂಮಿಗೇ ಸೇರುವಂತೆ. ಶುಭ ರೂಪವಾದ ಪುಣ್ಯ ಕರ್ಮಗಳ ಫಲವು ಜೀವರಿಗೇ ಸೇರುವುದು.

ವಡಬ ಎಂಬ ಸಮುದ್ರ ಜಲಗರ್ಭಗತ ಅಗ್ನಿಯು ಸಮುದ್ರದ ಜಲ ವನ್ನು ತಾನೇ ಪಾನ ಮಾಡುವಂತೆ, ತನಗರ್ಪಿತವಾದ ಪಾಪಕರ್ಮಜನ್ಯ ಫಲವನ್ನು ವಡಬಾಗ್ನಿ ಸದೃಶನಾದ ಶ್ರೀ ಹರಿಯು ತಾನೇ ಸ್ವೀಕರಿಸಿ, ಜೀವರಿಗೆ ಅದು ದಕ್ಕದಂತೆ ಮಾಡಿ ತನ್ನ ಕಟಾಕ್ಷ ವೀಕ್ಷಣದಿಂದ ಭಸ್ಮ ಗೊಳಿಸುವನು.

ಸರ್ವತ್ರ ವ್ಯಾಪ್ತನಾದ ಆ ಸರ್ವೋತ್ತಮನು ತ್ರಿವಿಧ ಜೀವರ

ಅಂತರ್ಗತನಾಗಿದ್ದು ಅವರವರ ಯೋಗ್ಯತಾನುಸಾರ, ಕರ್ಮಗಳನ್ನು ಮಾಡಿ ಮಾಡಿಸಿ. ಈಶಭುಕ್ತ ಸ್ವಾಖ್ಯ ರಸವನ್ನು ತಾನು ಸ್ವೀಕರಿಸಿ, ಜೀವಭುಕ್ತ ರಸವನ್ನು ಅವರಿಗೆ ಉಣಿಸುವನು ॥೭॥

## ಪದ್ಯ – ೮

**ಮೂಲ:**

**ಪುಸ್ತಕಗಳವಲೋಕಿಸುತ ಸಂ ।**
**ತ್ರಸ್ತ್ರತಿಗಳಿನಲೇನು ರವಿಯುದ ।**
**ಯಸ್ತಮನ ಪರಿಯಂತ ಜಪತಪ ಮಾಡಿ ಫಲವೇನು ॥**
**ಹೃತ್ಸ್ಥ ಪರಮಾತ್ಮನೆ ಸಮಸ್ತಾ ।**
**ವಸ್ಥೆಗಳೊಳಿದ್ದೆಲ್ಲರೊಳಗೆ ನಿ ।**
**ರಸ್ತಕಾಮನು ಮಾಡಿ ಮಾಡಿಸನೆಂಬು ತಿಳಿಯದವ ॥ ॥೮॥**

**ಅವತರಣಿಕೆ:**

ಹೃತ್ಕಮಲ ನಿವಾಸಿಯಾದ ಬಿಂಬನೇ ಸರ್ವಾವಸ್ಥೆ, ದೇಶ ಕಾಲಗಳಲ್ಲಿ ಸಮಸ್ತ ಕರ್ಮಗಳನ್ನು ಮಾಡಿ ಮಾಡಿಸುತ್ತಿರುವನೆಂಬ ತತ್ತ್ವವನ್ನು ತಿಳಿಯದೇ, ಕೇವಲ ಯಾಂತ್ರಿಕವಾಗಿ ಏನು ಸತ್ಕರ್ಮಗಳನ್ನು ಮಾಡಿದರೂ ನಿಷ್ಫಲವೆಂದು ತಿಳಿಸುತ್ತಾರೆ ॥೮॥

**ಪ್ರತಿಪದಾರ್ಥ:**

**ನಿರಸ್ತಕಾಮನು** = ಫಲಾಪೇಕ್ಷ ರಹಿತನಾದ ಶ್ರೀ ಪರಮಾತ್ಮನು, **ಹೃತ್ಸ್ಥ** = ಸಕಲ ಜೀವರ ಹೃತ್ಪದ್ಮನಿವಾಸಿಯಾದ ಬಿಂಬರೂಪನಾದ, **ಪರಮಾತ್ಮನೆ** = ಸರ್ವೋತ್ತಮನಾದ ಶ್ರೀ ಹರಿಯೇ, **ಸಮಸ್ತ ಅವಸ್ಥೆಗಳೊಳು** = ಸಕಲವಾದ ಅವಸ್ಥಾತ್ರಯಗಳಲ್ಲಿ (ಜಾಗ್ರತ್-ಸ್ವಪ್ನ-ಸುಷುಪ್ತ್ಯವಸ್ಥೆಗಳಲ್ಲಿ) **ಎಲ್ಲರೊಳಗೆ** = ಸಮಸ್ತ ತ್ರಿವಿಧರಾದ ಜೀವರಲ್ಲಿ, **ಇದ್ದು** =

ವಿದ್ಯಮಾನನಾಗಿದ್ದು, **ಮಾಡಿ**=ಸಮಸ್ತ ಕರ್ಮಗಳನ್ನೂ ಬಿಂಬಕ್ರಿಯಾ ದ್ವಾರಾ ತಾನೇ ಮಾಡಿ, **ಮಾಡಿಪನೆಂದು**=ತದ್ದ್ವಾರಾ ದೇವ ದೈತ್ಯರಗಳ ಮೂಲಕ ಮಾಡಿಸುತ್ತಿರುವನೆಂಬ ತತ್ತ್ವರಹಸ್ಯವನ್ನು, **ತಿಳಿಯದವ**= ಅರಿಯದಿರುವ ಮಾನವರು, **ಪುಸ್ತಕಗಳ**=ಸರ್ವಶಾಸ್ತ್ರ ಗ್ರಂಥಗಳನ್ನು, **ಅವಲೋಕಿಸುತ**=ನೋಡುತ್ತಾ (ಅಧ್ಯಯನ ಮಾಡುತ್ತಾ) **ಮಂತ್ರ**= ಅಷ್ಟಮಹಾಮಂತ್ರಗಳೇನು, **ಸ್ತುತಿಗಳ** ಸ್ತೋತ್ರಗಳೇನು, **ಎನಲೇನು**= ಬಾಯಿಯಿಂದ ಉಚ್ಚರಿಸಿದರೇನು ? **ರವಿಯುದಯಸ್ತಮನ ಪರಿಯಂತ**= ಸೂರ್ಯನ ಉದಯದಿಂದ ಆರಂಭಿಸಿ, ಅಸ್ತಮಾನದವರೆಗೂ, ಅಂದರೆ, ಇಡೀ ಹಗಲುಹೊತ್ತಿನಲ್ಲಿ **ಜಪ ತಪ**=ನಾನಾ ಪ್ರಕಾರವಾದ ಜಪಗಳನ್ನೂ ತಪಗಳನ್ನಾಗಲೀ, **ಮಾಡಿ ಫಲವೇನು**= ಮಾಡಿದರೂ ಏನೂ ಫಲ ಪ್ರಾಪ್ತಿಯುಂಟಾಗುವುದಿಲ್ಲ ॥೮॥

## ೧ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಬಿಂಬಕ್ರಿಯಾ, ಪ್ರತಿಬಿಂಬಕ್ರಿಯಾ ತಿಳಿಯದವ ಏನು ಸತ್ಕರ್ಮ ಮಾಡಿದರೂ ಫಲವಿಲ್ಲ ಎಂತ ಹೇಳತಾರೆ.

ಭಗವದನುಗ್ರಹ ಸಂಪಾದಿಸಬೇಕು ಎಂತ ಇರತಕ್ಕವನು, ನಿಷ್ಕಾಮನಾಗಿ. ಹೃದಯಗತ ಬಿಂಬರೂಪಿಯಾದ ಪರಮಾತ್ಮನೇ ದೇಹೇಂದ್ರಿಯಾದಿಗಳಲ್ಲಿ ತದಾಕಾರನಾಗಿದ್ದು ಹಾಂಗೆ ಜೀವರಿಗೆ ಪ್ರಾಪ್ತವಾಗತಕ್ಕ ಸಮಸ್ತವಾದ ಅವಸ್ಥಾತ್ರಯ, ಇನ್ನೂ ಪಾಪಪುಣ್ಯಜನಿತ ವಿಚಿತ್ರವಾದ ಅವಸ್ಥೆಗಳು, ಇಂಥಾ ಅವಸ್ಥೆಗಳಿಗೆ ಬಿಂಬನಾಗಿದ್ದು ಭೋಗಕ್ಕೆ ತಂದು ಕೊಡುತ್ತಾನೆಂತಲೂ ಮತ್ತು ತನ್ನಂತೆ ಸಮಸ್ತ ಪ್ರಾಣಿಗಳೊಳು ದೇಹದಿಂದ ಸರ್ವವ್ಯಾಪಾರವೂ ಬಿಂಬಕ್ರಿಯಾ ದ್ವಾರಾ ತಾನು ಮಾಡಿ ತದ್ದ್ವಾರಾ ದೇವತೆಗಳು ಇವರುಗಳಿಂದ ಕರ್ಮವ್ಯಾಪಾರ ಮಾಡಸತಾನೆ ಎಂತ ಅನುಸಂಧಾನ ತಿಳಿಯದೆ, ತದನುಷ್ಠಾನ ಮಾಡದೆ, ಸೂರ್ಯ ಉದಯಾರಂಭ ಸಾಯಂಕಾಲ ಪರಿಯಂತ ಸರ್ವಶಾಸ್ತ್ರವೂ ನೋಡತಾ, ತಥಾ ಬಾಯಿಂದ ಉಚ್ಚರಿಸತಾ, ಅಷ್ಟ ಮಹಾ ಮಂತ್ರಗಳು,

ಸ್ತೋತ್ರಗಳು ಹೇಳಿಕೊಂಡಿದ್ದೇನು, ಜಪ ನಿರಶನಾದಿ ವ್ರತಗಳು ಇವುಗಳನ್ನು ಮಾಡಿ ಫಲವಿಲ್ಲ ಎಂತ ಅರ್ಥ.

**ತಾತ್ಪರ್ಯ**- ಬಿಂಬಕ್ರಿಯಾ ಪ್ರತಿಬಿಂಬಕ್ರಿಯಾನುಸಂಧಾನ ತಿಳದು, ನಿಷ್ಕಾಮನಾಗಿ, ಸಕಲಕರ್ಮಗಳಲ್ಲಿ ಪರಮಾತ್ಮನು ವ್ಯಾಪ್ತನೆಂದು ತಿಳದು ಅನುಷ್ಠಾನ ಮಾಡತಾ ಬಂದರೆ ಕರ್ಮಗಳು ಮೋಚನಾ ಆಗತಾ ಬರತವೆ ಎಂತ ತಾತ್ಪರ್ಯ ॥೮॥

## ೨ ಭಾವಪ್ರಕಾಶಿಕೆ

ಫಲಾಪೇಕ್ಷೆಯಿಲ್ಲದೆ ಎಲ್ಲರ ಹೃದಯಾಕಾಶದಲ್ಲೂ ಇರುವ ಪರಮಾತ್ಮನೇ ಸಕಲ ಪ್ರಾಣಿಗಳಲ್ಲೂ ಇದ್ದು ಜಾಗ್ರದವಸ್ಥೆ, ಸ್ವಪ್ನಾವಸ್ಥೆ, ಸುಷುಪ್ತ್ಯವಸ್ಥೆ, ಮೊದಲಾದ ಎಲ್ಲಾ ಅವಸ್ಥೆಗಳಲ್ಲೂ, ಸಕಲ ಕರ್ಮಗಳನ್ನೂ ತಾನು ಮಾಡಿ, ಮಾಡಿಸುವನು ಎಂದು ಚಿಂತಿಸದವನು, ಪುಸ್ತಕಗಳನ್ನು ನೋಡುತ್ತ, ಏನು ಪಾರಾಯಣ ಮಾಡಲಿ, ಮಂತ್ರ ಸ್ತೋತ್ರಗಳನ್ನು ಪಠಣ ಮಾಡಲಿ. ಸೂರ್ಯೋದಯ ಮೊದಲು ಅಸ್ತಮಯದವರೆಗೂ, ಜಪಗಳನ್ನು ಮಾಡುತ್ತಿರಲಿ ಎಲ್ಲವೂ ನಿಷ್ಫಲವೇ ಆಗುವುವು ॥೮॥

## ೩. ಭಾವ ದರ್ಪಣ

ಬಿಂಬಕ್ರಿಯಾನುಸಂಧಾನ ರಹಿತನಾದವ ಏನು ಮಾಡಿದಾಗ್ಯೂ ಸಕಲವೂ ನೀರೊಳಗೆ ಹೋಮ ಮಾಡಿದಂತೆ ಆಗತದೆಂದು ಭಾವ ತೋರಿಸುತ್ತಾರೆ. ಪುಸ್ತಕೇತಿ ಹೃತ್ಸ್ಥ—ಹೃದ್ಗತ ಪರಮಾತ್ಮನೇ. ಸಮಸ್ತಾವಸ್ಥೆ ಎಂದರೆ ಸಮಸ್ತ ಕಾರಣ ಕಾರ್ಯ ಕರ್ತೃಗತ ಎಂಬರ್ಥ ॥೮॥

## ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದಿ

ಏವಂ ರಸಾಜ್ಞಾನೇ ಸರ್ವಂ ಅಭಕ್ತ್ಯಾ ಅನರ್ಥಪ್ರದ ಮೇವ ಇತ್ಯಾಹ "ಪುಸ್ತಕ" ಇತಿ ॥೮॥

## ಕನ್ನಡಾರ್ಥ

ಹೀಗೆ ಸಾರಚರಿತನಾದ ಶ್ರೀಹರಿಯ ಸರ್ವವ್ಯಾಪಾರ ಮಹಿಮೆಯನ್ನು ತಿಳಿಯದೆ ಮಾಡುವುದೆಲ್ಲವೂ ಅಭಕ್ತಿ ಎನಿಸುವುದು. ಆದುದರಿಂದ ಅದು ಅನರ್ಥಕಾರಣವೆಂದು ಹೇಳುತ್ತಾರೆ– "ಪುಸ್ತಕ"ವೆಂಬ ಪದ್ಯದಿಂದ ॥೮॥

## ಶ್ರೀಗುರುಹೃದಯ ಪ್ರಕಾಶಿಕೆ

ಹೀಗೆ ಅಂತರ್ಯಾಮಿ ಬೇರೆ ಇದ್ದಾನೆಂದು ತಿಳಿಯದೆ, ಅಂತರ್ಯಾಮಿಗೆ ಜೀವಾಭೇದ ಹೇಳುವವನ ಪುಣ್ಯಗಳೆಲ್ಲ ನಿರರ್ಥಕವೆಂದು ಸದೃಷ್ಟಾಂತ ಎರಡು ಪದ್ಯಗಳಿಂದ ತಿಳಿಸುತ್ತಾರೆ. ಪುಸ್ತಕ ಎಂದು ವೇದಾದಿ ಪುಸ್ತಕಗಳನ್ನು ನೋಡುತ್ತಾ, ಮಂತ್ರಸ್ತೋತ್ರಗಳನ್ನು ಆಚರಿಸಿದರೂ, ಸೂರ್ಯೋದಯಾ ರಂಭಿಸಿ ಅಸ್ತಮಯ ತನಕ ಜಪಗಳ ಮಾಡಿದಾಗ್ಯೂ, ಹೃದಯದಲ್ಲಿ ಅಂತರ್ಯಾಮಿಯಾದ ಪರಮಾತ್ಮನೇ ಸಮಸ್ತ ಜಾಗ್ರದಾದ್ಯವಸ್ಥೆಗಳಲ್ಲಿ, ಸರ್ವಜೀವರ ಕರ್ಮವ್ಯಕ್ತಿ ಮಾಡಿ ಮಾಡಿಸುವನೆಂದು ಸ್ಮರಿಸದವನಿಗೆ ಶುಭ ಫಲವೇನೂ ಇಲ್ಲವೆಂದರ್ಥ ॥೮॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಶ್ರೀ ಹರಿಯು ಫಲಾಪೇಕ್ಷ ರಹಿತನು. ಅವನಿಗೆ ಇತರರ್‍ಯಾರಿಂದಲೂ ಏನೇನೂ ಪ್ರಯೋಜನವಾಗಬೇಕಾಗಿಲ್ಲ. ಆದರೆ ಬಿಂಬನಾದ ಶ್ರೀ ಹರಿಯಿಂದ ಸಕಲ ಜೀವರಾಶಿಗೆ ಸಾಧನ ರೂಪವಾದ ಪ್ರಯೋಜನ ಉಂಟಾಗ ಬೇಕಾಗಿದೆ. ಇದರಿಂದ ಶ್ರೀ ಹರಿಯನ್ನು ದಾಸರಾಯರು **ನಿರಸ್ತಕಾಮ** ನೆಂದಿದ್ದಾರೆ. ಆ ನಿರಸ್ತಕಾಮನಾದ ನಿರಂಜನನು ಸಕಲ ಜೀವರ ಹೃದಯ ಕಮಲದಲ್ಲಿ ಬಿಂಬರೂಪದಿಂದ ವಿದ್ಯಮಾನನಾಗಿದ್ದಾನೆ. ಅಂತಹ **ಹೃಸ್ಥ ಶ್ರೀ ಪರಮಾತ್ಮನು** ಅವಸ್ಥಾತ್ರಯಗಳೆಂದೆನಿಪ, ಜಾಗ್ರತಾವಸ್ಥೆ,

ಸ್ವಪ್ನಾವಸ್ಥೆ ಮತ್ತು ಸುಷುಪ್ತ್ಯವಸ್ಥೆಗಳನ್ನು ಜೀವರಿಗೆ ತನ್ನ ಸಂಕಲ್ಪಾನುಸಾರ ಕೊಡುವನು. ಜೀವರ ಕರ್ಮಾನುಸಾರ ಪುಣ್ಯ-ಪಾಪ ಮಿಶ್ರ ಎಂಬ ಸಕಲ ಕರ್ಮಗಳನ್ನು ಸರ್ವಸ್ವತಂತ್ರನಾದ ಆ ಸಮೀರನೇ ಬಿಂಬರೂಪದಿಂದ ಬಿಂಬ ಕ್ರಿಯಾದ್ವಾರಾ ತಾನೇ ಮಾಡಿ. ತತ್ವೇಶರ ದ್ವಾರಾ ಮಾಡಿಸುತ್ತಾ, ಪ್ರಕಾಶತೋ ವ್ಯಾಪ್ತನಾದ ಜೀವನ ಅನುಭವಕ್ಕೆ ತಂದೀಯುತ್ತಿರುವನು.

ಬಿಂಬನ ಈ ಸಂಭ್ರಮದ ವ್ಯಾಪಾರವನ್ನು ಜ್ಞಾನಾನುಸಂಧಾನ ಪೂರ್ವಕ ಅರಿಯದೇ, ಶಾಸ್ತ್ರಸಂಬಂಧವಾದ ಗ್ರಂಥಗಳನ್ನು ಓದುವುದು. ಪಾಠ ಹೇಳುವುದು, ಮನನ ಮಾಡುವುದು ಇಂತಹ ಡಾಂಭಿಕ ಕ್ರಮದಿಂದ ಏನೇನೂ ಪ್ರಯೋಜನವಿಲ್ಲವೆಂದು ತಿಳಿಸುತ್ತಾರೆ. ಸಮಸ್ತ ಕ್ರಿಯೆಗಳಿಗೂ ಪ್ರೇರಕನಾದ ಆ ಸರ್ವೋತ್ತಮನ ವ್ಯಾಪಾರ ವಿಶೇಷಗಳನ್ನು ಅರಿಯದೇ ಸೂರ್ಯಾಸ್ತಮಾನದಿಂದ ಪ್ರಾರಂಭಿಸಿ, ಸೂರ್ಯಾಸ್ತ ಪರ್ಯಂತ ಮಂತ್ರ ಸ್ತೋತ್ರಗಳನ್ನು ಯಾಂತ್ರಿಕವಾಗಿ ಪಠಿಸಿದರೆ ಫಲವೇನೂ ಇಲ್ಲ. ಜಪ, ತಪ ಗಳನ್ನು ಆಚರಿಸಿದರೂ ನಿಷ್ಫಲವೆಂಬ ಎಚ್ಚರಿಕೆಯ ನುಡಿಗಳನ್ನು ಆಡಿದ್ದಾರೆ. ಶ್ರೀ ಹರಿಯ ಏಕಾಂತ ಭಕ್ತರಾದ ದಾಸವರ್ಯರು ಉತ್ತಮ ಜ್ಞಾನಾನು ಸಂಧಾನಪೂರ್ವಕವಾದ ಅಹಂಮಮಕಾರ ರಹಿತವಾದ, ನಿಷ್ಕಾಮ ರೂಪವಾದ ಸಾಧನೆಗೆ ಆ ಸರ್ವಚೇಷ್ಟಾ ಪ್ರವರ್ತಕನು ಒಲಿವನೇ ಹೊರತು, ಕೇವಲ ಅನುಸಂಧಾನ ರಹಿತವಾದ ಜಡ ಕರ್ಮಗಳಿಗಲ್ಲ ಎಂಬುದೇ ಪ್ರಸಕ್ತ ಪದ್ಯದ ತಾತ್ಪರ್ಯ ॥೮॥

## ಪದ್ಯ-೯

**ಮೂಲ :**

**ಮಧ್ಯಭಾಂಡವ ದೇವನದಿಯೊಳ ।**
**ಗದ್ದಿ ತೊಳೆಯಲು ನಿತ್ಯದಲಿ ಪರಿ ।**
**ಶುದ್ಧವಾಹುದೆ ಎಂದಿಗಾದರು ಹರಿಪಾದಾಬ್ಜಗಳ ॥**
**ಬುದ್ಧಿಪೂರ್ವಕ ಭಜಿಸದವಗೆ ವಿ ।**

**ರುದ್ಧವೆನಿಸುವುವೆಲ್ಲ ಕರ್ಮ ಸ ।**
**ಮೃದ್ಧಿಗಳು ದುಃಖವನೆ ಕೊಡುತಿಹವ ಧಮಜೀವರಿಗೆ ॥೯॥**

**ಅವತರಣಿಕೆ :**

ಅಂತರಂಗ ಶುದ್ಧಿಯಿಲ್ಲದೆ ಮಾಡುವ ಸರ್ವ ಸತ್ಕರ್ಮಗಳೂ ದುಃಖ ಫಲವನ್ನೇ ಕೊಡುವುವು ಎಂದು ದೃಷ್ಟಾಂತಪೂರ್ವಕವಾಗಿ ತಿಳಿಸುತ್ತಾರೆ ॥೮॥

**ಪ್ರತಿಪದಾರ್ಥ :**

**ಮಧ್ಯಭಾಂಡವ**= ಹೆಂಡದಿಂದ ತುಂಬಿದ ಮಡಿಕೆಯನ್ನು, **ದೇವನದಿಯೊಳಗೆ**= ಗಂಗಾನದಿಯಲ್ಲಿ, **ನಿತ್ಯದಲಿ**= ಪ್ರತಿದಿನವೂ, **ಅದ್ದಿ ತೊಳೆಯಲು**= ಮುಳುಗಿಸಿ, ಚೆನ್ನಾಗಿ ತಿಕ್ಕಿ ತೊಳೆದರೆ. **ಎಂದಿಗಾದರು**= ಯಾವಾಗಲಾದರೂ, **ಪರಿ ಶುದ್ಧವಾಹುದೆ**= ಚೆನ್ನಾಗಿ ಶುದ್ಧವಾಗುತ್ತದೆಯೇ ? ಅಂದರೆ, ಎಂದೆಂದಿಗೂ ಶುದ್ಧವಾಗುವುದಿಲ್ಲ ಎಂದು ತಾತ್ಪರ್ಯ **ಹರಿಪಾದಾಬ್ಜಗಳ**= ಶ್ರೀ ಪರಮಾತ್ಮನ ಚರಣ ಕಮಲಗಳನ್ನು, **ಬುದ್ಧಿಪೂರ್ವಕ**= ಜ್ಞಾನಪೂರ್ವಕ, ಅಂದರೆ, ಅಹಂಮಮತಾ ರಹಿತರಾಗಿ, ಶುದ್ಧಾಂತಃಕರಣದಿಂದ ಶ್ರೀಹರಿಯ ಬಿಂಬಕ್ರಿಯಾ ವಿಶೇಷಗಳನ್ನು ಜ್ಞಾನಾನುಸಂಧಾನವಾಗಿ ತಿಳಿದು **ಭಜಿಸದವಗೆ**=ಧ್ಯಾನ ಸ್ತೋತ್ರಗಳನ್ನು ಮಾಡದವನಿಗೆ. **ಎಲ್ಲ ಕರ್ಮ ಸಮೃದ್ಧಿಗಳು**=ಸಕಲವಾದ ಪಾಪ, ಪುಣ್ಯ ಉಭಯ ವಿಧವಾದ ಕರ್ಮ ಸಮೂಹಗಳು, **ವಿರುದ್ಧವೆನಿಸುವುವು**= ಪುಣ್ಯ ಕರ್ಮಗಳೆಲ್ಲಾ ಪಾಪಫಲಪ್ರದಗಳಾಗಿ, ಪಾಪಗಳ ಫಲ ವರ್ಧಿಸಿ, **ಅಧಮಜೀವರಿಗೆ**= ಅಯೋಗ್ಯ ಚೇತನರಿಗೆ, **ದುಃಖವನೆ ಕೊಡುತಿಹವು**= ದುಃಖಪ್ರದವಾಗಿ, ನರಕಾದ್ಯನರ್ಥಗಳನ್ನು ಹೊಂದಿಸಿ. ಅಂತ್ಯದಲ್ಲಿ ಅಂಧಂತಮಸ್ಸನ್ನು ಹೊಂದಿಸುವುವು. ॥೯॥

# ೧ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಅಂತರಂಗ ಶುದ್ಧನಾಗದೆ, ಬಾಹ್ಯಶುದ್ಧನಾಗಿ ಡಾಂಭಿಕದಿಂದ ಮಾಡಿದ ಸರ್ವಸತ್ಕರ್ಮಗಳೂ ಪಾಪಫಲವೇ ಕೊಡತವೆ ಎಂತ ಹೇಳತಾರೆ.

ಸಾರಾಯಿಯಿಂದ ಸಹಿತವಾದ ಗಡಿಗಿಯನ್ನ ಭಾಗೀರಥೀನದಿಯಲ್ಲಿ ಪ್ರತಿ ದಿನದಲ್ಲೂ ಮುಣುಗಿಸಿ ಚಂದಾಗಿ ತೊಳೆದರೆ ದಾವಾಗಾದರೂ ಚಂದಾಗಿ ಶುದ್ಧವಾಗೋದೆ ಎಂದರೆ ಶುದ್ಧವಾದ ಪಾತ್ರಿ ಎಂತ ಕರೆಸೋದಿಲ್ಲ. ಅದರೋಪಾದಿಯಲ್ಲಿ ಈ ದೇಹಾಖ್ಯ ಭಾಂಡದಲ್ಲಿ ಪ್ರಾಕೃತ ವಿಷಯಕಾಮನ ವಿನು, ಅಹಂಮಮತಾದಿಗಳೇನು, ಬಂಬಕ್ರಿಯೆಾ ಪ್ರತಿಬಿಂಬಕ್ರಿಯಾ ವಿಸ್ಮೃತಿ ವಿನು, ಇತ್ಯಾದಿ ದುರ್ಗುಣಗಳಿಾದ ಮದ್ಯವ ತುಂಬಿ, ಈ ದೇಹಾಖ್ಯ ಭಾಂಡವನ್ನ ದೇವನದಿ ಸದೃಶವಾದ ಸಚ್ಛಾಸ್ತ್ರವೇನು, ಜಪ ತಪವೇನು ಇತ್ಯಾದಿಗಳೆಂಬ ನದೀ ಉದಕದಲ್ಲಿ ಸ್ನಾನಮಾಡಿಸೋಣದರಿಂದ ಪವಿತ್ರವಾಗಲಾರದು. ಜ್ಞಾನಪೂರ್ವಕ, ಮನಃಪೂರ್ವಕವಾಗಿ ಅಹಂ ಮಮತಾದಿಗಳ ತ್ಯಜಿಸಿ, ಪ್ರಾಕೃತ ವಿಷಯಾದಿಗಳ ಕಾಮನ ಮಾಡದೆ, ಪದ್ಮ ಪತ್ರಗತ ಉದಕದೋಪಾದಿಯಲ್ಲಿ ನಿರ್ಲಿಪ್ತನಾಗಿ ವಿಷಯಾದಿಗಳಲ್ಲಿ ಓಡಾಡತಾ, ಬಿಂಬಕ್ರಿಯಾದ್ವಾರಾ ಪ್ರತಿಬಿಂಬಕ್ರಿಯಾ ನೆನಿಯುತಾ ಶ್ರೀ ಪರಮಾತ್ಮನ ಪಾದಕಮಲಗಳ ಭಜನೆ ಮಾಡದೆ ಇರತಕ್ಕ ಮನುಷ್ಯಗೆ ಮತ್ತು ಅಧಮರಾದ ಅಜ್ಞಾನಯುಕ್ತರಾದವರಿಗೆ ಪುಣ್ಯ ಪಾಪ ಈ ಉಭಯವಿಧವಾದ ಕರ್ಮಸಮೂಹಗಳು ಪಾಪ ಕರ್ಮಗಳು ಆಗತಾ ಬಂದು, ಅಂತ್ಯದಲ್ಲಿ ನರಕಾದ್ಯನರ್ಥಗಳ ಹೊಂದಿಸಿ, ಕೊನಿಗೆ ಅಧಂತಮೋಲೋಕ ಹೊಂದಿಸತವೆ ಎಂತ ತಾತ್ಪರ್ಯ ॥೯॥

## ೨ ಭಾವ ಪ್ರಕಾಶಿಕೆ

ಮೇಲೆ ಹೇಳಿದಂತೆ ಅನುಸಂಧಾನಪೂರ್ವಕವಾಗಿ, ಪರಮಾತ್ಮನ ಪಾದ ಕಮಲವನ್ನು ಭಜಿಸದೆ ಜಪ, ತಪ ಮೊದಲಾದ ಯಾವ ಕರ್ಮಾನುಷ್ಠಾನ ಮಾಡಿದರೂ ಅವು ಇವನನ್ನು ಉದ್ಧಾರ ಮಾಡವು. ಭಾಗವತ ಷಷ್ಠಸ್ಕಂಧ

ಮೊದಲನೆಯ ಅಧ್ಯಾಯದಲ್ಲಿ "ಪ್ರಾಯಶ್ಚಿತ್ತಾನಿ ಚೀರ್ಣಾನಿ ನಾರಾಯಣ ಪರಾಙ್ಮುಖೈ । ನವೈ ಪುನಂತಿ ರಾಜೇಂದ್ರ ಸುರಾಕುಂಭಮಿವಾಪಗಾಃ॥

ನಾರಾಯಣನಲ್ಲಿ ವಿಮುಖರಾದವರು ಪಾಪ ಪರಿಹಾರಕ್ಕೋಸ್ಕರವಾಗಿ ಪ್ರಾಯಶ್ಚಿತ್ತ ರೂಪವಾದ ಕರ್ಮಗಳನ್ನೇನು ಮಾಡಿದರೂ, ಮದ್ಯದ ಕೊಡವನ್ನು ಮಹಾನದಿಗಳು ಹೇಗೆ ಶುದ್ಧಿ ಮಾಡವೋ ಹಾಗೆ ಇವನ್ನು ಶುದ್ಧಿ ಮಾಡವು, ಎಂದು ಹೇಳಿರುವರು. ಅದೇ ಅರ್ಥವನ್ನೇ ಇಲ್ಲಿ ಹೇಳಿರುತ್ತಾರೆ. ಗಂಗೆಯು ಸಕಲ ವಸ್ತುಗಳನ್ನೂ ಶುದ್ಧಿ ಮಾಡುವ ಯೋಗ್ಯತೆ ಉಳ್ಳುದಾದರೂ, ಮದ್ಯದ ಕೊಡವನ್ನು ಹೇಗೆ ಶುದ್ಧಿಮಾಡಲಾರದೋ ಹಾಗೆ ಸತ್ಕರ್ಮಗಳು ಉತ್ತಮವಾದರೂ, ಪರಮಾತ್ಮನೇ ಮಾಡಿಸಿದನೆಂಬ ಅನುಸಂಧಾನವಿಲ್ಲದೆ, ನಾನೆ ಮಾಡಿದೆನೆಂದು ತಿಳಿದ ಅಧಮ ಜೀವರು ಮಾಡಿದ ಕರ್ಮಗಳು ವಿರುದ್ಧ ಫಲವನ್ನೇ ಕೊಡುವುವು. ಅಂದರೆ ಸಮೃದ್ಧಿಯಾದ ದುಃಖವನ್ನೇ ಕೊಡುವವು ॥೯॥

## ೩ ಭಾವದರ್ಪಣ

ದಾರ್ಢ್ಯಾರ್ಥ ಪುನಃ ಪೂರ್ವದ ಮಾತೇ ಹೇಳುತ್ತಾರೆ. ಮಧ್ಯಭಾಂಡಮಿತಿ ॥೯॥

## ೪ ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

ನನು ಕಥಂ ಏತತ್ ? ಮಂತ್ರಾದೀನಾಂ ಉದ್ಧಾರಕಾಣಾಂ ಸತ್ವಾತ್ ಇತಿ॥ ಸುರಾಕುಂಭಂ ಆಪಗಾವತ್ ನ ಇತ್ಯಾಹ 'ಮದ್ಯ' ಇತಿ॥ 'ವೃದ್ಧಿ' ವೃಂದ ॥೯॥

## ಕನ್ನಡಾರ್ಥ

ಹರಿಭಕ್ತಿ ವರ್ಜಿತವಾದುದೆಲ್ಲವೂ ಅನರ್ಥಕಾರಣವೆಂಬುದು ಹೇಗೆ

ಯುಕ್ತ ? ಯಾಕೆಂದರೆ ಪಾಪಗಳಿಂದ ಮನುಷ್ಯನನ್ನು ಉಳಿಸಲು ಪ್ರಾಯಶ್ಚಿತ್ತ ಮಂತ್ರ ಮುಂತಾದ ಉದ್ಧಾರ ಕಾರಣಗಳಿರುವವಲ್ಲ ? ಎಂದು ಸಂಶಯ ಬಂದರೆ "ಭಾಗೀರಥಿಯು ಸುರಾಭಾಂಡವನ್ನು ಹೇಗೆ ಪವಿತ್ರಿಸುವುದಿಲ್ಲವೋ ಅದರಂತೆ" ಎಂಬುದಾಗಿ ಉತ್ತರವನ್ನು ಹೇಳುತ್ತಾರೆ. 'ಮದ್ಯ' ಎಂಬ ಪದ್ಯದಿಂದ "ಕರ್ಮವೃದ್ಧಿ" ಕರ್ಮಸಮೂಹ" ॥೯॥

## ಜ ಶ್ರೀಗುರು ಹೃದಯ ಪ್ರಕಾಶಿಕೆ

ಮದ್ಯದ ಗಡಿಗೆಯನ್ನು ದೇವನದಿ ಎಂಬ ಗಂಗೆಯಲ್ಲಿ ಅದ್ದಿ ತೆಗೆದಾಗ್ಯೂ ಸದಾ ಹೇಗೆ ಶುದ್ಧಿಯಾಗುವುದಿಲ್ಲವೋ ಹಾಗೆ ಶ್ರೀ ಹರಿಯ ಪಾದಾಬ್ಜಗಳನ್ನು ಮನಃಪೂರ್ವಕ ಭಜಿಸದವಗೆ, ಎಲ್ಲಾ ಪುಣ್ಯಕರ್ಮವೂ ವಿರುದ್ಧ ವೆಂಬ ಪಾಪವಾಗಿ ಆ ಅಧಮಜೀವಗೆ ದುಃಖವನ್ನೇ ಕೊಡುವುವು,

**ಅನ್ಯೈವಂ ವಿನ್ಮಹತ್ಪುಣ್ಯಂ ಕರ್ಮಕರೋತಿ ತದ್ಧಾಸ್ಯಾಂ ತತಃ ಕ್ಷೀಯತ ಏವ** ಎಂಬ ಶ್ರುತ್ಯರ್ಥವು ವಿವರಿಸಿತು . ॥೯॥

# ಸರ್ವವ್ಯಾಖ್ಯಾನಸಾರ ಸಂಗ್ರಹ

**ದೇವನದಿ** ಎಂದು ಪ್ರಖ್ಯಾತವಾದ ಗಂಗಾನದಿಯು ಶ್ರೀ ಹರಿಯ ಪಾದೋದ್ಭವೆ, ಅದರ ನೀರು ಅತ್ಯಂತ ಪವಿತ್ರ. ಸಮಸ್ತ ಪಾಪ ಪ್ರಕ್ಷಾಳನ ಮಾಡುವ ಧರ್ಮ ಉಳ್ಳದ್ದು. ಆದರೆ ಹೆಂಡದಿಂದ ತುಂಬಿದ ಕೊಡವನ್ನು ಗಂಗಾನದಿಯ ಪವಿತ್ರ ಉದಕದಲ್ಲಿ ಮುಳುಗಿಸಿ ಚೆನ್ನಾಗಿ ತಿಕ್ಕಿ ತೊಳೆದರೂ ಅದು ಎಂದೆಂದಿಗೂ ಶುದ್ಧವಾಗಲಾರದು.

ಅಂತೆಯೇ ನಮ್ಮ ಸಾಧನ ಶರೀರವೆಂಬ ದೇಹವು ಭಾಂಢ ಸದೃಶ, ಸಚ್ಛಾಸ್ತ್ರಗಳ ಅಧ್ಯಯನ, ಪಾಠಪ್ರವಚನಗಳು ಮನನ, ಜಪತಪಾದಿಗಳು, ಸತ್ಕರ್ಮಗಳ ಆಚರಣೆ ಇತ್ಯಾದಿಗಳು ಪರಮ ಪವಿತ್ರವಾದ ದೇವನದಿಜಲದ ಸಾದೃಶ್ಯ, ಅಹಂಕಾರ, ಮಮಕಾರಗಳಿಂದ ಗ್ರಸ್ತನಾಗಿ. "ಅಹಂಕರ್ತೃತ್ವ

ಭಾವವನ್ನು ಹೊಂದಿ, ಪ್ರಾಕೃತ ವಿಷಯಗಳ ಕಾಮನೆಯುಳ್ಳ ಮಾನವನು ಮಾಡುವ ಸತ್ಕರ್ಮಗಳೆಲ್ಲವೂ ಮದ್ಯ ಭಾಂಡದ ಸದೃಶ.

ಶ್ರೀ ಪರಮಾತ್ಮನ ಬಿಂಬಕ್ರಿಯಾನುಸಂಧಾನವಿಲ್ಲದೇ, ಅಂತಃಕರಣ ಶುದ್ಧಿಯಿಲ್ಲದ ಮಾನವರು ಏನು ಸತ್ಕಾರ್ಮಗಳನ್ನು ಆಚರಿಸಿದರೂ, ಅವು ಮದ್ಯಭಾಂಡವನ್ನು ದೇವನದಿಯ ಪವಿತ್ರಜಲವು ಹೇಗೆ ಶುದ್ಧಿ ಮಾಡುವು ದಿಲ್ಲವೋ, ಹಾಗೆಯೇ ಆ ಪುಣ್ಯ ಕರ್ಮಗಳೆಲ್ಲವೂ ವ್ಯರ್ಥ. ಅವು ಪಾಪ ಫಲವನ್ನು ಕೊಡುವುವೇ ಹೊರತು, ಪುಣ್ಯ ಪ್ರದವಾಗಲಾರವು. ಅವು ಅಂತಹ ಮಾನವರಿಗೆ ದುಃಖದ ವರ್ಧನೆಗೆ ಕಾರಣವಾಗುವುವು. ಶ್ರೀ ಹರಿಯ ಚರಣ ಕಮಲಗಳ ವಿಸ್ಮೃತಿಯಿಂದ ಮಾಡುವ ಸತ್ಕರ್ಮಗಳೆಲ್ಲವೂ. ನಿರರ್ಥಕ ; ಹಾಗೂ ನರಕಾದ್ಯನರ್ಥಗಳನ್ನು ಹೊಂದಿಸುವುವು. ಅಂತ್ಯದಲ್ಲಿ ಅಂಧಂತಮಸ್ಸೆಂಬ ದುರ್ಗತಿ ಪ್ರಾಪ್ತಿಗೆ ಕಾರಣವಾಗುವುವು. ಈ ಅಭಿಪ್ರಾಯವೇ, **ಶ್ರೀ ಮದ್ಭಾಗವತ ಷಷ್ಠ ಸ್ಕಂಧದ ಪ್ರಥಮಾಧ್ಯಾಯ ದಲ್ಲಿ** ನಿರೂಪಿಸಲ್ಪಟ್ಟಿದೆ.

"ಪ್ರಾಯಶ್ಚಿತ್ತಾನಿ ಚೀರ್ಣಾನಿ ನಾರಾಯಣ ಪರಾಙ್ಮುಖೈ ।
ನನಿಷ್ಪುನಂತಿ ರಾಜೇಂದ್ರ ಸುರಾಕುಂಭಮಿವಾಪಗಾಃ"॥

ಅಂದರೆ, ನಾರಾಯಣನ ಸ್ಮರಣೆಯಿಂದ ಪರಾಙ್ಮುಖನಾದವನಿಗೆ ಪಾಪ ಪರಿಹಾರಕ್ಕಾಗಿ ಮಾಡಿಕೊಳ್ಳುವ ಪ್ರಾಯಶ್ಚಿತ್ತರೂಪವಾದ ಕರ್ಮಗಳು. ಅವನನ್ನು ಎಂದೆಂದಿಗೂ ಶುದ್ಧೀಕರಿಸಲಾರವು. ಪವಿತ್ರಜಲದಲ್ಲಿ ಸುರಾ ಕುಂಭವನ್ನು (ಮದ್ಯಭಾಂಡ) ತೊಳೆದಂತೆ-ಎಂದು ಶ್ಲೋಕಾರ್ಥ.

ಮತ್ತು "ಅನ್ಯೈವಂ ವಿನ್ಮುಹತ್ಪುಣ್ಯಂ ಕರ್ಮಕರೋತಿ ತದ್ಭಾಸ್ಯಾಂ ತತಃ ಕ್ಷೀಯತ ಏವ" **ಶ್ರುತ್ಯರ್ಥ.** ॥೯॥

## ಪದ್ಯ-೧೦

**ಮೂಲ :**

**ಭಕ್ತಿಪೂರ್ವಕವಾಗಿ ಮುಕ್ತಾ |**
**ಮುಕ್ತ ನಿಯಾಮಕನ ಸರ್ವೋ |**
**ದ್ರಿಕ್ತ ಮಹಿಮೆಗಳನವರತ ಕೊಂಡಾಡು ಮರೆಯದಲೆ ||**
**ಸಕ್ತನಾಗದೆ ಲೋಕವಾರ್ತೆ ಪ್ರ |**
**ಸಕ್ತಿಗಳ ನೀಡಾಡಿ ಶ್ರುತಿಸ್ಮೃ |**
**ತ್ಯುಕ್ತ ಕರ್ಮವ ಮಾಡುತಿರು ಹರಿಯಾಜ್ಞೆಯೆಂದರಿದು|| ||೧೦||**

**ಅವತರಣಿಕೆ ;**

ಶ್ರೀಹರಿಯಲ್ಲಿ ಶ್ರದ್ಧಾಭಕ್ತಿಪೂರ್ವಕವಾಗಿ ಶ್ರುತಿಸ್ಮೃತಿಗಳಲ್ಲಿ ಹೇಳಿರುವ ವಿಧಿಪೂರ್ವಕವಾದ ಸತ್ಕರ್ಮಗಳನ್ನು ಹರಿಯಾಜ್ಞೆ ಎಂಬ ಅನುಸಂಧಾನದಿಂದ ಮಾಡುತ್ತಿರಬೇಕೆಂದು ತಿಳಿಸುತ್ತಾರೆ ||೧೦||

**ಪ್ರತಿಪದಾರ್ಥ :**

**ಭಕ್ತಿಪೂರ್ವಕವಾಗಿ** = ಶ್ರೀ ಹರಿಯಲ್ಲಿ ನಿಶ್ಚಲವಾದ ಭಕ್ತಿಯಿಂದ, **ಮುಕ್ತಾ ಮುಕ್ತ ನಿಯಾಮಕನ** = ಮುಕ್ತ ಜೀವರು, ಇನ್ನೂ ಲಿಂಗಶರೀರ ಸಹಿತರಾಗಿದ್ದು ಸಾಧನ ಮಾಡುತ್ತಿರುವ ಅಮುಕ್ತ ಜೀವರು ಇವರಿಗೆ ಈಶನಾದ ಶ್ರೀ ಪರಮಾತ್ಮನ, **ಸರ್ವೋದ್ರಿಕ್ತ ಮಹಿಮೆಗಳ** = ಶ್ರೇಷ್ಠವಾದ ಅನಂತ ಮಹಿಮಾತಿಶಯಗಳನ್ನು, **ಮರೆಯದೆಲೆ** = ವಿಸ್ಮೃತಿರಹಿತನಾಗಿ, **ಅನವರತ** = ಯಾವಾಗಲೂ, **ಕೊಂಡಾಡು** = ಹೊಗಳುವವನಾಗು, **ಸಕ್ತನಾಗದೆ** = ಪ್ರಾಪಂಚಿಕ ವಿಷಯ ಭೋಗಾದಿಗಳಲ್ಲಿ ಮನಸ್ಸನ್ನು ಇಡದೆ, **ಲೋಕವಾರ್ತೆ** = ಪ್ರಾಪಂಚಿಕ ಸಮಾಚಾರಗಳೇನು, **ಪ್ರಸಕ್ತಿಗಳನು** = ವ್ಯರ್ಥ ಹರಟೆಗಳೇನು **ಈಡಾಡಿ** = ಬಿಟ್ಟು, **ಹರಿಯಾಜ್ಞೆಯೆಂದರಿತು** = ಶ್ರೀ ಹರಿಯ ಕಟ್ಟಪ್ಪಣೆ ಎಂಬ ಭಾವದಿಂದ, **ಶ್ರುತಿ** = ಅಪೌರುಷೇಯವಾದ ವೇದಗಳು, **ಸ್ಮೃತಿ** = ಪೌರುಷೇಯವಾದ ಪುರಾಣಗಳು, ಧರ್ಮಗ್ರಂಥಗಳಲ್ಲಿ,

**ಉಕ್ತ** = ವಿಧಿ ರೂಪವಾಗಿ ಹೇಳಿರುವ, **ಕರ್ಮವ** = ವಿಷ್ಣುವಿನ ಪ್ರೀತ್ಯರ್ಥವಾಗಿ ಸತ್ಕರ್ಮಗಳನ್ನು **ಮಾಡುತಿರು** = ಆಚರಿಸುವವನಾಗು ॥೧೦॥

## ವ್ಯಾಖ್ಯಾನಗಳು

### ೧ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಪರಮಾತ್ಮನಲ್ಲಿ ಭಕ್ತಿಯುತನಾಗಿ ಸ್ಮೃತಿಪೂರ್ವಕ ಸರ್ವಕರ್ಮಗಳ ಮಾಡು ಎಂತ ಹೇಳತಾರೆ.

ಪ್ರಾಕೃತ ವಿಷಯ ಭೋಗಾದಿಗಳಲ್ಲೇನು, ಅಹಂಮಮತಾದಿಗಳಲ್ಲೇನು ಆಸಕ್ತವಾಗದ ಮನಸ್ಸುಳ್ಳವನಾಗದವನಾಗಿ, ಭಗವನ್ಮಹಿಮಾ ವಾರ್ತೆಗಳು ಹೊರ್ತು ತದ್ವ್ಯತಿರಿಕ್ತವಾದ ಸಮಾಚಾರಗಳು, ದೇವ ಬ್ರಾಹ್ಮಣರ ನಿಂದಾ, ಇತ್ಯಾದಿಗಳಿಗೆ ಆಕರರಾದ ಅಜ್ಞಜನರು ಆಡತಕ್ಕ ಮಾತುಗಳು, ಲೋಕ ವ್ಯವಹಾರ ಮಾತುಗಳು, ಇವುಗಳನ್ನು ದೂರಮಾಡಿ ಬಿಟ್ಟವನಾಗಿ, ಲಿಂಗಭಂಗರಾಗಿ, ಮುಕ್ತರಾಗಿ, ವೈಕುಂಠಾದಿ ಲೋಕಗಳಲ್ಲಿ ಇರತಕ್ಕ ಮುಕ್ತರಿಗೇನು, ಸಲಿಂಗರಾಗಿ ಸಾಧನ ಮಾಡತಾ ಇರತಕ್ಕ ಅಮುಕ್ತರಿಗೇನು. ಇವರುಗಳಿಗೆ ನಿಯಾಮಕನಾದ ಪರಮಾತ್ಮನ ಶ್ರೇಷ್ಠಗಳಾದ ಮಹಿಮೆಗಳ ಅಂದರೆ, ರಮಾದಿ ಸರ್ವ ಅಸ್ವತಂತ್ರ ಚೇತನರಕಿಂತಲೂ ಅಸದೃಶನಾದ, ಶ್ರೇಷ್ಠನಾದ ಪರಮಾತ್ಮನ ಮಹಾತ್ಮ್ಯಗಳು, ಅವು ದಾವದೆಂದರೆ ಸೃಷ್ಟಿ ಸ್ಥಿತಿ ಲಯ ನಿಯಮನ ಜ್ಞಾನ ಅಜ್ಞಾನ ಬಂಧ ಮೋಕ್ಷ ಇವುಗಳನ್ನು ಸದಾ ಸರ್ವ ಕಾಲದಲ್ಲಿಯೂ ಮರತು ಹೋಗದೆ, ಅಚ್ಛಿದ್ರ ಸ್ನೇಹದಿಂದ ಯುಕ್ತನಾಗಿ. ಭೇದ ಜ್ಞಾನ, ತಾರತಮ್ಯ ಜ್ಞಾನಪೂರ್ವಕವಾಗಿ ಉಚ್ಚಾರ ಮಾಡೋವನಾಗು. ಈ ಪ್ರಕಾರ ಸತ್ಕರ್ಮಾನುಷ್ಠಾನ ಮಾಡತಾ ಅಪೌರುಷೇಯವಾದ ವೇದಗಳು, ಪೌರುಷೇಯವಾದ ಪುರಾಣಗಳು ಇನ್ನೂ ಧರ್ಮಶಾಸ್ತ್ರಗಳು ಇವುಗಳಲ್ಲಿ ಹೇಳಿದ ವಾಕ್ಯಗಳು ದಾವವವೆ ಇವು ವೇದವ್ಯಾಸ ದೇವರಿಂದ ಆಜ್ಞಾಪಿಸಲ್ಪಟ್ಟವು ಎಂತ ತಿಳಿದು ಇವುಗಳು **ಶ್ರುತಿ ಸ್ಮೃತಿ ಹರೇರಾಜ್ಞಾ** ಎಂತ ತಿಳಿದವನಾಗಿ ಶ್ರೀ ಪರಮಾತ್ಮನಿಗೆ ಪ್ರೀತಿಕರವಾದ ಕಾರ್ಯಗಳ ಮಾಡತಾ ಇರೋವನಾಗು ಎಂತ ಅರ್ಥ.

**ವಿಶೇಷಾರ್ಥ:** ಮ್ಯಾಲೆ ಕಂಡ ಭಕ್ತಿ ಎಂಬುದು ಎಂಥಾದ್ದೆಂದರೆ-

**ಮಹಾತ್ಮ್ಯಜ್ಞಾನ ಪೂರ್ವಸ್ತು ಸುದೃಢಃ ಸರ್ವತೋಧಿಕಃ ।**
**ಸ್ನೇಹೋ ಭಕ್ತಿರಿತಿ ಪ್ರೋಕ್ತಸ್ತಯಾ ಭಕ್ತಿರ್ನ ಚಾನ್ಯಥಾ ॥**
**ದಾನತೀರ್ಥತಪೋಯಜ್ಞಪೂರ್ವಾಃ ಸರ್ವೇಽಪಿ ಸರ್ವದಾ ।**
**ಅಂಗಾನಿ ಹರಿ ಸೇವಾಯಾಂ ಭಕ್ತಿಸ್ತ್ವೇಕಾ ವಿಮುಕ್ತಯೇ ॥**
**ಭಕ್ತ್ಯರ್ಥಾನ್ಯಖಿಲಾನ್ಯೇವ ಭಕ್ತಿರ್ನಾಪೇಕ್ಷ್ಯಾಯ ಕೇವಲಾ ।**
**ಭಕ್ತಾನಾಮಪಿ ಭಕ್ತಿರ್ಹಿ ನಿತ್ಯಾನಂದ ಸ್ವರೂಪಿಣೀ ॥**
**ಜ್ಞಾನಪೂರ್ವ ಪರಸ್ನೇಹೋ ನಿತ್ಯೋ ಭಕ್ತಿರಿತೀರ್ಯತೇ ।**

ಇನ್ನೂ.

**ನಾಹಂ ವೇದೈರ್ನ ತಪಸಾ ನ ದಾನೇನ ನ ಚೇಜ್ಯಯಾ ।**
**ಶಕ್ಯಂ ಏವಂವಿಧೋ ದ್ರಷ್ಟುಂದಷ್ಟವಾನಸಿ ಮಾಂ ಯಥಾ ॥**
**ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂ ವಿಧೋಽರ್ಜುನ ।**
**ಜ್ಞಾತುಂದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ**

**"ಇತ್ಯಾದಿನಾ ವಿಷ್ಣುಭಕ್ತಿರೇವ ಸರ್ವಸಾಧನೋತ್ತಮತ್ವಂ ಪರೋಕ್ಷಾ ಪರೋಕ್ಷ ಜ್ಞಾನಯೋಃ ಜ್ಞಾನಿನೋಽಪಿ ಮೋಕ್ಷಂ ಚ ತದಧೀನತ್ವಂ ಚ"** ಎಂತ ಇತ್ಯಾದ್ಯನುಸಂಧಾನದಿಂದ ಕರ್ಮ ಮಾಡತಾ ಬಂದರೆ ಶ್ರೀ ಹರಿ ಪ್ರೀತಿ ಯಾಗಿ ಕರ್ಮಮೋಚನವಾಗತಾ ಬರತದೆ ಎಂತ ತಾತ್ಪರ್ಯ ॥೧೦॥

## ೨. ಭಾವಪ್ರಕಾಶಿಕೆ

ಮುಕ್ತರಿಗೂ ಅಮುಕ್ತರಿಗೂ ಸಹ ನಿಯಾಮಕನಾದ ಶ್ರೀಪರಮಾತ್ಮನು ಸರ್ವೋತ್ಕೃಷ್ಟವಾದ ಮಹಿಮೆಗಳನ್ನು ಮರಿಯದೆ ನಿತ್ಯದಲ್ಲೂ ಭಕ್ತಿಪೂರ್ವಕ ವಾಗಿ ಸ್ತೋತ್ರ ಮಾಡುತ್ತಿರು. ಸಂಸಾರದಲ್ಲಿ ಅತಿ ಆಸಕ್ತಿಯನ್ನು ಮಾಡ ಬೇಡ. ಲೌಕಿಕವಾದ ಹಾಳು ಹರಟೆಗಳನ್ನು ಬಿಟ್ಟು "ಶ್ರುತಿ ಸ್ಮೃತಿ ಹರೇ

ರಾಜ್ಞಾ'' ಎಂಬ ಪ್ರಮಾಣಾನುಸಾರ ಶ್ರುತಿ ಸ್ಮೃತಿಗಳು ಭಗವದಾಜ್ಞೆಯೆಂದು ಭಾವಿಸಿ ವಿಧ್ಯುಕ್ತ ಕರ್ಮಗಳನ್ನು ಮಾಡುತ್ತಿರು ॥೧೦॥

### ೩. ಭಾವದರ್ಪಣ

ಮೇಲೆ ಹೇಳಿದ ೨ ಪದ್ಯದ ಭಾವ ಮನಸ್ಸಿಗೆ ತಂದು ಅನುಸಂಧಾನ ಪೂರ್ವಕ ಮರೆಯದೆ ಉಪಾಸನೆ ಮಾಡೆಂದು ಹೇಳುತ್ತಾರೆ. ಭಕ್ತಿಪೂರ್ವಕೇತಿ ॥೧೦॥

### ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

"ಭಕ್ತಿ" ಇತಿ ॥೧೦॥

## ಕನ್ನಡಾರ್ಥ

ಹರಿಭಕ್ತಿಯುತನಾಗಿ ವಿಹಿತ ಕರ್ಮಗಳನ್ನು ಭಗವದಾಜ್ಞೆ ಎಂದು ಆಚರಿಸುವುದೇ ಕರ್ತವ್ಯವೆಂದು ತಿಳಿಸುತ್ತಾರೆ 'ಭಕ್ತಿ' ಎಂಬ ಪದ್ಯದಿಂದ ॥೧೦॥

### ೫. ಶ್ರೀ ಗುರುಹೃದಯ ಪ್ರಕಾಶಿಕೆ

ಸಜ್ಜನರಿಗೆ ದೇವರ ಸ್ವಾತಂತ್ರ್ಯಜ್ಞಾನಪೂರ್ವಕ, ಸರ್ವಕರ್ಮವೂ ತದಧೀನವೆಂದು ಭಾವಿಸುವ ಬಗೆಯನ್ನು ಐದು ಪದ್ಯದಿಂದ ತಿಳಿಸುತ್ತಾರೆ, ಭಕ್ತಿಪೂರ್ವಕ ಎಂದು ಮೊದಲು. ಸುದೃಢಸ್ನೇಹವೆಂಬ ಭಕ್ತಿಪೂರ್ವಕವಾಗಿ ಮುಕ್ತಾಮುಕ್ತ ಸರ್ವಜೀವ ನಿಯಾಮಕನಾದ ದೇವರ ಸರ್ವೋದ್ರಿಕ್ತವೆಂಬ ಉತ್ಕೃಷ್ಟ ಸ್ವಾತಂತ್ರ್ಯಾದಿ ಮಹಾಮಹಿಮೆಗಳನ್ನು ಮರೆಯದೆ ಸದಾ ಕೊಂಡಾಡಬೇಕು. ಲೋಕವಾರ್ತೆ ಎಂಬ ಅಜ್ಞ ಜನರ ಪ್ರಸ್ತಾಪಗಳಲ್ಲಿ ಆಸಕ್ತನಾಗದೆ, ಈಡ್ಯಾಡಿ ಅಂದರೆ ಪರಿಹರಿಸಿ ಶ್ರುತಿ ಸ್ಮೃತ್ಯುಕ್ತಕರ್ಮಗಳನ್ನು ಶ್ರೀ ಹರಿಯ ಆಜ್ಞೆ ಎಂದು ತಿಳಿದು ಮಾಡುತ್ತಿರು. ಅಂದರೆ ದೇವರು ವ್ಯಕ್ತಮಾಡಿ ಮಾಡಿಸುತ್ತಾನೆ ಎಂದು ಭಾವಿಸು ಎಂದರ್ಥ ॥೧೦॥

## ಸರ್ವ ವ್ಯಾಖ್ಯಾನಸಾರ ಸಂಗ್ರಹ

ಶ್ರೀಹರಿಯಲ್ಲಿ ಅವಿಚ್ಛಿನ್ನವಾದ, ದಾರಾಪುತ್ರಾದಿಗಳಲ್ಲಿ ಮಾಡುವ ಪ್ರೇಮಕ್ಕಿಂತ ನಿರತಿಶಯವಾಗಿ ಇರುವ ಸುದೃಢವಾದ ಪ್ರೇಮಪ್ರವಾಹರೂಪ ವಾದ ಪ್ರೀತಿಯ ಭಾವಕ್ಕೆ ಭಕ್ತಿ ಎಂದು ಹೆಸರು. ಹಾಗೆ ಶ್ರೀ ಪರಮಾತ್ಮನ ಉಪಾಸನಾ ವಿಷಯದಲ್ಲಿ ಅತಿಶಯವಾದ ಶ್ರದ್ಧಾ ಭಕ್ತಿಗಳಿರಬೇಕೆಂದು ತಿಳಿಸು ತ್ತಾರೆ.

ಭಕ್ತವತ್ಸಲನಾದ ಆ ಮುಕುಂದನು ಮುಕ್ತಾಮುಕ್ತ ನಿಯಾಮಕನು. ಸಾಧನಪೂರ್ತಿಸಿಕೊಂಡು ಲಿಂಗಭಂಗವನ್ನು ಹೊಂದಿ ವೈಕುಂಠಾದಿ ಮುಕ್ತ ಧಾಮಗಳಲ್ಲಿ ಸ್ವರೂಪಗತ ನಿತ್ಯಾನಂದವನ್ನು, ಹೊಂದಿರುವವರು **ಮುಕ್ತ**ರೆನಿ ಸುವರು. ಇನ್ನೂ ಸಾಧನೆ ಪೂರ್ತಿಯಾಗದೆ ಸಲಿಂಗರಾಗಿ ಶ್ರೀಹರಿಯಲ್ಲಿ ಭಕ್ತಿಯಿಂದ ಉಪಾಸನಾ ಮಾಡುತ್ತಿರುವ ಜೀವರು **ಅಮುಕ್ತರು.** ಇಂತಹ ಮುಕ್ತ ಜೀವರು ಮತ್ತು ಅಮುಕ್ತ ಜೀವರುಗಳಿಗೆ ಬಿಂಬರೂಪಿಯಾದ ಶ್ರೀ ಹರಿಯೇ ಪರಮ ಮುಖ್ಯ ವೃತ್ತಿಯಿಂದ ನಿಯಾಮಕನು.

ಅಂತಹ ಮುಕ್ತಾಮುಕ್ತ ನಿಯಾಮಕನಾದ ಮುರಳೀಧರನು ಸರ್ವೋತ್ತ ಮನು. ಸರ್ವಪ್ರಕಾರಗಳಿಂದಲೂ, ಕ್ಷರಾಕ್ಷರಪುರುಷಪೂಜಿತನಾದ ಉತ್ತಮೋ ತ್ತಮ ದೇವನಾಗಿದ್ದಾನೆ. ಸಮಾಭ್ಯಧಿಕ ಶೂನ್ಯನು. ಏಕಮೇವ. ಅದ್ವಿತೀಯನು ನಿತ್ಯಾನಂದ ಉದ್ರಿಕ್ತ ವಸ್ತುವಾದ ಆ ಪರಾತ್ಪರನ ಮಹಿಮಾತಿಶಯಗಳು ಅಪಾರ, ಅನಂತ ಹಾಗೂ ಅಪರಿಚ್ಛಿನ್ನ, ಶ್ರದ್ಧಾಭಕ್ತಿಗಳಿಂದ ಮುಕ್ತಾಮುಕ್ತ ರಿಗೆ ಈಶನಾದ ಆ ಸರ್ವೋತ್ತಮನ ಉತ್ಕೃಷ್ಟ ಮಹಿಮಾತಿಶಯಗಳನು ಎಡಬಿಡದೆ ಕೊಂಡಾಡುತ್ತಿರು ಎಂಬ ದಿವ್ಯ ಸಂದೇಶಸಾರಿದ್ದಾರೆ. ದಾಸ ವರ್ಯರು. ಅವನನ್ನು ಎಂದೆಂದಿಗೂ ಮರೆಯದೇ, ಆ ಪರಮಮಂಗಳ ಮೂರ್ತಿಯನ್ನು ಧ್ಯಾನಿಸಿ, ಭಜಿಸು, ಕೇವಲ ಲೋಕವಾರ್ತೆ, ಪ್ರಾಪಂಚಿಕ ವಿಷಯ ಭೋಗಗಳು, ಹಾಳು ಹರಟೆ, ವ್ಯರ್ಥಕಾಲಹರಣ ಇವುಗಳಲ್ಲಿ ಆಸಕ್ತ ಮನನಾಗಬೇಡವೆಂದು ಎಚ್ಚರಿಕೆಯ ಮಾತುಗಳನ್ನು ಹೇಳುತ್ತಾರೆ.

ಸತ್ಕರ್ಮಗಳು, ವಿಧಿಪೂರ್ವಕ ಆಚರಿಸುವ ನಿತ್ಯನೈಮಿತ್ತಿಕ ಕ... ಶ್ರೀಹರಿಯ ಆಜ್ಞೆ ಎಂದು ಭಾವಿಸಿ, ಅಹಂಕರ್ತೃತ್ವಾಭಿಮಾನವನ್ನು ..., ಕೇವಲ ಶ್ರೀ ಹರಿಯ ಪ್ರೀತ್ಯರ್ಥವಾಗಿ ಕರ್ಮನಿರತರಾಗಬೇಕು.

**ಶ್ರುತಿಸ್ಮೃತಿ ಹರೇರ್ರಾಜ್ಞಾ** ಎಂಬ ಪ್ರಮಾಣವಚನಾನುಸಾರ ಅಪೌರುಷೇಯವಾದ ವೇದಗಳು, ಪೌರುಷೇಯವಾದ ಪುರಾಣಗಳು ಧರ್ಮಶಾಸ್ತ್ರ ಇವುಗಳಲ್ಲಿ ಉಕ್ತವಾಗಿರುವ ವಿಧಿಗಳೆಲ್ಲವೂ ಶ್ರೀ ಹರಿಯ ಅಜ್ಞಾವಾಕ್ಯಗಳೆಂದು ಭಾವಿಸಿ, ಸತ್ಕರ್ಮಾನುಷ್ಠಾನವನ್ನು ನಿಷ್ಕಾಮನ ಮನಸ್ಸಿನಿಂದ ಮಾಡಬೇಕು ॥೧೦॥

## ಪದ್ಯ- ೧೧

**ಮೂಲ:**

**ಲೋಪವಾದರು ಸರಿಯೆ ಕರ್ಮಜ ।**
**ಪಾಪಪುಣ್ಯಗಳೆರಡು ನಿನ್ನನು ।**
**ಲೇಪಿಸವು ನಿಷ್ಕಾಮುಕನು ನೀನಾಗಿ ಮಾಡುತಿರೆ ॥**
**ಸೌಪರ್ಣಿವರವಹನ ನಿನ್ನ ಮ ।**
**ಹಾಪರಾದಗಳೆಣಿಸದಲೆ ಸ್ವ ।**
**ರ್ಗಾಪವರ್ಗದೊಳಿಟ್ಟು ಸಲಹುವ ಸತತ ಸುಖಸಾಂದ್ರ॥ ॥೧೧॥**

**ಅವತರಣಿಕೆ:**

ನಿಷ್ಕಾಮನ ಬುದ್ಧಿಯಿಂದ ಮಾಡುವ ಕರ್ಮಜನ್ಯವಾದ ಅಪರಾಧಗಳಿನ್ನು ಶ್ರೀ ಹರಿಯು ತನ್ನ ಕಾರುಣ್ಯ ವಿಶೇಷದಿಂದ ಪರಿಗಣಿಸುವುದಿಲ್ಲವೆಂದು ತಿಳಿಸುತ್ತಾರೆ. ॥೧೧॥

**ಪ್ರತಿಪದಾರ್ಥ:**

**ನೀನು** =ಭಗವದನುಗ್ರಹ ಪ್ರಾಪ್ತಿಗಾಗಿ ನೀನು, **ನಿಷ್ಕಾಮುಕನು**

**ಆಗಿ**= ಪ್ರಾಪಂಚಿಕ ವಿಷಯಗಳನ್ನು ಅಪೇಕ್ಷಿಸದೆ, ಕೇವಲ ನಿಷ್ಕಾಮನ ಮನಸ್ಸಿನಿಂದ, **ಮಾಡುತಿರೆ**= ಕರ್ಮಗಳನ್ನು ಆಚರಿಸುತ್ತಿದ್ದರೆ, **ಕರ್ಮಜಂ**= ಆ ಕರ್ಮಗಳಿಂದ ಜನಿತವಾದ, **ಪಾಪಪುಣ್ಯಗಳೆರಡು**= ಪಾಪ ಫಲವಾಗಲೀ, ಪುಣ್ಯ ಫಲವಾಗಲೀ, **ನಿನ್ನನುಲೇಪಿಸವು**=ನಿನಗೆ ಎಂದೆಂದಿಗೂ ಲೇಪ ವಾಗುವುದಿಲ್ಲ. ಅಂದರೆ ಉಭಯ ಕರ್ಮಫಲದಿಂದ ನೀನು ರಹಿತನಾಗುತ್ತೀಯ **ಲೋಪವಾದರು ಸರಿಯೆ**= ಕರ್ಮದಲ್ಲಿ ಲೋಪವಾದರೂ ಅಡ್ಡಿಯಿಲ್ಲ. ಅಂದರೆ ಪಾಪಕರ್ಮಗಳನ್ನು ಮಾಡಿದ್ದಾಗ್ಯೂ, **ಸೌಪರ್ಣಿವರವಹನ**= ಗರುಡವಾಹನನಾದ, **ಸುಖಸಾಂದ್ರ**= ಆನಂದಮಯನಾದ ಶ್ರೀ ಹರಿಯು **ನಿನ್ನಮಹಾಪರಾಧಗಳನು ಎಣಿಸದೆ**= ನಿನ್ನ ಅಪರಾಧಗಳನ್ನು (ಪಾಪ ಕರ್ಮಜನಿತ) ಗಣನೆಗೆ ತಾರದೆ, **ಸ್ವರ್ಗ**= ಸ್ವರ್ಗಲೋಕದಲ್ಲಿ ಸುಖವನ್ನು ಕೊಟ್ಟು, **ಅಪವರ್ಗದೊಳು ಇಟ್ಟು** – ಅಂತ್ಯದಲ್ಲಿ ಲಿಂಗಭಂಗವನ್ನೈದಿಸಿ, ವೈಕುಂಠಾದಿ ಮೋಕ್ಷಸ್ಥಾನಗಳನ್ನು ಹೊಂದಿಸಿ, **ಸತತ**= ನಿರಂತರದಲ್ಲಿ **ಸಲಹುವ**= ಸಂರಕ್ಷಿಸುತ್ತಾನೆ. ||೧೧||

## ವ್ಯಾಖ್ಯಾನಗಳು

# ೧ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಪರಮಾತ್ಮನು ನಿಷ್ಕಾಮುಕಕರ್ಮ ಮಾಡತಕ್ಕವರ ಅಪರಾಧಗಳ ಎಣಿಸೋದಿಲ್ಲ ಎಂತ ಹೇಳತಾರೆ.

ಭಗವದನುಗ್ರಹ ಸಂಪಾದಿಸಬೇಕೆಂಬ ಅಧಿಕಾರಿಯಾದ ನೀನು ಪ್ರಾಕೃತ ವಿಷಯಭೋಗಾದಿಗಳ ಕಾಮನಾ ಮಾಡದೆ ನಿಷ್ಕಾಮುಕನಾಗಿ, ಹರಿ ಇಚ್ಛಾದಿಂದ ಅನಾದಿಕರ್ಮವನ್ನನುಸರಿಸಿ ಪ್ರಾಪ್ತವಾದ ಭಾಗ್ಯ ಬಡತನಗಳು, ಲಾಭ, ನಷ್ಟ, ಸುಖದುಃಖಾದಿಗಳ, ಪದ್ಮಪತ್ರಗತ ಉದಕದೋಪಾದಿಯಲ್ಲಿ ನಿರ್ಲಿಪ್ತನಾಗಿ ಕರ್ಮ ಮಾಡತಾ ಇದ್ದರೆ, ಈ ಕರ್ಮದಿಂದ ಜನಿತಗಳಾದ ಪಾಪವೇನು ಪುಣ್ಯವೇನು ಈ ಎರಡೂ ನಿನಗೆ ಲೇಪವಾಗಿ ಜನ್ಮಗಳು ಎತ್ತೋದಕ್ಕೆ ಕಾರಣ

ವಾಗೋದಿಲ್ಲವಾದ್ದರಿಂದ, ಕ್ರಮವಾಗಿ ಸಾಧನ ಮಾಡತಾ ಬಂದರೆ ಅಥವಾ ಕ್ವಚಿತ್ಕಾಲದಲ್ಲಿ ಅಕಸ್ಮಾತ್ತಾಗಿ ಪಾಪಕರ್ಮಗಳ ಮಾಡಿದಾಗ್ಯೂನೂ ಅವುಗಳು ಪುಣ್ಯಕರ್ಮಕ್ಕೆ ಸರಿಯೇ ಆಗಿ ಪುಣ್ಯಫಲವೇ ಕೊಡತವೆ. ಇಂಥಾ ದ್ವಂದ್ವ ಕರ್ಮಕ್ಕೆ ಜ್ಞಾನ ಭಕುತಿ ವೈರಾಗ್ಯ ಐಶ್ವರ್ಯ ಅತಿಶಯವಾಗಿ ಮೋಕ್ಷವೇ ಫಲ. ಗರುಡ ವಾಹನನಾದ, ಆನಂದಸುಖದೇಹನಾದ ಪರಮಾತ್ಮ ನಿರಂತರ ಇಂಥಾ ಅನುಸಂಧಾನದಿಂದ ಸಹಿತನಾದ, ಬಿಂಬಕ್ರಿಯಾದ್ವಾರಾ ಅನಾದಿಕರ್ಮವನುಸರಿಸಿ ನಿನ್ನಿಂದ ಮಾಡಲ್ಪಟ್ಟ ಶ್ರೇಷ್ಠಾಪರಾಧಗಳ ಗಣನಾಮಾಡದೆ, ಜ್ಞಾನ ಭಕುತಿ ವೈರಾಗ್ಯಾತಿಶಯಗಳಿಂದ ಪ್ರಾಪ್ತವಾಗತಕ್ಕ ಸ್ವರ್ಗಸುಖವನ್ನು ಐಹಿಕದಲ್ಲಿ ಕೊಟ್ಟು, ಪುನರಾವರ್ತಿಲೋಕವಾದ ಸ್ವರ್ಗಸುಖವನ್ನ ತಪ್ಪಿಸಿ, ಲಿಂಗಭಂಗ ವನ್ನು ಐದಿಸಿ ವೈಕುಂಠಾದಿ ಲೋಕಗಳಲ್ಲಿ ಇಟ್ಟು ಸ್ವರೂಪಾನಂದವನ್ನ ಭೋಜನ ಮಾಡಿಸತಾನೆ. ಆದ್ದರಿಂದ ಕರ್ಮ ಮೋಚನವಿಷಯ ಪೂರ್ವೋಕ್ತ ಪ್ರಕಾರ ತಿಳಿಯಬೇಕಂತ ತಾತ್ಪರ್ಯ ॥೧೧॥

## ೨. ಭಾವ ಪ್ರಕಾಶಿಕೆ

"ಕರ್ಮಣ್ಯೇ ವಾಧಿಕಾರಸ್ತೇ ಮಾಫಲೇಷು ಕದಾಚನ" ಎಂಬ ಗೀತಾ ವಾಕ್ಯಾನುಸಾರವಾಗಿ ಕರ್ಮಗಳನ್ನು ಮಾಡುವಾಗ, ಪರಮಾತ್ಮನೇ ಮಾಡಿ ಮಾಡಿಸುವನೆಂದು ಅನುಸಂಧಾನಪೂರ್ವಕ, ಫಲವನ್ನಪೇಕ್ಷಿಸದೆ, ಭಗವತ್ಪ್ರೀತಿ ಗೋಸ್ಕರವಾಗಿ ಕರ್ಮಗಳನ್ನು ಮಾಡಬೇಕು. ಹಾಗೆ ಸತ್ಕರ್ಮಗಳನ್ನು ಮಾಡುವಾಗ ದೈವಸಂಕಲ್ಪದಿಂದ ಮಾಡಬೇಕಾದ ಸತ್ಕರ್ಮಗಳಿಗೆ ಲೋಪ ಬಂದರೂ, ಆ ಅಪರಾಧಗಳನ್ನು ಕ್ಷಮಿಸುವನು. ಇವನಲ್ಲಿರುವ ಸಂಚಿತ, ಆಗಾಮಿ ಕರ್ಮ ಸಂಬಂಧವಾದ ನಶ್ವರ ಫಲವನ್ನು ಕೊಡುವ ಸ್ವರ್ಗ ನರಕ ಗಳಿಗೆ ಸಾಧನವಾದ ಪುಣ್ಯಪಾಪಗಳೆಲ್ಲವೂ ಇವನಿಗೆ ಲೇಪವಾಗವು. ಮುಕ್ತಿಗೆ ಸಾಧನವಾದ ಪುಣ್ಯಮಾತ್ರ ಉಳಿಯುವುದೆಂಬ ತಾತ್ಪರ್ಯ. ಇವನಿಗೆ ಸ್ವರ್ಗ ವನ್ನಾಗಲೀ. ನರಕವನ್ನಾಗಲೀ ಕೊಡಿಸುವುದಿಲ್ಲ. ಶಾಶ್ವತವಾದ ವೈಕುಂಠ ಲೋಕ ವನ್ನೇ ಕೊಟ್ಟುದ್ಧರಿಸುವನು. ನಿಷ್ಕಾಮುಕರಾಗಿ ಕರ್ಮ ಮಾಡುವವರಿಗೆ ಸ್ವರ್ಗ ವಾಗುವುದಿಲ್ಲ. ಆದ್ದರಿಂದಲೆ ಸ್ವರ್ಗಾಪವರ್ಗ ಎಂಬ ಪದಕ್ಕೆ ಪದ್ಯಾರ್ಥದಲ್ಲಿ

ಹೇಳಿದಂತೆ ಸ್ವರ್ಗವೆಂದು ವೈಕುಂಠಕ್ಕೆ ಹೆಸರೆಂದು ಅರ್ಥಮಾಡಲು ಕಾರಣ ವಾಯಿತು. ಸ್ವರ್ಗ ಶಬ್ದಕ್ಕೆ ವೈಕುಂಠವೆಂದು ಅರ್ಥಮಾಡಿದುದು, ಭಾಗವತಕ್ಕೆ ಅನುಸಾರಿಯಾಗಿದೆ. ॥೧೧॥

## ೩ ಭಾವ ದರ್ಪಣ

"ಸಹಿ ಬಿಂಬಕ್ರಿಯಯೈವ ಕ್ರಿಯಾವಾನ್" ಎಂಬ ಗೀತಾಭಾಷ್ಯಾನುಸಾರ ಬಿಂಬಕ್ರಿಯಾ ಇಲ್ಲದೆ ಚೇತನಗಳು ಚಲಿಸಲಾರವಾದ್ದರಿಂದ ನಿಷ್ಕಾಮುಕನಾಗಿ ಬಿಂಬಕ್ರಿಯೊನುಸಂಧಾನ ಪೂರ್ವಕ ಕರ್ಮ ಮಾಡಿದರೆ ಲೇಪಿಸದೆಂದು ಹೇಳುತ್ತಾರೆ. ಲೋಪ. ಸೌಪರ್ಣಿವರ = ಗರುಡ. ಸ್ವರ್ಗ = ಇಂದ್ರ ಲೋಕ, ಅಪವರ್ಗ = ಮೋಕ್ಷ. ॥೧೧॥

## ೪ ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

"ಲೋಪ" ಇತಿ॥ ಪ್ರವೃತ್ತಾ ತ್ಯಕ್ತ್ವಾ ಸ್ವಧರ್ಮವ್ ಇತ್ಯುಕ್ತೇಃ ॥ (ಸೌಪರಣಿ) ವರ = ಗರುಡ ॥೧೧॥

## ಕನ್ನಡಾರ್ಥ

ಕರ್ಮಲೋಪವಾದರೂ ಚಿಂತೆಯಿಲ್ಲ. ವಿಷ್ಣುಭಕ್ತಿ, ನಿಷ್ಕಾಮ ಇವುಗಳಿಂದ ಶ್ರೀ ಹರಿಯು ಅಪರಾಧಗಳನ್ನು ಕ್ಷಮಿಸಿ, ಮೋಕ್ಷಾದಿ ಪುರುಷಾರ್ಥಗಳನ್ನು ಭಕ್ತರಿಗೆ ಕರುಣಿಸುವನೆಂದು ಹೇಳುತ್ತಾರೆ ಈ ಪದ್ಯದಿಂದ. ಕಾಮ್ಯಫಲ ಪ್ರಾಪಕ ಪ್ರವೃತ್ತಿ ಧರ್ಮಗಳನ್ನು ಬಿಟ್ಟು, ಭಗವದರ್ಪಣ ಬುದ್ಧಿಯಿಂದ ಮಾಡಿದ ನಿಷ್ಕಾಮ ಕರ್ಮದಿಂದ ಜ್ಞಾನದ್ವಾರಾ ಮೋಕ್ಷವಾಗುವುದೆಂದು ಹೇಳಲಾಗಿದೆ. 'ಸೌಪರ್ಣಿವರ' ಗರುಡ ॥೧೧॥

# ೫. ಶ್ರೀ ಗುರುಹೃದಯ ಪ್ರಕಾಶಿಕೆ

ಕರ್ಮಲೋಪಾದಿಗಳು ಆದಾಗ್ಯೂ, ಹೀಗೆ ಭಾಗಿಸುವ ಜೀವಗೆ ಪುಣ್ಯ-

ಪಾಪಗಳೆರಡೂ, ನಿರಭಿಮಾನಿಯಾದ್ದರಿಂದ ಲೇಪಿಸುವುದಿಲ್ಲ. ನಿಷ್ಕಾಮನಾಗಿ ಈ ರೀತಿ ಕರ್ಮ ಆಚರಿಸುವವನಿಗೆ ಸೌಪರ್ಣಿ ವರನೆಂಬ ಗರುಡನೇ ವಾಹನ ವಾಗಿ ಉಳ್ಳ ಆನಂದನಿಧಿ ದೇವರು ಅಪರಾಧಗಳೆಣಿಸದೆ ಸ್ವರ್ಗವೆಂಬ ಇಂದ್ರಾದಿ ಲೋಕದಲ್ಲೂ ಅಪವರ್ಗವೆಂಬ ವೈಕುಂಠಾದಿ ಲೋಕದಲ್ಲೂ ಇಟ್ಟು ಸಲಹುವನು ॥೧೧॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಕರ್ಮಗಳನ್ನು ನಿಷ್ಕಾಮುಕನಾಗಿ ಮಾಡಬೇಕೆಂದು ತಿಳಿಸುತ್ತಾರೆ. ನಿಷ್ಕಾಮ ಕರ್ಮದ ಮುಖ್ಯಧ್ಯೇಯವು ಶ್ರೀ ವಿಷ್ಣುಪ್ರೀತ್ಯರ್ಥವಾಗಿ ಎಂದಿರ ಬೇಕು. ಆಗ ಸತ್ಕರ್ಮಗಳನ್ನು ಆಚರಿಸುತ್ತಿರುವಾಗ, ಕಾರಣಾಂತರಗಳಿಂದ ಕರ್ಮಲೋಪವಾಗಬಹುದು, ಆ ಲೋಪದ ಫಲವಾಗಿ ಪಾಪವುಂಟಾಗು ವುದು, ಶ್ರೀಶನ ಬಿಂಬಕ್ರಿಯಾ ವ್ಯಾಪಾರ ವಿಶೇಷಗಳನ್ನು ಜ್ಞಾನಾನು ಸಂಧಾನಪೂರ್ವಕ ತಿಳಿದ ಸಾಧಕರಿಗೆ ಕರ್ಮಲೋಪವಾದರೂ ಸರಿಯೆ, ತತ್ಸಂಬಂಧವಾದ ಪಾಪಗಳು ಅವರನ್ನು ಲೇಪಿಸಲಾರವು. ಪಾಪಗಳಿಂದ ನಿರ್ಲಿಪ್ತರಾಗುವರು. ಭಗವತ್ಪ್ರೀತಿಗಾಗಿ ಮಾಡುವ ಸಕಲ ಕರ್ಮಗಳೆಲ್ಲವೂ ಮಹತ್ಫಲದಾಯಕವಾಗುವುದೇ ವಿನಹ, ಅವನಿಗೆ ನರಕಪ್ರಾಪ್ತಿಗೆ ಕಾರಣ ವಾದ ಪಾಪ ಫಲಗಳನ್ನು ಎಂದಿಗೂ ಕೊಡುವುದಿಲ್ಲ. ಪುಣ್ಯವರ್ಧನೆಗೆ ಕಾರಣವಾಗುವುದು. ಈ ವರ್ಧನೆಯಿಂದ ಕರ್ಮಲೋಪ ರೂಪವಾದ ಪಾಪ ಗಳು ಪರಿಹಾರವಾಗುವುವು.

ಶ್ರೀ ಗರುಡನು ಸೌಪರ್ಣೀ ದೇವಿಯ ಪತಿಯು. ಇದರಿಂದ **ಸೌಪರ್ಣೀ ವರ**ನೆಂದಿದ್ದಾರೆ. ಅಂತಹ ಸೌಪರ್ಣೀವರನ ಹೆಗಲಿನ ಮೇಲೆ ಕೂತು ಸಂಚರಿಸುವ ಶ್ರೀ ಹರಿಯು ಸೌಪರ್ಣೀವರವಹನು. ಅಂದರೆ ಗರುಡ ವಾಹನನಾದ ಶ್ರೀಹರಿಯು ನಿಷ್ಕಾಮ ಮನಸ್ಸಿನಿಂದ ವಿಷ್ಣುಪ್ರೀತ್ಯರ್ಥವಾಗಿ ಮಾಡುವ ಕರ್ಮಗಳಲ್ಲಿ ಆಗಾಗ್ಗೆ ಉಂಟಾಗುವ ಮಹಾಪರಾಧ ರೂಪವಾದ ಪಾಪಗಳನ್ನು ಪರಿಗಣಿಸದೆ. ಅಂತಹ ಏಕಾಂತ ಭಕ್ತನ ಕರ್ಮಲೋಪವನ್ನು

ಕ್ಷಮಿಸುವನು, ಹಾಗೂ ಪಾಪ ಪ್ರಕ್ಷಾಳನಗೈಯ್ಯುವನು. ಶ್ರೀ ಪರಮಾತ್ಮನು ಅವರಿಗೆ ಐಹಿಕದಲ್ಲಿ ಸಮಸ್ತ ಭೋಗ ರೂಪವಾದ ಸುಖಗಳನ್ನು ದಯಪಾಲಿಸಿ ಸ್ವರ್ಗದಲ್ಲಿ ಆನಂದವನ್ನು ಕೊಡುವನು. ಅಂತ್ಯದಲ್ಲಿ ಲಿಂಗಭಂಗದ್ವಾರಾ, ಕರ್ಮವಿಮೋಚನೆಗೈದು, ಶುದ್ಧೀಕರಿಸಿ, ವೈಕುಂಠಾದಿ ಮೋಕ್ಷ ಧಾಮಗಳಲ್ಲಿ (ಅಂದರೆ **ಅಪವರ್ಗ**) ಇಟ್ಟು ಸ್ವರೂಪ ಅವಿರ್ಭಾವ ರೂಪವಾದ ನಿತ್ಯಾನಂದ ಸುಖವನ್ನು ನೀಡಿ, ನಿರಂತರದಲ್ಲಿ ನಿರಂಜನನಾದ ಆ ಆನಂದಮಯನು ಆ ಜೀವರನ್ನು ಸಂರಕ್ಷಿಸುವನು ಎಂದು ಪ್ರಸಕ್ತ ಪದ್ಯದ ತಾತ್ಪರ್ಯಾಭಿಪ್ರಾಯವು ॥೧೧॥

## ಪದ್ಯ-೧೨

**ಮೂಲ:**

**ಸ್ವರತ ಸುಖಮಯ ಸುಲಭ ವಿಶ್ವಂ ।**
**ಭರ ವಿಶೋಕ ಸುರಾಸುರಾರ್ಚಿತ ।**
**ಚರಣಯುಗ ಚಾರ್ವಾಂಗ ಶಾರ್ಙ್ಗ ಶರಣ್ಯ ಜಿತಮನ್ಯು ॥**
**ಪರಮಸುಂದರತರ ಪರಾತ್ಪರ ।**
**ಶರಣಜನಸುರಧೇನು ಶಾಶ್ವತ ।**
**ಕರುಣಿ ಕಂಜದಳಾಕ್ಷ ಕಾಯನೆ ಕಂಗೊಳಿಪಸಿದ್ಧ ॥ ॥೧೨॥**

**ಅವತರಣಿಕೆ:**

ಅನಂತ ನಾಮಾತ್ಮಕನಾದ ಶ್ರೀಹರಿಯು ಸ್ಮರಣೆಯಿಂದ, ಸಕಲ ದುರಿತಗಳೂ ಪರಿಹಾರವಾಗಿ, ಕರ್ಮವಿಮೋಚನೆಗೆ ಕಾರಣವಾಗುವುದೆಂದು ತಿಳಿಸುತ್ತಾರೆ ॥೧೨॥

**ಪ್ರತಿಪದಾರ್ಥ**

**ಸ್ವರತ** = ತನ್ನ ರೂಪಗಳಲ್ಲಿಯೇ ರಮಿಸುವ. ಪರಾಪೇಕ್ಷಾರಹಿತನಾದ

ಸ್ವರಮಣನೇ, **ಸುಖಮಯ**= ಆನಂದ ಸ್ವರೂಪಿಯೇ, **ಸುಲಭ**= ಏಕಾಂತ ಭಕ್ತರ ಪಾಲಿಗೆ ಅತ್ಯಂತ ಸುಲಭಲಭ್ಯನೇ, **ವಿಶ್ವಂಭರ**= ಚರಾಚರಾತ್ಮಕವಾದ ಜಗತ್ತಿಗೆ ಆಧಾರನಾಗಿದ್ದು, ಜಗತ್ತನ್ನು ತನ್ನಲ್ಲಿ ಧರಿಸಿರುವವನೇ, **ವಿಶೋಕ**= ದುಃಖರಹಿತನೇ, **ಅಸುರ**= ದೈತ್ಯರಬಾಧಾ ಪರಿಹಾರಾರ್ಥವಾಗಿ, **ಸುರಾ**= ದೇವತೆಗಳಿಂದ **ಅರ್ಚಿತಚರಣಯುಗ**= ಪೂಜಿತನಾದ ಪಾದದ್ವಯವುಳ್ಳವನೇ, (ಅಸುರರು ಶ್ರೀಹರಿಯಲ್ಲಿ ದ್ವೇಷವುಳ್ಳವರು. ಅವರು ಎಂದಿಗೂ ಶ್ರೀಹರಿಯನ್ನು ಅರ್ಚಿಸುವುದಿಲ್ಲ. ಇಲ್ಲಿ "ಅಸುರಾ" ಎಂಬ ಶಬ್ದ ಪ್ರಯೋಗದಿಂದ ದೈತ್ಯ ಕುಲಜರಾದ ಪ್ರಹ್ಲಾದ, ವಿಭೀಷಣಾದಿಗಳಿಂದ ಅರ್ಚಿತನಾದವನು ಎಂದು ಅರ್ಥೈಯಿಸಬೇಕು) **ಚಾರ್ವಾಂಗ**= ಮನೋಹರವಾದ ಅಪ್ರಾಕೃತ ಅವಯುವಗಳಿಂದ ಶೋಭಿತನೇ, **ಶಾರ್ಙ್ಗ**= ಶಾರ್ಙ್ಗ ಎಂಬ ಧನುಸ್ಸನ್ನು ಧರಿಸಿರುವವನೇ (ಶಾರ್ಙ್ಗಪಾಣಿ) **ಶರಣ್ಯ**= ಶರಣು ಹೊಕ್ಕವರಿಗೆ ಫಲಪ್ರದನೇ, **ಜಿತಮನ್ಯು**= ಕೋಪ ರಹಿತನೇ (ಮನ್ಯು — ಕೋಪ) **ಪರಮ ಸುಂದರತರ**= ಶ್ರೇಷ್ಠರಾದ ಅತ್ಯಂತ ರೂಪಾತಿಶಯವುಳ್ಳ ಶ್ರೀ ರಮಾದೇವಿಯರಿಗೀತಲೂ ಉತ್ತಮೋತ್ತಮನಾದವನೇ, **ಪರಾತ್ಪರ**= ಶ್ರೀ ಲಕ್ಷ್ಮೀದೇವಿಗಿಂತ ಅನಂತಾನಂತಕೋಟಿ ಗುಣಗಳಿಂದ ಶ್ರೇಷ್ಠನೇ **ಶರಣಜನರಸುರಧೇನು**= ತನಗೆ ಶರಣಾಗತಿ ಹೊಂದಿದ ಭಕ್ತ ಜನರಿಗೆ ಕಾಮಿತಾರ್ಥಪ್ರದನೇ (ಕಾಮಧೇನು ಸದೃಶನೇ) **ಶಾಶ್ವತ**= ಅನಾದ್ಯನಂತ ಕಾಲಕ್ಕೂ ಶಶ್ವದೇಕ ಪ್ರಕಾರನಾಗಿ, ನಿತ್ಯನಾಗಿ ಇರುವವನೇ **ಕರುಣಿ**= ಕರುಣಾಕರನೇ, **ಕಂಜದಳಾಕ್ಷ**= ಕಮಲ ದಳದಂತೆ ವಿಶಾಲವಾದ ನೇತ್ರವುಳ್ಳವನೆ, **ಕಾಯನೆ**= ಸಂರಕ್ಷಿಸು ಎಂದು ಕರೆದರೆ, **ಸಿದ್ಧ**= ನಿಶ್ಚಯವಾಗಿ, **ಕಂಗೊಳಿಪ**= ಪ್ರತ್ಯಕ್ಷನಾಗಿ ಕಾಪಾಡುವನು ॥೧೨॥

## ವ್ಯಾಖ್ಯಾನಗಳು

## ೧ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಇನ್ನೂ ಕರ್ಮಗಳು ಮೋಚನಿಯಾಗಬೇಕಾದರೆ ಶ್ರೀ ಪರಮಾತ್ಮನ

ಸ್ತೋತ್ರದಿಂದ ಆಗತದೆ ಎಂತಲೂ, ಆ ಸ್ತೋತ್ರಕ್ರಮವೂ ಹೇಳತಾರೆ.

ರಮಾದೇವೇರಿಂದ ರಹಿತನಾಗಿ ತಾನೇ ಲಕ್ಷ್ಮೀಯಾಗಿನ್ನೂ, ತಾನೇ ಪುರುಷನಾಗಿನ್ನೂ, ಪರ್ಯಂಕಾದಿ ಅನೇಕವಿಧ ಸ್ವಕೀಯವಾದ ರೂಪಗಳಿಂದಲೇ ಭೋಗ ಮಾಡವತಕ್ಕವನಾದ್ದರಿಂದ, ಎಲೈ, ಸ್ವರಮಣನಾದವನೇ, ಸುಖದ ಸಮೂಹವೇ ಶರೀರವಾಗಿ ಉಳ್ಳವನೇ, ನಿಷ್ಕಾಮನಾದ್ದರಿಂದ ನಂಬಿದವರಿಗೆ ಸುಲಭನಾದವನ್ನೇ ಚರಾಚರ ಜಗತ್ತುಗಳಿಗೆ ಆಧಾರನಾಗಿ ಅವನ್ನು ಧರಿಸಿದವನೇ ಹೋಗಲ್ಪಟ್ಟ ದುಃಖ ಉಳ್ಳವನೇ, ದೈತ್ಯರ ಬಾಧಾ ಪರಿಹಾರಾರ್ಥವಾಗಿ ದೇವತೆಗಳಿಂದ ಪೂಜಾಮಾಡಲ್ಪಟ್ಟ ಪಾದದ್ವಯುಗಳುಳ್ಳವನೇ—ಇನ್ನೂ ದೈತ್ಯ ವಂಶೋದ್ಭವರಾದ ಪ್ರಹ್ಲಾದಾದಿಗಳಿಂದ ಪೂಜಾದಿಗಳ ಮಾಡಿಸಿಕೊಂಡವನೇ, ಎಂತಲೂ ತಾತ್ಪರ್ಯ—ಮನೋಹರಗಳಾದ ಹಸ್ತಾದ್ಯವಯುವಗಳುಳ್ಳವನೇ, ಶಾಙ್ಗ್ರನಾಮಕ ಧನುರ್ಧಾರಿಯಾದವನೇ, ಹರಿ ಸರ್ವೋತ್ತಮ ಎಂತ ಮುಕ್ತಿ ಯೋಗ್ಯರಿಂದ ಹೊಗಳಿಸಿಕೊಳ್ಳಲ್ಪಟ್ಟವನೇ ಮತ್ತು ಸರ್ವೋತ್ತಮತ್ವೇನ ಶರಣು ಮಾಡದ ದೈತ್ಯರಿಂದ ಬಲಪರಾಕ್ರಮ ಪ್ರದರ್ಶನದಿಂದ ಶರಣ್ಯನಾದ ವನೇ, ಜಯಿಸಲ್ಪಟ್ಟ ಕ್ರೋಧವುಳ್ಳವ ಎಂದರೆ, ದ್ವೇಷಿಗಳಾದ ದೈತ್ಯರಲ್ಲಿ ಕೋಪ ರಹಿತನಾಗಿ ಸ್ವರೂಪಾನುಸಾರ ಫಲಕೊಡತಕ್ಕವನೇ, ಉತ್ತಮರಾದ ಅತ್ಯಂತ ಸೌಂದರ್ಯವುಳ್ಳ ರಮಾದೇವೇರಿಗಿಂತಲೂ ಅಸದೃಶವಾದ ಮೋಹನ ರೂಪವುಳ್ಳವನೇ. ಉತ್ತಮರೊಳಗೆ ಅಸದೃಶವಾದ ಉತ್ತಮನಾದವನೇ, ಅಂದರೆ, ಬ್ರಹ್ಮಾದಿ ಜೀವಾಪೇಕ್ಷಯಾ ಅನ್ಯರಾದ ರಮಾದೇವರ ವ್ಯಾಪ್ತಿ ದೆಶೆಯಿಂದ ಅನ್ಯವಾದ ಸ್ವಾಖ್ಯಪ್ರದೇಶವುಳ್ಳವನೇ, ಶರಣಾಗತ ಜನರಿಗೆ ಇಷ್ಟಾರ್ಥಗಳ ಕೊಡುವುದರಲ್ಲಿ ಕಾಮಧೇನು ಸದೃಶನಾದವನೇ, ಅನಾದ್ಯನಂತ ಕಾಲಕ್ಕೂ ಶಶ್ವದೇಕ ಪ್ರಕಾರವಾಗಿ ನಿತ್ಯನಾಗಿ ಇರತಕ್ಕವನೇ, ತನ್ನ ಭಕ್ತರಾದವ ರಲ್ಲಿ ಅಂತಃಕರಣವುಳ್ಳವನೇ, ಕಮಲ ಪತ್ರದೋಪಾದಿಯಲ್ಲಿ ವಿಶಾಲವಾದ ನೇತ್ರಗಳುಳ್ಳವನೇ, ಸಂರಕ್ಷಣ ಮಾಡು ಎಂತ ತ್ರಿಕರಣಪೂರ್ವಕವಾಗಿ ಕರೆದರೆ' ನಿಶ್ಚಯವಾಗಿಸಿದ್ಧವಾಗಿ ಹೃದಯಾಂತರ್ಗತ ಬಿಂಬ ಪ್ರತ್ಯಕ್ಷನಾಗಿ ಕಾಪಾಡ ತಾನೆ ಎಂತ ತಿಳಿದು ಸ್ತೋತ್ರಮಾಡಬೇಕಂತ ತಾತ್ಪರ್ಯ ॥೧೨॥

## ೨ ಭಾವ ಪ್ರಕಾಶಿಕೆ

ಸುರಾಸುರಾರ್ಚಿತ ಎಂಬ ಸ್ಥಳದಲ್ಲಿ ಅಸುರರೆಂದರೆ ದೈತ್ಯರೆಂಬರ್ಥ, ದೈತ್ಯಕುಲದಲ್ಲಿ ಜನಿಸಿದ ಪ್ರಹ್ಲಾದ, ಬಲಿಚಕ್ರವರ್ತಿ ಮೊದಲಾದ ದೈತ್ಯರಿಂದ ಪೂಜಿತವಾದ ಕಮಲಗಳುಳ್ಳವನೆಂದರ್ಥ. ಪದ್ಯಾರ್ಥದಲ್ಲಿ ಹೇಳಿದಂತೆ ಪ್ರಾಣ ದೇವರೆಂದೊಂದರ್ಥ. ಮಧ್ವಮತಾವಲಂಬಿಗಳೆಂದು ಮತ್ತೊಂದರ್ಥ. ಶಾರ್ಙ್ಗ ಶರಣ್ಯ ಎಂಬ ಕಡೆಯಲ್ಲಿ, ಶಾರ್ಙ್ಗವೆಂಬ ಧನಸ್ಸುಳ್ಳವನಿಗೆ ಶಾರ್ಙಿ ಎಂಬ ಹೆಸರಾಗಬೇಕು. ಶಾರ್ಙಿನೆಂದು ಆಗುವುದಿಲ್ಲ. ಆದ್ದರಿಂದ ಶಾರ್ಙ್ಗಶರಣ್ಯ ಎಂದು ಒಂದೇಪದ ಮಾಡಬೇಕಾಯಿತು. ಮಹಾಭಾರತ ತಾತ್ಪರ್ಯ ನಿರ್ಣಯ ೩ನೆಯ ಅಧ್ಯಾಯದಲ್ಲಿ (೭೬ನೆಯ ಶ್ಲೋಕ) "ಗದಾತು ವಾಯುರ್ಬಲಸಂವಿದಾತ್ಮಾ ಶಾರ್ಙ್ಗಶ್ಚ ವಿದ್ಯೇತಿ ರಮೈವ ಖಡ್ಗಃ ॥ ದುರ್ಗಾತ್ಮಿಕಾ ಸೈವಚ ಚರ್ಮ ನಾಮ್ನೀ" ಎಂದು ಹೇಳಿರುವರು. ಬಲ ಜ್ಞಾನಾತ್ಮಕರಾದ ವಾಯುದೇವರೇ ಪರಮಾತ್ಮನ ಕೈಯಲ್ಲಿ ಧರಿಸಿರುವ ಗದೆ ಯಾಗಿರುವರು. ಶಾರ್ಙ್ಗ ಧನುಸ್ಸಿನ ರೂಪರಾಗಿ ವಿದ್ಯಾನಾಮಕ ರಮಾ ದೇವಿಯರು ಇರುವರು. (ದುರ್ಗಾದೇವಿಯರು ಖಡ್ಗ ಮತ್ತು ಚರ್ಮ ರೂಪರಾಗಿ ಇರುವರು) ಎಂದರ್ಥ. ಇದರಿಂದ ರಮಾದೇವಿಯರೇ ಶಾರ್ಙ್ಗ ವೆಂದು ಹೇಳಿದಂತಾಯಿತು. ಇಂತಹಾ ರಮಾದೇವಿಯರಿಗೆ ಶರಣ್ಯ ಮನೆಯಂತಿ ರುವರಂಬ ತಾತ್ಪರ್ಯ. ॥೧೨॥

## ೩ ಭಾವದರ್ಪಣ

ಸ್ವರತೇತಿ । ಸ್ವರಮಣ ಎಂಬರ್ಥ । ಸುರಾಸುರಾರ್ಚಿತ ಎಂಬೋದಕ್ಕೆ ಹಿಂದೆ ಬರೆದಿದೆ ॥೧೨॥

## ೪ ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

"ಸ್ವರತ" ಇತಿ॥

## ಕನ್ನಡಾರ್ಥ

"ಸುಲಭ" = ಸಮೀಚೀನವಾದ ಜ್ಞಾನವನ್ನು ಹೊಂದುವವನು (ಜ್ಞಾನಗಮ್ಯನು) ಅಥವಾ ಪೂರ್ಣಜ್ಞಾನವುಳ್ಳವನು.

"ಚಾರ್ವಂಗ" = ಶೋಭನವಾದ ಬುದ್ಧಿಯುನ್ನು ಪ್ರೇರಿಸುವವನು.

"ಶಾರ್ಙ್ಗ" = ಸ್ತೋತ್ರ ವಿಶೇಷಗಳು (ಯಾವುಗಳಿಂದ ಸಂಸಾರವು, ದೇಹ ಬಂಧವು, ದುಃಖ ಮುಂತಾದುವುಗಳು ನಾಶವಾಗುವುವೋ ಅಂಥ ಸ್ತೋತ್ರಗಳು) ಅವುಗಳಿಂದ ಹೊಗಳಿಸಿಕೊಳ್ಳತಕ್ಕವನು.

"ಜಿತಮನ್ಯುಃ" ಮನ್ಯು ಶಬ್ದಕ್ಕೆ ದೈನ್ಯ, ಕ್ರೋಧ, ಕ್ರತು ಎಂಬ ಅರ್ಥಗಳನ್ನು ಕೋಶವು ಹೇಳುತ್ತದೆ. ದೈನ್ಯ ಶಬ್ದದಿಂದ ಜರಾ ಮುಂತಾದ ದೋಷಗಳನ್ನೂ ಸಂಗ್ರಹಿಸಬೇಕು. 'ಜಿತ' ಗೆಲ್ಲಲ್ಪಟ್ಟ 'ಮನ್ಯು' ಕ್ರೋಧ ಜರಾ, ದೈನ್ಯ, ಮುಂತಾದ ದೋಷಗಳುಳ್ಳವನು.

"ಸುಂದರತರ"-ಪರಮಸುಂದರ. ಪರಾತ್‌ಪರ ಎಂಬಲ್ಲಿ ಪರಾತ್ ಅಕ್ಷರಳೆನಿಸಿದ ಶ್ರೀ ಲಕ್ಷ್ಮೀದೇವಿಗಿಂತ 'ಪರಃ' ಸರ್ವೋತ್ತಮನೆಂದು ಅರ್ಥ ತಿಳಿಯಬೇಕು ॥೧೨॥

## ಱ ಶ್ರೀಗುರು ಹೃದಯ ಪ್ರಕಾಶಿಕೆ

ಸ್ವರತ ಸುಖಮಯ ಎಂದರೆ, ಸ್ವರೂಪಾನಂದ ಮೂರ್ತಿ. ಸ್ವರತ ಎಂದರೆ ಅನ್ಯಾಸಕ್ತಿ ರಹಿತನು. ತಾನೇ ಪ್ರೇರಿಸಿ ಒಲಿಯುವುದರಿಂದ ಸುಲಭ, ಸರ್ವಜಗದ್ರಕ್ಷಕ, ನಿರ್ದುಃಖ. ಸುರರೆಂಬ ದೇವತೆಗಳಿಂದಲೂ. ಅಸುರರೆಂಬ ಪ್ರಹ್ಲಾದಾದಿಗಳಿಂದಲೂ, ಪೂಜಿತಪಾದಕಮಲದ್ವಂದ್ವ, ಮನೋಹರರೂಪ. ಶಾರ್ಙ್ಗವೆಂಬ ಸುಖಪ್ರದ ಧನುರ್ಧಾರಿ, ಶರಣ್ಯನೆಂಬ ನಂಬುವುದಕ್ಕೆ ಮುಖ್ಯ ಪಾತ್ರ, ಕೋಪಾದಿ ದೋಷದೂರ. ಅತಿಸೌಂದರ್ಯರೂಪ ಪರಾತ್ಪರನೆಂಬ ಸರ್ವೋತ್ತಮೋತ್ತಮ, ನಂಬಿದವರಿಗೆ ಕಾಮಧೇನುವಿನಂತೆ ಇಷ್ಟಪ್ರದ, ನಿರಂತರ ಕರುಣಿ, ಕಮಲದಳ ನೇತ್ರ, ಹೇಸ್ವಾಮಿ, ಕಾಯಿ ಅಂದರೆ ರಕ್ಷಿಸೆಂದು ಸದಾ ಸ್ಮರಿಸುತ್ತಿರಲು ದೇವರು ಶೀಘ್ರವಾಗಿ ಕಾಣಿಸಿಕೊಳ್ಳುವನು ಇದು ಸಿದ್ಧವೆಂದರ್ಥ ॥೧೨॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಶ್ರೀ ಹರಿಯು ಪರಾಪೇಕ್ಷಾರಹಿತನು. ಸ್ವಕೀಯುವಾದ, ತನ್ನಿಂದ ಅಭಿನ್ನಗಳಾದ ಭಗವದ್ರೂಪಗಳಲ್ಲಿ **ತಾನು** ಕ್ರೀಡಿಸುವನು. ಇಂತಹ ಸ್ವರಮಣನಾದ ಶ್ರೀ ಹರಿಯು **ಸ್ವರತನು.** ಶ್ರೀ ಲಕ್ಷ್ಮೀದೇವಿಯರೊಡನೆ ರಮಿಸುವನು-ಎಂದರೆ, ರಮಾಂತರ್ಗತ ತನ್ನ ಸ್ತ್ರೀರೂಪದಲ್ಲಿ ರಮಿಸುವನು (ಸ್ವಾಭಿನ್ನಸ್ವಕೀಯ ರೂಪಗಳಲ್ಲಿ ರತನು)

ಅನಾದ್ಯನಂತ ಕಾಲದಿಂದಲೂ ಪರಿಪೂರ್ಣ ಆನಂದಮಯ ಶರೀರ ಉಳ್ಳವನು ಇದರಿಂದ **ಸುಖಮಯನು**. ಅವನ ಅಪರಿಚ್ಛಿನ್ನ ಆನಂದವೆಂಬ ಶ್ರೇಷ್ಠ ಗುಣಕ್ಕೂ ಆವನ ಶರೀರಕ್ಕೂ ಅಭೇದ, ತನ್ನ ಏಕಾಂತ ಭಕ್ತರಿಂದ ಸುಲಭವಾಗಿ ಲಭ್ಯನು, ನಿಷ್ಕಾಮನಾದ್ದರಿಂದ ನಂಬಿದ ಭಕ್ತ ಕೋಟಿಗೆ ಅತ್ಯಂತ ಸುಲಭನು. ತಾನೇ ಪ್ರೇರಿಸಿ ಒಲಿಯುವನು. ಇದರಿಂದ **ಸುಲಭನು** ಚರಾಚರಾತ್ಮಕವಾದ ಜಗತ್ತಿಗೆ ಆಧಾರಭೂತನು. ಅದನ್ನು ತನ್ನ ಉದರ ದಲ್ಲಿ ಧರಿಸಿರುವುದರಿಂದ **ವಿಶ್ವಂಭರನು**.

ದುಃಖರಹಿತನು ಪರಮಾನಂದ ಸ್ವರೂಪಿಯು ಇದರಿಂದ **ವಿಶೋಕನು**

ಸಕಲ ದೇವತಾವರ್ಗದಿಂದ ಪೂಜಿತವಾದ ಪಾದ ಪದ್ಮವುಳ್ಳವನು ಅಸುರ ಕುಲದಲ್ಲಿ ಜನಿಸಿದ ಪ್ರಹ್ಲಾದ, ವಿಭೀಷಣ ಇತ್ಯಾದಿ ಯೋಗ್ಯಜೀವರಿಂದ ಪೂಜಿತ ಚರಣಯುಗನು **ಅಸುರ**-ಎಂದರೆ ಮುಖ್ಯಪ್ರಾಣರೆಂದು ಇನ್ನೊಂದರ್ಥ (ಅಸು-ಪ್ರಾಣ-ಜೀವರಲ್ಲಿ "ರ" ಎಂದರೆ ಶ್ರೇಷ್ಠ-ಜೀವೋತ್ತಮ ರಾದ ವಾಯುದೇವರು. ಜೀವರಲ್ಲಿ ಚೇಷ್ಟಾಪ್ರದರಾಗಿರುವುದರಿಂದ. ಅಸುರ" ನಾಮಕರು) ಇದರಿಂದ **ಸುರ ಅಸುರ ಅರ್ಚಿತ ಚರಣಯುಗನು.**

ಮನೋಹರವಾದ ಹಸ್ತ್ಯಾದಿ ಅವಯುವಗಳಿಂದ ಕೂಡಿದವನಾದ್ದರಿಂದ, **ಚಾರ್ವಾಂಗನು** ಅಂದರೆ ಮನೋಹರ ರೂಪವುಳ್ಳವನು.

ಶಾರ್ಙ್ಗ ಎಂಬ ಧನುಸ್ಸನ್ನು ಧರಿಸುವುದರಿಂದ. **ಶಾರ್ಙ್ಗನು**, ಅಂದರೆ ಶಾರ್ಙ್ಗಪಾಣಿಯು. ಶರಣಾಗತರಾದ ಭಕ್ತ ವೃಂದಕ್ಕೆ ಅಭಯಪ್ರದನಾದ್ದರಿಂದ **ಶರಣ್ಯನು**. ಕ್ರೋಧಾದಿ ದೋಷಗಳಿಂದ ದೂರನಾದ್ದರಿಂದ, **ಜಿತಮನ್ಯು**.

"ಮನ್ಯು"-ಎಂದರೆ ಕ್ರೋಧ. ಅದೊಂದು ದೋಷ, ನಿರ್ದೋಷಿಯಾದ ನಿರಂಜನನು ಕ್ರೋಧರಹಿತನು.

"ಪರಮ"-ಎಂದರೆ ಶ್ರೇಷ್ಠರಾದ ಶ್ರೀ ಲಕ್ಷ್ಮೀದೇವಿ, ಅವರಿಗಿಂತ ಅನಂತಕೋಟಿ ರೂಪ ಸೌಂದರ್ಯವುಳ್ಳವನು. ಇದರಿಂದ **ಪರಮ ಸುಂದರ ತರನು.**

"ಪರ"-ಎಂದರೆ ಬ್ರಹ್ಮಾದಿ ದೇವತೆಗಳಿಂದ ಉತ್ತಮರಾದ ಶ್ರೀ ಲಕ್ಷ್ಮೀದೇವಿ, ಶ್ರೀ ಲಕ್ಷ್ಮಿಗಿಂತ ಅನಂತಾನಂತ ಗುಣಗಳಿಂದ ಉತ್ತಮೋತ್ತಮ ನಾದ್ದರಿಂದ **ಪರಾತ್ಪರನು**.

ತನಗೆ ಅನನ್ಯ ಭಕ್ತಿಭಾವದಿಂದ ಶರಣಾಗತರಾಗಿ ಮೊರೆಹೊಕ್ಕ ಭಕ್ತ ವೃಂದಕ್ಕೆ ಕಾಮಧೇನು ಸದೃಶನು, ಅವರ ಕಾಮಿತಾರ್ಥಪ್ರದನು. ಇದರಿಂದ **ಶರಣಜನ ಸುರಧೇನು** ಅನಾದ್ಯನಂತ ಕಾಲದಿಂದಲೂ, ಯಾವ ವಿಕಾರವೂ ಇಲ್ಲದೇ ಶಶ್ವದೇಕಾಪ್ರಕಾರನು. ನಿತ್ಯನೂ ಅನಾದಿಯೂ ಚತುರ್ವಿಧ ನಾಶ ರಹಿತನೂ ಆದ ಆ ಅವ್ಯಯನಿಗೆ **ಶಾಶ್ವತ** ಎಂದು ಹೆಸರು,

ಪರಮ ಕರುಣಾಳುವಾಗಿ ಭಕ್ತರನ್ನು ಸಂರಕ್ಷಿಸುವುದರಿಂದ **ಕರುಣಿಯು** ಕಮಲದಳದಂತೆ ವಿಶಾಲ ನೇತ್ರವುಳ್ಳವನಾದ್ದರಿಂದ, **ಕಂಜದಳಾಕ್ಷನು** (ಕಂ = ನೀರು, ಕಂಜ=ನೀರಿನಲ್ಲಿ ಹುಟ್ಟುವ ಕಮಲ)

ಹೀಗೆ ನಾನಾ ರೂಪ, ಗುಣ, ನಾಮಗಳಿಂದ ವಿದ್ಯಮಾನನಾದ ಶ್ರೀ ಹರಿಯನ್ನು ಶುದ್ಧಾಂತಃಕರಣ ಪೂರ್ವಕವಾಗಿ, ಯಾರು ಅರ್ಚಿಸಿ, ಶರಣಾ ಗತರಾಗುವರೋ, ಅವರ ಪಾಲಿನ ಆಪ್ತ ಬಂಧುವಾಗಿ, ಅವರ ಅವಸರಕ್ಕೆ ಒದಗಿ, ಸಂರಕ್ಷಿಸುವನು, ತ್ವರಿತವಾಗಿ ಒದಗುವುದರಿಂದ **ಸಿದ್ಧನು** ಭಕ್ತರ ದುರಿತಾವಳಿಗಳನ್ನು ಪರಿಹರಿಸಿ, ಶುದ್ಧಾಂತಃಕರಣರನ್ನಾಗಿ ಮಾಡಿ, ಅವರ ಅಂತರಂಗದಲ್ಲಿ ಬಿಂಬರೂಪನಾಗಿ ಹೊಳೆಯುವ ಮಂಗಳಾಂಗನು. **(ಕಂಗೊಳಿಪ)**

**ವಿಶೇಷಾರ್ಥ :**

(೧) ಶಾರ್ಙ್ಗ ಎಂಬ ಧನುಸ್ಸನ್ನು ಧರಿಸಿರುವ ಶ್ರೀ ಹರಿಗೆ **ಶಾರ್ಙ್ಗ**

ಎಂದು ಹೆಸರು. ಇದರಿಂದ "ಶಾರ್ಙ್ಗ ಶರಣ್ಯ"ನೆಂದು ಅರ್ಥ ಮಾಡಬೇಕು. **(ಭಾವ ಪ್ರಕಾಶಿಕಾ ವ್ಯಾಖ್ಯಾನಕಾರರ ಪ್ರಕಾರ)** ಬಲಜ್ಞಾನಾತ್ಮಕರಾದ ಶ್ರೀ ವಾಯುದೇವರೇ ಶ್ರೀ ಪರಮಾತ್ಮನ ಹಸ್ತದಲ್ಲಿರುವ ಗದೆಯ ರೂಪದಲ್ಲಿ ರುವರು. ಶಾರ್ಙ್ಗ ಧನುಸ್ಸಿನ ರೂಪರಾಗಿ ವಿದ್ಯಾನಾಮಕ ಶ್ರೀ ರಮಾದೇವಿ ಇರುವರು. ಖಡ್ಗ ಮತ್ತು ಚರ್ಮರೂಪರಾಗಿ ಶ್ರೀ ದುರ್ಗಾದೇವಿ ಇರುವರು. ಇದರಿಂದ ರಮಾದೇವಿಯೇ, ಶಾರ್ಙ್ಗನಾಮಕರು ಅಂತಹ ಶ್ರೀ ರಮಾದೇವಿಗೆ ಶರಣ್ಯನಾಗಿದ್ದಾನೆ. ಇಧರಿಂದ "ಶಾರ್ಙ್ಗಶರಣ್ಯ" ಎಂದು ಒಂದೇ ಪದದಿಂದ ಅರ್ಥೈಯಿಸಬೇಕೆಂದು **ಭಾವ ಪ್ರಕಾಶಿಕಾ** ವ್ಯಾಖ್ಯಾನಕಾರರ ಅಭಿಪ್ರಾಯ.

**ಪ್ರಮಾಣ :**

"ಗದಾತು ವಾಯುರ್ಬಲ ಸಂವಿದಾತ್ಮಾ ಶಾರ್ಙ್ಗಶ್ಚ ವಿದ್ಯೇತಿ ರಮೈವ ಖಡ್ಗಃ । ದುರ್ಗಾತ್ಮಿಕಾ ಸೈವಚ ಚರ್ಮನಾಮ್ನೀ ॥"

**— ಮಹಾಭಾರತತಾತ್ಪರ್ಯ ನಿರ್ಣಯ — ಅಧ್ಯಾಯ 3— 76ನೆಯ ಶ್ಲೋಕ :**

(೨) ಸಚೇಮೀನವಾದ ಜ್ಞಾನವನ್ನು ಹೊಂದಿಸುವವನಾದ್ದರಿಂದ, ಜ್ಞಾನಗಮ್ಯನು ಇದರಿಂದ **ಸುಲಭ**ನಾಮಕನು. (ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ ಪ್ರಕಾರ)

(೨) "ಶಾರ್ಙ್ಗ"-ಎಂದರೆ ಸ್ತೋತ್ರ ವಿಶೇಷಗಳು. ಯಾವ ಸ್ತೋತ್ರ ಗಳಿಂದ ಸಂಸಾರವು ನಾಶವಾಗುವುದೋ ಅಂತಹ ಸ್ತೋತ್ರಗಳಿಂದ ಗೇಗೀ ಯಮಾನನು ॥೧೨॥

# ಪದ್ಯ-೧೩

**ಮೂಲ :**

**ನಿರ್ಮಲನು ನೀನಾಗಿ ಕರ್ಮವಿ ।**
**ಕರ್ಮಗಳನು ನಿರಂತರದಲಿ ಸು ।**
**ಧರ್ಮನಾಮಕಗರ್ಪಿಸುತ ನಿಷ್ಕಲುಷ ನೀನಾಗು ॥**
**ಭರ್ಮಗರ್ಭನ ಜನಕ ದಯದಲಿ ।**
**ದುರ್ಮತಿಗಳನು ಕೊಡದೆ ತನ್ನಯ ।**
**ಹರ್ಮ್ಯದೊಳಗಿಟ್ಟೆಲ್ಲ ಕಾಲದಿ ಕಾವ ಕೃಪೆಯಿಂದ ॥ ॥೧೩॥**

**ಅವತರಣಿಕೆ :**

ದ್ವಂದ್ವಕರ್ಮಗಳನ್ನು ಶ್ರೀ ಹರಿಗೆ ಅರ್ಪಿಸುತ್ತಾ, ಅವನ ವ್ಯಾಪಾರ ವಿಶೇಷಗಳನ್ನು ಬಿಂಬಕ್ರಿಯಾದ್ವಾರಾ ಅರಿತು, ನಿರ್ಲಿಪ್ತನಾಗಿರೆಂದು ತತ್ತ್ವೋಪದೇಶ ನೀಡಿದ್ದಾರೆ ದಾಸರಾಯರು ॥೧೩॥

**ಪ್ರತಿಪದಾರ್ಥ :**

**ನಿರ್ಮಲನು ನೀನಾಗಿ** = ಚಿತ್ತಶುದ್ಧಿಯನ್ನು ಹೊಂದಿ (ಅಂತಃಶುದ್ಧಿ ಮತ್ತು ಬಾಹ್ಯಶುದ್ಧಿಗಳಿಂದೊಡಗೂಡಿ) **ಕರ್ಮ** = ವಿಧಿಪೂರ್ವಕವಾದ ಸತ್ಕರ್ಮಗಳೇನು **ವಿಕರ್ಮಗಳನು** = ನಿಷಿದ್ಧರೂಪವಾದ ದುಷ್ಕರ್ಮಗಳೇನು, ಅಂದರೆ ಪುಣ್ಯ ಪಾಪ ರೂಪವಾದ ದ್ವಂದ್ವ ಕರ್ಮಗಳನ್ನು **ನಿರಂತರದಲಿ** = ಪ್ರತಿದಿನದಲ್ಲಿಯೂ (ಸದಾ ಕಾಲವೂ) **ಸುಧರ್ಮನಾಮಕಗೆ** = ತನಗರ್ಪಿಸಿದ ಪಾಪಕರ್ಮಗಳನ್ನು ತನ್ನ ಕೃಪಾ ಕಟಾಕ್ಷ ವೀಕ್ಷಣದಿಂದ ನಾಶಗೊಳಿಸಿ ಪುಣ್ಯ ಕರ್ಮಗಳ ಫಲವನ್ನು ಅನಂತಮಾಡಿ ಭಕ್ತರಿಗೇ ಕೊಡುವ ಸರ್ವಕರ್ಮ

ಪ್ರೇರಕನಾದ ಶ್ರೀಹರಿಗೆ **ಸುಧರ್ಮನೆಂ**ದು ಹೆಸರು. **ಅರ್ಪಿಸುತ** = ಬಿಂಬನೇ ಸರ್ವಸ್ವತಂತ್ರನಾಗಿದ್ದು ದ್ವಂದ್ವ ಕರ್ಮಗಳನ್ನು ಮಾಡಿ ಮಾಡಿಸುತ್ತಾನೆಂಬ ಜ್ಞಾನಾನುಸಂಧಾನದಿಂದ ತಿಳಿಯುವುದೇ 'ದ್ವಂದ್ವ ಕರ್ಮ ಸಮರ್ಪಣೆ' ಎಂದೆ ನಿಸುವುದು. **ನಿಷ್ಕಲುಷ ನೀನಾಗು** = ನಿರ್ದೋಷಿಯಾಗು ಅಂದರೆ ಕರ್ಮ ಗಳ ದ್ವಂದ್ವ ಫಲಗಳಿಂದ ನಿರ್ಲಿಪ್ತನಾಗು **ಭರ್ಮಗರ್ಭನ ಜನಕ** = ಹಿರಣ್ಯ ಗರ್ಭ ನಾಮಕರಾದ ಶ್ರೀ ಬ್ರಹ್ಮದೇವರ ಪಿತನಾದ ಶ್ರೀ ಹರಿಯು **ದಯ ದಲಿ** = ಕರುಣೆಯಿಂದ **ದುರ್ಮತಿಗಳನು ಕೊಡದೆ** = ಪಾಪ ಕರ್ಮಗಳ ಫಲ ರೂಪವಾದ ದುಷ್ಟಬುದ್ಧಿಯನ್ನು ಕೊಡದೆ, ವ್ಯತಿರಿಕ್ತವಾಗಿ ಸಮೀಚೀನವಾದ ಸನ್ಮತಿಯನ್ನು ಅನುಗ್ರಹಿಸಿ **ತನ್ನಯ ಹರ್ಮ್ಯದೊಳು ಇಟ್ಟು** = ಸ್ವಧಾಮ ವಾದ ವೈಕುಂಠಾದಿ ಮುಕ್ತಿ ಸ್ಥಾನಗಳಲ್ಲಿಟ್ಟು **ಎಲ್ಲ ಕಾಲದಿ** = ಸದಾ ಸರ್ವ ಕಾಲದಲ್ಲೂ **ಕೃಪೆಯಿಂದ** = ದಯಾಪೂರಿತನಾಗಿ **ಕಾವ** = ಸಂರಕ್ಷಿಸುವನು,

॥೧೩॥

## ವ್ಯಾಖ್ಯಾನಗಳು

## ೧ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ದ್ವಂದ್ವ ಕರ್ಮಗಳ ಶ್ರೀ ಪರಮಾತ್ಮಗೆ ಅರ್ಪಿಸು ಎಂತ ಹೇಳತಾರೆ. ಅಜ್ಞಾನರಹಿತರಾದ ಭಗವದ್ಭಕ್ತರ ಆಶ್ರಯವನ್ನು ನೀನು ಮಾಡಿದವನಾಗಿ ಅವರ ಮುಖದಿಂದ ಉಪದೇಶ ಕ್ರಮದಿಂದ ಅನುಸಂಧಾನ ಮಾರ್ಗಗಳ ಭಗವತ್ಪೂಜಾಕ್ರಮಗಳ ತಿಳಿದುಕೊಂಬೋವನಾಗು. ತಿಳಿದುಕೊಂಡದ್ದರನ್ನ ಶುದ್ಧಚಿತ್ತನಾಗಿ - ಅಂದರೆ ಅಂತಃಶುದ್ಧಿ ಎಂತಲೂ, ಬಹಿಃಶುದ್ಧಿ ಎಂತಲೂ ಎರಡು ಪ್ರಕಾರ. ಅಂತಃಶುದ್ಧಿ ಎಂದರೆ ಅಹಂ ಮಮತಾ ರಹಿತನಾಗಿ ತಾರ ತಮ್ಯ ಪಂಚಭೇದಜ್ಞಾನದಿಂದ ನಿಶ್ಚಯವಾಗಿ ಕಾರ್ಯಮಾಡುವುದು. ವೇದೋಕ್ತ ಕರ್ಮಗಳು ದೇವಪೂಜಾದಿ ಅನೇಕ ಸತ್ಕರ್ಮಾನುಷ್ಠಾನಗಳು, ಇವು ಬಹಿಃಶುದ್ಧಿಯಾದುವು. ಇವುಗಳಿಂದ ಅನುಷ್ಠಾನ ಮಾಡತಾ - ಪ್ರತಿದಿನವೂ

ಸದಾಕಾಲ ದೇಹೇಂದ್ರಿಯಾದಿಗಳಿಂದ ಬಿಂಬಕ್ರಿಯಾ ದ್ವಾರಾ ಮಾಡತಕ್ಕ, ಪುಣ್ಯಪಾಪಾತ್ಮಕದ್ವಂದ್ವ ಕರ್ಮಗಳನ್ನು - ಅರ್ಪಿತವಾದ ದ್ವಂದ್ವ ಕರ್ಮಗಳ ಸಮೀಚೀನವಾದ ಧರ್ಮಕರ್ಮಗಳನ್ನಾಗಿ ಪರಮಾತ್ಮ ಮಾಡತಾನಾದ ಕಡಿಯಿಂದ ದೇವರಿಗೆ ಸುಧರ್ಮ ಎಂತ ನಾಮ. ಇಂಥಾ ಸುಧರ್ಮನಾಮಕ ಪರಮಾತ್ಮಗೆ ಅರ್ಪಿಸತಾ, ಹಿರಣ್ಯಗರ್ಭನಾಮದಿಂದ ಇರುವ ಬ್ರಹ್ಮದೇವರಿಗೆ ತಂದಿಯಾದ ಶ್ರೀವಾಸುದೇವನಾಮಕ ಪರಮಾತ್ಮ ದಯದಿಂದ, ಪಾಪಕರ್ಮಗಳ ಅರ್ಪಣೆ ಮಾಡೋಣದರಿಂದ, ಆ ಪಾಪಕರ್ಮಕ್ಕೆ ಫಲವಾದ ದುರ್ಬುದ್ಧಿ ಕೊಡದೆ, ಆದರನ್ನ ಪುಣ್ಯಕರ್ಮತ್ವೇನ ಸ್ವೀಕಾರ ಮಾಡಿ ಸಮೀಚೀನವಾದ ಬುದ್ಧಿಯನ್ನು ಕೊಟ್ಟು, ಕೇವಲ ಅಂತಃಕರಣದಿಂದ ಲಿಂಗಭಂಗ ಐದಿಸಿ, ತನ್ನ ಸ್ವಕೀಯರಾದ ಮುಕ್ತರ ಸಂಗತ ವಿಹಾರ ಮಾಡೋದಕ್ಕೆ ಯೋಗ್ಯವಾದ, ಅನಾದ್ಯನಂತ ಕಾಲಕ್ಕೂ ಶಾಶ್ವತವಾದ, ತನಗೆ ಭಿನ್ನವಾದ, ವೈಕುಂಠ ಲೋಕಗತ ಉಪ್ಪರಿಗಿ ಮನೆಯಲ್ಲಿ, ಸದಾ ಸರ್ವಕಾಲದಿ ಇಟ್ಟು ಸಂರಕ್ಷಣ ಮಾಡತಾನಾದ ಕಡಿಯಿಂದ, ದ್ವಂದ್ವಕರ್ಮಗಳ ಅರ್ಪಿಸತಾ ನಿರ್ಮಲನಾಗಿ ಇದ್ದರೆ ಕರ್ಮಮೋಚನಿ ಆಗುವುದೆಂದು ತಾತ್ಪರ್ಯ ॥೧೩॥

## ೨ ಭಾವಪ್ರಕಾಶಿಕೆ

ನೀನು ಯಾವಾಗಲೂ ಶುದ್ಧಾಂತಃಕರಣನಾಗಿ ಪುಣ್ಯಪಾಪಗಳನ್ನು ನಿತ್ಯದಲ್ಲೂ ಸುಧರ್ಮನಾಮಕ ಪರಮಾತ್ಮನಿಗರ್ಪಿಸು ಅಂದರೆ ಉತ್ತಮ ನೆಂದರ್ಥ. ಧರ್ಮ ಅಂದರೆ 'ಧಾರಕತ್ವಾದ್ಧರ್ಮಃ' ಪ್ರಪಂಚವನ್ನೆಲ್ಲಾ ಧರಿಸುವುದರಿಂದ ಧರ್ಮನೆಂದು ಪರಮಾತ್ಮನಿಗೆ ಹೆಸರು ಇಂತಹಾ ಪರಮಾತ್ಮನಿಗೆ ಅರ್ಪಿಸುವುದರಿಂದ ನೀನು ಪಾಪರಹಿತನಾಗುವೆ. ಬ್ರಹ್ಮ ದೇವರ ತಂದೆಯಾದ ಶ್ರೀ ಪರಮಾತ್ಮನು ದಯಮಾಡಿ ನಿನಗೆ ದುರ್ಬುದ್ಧಿ ಹುಟ್ಟದಂತೆ ಮಾಡುವನು. ಮತ್ತು ತನ್ನ ಮನೆಯಲ್ಲಿಟ್ಟು ಸರ್ವದಾ ಸ್ವರೂಪಾನಂದ ಸುಖವನ್ನು ಕೊಡುವನು. ॥೧೩॥

## ೩ ಭಾವ ದರ್ಪಣ

ನಿರ್ಮಲ । ಭರ್ಮಗರ್ಭ— ಸುವರ್ಣಗರ್ಭ. ಬ್ರಹ್ಮ. ಹರ್ಮ್ಯ— ಧನಿಕನಮನಿ ಎಂಬರ್ಥ. "ಹರ್ಮ್ಯಾದಿರ್ಧನಿನಾಂ ವಾಸ" ಇತ್ಯಮರಃ ॥೧೩॥

## ೪ ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

"ನಿರ್ಮಮ" ಇತಿ॥ "ನಿರ್ಮಮಃ" ನಾಹಂ ಕರೋಮಿ" ಇತಿ ಬುದ್ಧಿಃ॥" "ಸುಧರ್ಮ" ಸುಷ್ಟು ಜಗತ್ ಧರ್ತೃತ್ವಾತ್. ಕ್ರೀಡಕತ್ವಾತ್, ಮಾತೃತ್ವಾತ್ ಚ ತಥೋಕ್ತಃ॥ ಭರ್ಮ—ಬಂಗಾರ॥ ಹರ್ಮ್ಯ—ವೈಕುಂಠ ॥ ॥೧೩॥

## ಕನ್ನಡಾರ್ಥ

"ನಿರ್ಮಮ" ನಾನು ಸ್ವತಂತ್ರಕರ್ತನಲ್ಲ, ನಾರಾಯಣನೇ ಸ್ವತಂತ್ರ ಕರ್ತ, ಪ್ರೇರಕ ಎಂಬ ನಿಶ್ಚಿತ ಬುದ್ಧಿಯುಳ್ಳವನು.

"ಸುಧರ್ಮ" ಉತ್ತಮ ರೀತಿಯಲ್ಲಿ ಜಗತ್ತನ್ನು ಧಾರಣ ಪೋಷಣ ಮಾಡುವುದರಿಂದ ಕ್ರೀಡಿಸುವುದರಿಂದಲೂ, ಜಗತ್ಸಂಹಾರನಾದುದರಿಂದಲೂ ಸುಧರ್ಮನೆಂದು ಹೆಸರು.

"ಭರ್ಮ"—ಬಂಗಾರ ಹರ್ಮ್ಯ—ಸದನ, ವೈಕುಂಠ ॥೧೩॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ನಿರ್ಮಮನು ನೀನಾಗಿ ಅಂದರೆ ಅಭಿಮಾನವನ್ನೆಲ್ಲಾ ವರ್ಜಿಸಿ, ಕರ್ಮ ವಿಕರ್ಮಗಳೆಂಬ ಪುಣ್ಯ-ಪಾಪಗಳನ್ನೆಲ್ಲಾ ನಿತ್ಯದಲ್ಲಿಯೂ, ಸುಧರ್ಮನಾಮಕಗೆ, ಅತ್ಯಂತಾಧಾರನಾದ್ದರಿಂದ ಸುಧರ್ಮನಾಮಕ ದೇವರಿಗೆ, ಅರ್ಪಿಸುತ ಅಂದರೆ ಸರ್ವಕರ್ಮವೂನೂ ನಿನ್ನಾಧೀನವಾದ್ದರಿಂದ ಇದರ ಫಲಗಳನ್ನು ತಪ್ಪಿಸಿ ನನ್ನನ್ನು ಉದ್ಧರಿಸುವ ದೇವರೇ ಎಂದು ಪ್ರಾರ್ಥಿಸುತ್ತಾ ಸ್ವಾತಂತ್ರ್ಯಾಭಿ

ಮಾನವೆಂಬ ಕಲ್ಮಷದಿಂದ ವರ್ಜಿತನಾಗುವುದು. ಭರ್ಮಗರ್ಭನೆಂಬ ಹಿರಣ್ಯ ಗರ್ಭನ (ಬ್ರಹ್ಮನ) ತಂದೆಯಾದ ದೇವರು ದಯೆಯಿಂದ, ಪಾಪಗಳನ್ನು ಆಚರಿಸುವ ದುರ್ಬುದ್ಧಿಯನ್ನೇ ಕೊಡದೆ ತನ್ನ ಹರ್ಮ್ಯವೆಂಬ ಮಹಡಿ ಮನೆಯಾದ ಸ್ವಲೋಕದಲ್ಲಿಟ್ಟು ಸದಾ ಕೃಪೆಯಿಂದ ರಕ್ಷಿಸುವನು. ॥೦೩॥

# ಸರ್ವವ್ಯಾಖ್ಯಾನಸಾರ ಸಂಗ್ರಹ

"ಮಲ"—ಎಂದರೆ, ದೋಷ "ನಿರ್ಮಲ"—ಎಂದರೆ ದೋಷರಹಿತ ನಿರ್ಮಲನು ನೀನಾಗಿ ಎಂಬ ಶಬ್ದ ಪ್ರಯೋಗದಿಂದ ಜೀವನನ್ನು ಕುರಿತು ದಾಸರಾಯರು- "ನೀನು ದೋಷ ರಹಿತನಾಗು" ಎಂದು ಹೇಳಿರುವರು, ಸದಾ ದೋಷ ಭೂಷಿತರಾದ ಜೀವರು ನಿರ್ದೋಷಿಯಾಗುವುದೆಂತು ? ಸರ್ವಕರ್ಮಗಳನ್ನು ಆ ಸರ್ವೇಶ್ವರನಿಗೆ ಅರ್ಪಿಸುವುದರಿಂದ, ಜೀವನು ದ್ವಂದ್ವಾತೀತನಾಗುವನು, ಆಗ ಅವನಿಗೆ ಕರ್ಮಸಂಬಂಧವಾದ ಲೇಪವಿಲ್ಲ. ಅದರಿಂದ ನಿರ್ಲಿಪ್ತನಾಗು, ಅಂದರೆ ನಿರ್ಮಲನಾಗೆಂದು ದಾಸರಾಯರ ವಾಕ್ಯಾಭಿಪ್ರಾಯವು.

ನಿರ್ಮಲನಾಗೆಂದರೆ, ಅಂತಃಕರಣಶುದ್ಧಿಯನ್ನು ಹೊಂದು, ಚಿತ್ತ ಶುದ್ಧ ನಾಗೆಂದರ್ಥ. ಶುದ್ಧಿ (ನೈರ್ಮಲ್ಯ) ಎರಡು ಪ್ರಕಾರ. (೧) ಅಂತಃ ಶುದ್ಧಿ (೨) ಬಹಿಃಶುದ್ಧಿ ಅಹಂ ಮಮತಾ ರಹಿತನಾಗಿ, ನಿಯಾಮಕನು-ಪ್ರೇರಕನೆಂದು ತಿಳಿದು ಪಂಚಭೇದ ತಾರತಮ್ಯ ಜ್ಞಾನವನ್ನು ಹೊಂದಿರುವುದೇ ಅಂತಃಶುದ್ಧಿಯು.

ವೇದೋಕ್ತ ಕರ್ಮಗಳನ್ನು ಶಾಸ್ತ್ರ ದ್ವಾರಾ ತಿಳಿದು, ಗುರೂಪದೇಶ ದ್ವಾರಾ ಅಂತು, ಅದರಂತೆ ಸ್ನಾನ, ಜಪ, ತಪ, ವ್ರತಾಚರಣೆ, ದೇವಪೂಜಾ ಗುರುಹಿರಿಯರ ಸೇವಾ, ಅತಿಥಿಸತ್ಕಾರ ಇತ್ಯಾದಿ ವಿದ್ಯುಕ್ತ ಕರ್ಮಗಳನ್ನು ಆಚರಿಸುವುದು ಬಹಿಃಶುದ್ಧಿಯು, ಸಾಧಕನಾದವನಿಗೆ ಅಂತರ್ಬಹಿ ಶುದ್ಧಿಗಳೆರಡೂ ಅತ್ಯಗತ್ಯ. ಹೀಗೆ ನಿರ್ಮಲಚಿತ್ತನಾಗಿ ಸತ್ಕಾರ್ಮಗಳಾಗಲೀ,

ಮಿಶ್ರ ಕರ್ಮಗಳಾಗಲೀ, ದುಷ್ಕರ್ಮಗಳಾಗಲೀ, ಸರ್ವಕರ್ಮಗಳೂ ಜೀವರ ಅನಾದಿ ಕರ್ಮಾನುಸಾರವಾಗಿ ಬಿಂಬಕ್ರಿಯಾದ್ವಾರಾ ಶ್ರೀಶನಿಂದ ಪ್ರೇರಿತ ವಾಗಿ ನಡೆಯುತ್ತಿರುವುವು ಎಂಬ ಉತ್ತಮ ಜ್ಞಾನಾನುಸಂಧಾನದಿಂದ ಮಾಡುವ ಸಾಧನಾ ರೂಪವಾದ ಕ್ರಿಯಾವಿಶೇಷವೇ **ದ್ವಂದ್ವ ಕರ್ಮ ಸಮರ್ಪಣೆ** ಎನಿಸುವುದು.

ಸರ್ವಕರ್ಮ ಪ್ರೇರಕನಾದ ಶ್ರೀಹರಿಗೆ **ಸುಧರ್ಮ**ನೆಂದು ಹೆಸರು. "ಧಾರ ಕತ್ವಾದ್ಧರ್ಮ: "ಎಂಬ ರೀತ್ಯಾ, ಜಗತ್ತನ್ನೆಲ್ಲಾ ಧರಿಸಿರುವುದರಿಂದ ಶ್ರೀ ಪರಮಾತ್ಮಗೆ "ಸುಧರ್ಮ"ನೆಂದು ನಾಮ. ತನಗೆ ಅರ್ಪಿತವಾದ ದ್ವಂದ್ವಕರ್ಮ ಗಳನ್ನು ಸಮೀಚೀನವಾದ ಧರ್ಮಕರ್ಮಗಳಾಗಿ ಮಾಡುವುದರಿಂದ ಸುಧರ್ಮ ನಾಮಕನು. ಉತ್ತಮ ರೀತಿಯಲ್ಲಿ ಜಗತ್ತಿನ ಧಾರಣ, ಪೋಷಣ, ಜಗತ್ತಿನಲ್ಲಿ ವ್ಯಾಪ್ತರೂಪಗಳಿಂದ ಪ್ರವೇಶಿಸಿ, ಕ್ರೀಡೆಯಾಡುವುದು, ಜಗತ್ಸಂಹಾರ ಕರ್ತೃತ್ವ ಈ ಗುಣಧರ್ಮನಿಷ್ಠನಾದ್ದರಿಂದ ಸುಧರ್ಮನೆಂದು ಕರೆಯಿಸು ತ್ತಾನೆ. ಅಂತಹ ಸುಧರ್ಮ ನಾಮಕನ ಅಡಿದಾವರೆಗಳಿಗೆ ದ್ವಂದ್ವ ಕರ್ಮ ಗಳನ್ನು ಸಮರ್ಪಿಸಿ, ನೀನು ಕಲುಷದೂರನಾಗೆಂದು ಹೇಳಿದ್ದಾರೆ. ಕರ್ಮಫಲ ರೂಪವಾದ ಸಂಬಂಧವು ಜೀವನಿಗೆ ಉಂಟಾದರೆ, ಅವನು ದೋಷಿ ಅಥವಾ ಕಲುಷಿತನಾಗುವನು. ಕರ್ಮ ಫಲದಿಂದ ನಿರ್ಲಿಪ್ತನಾದರೆ, ನಿಷ್ಕಲುಷ ನಾಗುವನು. ಇದಕ್ಕೆ "ನಾಹಂ ಕರ್ತಾ, ಹರಿರೇವ ಕರ್ತಾ"-ಎಂಬ ಅಹಂ ಕರ್ತೃತ್ವಾಭಿಮಾನ ರಹಿತವಾದ ಅನುಸಂಧಾನವೇ ಕಾರಣ,

ಭರ್ಮ-ಎಂದರೆ ಹಿರಣ್ಯ. ಶ್ರೀ ಪದ್ಮನಾಭನಾಮಕ ಶ್ರೀ ಹರಿಯ ನಾಭೀ ಕಮಲವು ಸುವರ್ಣಾತ್ಮಕವಾದದ್ದು ಹಾಗೂ ಲಕ್ಷ್ಮ್ಯಾತ್ಮಕವು, ನಾಭೀಕಮ ಲೋದ್ಭವರಾದ ಚತುರ್ಮುಖ ಬ್ರಹ್ಮದೇವರಿಗೆ **ಭರ್ಮಗರ್ಭ** ಅಂದರೆ, ಹಿರಣ್ಯಗರ್ಭರೆಂದು ಹೆಸರು. ಶ್ರೀ ಹರಿಯು ಭರ್ಮಗರ್ಭನ ಜನಕನು ದ್ವಂದ್ವ ಕರ್ಮಗಳನ್ನು ಅರ್ಪಿಸುವ ಏಕಾಂತ ಭಕ್ತರಿಗೆ ಭರ್ಮಗರ್ಭಜನಕನು ಎಂದೆಂದಿಗೂ ದುರ್ಮತಿಯನ್ನು ಕೊಡುವುದಿಲ್ಲ. ಯಾವಾಗಲೂ ಸದ್ಬುದ್ಧಿ ಪ್ರೇರಕನಾಗಿಯೇ ಇರುವನು. ದುರ್ಮತಿ ಹುಟ್ಟದಂತೆ ಮಾಡಿ, ಚಿತ್ತ ಶುದ್ಧನನ್ನಾಗಿಸಿ, ಅಂತ್ಯದಲ್ಲಿ ಕರ್ಮವಿಮೋಚನೆಗೈಸಿ, ತ್ರಿಧಾಮಗಳಾದ

ವೈಕುಂಠ, ಅನಂತಾಸನ, ಶ್ವೇತದ್ವೀಪಗಳೆಂಬ ತನ್ನ ಅರಮನೆಯಲ್ಲಿಟ್ಟು, ನಿತ್ಯಾನಂದ ರೂಪವಾದ ಮುಕ್ತಿ ಸುಖವನ್ನು ದಯಪಾಲಿಸುವನು. **ಹರ್ಮ್ಯ**– ಎಂದರೆ ಶ್ರೀ ಹರಿಯ ಅರಮನೆ ಎಂದರ್ಥ. ಅವೇ ವೈಕುಂಠಾದಿ ಮುಕ್ತ ಧಾಮಗಳು "ನಚಪುನರಾವರ್ತತೇ" ಎಂಬ ಪುನಃ ಜನನ ಮರಣವಿಲ್ಲದ ಶಾಶ್ವತ ಮುಕ್ತಾಲಯಗಳು. ಧನಿಕನ ಮನೆಗೆ "ಹರ್ಮ್ಯ" ಎಂದು ಹೆಸರು. "ಹರ್ಮ್ಯಾದಿರ್ಧನಿನಾಂ ವಾಸಃ"-ಇತ್ಯಮರಃ : ಸದಾ ಸರ್ವಕಾಲದಲ್ಲಿ ಎಡ ಬಿಡದೆ ಬೆಂಬಲಿಗನಾಗಿದ್ದು ಮುಕ್ತ ಧಾಮಗಳಲ್ಲಿ ಸ್ವಕೀಯರಾದ ಮುಕ್ತ ಜೀವರ ಸಂಗಡ ವಿಹಾರ ಮಾಡುವುದಕ್ಕೆ ಶಾಶ್ವತಾವಕಾಶ ಕಲ್ಪಿಸಿ. ಕರುಣಾಳು ವಾದ ಆ ಕಮಲಾರಮಣನು ತನ್ನ ಭಕ್ತರನ್ನು ಸಂರಕ್ಷಿಸುವನೆಂದು ಪ್ರಸಕ್ತ ಪದ್ಯದ ತಾತ್ಪರ್ಯವು ॥೧೩॥

## ವಿಶೇಷ ವಿಚಾರ

**ದ್ವಂದ್ವಕರ್ಮ ಸಮರ್ಪಣಾ ವಿಧಾನ**-ಇದು ಪ್ರಮೇಯಗರ್ಭಿತ ವಾದ ಅತ್ಯಂತ ಮುಖ್ಯ ವಿಷಯ. ಭಗವದನುಗ್ರಹ ಪ್ರಾಪ್ತಿಗಾಗಿ ಭಕ್ತರು ಮಾಡುವ ಸಾಧನ ಮಾರ್ಗದಲ್ಲಿ ಇದು ಅತ್ಯಂತ ಗಹನವಾದ ತತ್ತ್ವ. ಇದನ್ನು ಹಂತ ಹಂತವಾಗಿ ವಿಚಾರ ಮಾಡೋಣ.

(೧) "ದ್ವಂದ್ವ"-ಎಂದರೆ, ಸುಖ-ದುಃಖ, ಲಾಭ-ನಷ್ಟ, ಜಯ-ಅಪಜಯ, ಶೀತ-ಉಷ್ಣ ಎಂಬ ಪರಸ್ಪರ ವಿರೋಧವಾದ ಧರ್ಮಗಳು, ಇದೇ ಹಿನ್ನೆಲೆಯಲ್ಲಿ ಪುಣ್ಯ-ಪಾಪ ಕರ್ಮಗಳೂ ಸಹ ದ್ವಂದ್ವ ಕರ್ಮಗಳೆನಿಸುವುವು.

(೨) ಚೇತನರು (ಜೀವರಾಶಿ) ಅನಾದಿ ಮತ್ತು ನಿತ್ಯರು, ಅವರ ಸ್ವರೂಪ ದೇಹವು ಅತ್ಯಂತ ಸೂಕ್ಷ್ಮರೂಪದಲ್ಲಿರುವುದು, ಸೂಕ್ಷ್ಮತಮವಾದ ಜೀವರ ಸ್ವರೂಪದೇಹವು ನಿತ್ಯ ಹಾಗೂ ಅನಾದಿ. ಅದಕ್ಕೆ ಎಂದೆಂದಿಗೂ ನಾಶವಿಲ್ಲ. ಅಭೇದ್ಯ ಮತ್ತು ಅಚ್ಛೇದ್ಯವು. ಅದು ಅಪ್ರಾಕೃತ ಗುಣ ಧರ್ಮದಿಂದ ಯುಕ್ತವಾಗಿದೆ,

(೩) ಜೀವ ವರ್ಗದಲ್ಲಿ ಮೂರು ಪ್ರಕಾರ : 1. ಸಾತ್ವಿಕರು

2. ರಾಜಸರು ಮತ್ತು 3. ತಾಮಸರು ಎಂದು ತ್ರಿವಿಧವರ್ಗ. ಈ ಭೇದವೂ ಸಹ ಅನಾದಿ ನಿತ್ಯವು. ಶ್ರೀ ಹರಿಯಿಂದ ಸೃಷ್ಟವಲ್ಲ.

(3) ಸಕಲ ಸತ್ಕರ್ಮಗಳ ಅನುಷ್ಠಾನವು ಪರಮ ಮುಖ್ಯ ವೃತ್ತಿಯಿಂದ ಸಾತ್ವಿಕ ಜೀವರಿಗೆ ಸಂಬಂಧಿಸಿರುವುದರಿಂದ, ಅವರ ವಿಚಾರವನ್ನು ಮಾತ್ರ ಪರಿಗಣಿಸೋಣ. ಸಾತ್ವಿಕರು ಮುಕ್ತಿಯೋಗ್ಯ ಚೇತನರು. ಅವರ ಸ್ವರೂಪ ದೇಹವು ಶುದ್ಧಅಪ್ರಾಕೃತ ಸತ್ತ್ವಗುಣ ವಿಶಿಷ್ಟವಾಗಿರುವುದು. ಬ್ರಹ್ಮಾದಿ ತೃಣಾಂತ ಜೀವರು ಸಾತ್ವಿಕ ವರ್ಗಕ್ಕೆ ಸೇರಿದ್ದಾರೆ. ಜೀವೋತ್ತಮರಾದ ಶ್ರೀ ಬ್ರಹ್ಮದೇವರ ಸ್ವರೂಪದೇಹವು ಶುದ್ಧಸತ್ತ್ವಪ್ರಾಚುರ್ಯ ಗುಣವುಳ್ಳದ್ದು. ಅಂತೆಯೇ ಸಕಲ ಋಜುಗಣಸ್ಥರದ್ದು. ಅವರಿಗಿಂತ ತಾರತಮ್ಯದಲ್ಲಿ ಅವರರಾದ ಸಾತ್ವಿಕ ವರ್ಗದವರಲ್ಲಿ ಶುದ್ಧಸತ್ತ್ವಗುಣ ತೃಣಾಂತ ಸಾತ್ವಿಕ ಜೀವರ ಪರ್ಯಂತ ಗುಣತಾರತಮ್ಯ ಕ್ರಮದಿಂದ ಕಡಿಮೆಯಾಗುತ್ತಾ ಹೋಗುವುದು.

(4) ಮುಕ್ತಿಯೋಗ್ಯರ ಸ್ವರೂಪದೇಹಕ್ಕೆ ಆವರ್ತವಾಗಿ ಲಿಂಗದೇಹವಿದೆ. ಈ ಲಿಂಗ ಶರೀರವೂ ಅನಾದಿ. ಆದರೆ ಸಾಂತ್ಯ. ವಿರಜಾ ನದಿಯ ಸ್ನಾನದದ್ವಾರಾ ಲಿಂಗದೇಹವು ಭಂಗವಾಗುವುದು. ಈ ಲಿಂಗ ದೇಹವು ತ್ರಿಗುಣಾತ್ಮಕವಾದದ್ದು. ಷೋಡಶಕಳಾತ್ಮಕವಾಗಿದೆ. ಅಂತೆಯೇ ರಾಜಸರಿಗೆ ರಜೋಗುಣಾವರಣ. ತಮೋ ಯೋಗ್ಯರಿಗೆ ತಮೋಗುಣಾವರಣ ಹೀಗೆ ಅನಾದಿಯಿಂದ ಸಿದ್ಧವಾಗಿದೆ.

(5) ಸೃಷ್ಟಿಪೂರ್ವದಲ್ಲಿ, ಅಂದರೆ ಜೀವರು ಅಸೃಜ್ಯ ಸ್ಥಿತಿಯಲ್ಲಿರುವಾಗ, ಅನಾದಿಲಿಂಗದೇಹವು ಸ್ವರೂಪಶರೀರಕ್ಕೆ ಸಾವಕಾಶವಾಗಿರುವುದು. ಅಂದರೆ ಪ್ರಾಕೃತಶರೀರವಾದ ಲಿಂಗದೇಹದ ಸಂಪರ್ಕವು ಅಪ್ರಾಕೃತ ಸ್ವರೂಪ ದೇಹಕ್ಕೆ ಇರುವುದಿಲ್ಲ. ತ್ರಿಗುಣಗಳ ಬೆರಕೆಯೇ "ಸೃಷ್ಟಿ" ಎನಿಸುವುದು. (ಗುಣ ವೈಷಮ್ಯವೇ ಸೃಷ್ಟಿ)ಜೀವರನ್ನು ಸೃಷ್ಟಿಗೆ ತರುವ ಉದ್ದೇಶದಿಂದ ಶ್ರೀ ಹರಿಯು ಲಿಂಗ ಶರೀರದ ಸಂಪರ್ಕವನ್ನು ಸ್ವರೂಪ ಶರೀರಕ್ಕೆ ಉಂಟು ಮಾಡುವನು. ಅಂದರೆ ಪ್ರಾಕೃತ ತ್ರಿಗುಣಗಳ ಸಂಬಂಧ ಚೇತನರಿಗೆ

ಉಂಟಾಗುವುದು. ಈ ಘಟನಾ ಕಾರ್ಯ ಸತ್ಯಸಂಕಲ್ಪನಾದ ಶ್ರೀ ಹರಿಯಿಂದ ನಡೆಯುವುದು. ಶ್ರೀ ಹರಿಯು ಅಚಿಂತ್ಯಾದ್ಭುತಶಕ್ತನು. ಅಘಟನಾಘಟನ ಶಕ್ತನು. ಅವನ ಆಚಿಂತ್ಯ ಮಹಿಮಾತಿಶಯದಿಂದ ಈ ಕಾರ್ಯ ನಡೆಯುವುದು. ಆಗ ತ್ರಿಗುಣಗಳ ಸಂಪರ್ಕದ ಫಲವಾಗಿ ಚೇತನ ನಿಗೆ ನಾನು ನನ್ನದು ಎಂಬ ಆತ್ಮ ಪ್ರತ್ಯಯ ರೂಪವಾದ ಇಚ್ಛಾ ಉಂಟಾಗು ವುದು. ಇದು ಸಂಸಾರಕ್ಕೆ ಕಾರಣ, ಲಿಂಗ ದೇಹವು ಅನಾದಿ ಕರ್ಮದ ಮೂಲ. ಅಲ್ಲಿಂದ ಪ್ರಥಮ ಜನ್ಮ ಪ್ರಾಪ್ತಿ. ನಂತರ ಅನಾದಿ ಕರ್ಮದಿಂದ ಫಲಿತವಾದ ಸಂಚಿತ ಆಗಾಮಿಕರ್ಮಗಳ ಪರಾಂಪರಾನುಭವ. ಇದರಿಂದ ಮುಂದಿನ ಅನೇಕ ಜನ್ಮಗಳ ಪ್ರಾಪ್ತಿ,

(6) ಹೀಗೆ ಶ್ರೀ ಹರಿಯ ಇಚ್ಛಾಶಕ್ತಿಯಿಂದ ಸಂಸಾರಾವಸ್ಥೆಗೆ (ಸೃಷ್ಟಿಗೆ) ತರಲ್ಪಟ್ಟ ಚೇತನರು ನಾನಾ ಯೋನಿಗಳನ್ನು ತಮ್ಮ ಕರ್ಮ ಫಲಾನುಸಾರ ಹೊಂದುವರು. ಚೇತನರ ಸ್ವರೂಪಗತ ಲಕ್ಷಣಗಳಾದ ಜ್ಞಾನ ಶಕ್ತಿ-ಇಚ್ಛಾಶಕ್ತಿ-ಕ್ರಿಯಾಶಕ್ತಿ ಭಗವದಧೀನವಾಗಿವೆ. ಅನಾದ್ಯನಂತ ಕಾಲ ದಿಂದಲೂ ಜೀವರು ಅಸ್ವಂತ್ರರು. ಅವರ ಅಧೀನತ್ವ ನಿತ್ಯ, ಮುಕ್ತಿ ಯಲ್ಲಿಯೂ ಸಹ ತರತಮ ಭಾವದಿಂದ ಯುಕ್ತರಾಗಿದ್ದು, ಭಗವದಧೀನ ರಾಗಿರುವರು.

(7) ತ್ರಿಗುಣಗಳ ಸಂಬಂಧದಿಂದ ಸತ್ತ್ವಗುಣ ಪ್ರಾಚುರ್ಯದಿಂದ ಪುಣ್ಯರೂಪವಾದ ಸತ್ಕರ್ಮಗಳು ನಡೆಯುವುವು. ರಜೋಗುಣಪ್ರಾಚುರ್ಯದಿಂದ ಪುಣ್ಯ ಪಾಪ ಮಿಶ್ರವಾದ ಮಿಶ್ರ ಕರ್ಮಗಳ ಅಭಿವ್ಯಕ್ತಿ. ತಮೋಗುಣ ಪ್ರಾಚುರ್ಯದಿಂದ ಪಾಪರೂಪವಾದ ದುಷ್ಕರ್ಮಗಳ ಆಚರಣೆ, ಇಂತಿದೆ-ಕರ್ಮಾಭಿವ್ಯಕ್ತಸರಣಿ. ಕರ್ಮಪತಿಯಾದ ಬಿಂಬನು ಜೀವರ ಅಂತರ್ಯಾಮಿ ಯಾಗಿದ್ದು ಈ ಗುಣ ಜನ್ಯವಾದ ಕರ್ಮಗಳಿಗೆ ತಾನೇ ಪ್ರೇರಕನಾಗಿದ್ದು ಪಾಪ-ಪುಣ್ಯ-ಮಿಶ್ರ ಕರ್ಮಗಳನ್ನು ಬಿಂಬಕ್ರಿಯಾದ್ವಾರಾ ತಾನೇ ಮಾಡಿ, ದೇವ ದೈತ್ಯರದ್ವಾರಾ ಮಾಡಿಸಿ, ದೇಹಗತ ಇಂದ್ರಿಯಗಳಲ್ಲಿ ಪ್ರಕಾಶತೋ ವ್ಯಾಪ್ತರಾದ ಜೀವರ ಅನುಭವಕ್ಕೆ ತಂದು, ಕರ್ಮಫಲವನ್ನು ಅವರಿಗೆ ಉಣಿಸುವನು.

(8) ಹೀಗೆ ಸಕಲ ಕರ್ಮಗಳೂ ಶ್ರೀ ಹರಿಯಿಂದ ಪ್ರೇರಿ ನಡೆಯುವುವು. ಜೀವ ಜಡಗಳಿಂದ ಪರಮವಿಲಕ್ಷಣನಾದ ಶ್ರೀ ... ತತ್ಸಂಬಂಧವಾದ ಕರ್ಮಲೇಪವಿಲ್ಲ. ಫಲಾನುಭವವೂ ಇಲ್ಲವೇ ಇಲ್ಲ. ನಿರ್ಲಿಪ್ತನಾದ ಆ ನಿರಂಜನನಿಂದ ನನ್ನ ಅನಾದಿ ಕರ್ಮಾನುಸಾರ ನನ್ನ ಅಧಿಷ್ಠಾನದಲ್ಲಿ ಬಿಂಬಕ್ರಿಯಾದ್ವಾರ ಪ್ರೇರಿತವಾಗಿ ನಡೆಯುತ್ತಿವೆ. ಅವನೇ ಸರ್ವತಂತ್ರ ಸ್ವತಂತ್ರನಾಗಿದ್ದು ಮಾಡಿ ಮಾಡಿಸುತ್ತಿರುವನು. "ನಾಹಂ ಕರ್ತಾ ಹರಿರೇವಕರ್ತಾ"-ಎಂಬ ಭಾವನೆಯಿಂದ ಸ್ವಯಂ ಕರ್ತೃತ್ವಾಭಿಮಾನ ಶೂನ್ಯನಾಗಿ ಶ್ರೀ ಹರಿಯ ಸ್ವಾತಂತ್ರ್ಯ, ತನ್ನ ಅಧೀನತ್ವವನ್ನು ತಿಳಿಯುವ ಉತ್ತಮ ಜ್ಞಾನಾನುಸಂಧಾನವೇ ದ್ವಂದ್ವ ಕರ್ಮಸಮರ್ಪಣೆಯ ಮರ್ಮವು. ಆಗ ಕರುಣಾಳುವಾದ ಕಮಲದಳಾಯತಾಕ್ಷನು ಸಜ್ಜನರ ಪಾಪಗಳನ್ನು ನಾಶ ಮಾಡಿ, ಪುಣ್ಯವರ್ಧನೆ ಮಾಡುವನು.

## ಪದ್ಯ- ೧೪

**ಮೂಲ:**

**ಕಲ್ಪಕಲ್ಪದ ಶರಣಜನ ವರ ।**
**ಕಲ್ಪ ವೃಕ್ಷನು ತನ್ನ ನಿಜಸಂ ।**
**ಕಲ್ಪದನುಸಾರದಲಿ ಕೊಡುತಿಪ್ಪನು ಫಲಾಫಲವ ॥**
**ಅಲ್ಪ ಸುಖದಾಪೇಕ್ಷೆಯಿಂದಹಿ ।**
**ತಲ್ಪನಾರಾಧಿಸ ದಿರೆಂದಿಗು ।**
**ಶಿಲ್ಪಿಗನ ಕೈ ಸಿಲ್ಕಿದಾ ಶಿಲೆಯಂತೆ ಸಂತೈಪ ॥೧೪॥**

**ಅವತರಣಿಕೆ :**

ಕೇವಲ ಪ್ರಾಪಂಚಿಕ ಸುಖ ಪ್ರಾಪ್ತಿಗಾಗಿ ಶರಣ ಜನರ ಕಲ್ಪವೃಕ್ಷ ಸದೃಶನಾದ ಆ ಶರಧಿಶಯನನನ್ನು ಆರಾಧನೆ ಮಾಡಬೇಡ ಎಂದು ಹೇಳುತ್ತಾರೆ ॥೧೪॥

**ಪ್ರತಿಪದಾರ್ಥ :**

**ಕಲ್ಪ ಕಲ್ಪದಿ**=ಬ್ರಹ್ಮದೇವರ ಪ್ರತಿ ಪ್ರತಿ ಕಲ್ಪದಲ್ಲಿ, **ಶರಣ ಜನ ವರಕಲ್ಪವೃಕ್ಷನ**=ತನಗೆ ಶರಣಾಗತರಾದ ಭಕ್ತರ ಪಾಲಿಗೆ ಕಲ್ಪ ವೃಕ್ಷ ಸದೃಶನಾದ ಶ್ರೀ ಹರಿಯು. **ತನ್ನ**=ತನ್ನದೇ ಆದ, **ನಿಜ ಸಂಕಲ್ಪದನು ಸಾರದಲಿ**=ಸತ್ಯ ಸಂಕಲ್ಪಾನುಸಾರವಾಗಿ, (ಅವನ ಇಚ್ಛಾನುಸಾರ) **ಫಲಾ ಫಲವ**=ಸಾತ್ವಿಕರಿಗೆ ಸುಖ ರೂಪವಾದ ಫಲಾನುಭವವನ್ನೂ. ನಿತ್ಯ ಸಂಸಾರಿ ಗಳಿಗೆ ಮಿಶ್ರ ಫಲವನ್ನೂ ಮತ್ತು ತಮೋಯೋಗ್ಯ ಜೀವರಿಗೆ ಸುಖ ರೂಪ ವಾದ ಫಲವನ್ನೂ, (ಅಫಲ) **ಕೊಡುತಿಪ್ಪನು**=ಲಿಂಗಭಂಗಾನಂತರ ನೀಡುವನು. **ಅಲ್ಪಸುಖದಾಪೇಕ್ಷೆಯಿಂದ**=ನಶ್ವರವಾದ ಐಹಿಕ ವಿಷಯ ಭೋಗಾಪೇಕ್ಷೆಯಿಂದ. **ಅಹಿತಲ್ಪನ**=ಶೇಷಶಯನನಾದ ಶ್ರೀಮನ್ನಾರಾಯಣ ನನ್ನು **ಎಂದಿಗು ಆರಾಧಿಸದಿರು**=ಯಾವಾಗಲೂ ಆರಾಧನೆ ಮಾಡಬೇಡ. **ಶಿಲ್ಪಿಗನ**=ಕಲ್ಲು ಕೆಲಸ ಮಾಡುವ (ಪ್ರತಿಮಾಗಳನ್ನು ರಚಿಸುವ) ಶಿಲ್ಪಿಯ **ಕೈಸಿಲ್ಕಿದಾ**=ಕೈಗೆ ಸಿಕ್ಕಿರುವ, **ಶಿಲೆಯಂತೆ ಸಂತೈಪ**=ಶಿಲೆಯೋಪಾದಿ ಯಲ್ಲಿ ಸಂರಕ್ಷಣೆ ಮಾಡುತ್ತಾನೆ ॥೧೪॥

## ವ್ಯಾಖ್ಯಾನಗಳು

### ೧ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಐಹಿಕ ಸುಖಕ್ಕಾಗಿ ಪರಮಾತ್ಮನ ಆರಾಧನಿ ಮಾಡಬ್ಯಾಡಾ ಎಂತ ಹೇಳತಾರೆ.

ಸರ್ವಾಭೀಷ್ಟಗಳ ಕೊಡತಕ್ಕ ಕಲ್ಪವೃಕ್ಷದೋಪಾದಿಯಲ್ಲಿ ಪರಮಾತ್ಮ ಬ್ರಹ್ಮದೇವರ ಪ್ರತೀಪ್ರತೀ ಮಹಾಕಲ್ಪದಲ್ಲಿ ತನ್ನ ಸತ್ಯವಾದ ಸಂಕಲ್ಪಾನು ಸಾರದಲ್ಲಿ ಸಾಧನಿ ಮಾಡಿಸಿ ಅಂದರೆ, ದಾರದಾರಿಂದ ಎಷ್ಟೆಷ್ಟುಕಲ್ಪ ಸಾಧನಿ ಮಾಡಸತೇನು ಎಂತ ಅನಾದಿ ಆರಭ್ಯ ಸಂಕಲ್ಪ ಮಾಡಿದ್ದಾನೋ ಅಷ್ಟು ಕಲ್ಪ ಸಾಧನ ಮಾಡಿಸಿ, ಆಯಾ ಕಲ್ಪಾಂತಕ್ಕೆ ಸಾಧನ ಪೂರ್ತಿಯಾದ ಪ್ರಾಣಿ ಗಳಾದ ತ್ರಿವಿದ ಜೀವರ, ಶರಣಾಗತತ್ವ ಸ್ವರೂಪ ಸ್ವಭಾವದಲ್ಲಿ ಉಳ್ಳ ತನ

ಭಕ್ತರಿಗೆ ಉತ್ತಮವಾದ ವೈಕುಂಠಲೋಕದಲ್ಲಿ ಸ್ವರೂಪಸುಖ ಭೋಗ ಮಾಡ ತಕ್ಕ ಫಲವೂ, ದುಷ್ಟರಾದ ತಮೋಯಾಗ್ಯ ನಿತ್ಯ ಸಂಸಾರಿಗಳಿಗೆ ಅಂಧಂತಮ ಲೋಕದಲ್ಲಿ, ಸಾಂತಾನಿಕ ಲೋಕದಲ್ಲಿ, ಸ್ವರೂಪದುಃಖ, ಮಿಶ್ರಭೋಗ ಮಾಡ ತಕ್ಕ ಸುಖವನ್ನು ಲಿಂಗಭಂಗ ಐದಿಸಿ ಕೊಡತಾ ಇರತಾನೆ, ಕಡಿಮಿ ಬಿದ್ದವರಿಗೆ ಪುನಃ ಅಸೃಜ್ಯ ರಾಶಿಯಿಂದ ತೆಗೆದು ಕಡಿಮಿ ಆದದ್ದಕ್ಕೆ ಭರ್ತಿ ಮಾಡತಾ ಇರತಾನೆ. ನಶ್ವರವಾದ, ಅಲ್ಪವಾದ ಪ್ರಾಕೃತ ವಿಷಯಭೋಗಾಪೇಕ್ಷೆಯಿಂದ, ದಾವಾಗ್ಯೂ ಶೇಷಶಾಯಿಯಾದ ಶ್ರೀ ಪರಮಾತ್ಮನ, ಸುಖಾಪೇಕ್ಷೆಗಾಗಿ ಆರಾಧನಾ ಮಾಡಬ್ಯಾಡ, ಕಲ್ಲುಕೆಲಸ ಮಾಡತಕ್ಕ ಶಿಲ್ಪಿಯ ಕೈಯಿಂದ ಮಾಡಲ್ಪಟ್ಟ ಶಿಲೆಯೋ ಪಾದಿಯಲ್ಲಿ ಸಂರಕ್ಷಣೆ ಮಾಡತಾನೆ.

**ತಾತ್ಪರ್ಯ :** ಕಲ್ಲುಬಡಿಗ ಶಿಲಾವನ್ನ ಸಾಕಾರವಾದ ಪ್ರತಿಮಾ ಮಾಡ ತಾನೆ. ಪ್ರತಿಷ್ಠಾದಿಗಳು ಮಾಡಿ ಪೂಜಾ ಮಾಡೋ ಯೋಗ್ಯತಾ ಇಲ್ಲ. ಆದ್ದರಿಂದ ಪ್ರತಿಮಾ ಸುಮ್ಮಗೆ ಹಾಕಿರ್ತಾನೆ. ತದ್ವತ್ ಅಸೃಜ್ಯರಾಶಿಗತ ಜೀವರು ಅನಾದಿಯಾಗಿ ಸುಮ್ಮನೆ ಬಿದ್ದಿದ್ದಾರೆ. ಅವರನ್ನ, ತನ್ನ ಸಂಕಲ್ಪಕ್ಕೆ ದಾವಾಗ ಬರತದೋ ಆಗ್ಗೆ ಸೃಷ್ಟಿಗೆ ತಂದು ಅವರವರ ಸಾಧನ ಮಾಡಿಸಿ ಗತಿಗಳ ಕೊಡತಾನೆ. ಇದಕ್ಕಾಗಿ ಅಧಿಕಾರಿಗಳಾದ ನಾವುಗಳು ಐಹಿಕಸುಖ ಅಪೇಕ್ಷಿಸದೆ ಹರಿಪ್ರೀತಿಗಾಗಿ ಕರ್ಮಗಳ ಮಾಡತಾ ಬಂದರೆ ಸಂಚಿತ ನಾಶ, ಆಗಾಮಿ ನಿರ್ಲೇಪವಾಗಿ ಪ್ರಾರಬ್ಧಕರ್ಮಭೋಗಾನಂತರ ಮೋಕ್ಷ ಕೊಡತಾ ನೆಂತ ತಾತ್ಪರ್ಯ ॥೧೪॥

## ೨. ಭಾವಪ್ರಕಾಶಿಕೆ

ಶರಣಾಗತರನ್ನು ಪಾಲನೆ ಮಾಡುವ ವಿಷಯದಲ್ಲಿ ಕಲ್ಪವೃಕ್ಷದಂತಿರುವ ಶ್ರೀ ಹರಿಯು, ತನ್ನ ಸತ್ಯ ಸಂಕಲ್ಪಾನುಸಾರವಾಗಿ ಪ್ರತಿ ಬ್ರಹ್ಮಕಲ್ಪದಲ್ಲೂ ಸೃಷ್ಟಿಗೆ ಬಂದಿರುವ ತ್ರಿವಿಧ ಜೀವರಾಶಿಗಳಲ್ಲಿ, ಆ ಕಲ್ಪಾಂತ್ಯದಲ್ಲಿ ಮುಕ್ತಿ ಯೋಗ್ಯರಿಗೆ ಮುಕ್ತಿಯನ್ನೂ, ತಮೋಯೋಗ್ಯರಿಗೆ ಅಂಧಂತಮಸ್ಸನ್ನೂ, ಮಧ್ಯಮರಿಗೆ ಸುಖದುಃಖ ಮಿಶ್ರವಾದ ಸಾಂತಾನಿಕವೆಂಬ ನಿತ್ಯಸಂಸಾರವನ್ನೂ

ಕೊಡಿಸುವನು. ಇಂತಹಾ ಶೇಷಶಾಯಿಯಾದ ಪರಮಾತ್ಮನನ್ನು, ನಶ್ವರವಾದ ಸಂಸಾರ ಸುಖಕ್ಕಾಗಿ ಎಂದಿಗೂ ಭಜಿಸಬೇಡ, ಪರಮಾತ್ಮನು ಸುಪ್ರೀತನಾಗಲೆಂದು ಭಜಿಸಿದರೆ ನಿನ್ನ ಭಜನೆಗೆ ಮೆಚ್ಚಿ ನಿನಗೆ ಸುಖವನ್ನು ಕೊಡಿಸುವನು. ಕಲ್ಲು ಬಡಿಯನ ಕೈಗೆ ಸಿಕ್ಕಿದರೆ, ಕಲ್ಲು ನನ್ನನ್ನು ಪ್ರತಿಮೆಯನ್ನಾಗಿ ಮಾಡಿ ಪೂಜಾದಿಗಳು ನಡೆಯುವಂತೆ ಮಾಡೆಂದು ಬಡಿಯುವನನ್ನು ಕೇಳಿಕೊಳ್ಳುವುವೇನು ? ಹೇಗೆ ಶಿಲ್ಪಿಯು ತಾನಾಗಿಯೇ ಕಲ್ಲನ್ನು ಪ್ರತಿಮೆಯನ್ನಾಗಿ ಮಾಡಿ ಪೂಜಾದಿಗಳು ನಡೆಯುವಂತೆ ಮಾಡುವನೋ. ಹಾಗೆ ಪರಮಾತ್ಮನು, ನೀನು ಯಾವುದನ್ನೂ ಅಪೇಕ್ಷಿಸದಿದ್ದರೂ. ತಾನಾಗಿಯೇ ನಿನ್ನ ಯೋಗ್ಯತಾನುಸಾರ, ಸುಖವನ್ನು ಕೊಡಿಸುವನೆಂಬ ತಾತ್ಪರ್ಯ ॥೧೪॥

## ೩. ಭಾವದರ್ಪಣ

ನಿಷ್ಕಾಮುಕನಾಗಿ ಪುನಃ ಉಪಾಸನೆ ಮಾಡೆಂದು ಹೇಳುತ್ತಾರೆ । ಕಲ್ಪ । ಅಹಿತಲ್ಪ = ಶೇಷನೇ ಹಾಸಿಗೆಯಾಗಿ ಉಳ್ಳವ. ಶಿಲ್ಪಿಕ = ಪ್ರತಿಮಾ ಮಾಡತಕ್ಕವ ॥೧೪॥

## ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

"ಕಲ್ಪ" ಇತಿ ॥ "ಆರಾಧಿಸದಿರೆ" ಆರಾಧಿಸದಿರಲು ॥ "ಶಿಲ್ಪಕ"- ಲಕುಟಕಃ॥ ಪ್ರತಿಮಾರ್ಥಂ ರಕ್ಷತ್ಯಯಮ್ ॥೧೪॥

## ಕನ್ನಡಾರ್ಥ

ಕ್ಷುದ್ರ ಫಲಕ್ಕಾಗಿ ಹರಿಯನ್ನು ಆರಾಧಿಸದೆ ನಿಷ್ಕಾಮ ಭಕ್ತಿಯಿಂದ ಶ್ರೀವಿಷ್ಣು ಪ್ರೀತಿಗಾಗಿ ಕರ್ಮವನ್ನು ಮಾಡಿ ಅವನಡಿಗಳಲ್ಲಿ ಸಮರ್ಪಿಸಿದರೆ "ಜೀವರನ್ನು ಪರಮಾತ್ಮನು ಸಂಸಾರದಿಂದ ಮುಕ್ತ ಮಾಡುವನು". ಅವರ ಸ್ವರೂಪಾವಿರ್ಭಾವವನ್ನು ಮಾಡಿ ತೋರಿಸುವನು. ಎಂಬ ಅಭಿಪ್ರಾಯ

ವನ್ನು ಹೇಳುತ್ತಾರೆ. ಶಿಲ್ಪಿಯು ಶಿಲೆಯನ್ನು ಸಂರಕ್ಷಿಸಿ, ಪ್ರತಿಮೆಯನ್ನು ಮಾಡಿ ಮಾನ್ಯವಾಗುವಂತೆ ಹೇಗೆ ಮಾಡುವನೋ ಅದರಂತೆ ಶ್ರೀ ಹರಿಯು ಇಂಥ ತನ್ನ ಭಕ್ತರನ್ನು ಅನುಗ್ರಹಿಸಿ, ಅವರೂ ಮಾನ್ಯರಾಗುವಂತೆ ಮಾಡುವನು. ಎಂಬುದು ದೃಷ್ಟಾಂತಾಶಯ ॥೧೯॥

## ಶ್ರೀಗುರು ಹೃದಯ ಪ್ರಕಾಶಿಕೆ

ಪ್ರತಿ ಬ್ರಹ್ಮಕಲ್ಪದಲ್ಲಿಯೂ ಶರಣರೆಂಬ ಭಕ್ತ ಜನರಿಗೆ ಉತ್ತಮ ಕಲ್ಪ ವೃಕ್ಷದಂತೆ ಇಷ್ಟಾರ್ಥಪ್ರದನಾದ ದೇವರು, ತನ್ನ ಸತ್ಯಸಂಕಲ್ಪಾನುಸಾರ ಫಲಾಫಲಗಳೆಂಬ ಸುಖ ದುಃಖಗಳನ್ನು ಸರ್ವರಿಗೆ ಕೊಡುತ್ತಿರುವನು ಎಂದು ತಿಳಿದು ಅಲ್ಪಸುಖವೆಂಬ ಇಹಪರ ಭೋಗಗಳ ಅಪೇಕ್ಷೆಯಿಂದ ದೇವರನ್ನು ಆರಾಧಿಸದೆ, ಸೂಜಿಯು ಸೂಜಿಕಲ್ಲನ್ನು ಹಿಡಿಯುವಂತೆ ಸ್ವಾಭಾವಿಕಪ್ರೇಮ ದಿಂದ ಭಜಿಸಿದರೆ, ಶಿಲ್ಪಿಕನ ಕೈ ಸಿಲ್ಕಿದಾ ಶಿಲೆಯಂತೆ ಅಂದರೆ, ಪ್ರತಿಮೆ ಮಾಡುವ ಚದುರನ ಕೈಲಿ ಸಿಕ್ಕಿದ ಕಲ್ಲನ್ನು ದೇವರ ಆಕಾರದಂತೆ ಮಾಡಿ ಪೂಜ್ಯತೆ ಉಂಟು ಮಾಡುವಂತೆ, ಸಮಾನರಲ್ಲಿ ಪೂಜ್ಯತೆಯನ್ನು ಕೊಟ್ಟು ದೇವರು ಸಂತೋಷಪಡಿಸುವನು ॥೧೯॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಪ್ರತಿ ಬ್ರಹ್ಮಕಲ್ಪದಲ್ಲಿ ಕರುಣಾಳುವಾದ ಶ್ರೀ ಹರಿಯು ತ್ರಿವಿಧ ಜೀವರಿಗೆ ಅವರವರ ಸ್ವರೂಪಯೋಗ್ಯತಾನುಸಾರವಾದ ಫಲಗಳನ್ನು ಕೊಡುವನು. ತನಗೆ ಶರಣಾಗತರಾಗಿ ಬಂದ ಮುಕ್ತಿಯೋಗ್ಯ ಚೇತನರ ಪಾಲಿಗೆ ಕಲ್ಪವೃಕ್ಷ ಸದೃಶನು. ಸ್ವರ್ಗಗತ ಕಲ್ಪವೃಕ್ಷವು ಅದನ್ನು ಭಕ್ತಿಯಿಂದ ಆರಾಧಿಸುವವರಿಗೆ ಅವರ ಕಾಮಿತಾರ್ಥಗಳನ್ನು ನೀಡುವುದು. ಅಂತೆಯೇ **ಶರಣಜನಕಲ್ಪವೃಕ್ಷನಾದ** ಆ ಶರ್ವಾದಿವಂದ್ಯನು ತನ್ನ ಭಕ್ತರ ಮನೋ ಭೀಷ್ಟಗಳನ್ನು ಪೂರೈಸುವನು. ಇದು ಅವನ ಸತ್ಯ ಸಂಕಲ್ಪವು. ಜೀವರ ಯೋಗ್ಯತೆಯನ್ನರಿತ ಶ್ರೀ ಹರಿಯು ಅವರವರ ಯೋಗ್ಯತಾನುಸಾರ ಫಲ

ವನ್ನೀಯುವುದರಿಂದ ಅವನಿಗೆ ವೈಷಮ್ಯ ನೈರ್ಘೃಣ್ಯಾದಿ ದೋಷಗಳಿಲ್ಲ. ಸರ್ವದೋಷ ರಹಿತನಾದ ಆ ಸದಾನಂದನು ಮುಕ್ತಿಯೋಗ್ಯ ಜೀವರಿಗೆ ನಿತ್ಯ ಸುಖರೂಪವಾದ ಮಿಶ್ರಗತಿಯನ್ನೂ, ತೇಜೋಗುಣ ಭೂಯಿಷ್ಠರಾದ ನಿತ್ಯ ಸಂಸಾರಿಗಳಿಗೆ ಸುಖದುಃಖರೂಪವಾದ ಮಿಶ್ರಗತಿಯನ್ನೂ, ತಮೋಯೋಗ್ಯ ಜೀವರಿಗೆ ನಿತ್ಯ ದುಃಖರೂಪವಾದ ದುರ್ಗತಿಯನ್ನೂ ಕೊಡುವನು. ಸ್ವರೂಪಕ್ಕೆ ವಿರುದ್ಧವಾಗಿ ಎಂದಿಗೂ ಫಲಪ್ರದನಲ್ಲ. ಇದರಿಂದ **ನಿಜ ಸತ್ಯಸಂಕಲ್ಪಾನುಸಾರದಲಿ** ಎಂದು ಆ ಸತ್ಯಸಂಕಲ್ಪನ ಸಮೀಚೀನ ಗುಣವನ್ನು ಕೊಂಡಾಡಿದ್ದಾರೆ,

ಅಹಿ-ಎಂದರೆ, ಸರ್ಪ. ತಲ್ಪ-ಎಂದರೆ ಹಾಸಿಗೆ. ಅಂದರೆ ಶೇಷಶಯನನಾದ ಆ ಸರ್ವೇಶ್ವರನಿಗೆ **ಅಹಿತಲ್ಪ**ನೆಂದು ನಾಮ, ಶಾಶ್ವತ ಸುಖದಾಯಕನಾದ ಆ ಅಹಿತಲ್ಪನಲ್ಲಿ ಐಹಿಕ ಸುಖಗಳನ್ನು ಎಂದೆಂದಿಗೂ ಬೇಡಬಾರದೆಂದು ತಿಳಿಸುತ್ತಾರೆ. ಐಹಿಕ ಸುಖಗಳು ಕ್ಷಣಿಕ. ಅವು ಭೋಗಾನಂತರ ದುಃಖವನ್ನೇ ಕೊಡುವುವು. ಇದಕ್ಕೆ ಒಂದು ಸುಂದರವಾದ ದೃಷ್ಟಾಂತವನ್ನು ಕೊಟ್ಟಿರುತ್ತಾರೆ.

ಕಲ್ಲನ್ನು ಕಡೆದು ಪ್ರತಿಮೆಗಳನ್ನು ನಿರ್ಮಿಸುವ ಕುಶಲಿಗೆ **ಶಿಲ್ಪಿಗ**ನೆಂದು ಹೆಸರು, ಅಂತಹ ಶಿಲ್ಪಿಯು ನಿಯತಾಕಾರವಿಲ್ಲದ ಕಲ್ಲನ್ನು ಕೆತ್ತಿ, ನಯಮಾಡಿ ಶಿಲಾಪ್ರತಿಮೆಗಳನ್ನು ಕಡೆದು ನಿರ್ಮಿಸುವನು. ಅಸ್ಪೃಶ್ಯರಾಶಿಯಲ್ಲಿ ಚೇಷ್ಟಾ ರಹಿತರಾಗಿ ಬಿದ್ದಿರುವ ಜೀವರಾಶಿಗಳು ಕಲ್ಲಿನ ಸದೃಶರು, ಶ್ರೀ ಹರಿಯು ಕಲಾಕುಶಲಿಯಾದ ಶಿಲ್ಪಿಗನ ಸದೃಶನು. ಶಿಲ್ಪಿಯ ಕೈಯಲ್ಲಿ ಸಿಕ್ಕ ಕಲ್ಲು, ಹೊಸ ರೂಪವನ್ನು ತಾಳಿ, ಸುಂದರವಾದ ಪ್ರತಿಮೆಯಾಗುವುದು. ಹಾಗೆಯೇ ಸತ್ಯ ಸಂಕಲ್ಪನ ಪರಮಾನುಗ್ರಹದಿಂದ ಜೀವರು ಸಂಸ್ಕಾರವನು ಹೊಂದಿ, ಅಂತ್ಯದಲ್ಲಿ ನಿತ್ಯಾನಂದ ರೂಪವಾದ ಮುಕ್ತಿಯನ್ನು ಹೊಂದುವರು. ಸಂಸಾರಾವಸ್ಥೆಯಲ್ಲಿ ಜೀವರು ಅನುಭವಿಸುವ ಕರ್ಮಜನ್ಯ ಫಲಗಳು, ಕಲ್ಲು ಶಿಲ್ಪಿಗನ ಕೈಲಿ ತಿನ್ನುವ ಉಳಿಯ ಪೆಟ್ಟಿನಂತೆ ಸದೃಶ. ತದ್ವಾರಾ ಕರ್ಮ ವಿಮೋಚನೆ. ನಂತರ ನಿತ್ಯ ಸುಖ ಪ್ರಾಪ್ತಿ, ॥೧೪॥

## ಪದ್ಯ-೧೫

**ಮೂಲ:**

**ದೇಶಭೇದಾಕಾಶದಂದದಿ ।**
**ವಾಸುದೇವನು ಸರ್ವಭೂತ ನಿ ।**
**ವಾಸನೆನಿಸಿ ಚರಾಚರಾತ್ಮಕನೆಂದು ಕರೆಸುವನು ॥**
**ದ್ವೇಷ ಸ್ನೇಹೋದಾಸೀನಗಳಿ ।**
**ಲ್ಲೀ ಶರೀರಗಳೊಳಗೆ ಅವರೋ ।**
**ಪಾಸನಗಳಂದದಲಿ ಫಲವೀವನು ಪರಬ್ರಹ್ಮ ॥ ॥೧೫॥**

**ಅವತರಣಿಕೆ:**

ಚರಾಚರಾತ್ಮಕವಾದ ಈ ಜಗತ್ತಿನಲ್ಲಿ ಎಲ್ಲೆಲ್ಲೂ ಶ್ರೀ ಪರಮಾತ್ಮನು ತುಂಬಿ ವ್ಯಾಪಿಸಿಕೊಂಡಿದ್ದರೂ, ಅವನಿಗೆ ಜೀವರಲ್ಲಿ ಸ್ನೇಹ, ಉದಾಸೀನ ದ್ವೇಷಾಸೂಯೆಗಳಿಲ್ಲ ಎಂದು ಹೇಳುತ್ತಾರೆ ॥೧೫॥

**ಪ್ರತಿಪದಾರ್ಥ**

**ದೇಶಭೇದ** = ಭೇದದಿಂದ ಯುಕ್ತವಾದ ನಾನಾ ಪ್ರದೇಶಗಳಿಂದೊಡಗೂಡಿದ, **ಆಕಾಶದಂದದಿ** = ಸರ್ವತ್ರವ್ಯಾಪ್ತವಾದ ಆಕಾಶದಂತೆ, **ವಾಸುದೇವನು** = ಆಕಾಶ ಸದೃಶನಾದ ಶ್ರೀ ವಾಸುದೇವ ನಾಮಕನಾದ ಶ್ರೀ ಹರಿಯು, **ಸರ್ವಭೂತನಿವಾಸನೆನಿಸಿ** = ದೇಶಭೇದ ಸದೃಶರಾದ ಸಕಲ ಜೀವರಲ್ಲಿ ವಾಸವಾಗಿದ್ದು, **ಚರ** = ಜಂಗಮ ಜೀವರಲ್ಲಿ, **ಅಚರ** = ಸ್ಥಾವರ ಜೀವರಲ್ಲಿ, **ಆತ್ಮಕನೆಂದು ಕರೆಸುವನು** = ಅಂತರ್ಯಾಮಿ ರೂಪದಿಂದ ವಿದ್ಯಮಾನನಾಗಿದ್ದಾನೆಂದು ಕರೆಸುತ್ತಾನೆ, **ದ್ವೇಷ** = ತಮೋ ಯೋಗ್ಯ ಜೀವರಲ್ಲಿ ದ್ವೇಷವಾಗಲೀ. **ಸ್ನೇಹ** = ಮುಕ್ತಿಯೋಗ್ಯರಲ್ಲಿ ಮಿತ್ರತ್ವವಾಗಲೀ **ಉದಾಸೀನ** = ನಿತ್ಯ ಸಂಸಾರಿಗಳಲ್ಲಿ ಉದಾಸೀನಭಾವವಾಗಲಿ, (ತಟಸ್ಥ

ಭಾವ) **ಇಲ್ಲ** = ಎಂದೆಂದಿಗೂ ಇಲ್ಲ, **ಈ ಶರೀರಗಳೊಳಗೆ** = ತ್ರಿವಿಧ ಜೀವರ ಸ್ವರೂಪ ಹಾಗೂ ಬಾಹ್ಯ ಶರೀರಗಳಲ್ಲಿ **ಅವರ ಉಪಾಸನಗಳಂದದಲಿ** = ಆಯಾಯಾ ಜೀವರ ಉಪಾಸನೆಗನುಗುಣವಾಗಿ, **ಪರಬ್ರಹ್ಮ** = ಗುಣ ಪೂರ್ಣನಾದ ಸರ್ವೋತ್ತಮನಾದ ಶ್ರೀ ಹರಿಯು, **ಫಲವೀವನು** = ಅವರವರ ಸ್ವರೂಪಯೋಗ್ಯತಾನುಸಾರ ಫಲಗಳನ್ನು ಕೊಡುವನು ॥೧೫॥

## ವ್ಯಾಖ್ಯಾನಗಳು

## ೧ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಪರಮಾತ್ಮಗೆ ದ್ವೇಷಾಸೂಯೆಗಳಿಲ್ಲ ಎಂತ ಹೇಳುತಾರೆ.

ಭೇದದಿಂದಯುಕ್ತವಾದ ಅನೇಕ ಪ್ರದೇಶಗಳು ಅವೆ. ಅದರಲ್ಲಿ ಆಕಾಶ ವದೆ. ಉತ್ತಮ ನೀಚವಾಗಿ ಇರುವ ಈ ಆಕಾಶದಲ್ಲಿ ನಾನಾ ವಿಧವಾದ ಭೇದಗಳಿಂದ ಯುಕ್ತಗಳಾದ ಇವುಗಳಲ್ಲಿ ಒಂದಾದಂಥಾ ಆಕಾಶ, ಅಧಿಷ್ಠಾನ ಗಳಾದ ದೇಶಭೇದಗಳಂತೆ ತದಾಕಾರದಿಂದ ಯುಕ್ತವಾಗಿ ಅದೆ. ದೇಶಕ್ಕೆ ಭೇದವೇ ಹೊರ್ತು ಆಕಾಶಕ್ಕೆ ಭೇದವಿಲ್ಲ ಹ್ಯಾಂಗೋ, ಈ ದೇಶ ಆಕಾಶದೋ ಪಾದಿಯಲ್ಲಿ, ದೇಶ ಭೇದಕ್ಕೆ ಸದೃಶರಾದ ಸರ್ವಪ್ರಾಣಿಗಳೆಂಬೋ ಅಧಿಷ್ಠಾನ ಗಳಲ್ಲಿ ಆಕಾಶಕ್ಕೆ ಸದೃಶನಾದ ಶ್ರೀ ವಾಸುದೇವನು ಆಕಾಶದೋಪಾದಿಯಲ್ಲಿ ಆವಾಸನೆನಿಸಿ, ಜಂಗಮ ಜೀವರಲ್ಲಿ ಚರಎಂತಲೂ, ಸ್ಥಾವರಜೀವರಲ್ಲಿ ಅಚರ ಎಂತಲೂ ಈ ಪ್ರಕಾರ ಚರಾಚರಾತ್ಮಕನೆಂಬ ನಾಮದಿಂದ ಕರಸುವನು. ಆಕಾಶದೋಪಾದಿಯಲ್ಲಿ ನಿರ್ಲಿಪ್ತನು, ತ್ರಿವಿಧಜೀವರ ಸ್ವರೂಪಗಳೊಳಗೆ, ಬಾಹ್ಯ ಸ್ಥೂಲದೇಹದೊಳಗೆ, ಈ ಪೂರ್ವೋಕ್ತ ಪ್ರಕಾರ ಆಕಾಶದೋಪಾದಿ ಯಲ್ಲಿ ಸಮಾನನಾಗಿ ಇದ್ದಾನೆ. ತಮೋಯೋಗ್ಯರಲ್ಲಿ ದ್ವೇಷ, ಮುಕ್ತಿ ಯೋಗ್ಯರಲ್ಲಿ ಸ್ನೇಹ, ನಿತ್ಯಸಂಸಾರಿಗಳಲ್ಲಿ ಉದಾಸೀನ ಈ ಮೂರೂ ಪರಮಾತ್ಮಗೆ ಇಲ್ಲ, ಗುಣ ಪೂರ್ಣನಾದ ಸರ್ವೋತ್ತಮನಾದ ಪರಮಾತ್ಮ, ಆಯಾ ತ್ರಿವಿಧ ಜೀವರ ಸ್ವರೂಪ ಯೋಗ್ಯತಾವನ್ನನುಸರಿಸಿ, ಅವರವರ ಉಪಾಸನಾನುಸಾರ, ಸುಖಫಲ ಒಬ್ಬರಿಗೆ (ಸಾತ್ತ್ವಿಕರಿಗೆ), ಮಿಶ್ರಫಲ

ಇನ್ನೊಬ್ಬರಿಗೆ (ರಾಜಸರಿಗೆ), ದುಃಖಫಲ ಮತ್ತೊಬ್ಬರಿಗೆ (ತಾಮಸರಿಗೆ) ಕೊಡತಾನೆ. ದುಷ್ಟಜನ ನಿಗ್ರಹ, ಶಿಷ್ಟಜನ ಪರಿಪಾಲನ ಮಾಡತಕ್ಕ ರಾಜ, ದೋಷಿ ಅಲ್ಲ. ತದ್ವತ್ ಮಹಾರಾಜನಾದ ಪರಮಾತ್ಮ, ನಿರ್ದೋಷಿ ಎಂತ ತಾತ್ಪರ್ಯ ॥೧೫॥

## ೨. ಭಾವ ಪ್ರಕಾಶಿಕೆ

ಎಲ್ಲಾ ಸ್ಥಳಗಳಲ್ಲಿಯೂ ಒಂದೇ ಆಕಾಶವು ವ್ಯಾಪಿಸಿಕೊಂಡಿರುವಂತೆ, ಚರಾಚರಾತ್ಮಕವಾದ ಈ ಪ್ರಪಂಚದ ಸರ್ವಸ್ಥಳಗಳಲ್ಲೂ ಪರಮಾತ್ಮನು ವ್ಯಾಪ್ತನಾದುದರಿಂದ ಸರ್ವಭೂತನಿವಾಸನೆಂದು ಪರಮಾತ್ಮನಿಗೆ ಹೆಸರಾಗಿರುವುದು. ಹೀಗೆ ಚರಾಚರ ಪ್ರಾಣಿಗಳಲ್ಲಿ ತದಾಕಾರನಾಗಿದ್ದು ಆ ಪ್ರಾಣಿಗಳ ಹೆಸರುಗಳನ್ನು ತಾನೇ ಧರಿಸಿರುವನು. ಶರೀರ ಹೊಂದಿದ ಜೀವರಲ್ಲಿ, ದ್ವೇಷ ಮಾಡುವವರೆಂತಲೂ, ಸ್ನೇಹ ಮಾಡುವವರೆಂತಲೂ, ಉದಾಸೀನ ಮಾಡುವವರೆಂತಲೂ ಮೂರು ವಿಧ ಉಪಾಸಕರುಂಟು. ಇವರುಗಳಲ್ಲಿ ಅವರವರು ಮಾಡುವ ಉಪಾಸನೆಗಳನ್ನನುಸರಿಸಿ ಸ್ನೇಹ ಮಾಡುವವರಿಗೆ ಮುಕ್ತಿಯನ್ನೂ, ದ್ವೇಷಿಗಳಿಗೆ ಅಂಧಂತಮಸ್ಸನ್ನೂ, ಉದಾಸೀನ ಮಾಡುವವರಿಗೆ ಮಿಶ್ರ ಲೋಕವನ್ನೂ ಕೊಡಿಸುವನು, ದ್ವೇಷಸ್ನೇಹೋದಾಸೀನಗಳಿಲ್ಲೀಶರೀರ ಗಳೊಳಗೆ ಎಂದು ಪಾಠಾಂತರ ; ಇದರರ್ಥ ಪರಮಾತ್ಮನಿಗೆ ತ್ರಿವಿಧ ಜೀವರ ದೇಹಗಳಲ್ಲಿ ಒಬ್ಬರಲ್ಲಿ ದ್ವೇಷ ಒಬ್ಬರಲ್ಲಿ ಸ್ನೇಹ, ಮತ್ತೊಬ್ಬರಲ್ಲಿ ಉದಾಸೀನ ಹೀಗೆ ವೈಷಮ್ಯವಿರುವುದಿಲ್ಲ. ಎಲ್ಲರಿಗೂ ಅವರವರ ಉಪಾಸನೆಯನ್ನನುಸರಿಸಿ ಫಲಗಳನ್ನು ಕೊಡುವನೆಂಬ ತಾತ್ಪರ್ಯ. ॥೧೫॥

## ೩ ಭಾವದರ್ಪಣ

"ತಂ ಯಥೋಪಾಸತೇ ತಥೈವ ಭವತಿ" ಎಂಬೋ ಶ್ರುತ್ಯನುಸಾರ ಹ್ಯಾಗೆ ಉಪಾಸನೆಯಾಗುವದೋ ಹಾಗೆಯೇ ಫಲವೆಂದು ಹೇಳುತ್ತಾರೆ ದೇಶೇತಿ ॥೧೫॥

## ೪ ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

"ದೇಶ" ಇತಿ ಘಟಾದೇಃ "ಆತ್ಮಾ" ಅಂತರ್ಯಾಮಿ ಉಪಾಸನೇ ಅಂತರ್ಯಾಮಿತ್ವಬುದ್ಧೇಃ ವಾಯೋಃ ಅಕುರ್ವತಃ ಕಲೇಃ ॥೧೫॥

### ಕನ್ನಡಾರ್ಥ

ದೇಶಭೇದ ಎಂದರೆ ಘಟಾದಿ ದೇಶ ಭೇದಗಳಿಂದ ಎಂದು ಅರ್ಥ. "ಆತ್ಮಾ" — ಅಂತರ್ಯಾಮಿ ವಾಯ್ವಂತರ್ಯಾಮಿ ಹರಿಯೆಂದು ಸರ್ವತ್ರದಲ್ಲಿ ಉಪಾಸಿಸಬೇಕು ॥೧೫॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ದೇವರಿಗೆ ವೈಷಮ್ಯವಿಲ್ಲವೆಂಬುದನ್ನು, ಆಕಾಶ ದೃಷ್ಟಾಂತದಿಂದ ತಿಳಿಸುತ್ತಾರೆ, ದೇಶವೆಂದು. ಪ್ರದೇಶ ಭೇದಗಳಲ್ಲಿರುವ ಆಕಾಶವು ಘಟಾದಿ ವಸ್ತುಗಳಿಗೆ ತಕ್ಕಹಾಗೆ ಇರುವಂತೆ, ದೇವರು ಸರ್ವಭೂತ ನಿವಾಸಿ ಎನ್ನಿಸಿ ಕೊಂಡು ಚರಾಚರದಲ್ಲಿ ವ್ಯಾಪ್ತನಾಗಿರುವನು. ತಾಮಸ ಸಾತ್ವಿಕ ರಾಜಸ ವೆಂಬ ತ್ರಿವಿಧ ಜೀವರಲ್ಲೂ ದ್ವೇಷ ಸ್ನೇಹ ಉದಾಸೀನಗಳು ಅವನಿಗಿಲ್ಲ. ತತ್ತತ್ಸ್ವಭಾವ ವ್ಯಕ್ತ ಮಾಡಿ ದ್ವೇಷ ಸ್ನೇಹ ಉದಾಸೀನರೂಪ ಉಪಾಸನೆಗೆ ತಕ್ಕ ಫಲ ಕೊಡುವನು. ಆದ್ದರಿಂದ ಪರಬ್ರಹ್ಮ ಪರಿಪೂರ್ಣನು ॥೧೫॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಆಕಾಶವು ಸರ್ವತ್ರವ್ಯಾಪ್ತವಾಗಿದೆ. ಆದರೆ ದೇಶ ಭೇದದಿಂದ ಯುಕ್ತವಾಗಿದೆ. "ದೇಶ ಇತಿ ಘಟಾದೇಃ"-ಎಂಬ ವಾಕ್ಯಾನುಸಾರ. ಒಂದೇ ಆಕಾಶವು ಬೇರೆ ಬೇರೆ ಪ್ರದೇಶಗಳಲ್ಲಿ ಆಯಾಯಾ ಪ್ರದೇಶಕ್ಕನುಸಾರವಾಗಿ ಇರುವುದು. ಪ್ರದೇಶಗಳು ಪ್ರತ್ಯೇಕ ಪ್ರತ್ಯೇಕವಾಗಿರುವುದರಿಂದ, "ದೇಶ

ಭೇದ" ಎಂದು ಹೇಳಿದ್ದಾರೆ. ಆದರೆ ಸರ್ವತ್ರ ವ್ಯಾಪಿಸಿರುವ ಆಕಾಶತತ್ತ್ವ ಒಂದೇ. ಉದಾಹರಣೆಗೆ ಒಂದೇ ಮನೆಯಲ್ಲಿ ಬೇರೆ ಬೇರೆ ಕೊಠಡಿಗಳಿವೆ. ಅಲ್ಲಿ ವ್ಯಾಪಿಸಿರುವ ಆಕಾಶವು ದೇಶ ಭೇದದಿಂದ ಕೂಡಿದೆ. ಅನೇಕ ಘಟ ಗಳನ್ನು ಸಾಲಾಗಿ ಇಟ್ಟರೆ, ಪ್ರತಿ ಕುಂಭದಲ್ಲಿಯೂ ಪ್ರದೇಶವಿದೆ. ಆ ಗಡಿಗೆ ಗಳನ್ನು ನಾಶಪಡಿಸಿದಾಗ ದೇಶಭೇದ ಯುಕ್ತವಾಗಿರುವ ಪ್ರದೇಶವು ಸರ್ವತ್ರ ವ್ಯಾಪಕವಾದ ಆಕಾಶದಲ್ಲಿ ಸೇರುವುದು.

ಚೇತನ ವರ್ಗದಲ್ಲಿ ಎರಡು ಪ್ರಕಾರ : (೧) ಚರ-ಚಲಿಸುವ ಜಂಗಮ ವಸ್ತುಗಳು (೨) ಅಚರ-ಚಲಿಸದೇ ಚೈತನ್ಯ ಪೂರ್ಣವಾದ ಸ್ಥಾವರಗಳು. (ವೃಕ್ಷ, ಲತಾ, ಗುಲ್ಮ .........ಇತ್ಯಾದಿ) ಚರಾಚರಾತ್ಮಕವಾದ ಸರ್ವ ಪ್ರಾಣಿ ಗಳಲ್ಲಿ ವಾಸುದೇವ ನಾಮಕನಾದ ಶ್ರೀ ಹರಿಯು ಅವಾಸನಾಗಿದ್ದಾನೆ. ಇದರಿಂದ ವಾಸುದೇವನಿಗೆ "ಸರ್ವಭೂತನಿವಾಸಿ"- ಎಂದು ಹೆಸರು. ಈ ಕಾರಣದಿಂದಲೇ "ಸರ್ವಭೂತನಿವಾಸೋऽಸಿ ವಾಸುದೇವ ನಮೋಸ್ತುತೇ"- ಎಂದು ಶ್ರುತಿ ಸಾರುತ್ತಿದೆ. ಸರ್ವಭೂತ ನಿವಾಸಿಯಾದ ಶ್ರೀ ವಾಸುದೇವನು ಚರ ವಸ್ತುಗಳಲ್ಲಿ "ಚರ"ವಾಚ್ಯನಾಗಿಯೂ, "ಅಚರ"ಗಳಲ್ಲಿ ಅಚರನಾಮಕ ನಾಗಿಯೂ ಇದ್ದಾನೆ. (ಚರಾಚರಾತ್ಮಕನೆಂದು ಕರೆಸುವನು) ಅಂದರೆ, ಸರ್ವಭೂತಗಳಲ್ಲಿ ತದಾಕಾರನಾಗಿ, ತತ್ತನ್ನಾಮಕನಾಗಿದ್ದಾನೆ.

ದೇಶಕ್ಕೆ ಭೇದವೇ ಹೊರತು, ಆಕಾಶಕ್ಕಲ್ಲ. ಹಾಗೆಯೇ ವಾಸು ದೇವನು ಸರ್ವತ್ರ ವ್ಯಾಪಕವಾದ ಆಕಾಶ ಸದೃಶ. ಸರ್ವಪ್ರಾಣಿಗಳೂ ಭಿನ್ನ ಭಿನ್ನವಾಗಿರುವುದರಿಂದ, ಆ ಭಿನ್ನಾಧಿಷ್ಠಾನಗಳು ದೇಶಭೇದ ಸದೃಶ. ದೇಶ ಭೇದಗಳಿಂದ ಆಕಾಶವು ಸರ್ವತ್ರ ವ್ಯಾಪಿಸಿರುವಂತೆ, ಬಿಂಬನಾದ ಶ್ರೀ ಹರಿಯು ಸರ್ವಪ್ರಾಣಿಗಳಲ್ಲಿ ವ್ಯಾಪಿಸಿದ್ದಾನೆ.

ಜೀವರಲ್ಲಿ ಸಾತ್ವಿಕರು-ರಾಜಸರು-ತಾಮಸರು ಎಂದು ತ್ರಿವಿಧ. ಸಾತ್ವಿಕರು ಶ್ರೀ ಹರಿಯಲ್ಲಿ ಸ್ವಾಭಾವಿಕವಾದ ಪ್ರೇಮ ರೂಪವಾದ ಭಕ್ತಿ

ಯನ್ನುಳ್ಳವರು. ರಾಜಸರಿಗೆ ಮಿಶ್ರಭಕ್ತಿ ಛಿದ್ರಜ್ಞಾನ. ತಮೋಯೋಗ್ಯರಿಗೆ ಶ್ರೀ ಹರಿಯಲ್ಲಿ ಮತ್ತು ಹರಿ ಭಕ್ತರಲ್ಲಿ ನಿತ್ಯ ದ್ವೇಷ, ಹೀಗೆ ತ್ರಿವಿಧ ಜೀವರ ಸ್ವರೂಪಭೂತವಾದ ಗುಣ ಧರ್ಮಗಳು ಭಿನ್ನ ಭಿನ್ನವಾಗಿವೆ. ಈ ಗುಣ ಅನಾದಿ ಮತ್ತು ನಿತ್ಯ. ಈಶ್ವರ ನಿರ್ಮಿತವಲ್ಲ. ಅವರವರ ಸ್ವಭಾವಕ್ಕನು ಗುಣವಾಗಿ ಉಪಾಸನಾಭೇದ.

"ತಂ ಯಥೋಪಾಸತೇ ತಥೈವ ಭವತಿ"-ಎಂಬ ಶ್ರುತಿ ವಚನಾನುಸಾರ, ಉಪಾಸನಾ ಭೇದದಿಂದ, ಫಲಗಳೂ ಬೇರೆ ಬೇರೆ, ಇದರಿಂದ ಸರ್ವಭೂತ ನಿವಾಸಿಯಾದ ಶ್ರೀ ಹರಿಗೆ ಭೇದಭಾವವಾಗಲೀ, ವೈಷಮ್ಯ ನೈರ್ಘೃಣ್ಯಾದಿ ಗಳಾಗಲೀ ಎಂದೆಂದಿಗೂ ಇಲ್ಲ. ಆಕಾಶದಂತೆ ಸಮಾನನು.

ಸಾತ್ವಿಕರಲ್ಲಿ ಸ್ನೇಹ ಭಾವವಾಗಲೀ, ರಾಜಸರಲ್ಲಿ ಉದಾಸೀನವಾಗಲೀ, ತಾಮಸರಲ್ಲಿ ದ್ವೇಷವಾಗಲೀ ಇಲ್ಲ. ಇವು ದೋಷಪೂರ್ಣರಾದ ಜೀವರ ಲಕ್ಷಣವು. ಶ್ರೀ ಹರಿಯು ನಿರ್ದೋಷಿಯಾದ್ದರಿಂದ, ಈ ದೋಷಗಳಿಂದ ವಿದೂರನು. ಆಯಾಯಾ ಜೀವರ ಸಾಧನದೇಹಗಳಲ್ಲಿ ತಾನು ವ್ಯಾಪ್ತ ನಾಗಿದ್ದು, ಅವರವರ ಸ್ವಭಾವ, ಅನಾದಿ ಕರ್ಮಾನುಸಾರ ಕ್ರಿಯೆಗಳನ್ನು ದೇಹಗತ ಇಂದ್ರಿಯಗಳ ದ್ವಾರಾ ಮಾಡಿ ಮಾಡಿಸುತ್ತಾ, ಸಾತ್ವಿಕರಿಗೆ ನಿತ್ಯಾ ನಂದ ರೂಪವಾದ ಮುಕ್ತಿ ಫಲವನ್ನು, ರಾಜಸರಿಗೆ ಮಿಶ್ರಗತಿಯುಕ್ತವಾದ ಸಾಂತಾನಿಕ ಲೋಕಗಳನ್ನು (ಸ್ವರ್ಗ-ಭೂ-ನಿಲಯ ಪ್ರಚುರರು) ಮತ್ತು ತಾಮಸರಿಗೆ ನಿತ್ಯ ದುಃಖವಾದ ಅಂಧತಮಸ್ಸನ್ನು ಅವರವರ ಉಪಾಸನಾ ಕ್ರಮದಂತೆ ಕೊಡುವ ಶ್ರೀ ಹರಿಗೆ ಸ್ನೇಹ-ದ್ವೇಷ-ಉದಾಸೀನಗಳಿಲ್ಲವೆಂದು ಜೀವ ಜಡದಿಂದ ಅತ್ಯಂತ ವಿಲಕ್ಷಣನಾದ ಜೀವಾಂತರ್ಯಾಮಿಯ ಮಹಿಮಾ ತಿಶಯವನ್ನು ತಿಳಿಸಿದ್ದಾರೆ. ॥೧೫॥

## ಪದ್ಯ-೧೬

**ಮೂಲ :**

***ಸಂಚಿತಾಗಾಮಿಗಳ ಕರ್ಮ ವಿ ।**
**ರಿಂಚಿಜನಕನ ಬಿಡದೆ ಭಜಿಸಲು ।**
**ಮುಂಚಿನಂದದಲಿರದೆ ಕ್ರಮದಿಂ ನಾಶ ಐದುವುವು॥**
**ವಂಚಿಸುವಜನರೊಲ್ಲ ಶ್ರೀವ ।**
**ತ್ಸಾಂಚಿತ ಸುಸದ್ವಕ್ಷ ತಾ ನಿ ।**
**ಷ್ಕಿಂಚನಜನಪ್ರಿಯ ಮಿಂಚಿನಂದದಿ**
**ಪೊಳೆವಹೃದಂಬರದಿ ಪುರುಷೇಶ ॥ ॥೧೬॥**

*ಪ್ರಸಕ್ತ ೧೬ನೆಯ ಪದ್ಯವು ಬಹು ಪಾಠಾಂತರಗಳನ್ನು ಹೊಂದಿದೆ. ಪ್ರಾಚೀನ ಮೂಲಪಹಿಗಳಿಂದ ಮೇಲೆ ನಿರೂಪಿಸಿದ ಪದ್ಯವು ಬರೆಯಲ್ಪಟ್ಟಿದೆ.

**ಅವತರಣಿಕೆ:**

ಸಂಚಿತಾಗಾಮಿ ಕರ್ಮಗಳನ್ನು ಪರಿಹರಿಸಿ, ಭಕ್ತರ ಹೃದಯಾಕಾಶದಲ್ಲಿ ಮಿಂಚಿನಂದದಿ ಪೊಳೆವ ಪುರುಷೇಶನ ವಿಚಾರ ತಿಳಿಸುತ್ತಾರೆ ॥೧೬॥

**ಪ್ರತಿಪದಾರ್ಥ:**

**ವಿರಿಂಚಿ ಜನಕನ**=ಬ್ರಹ್ಮದೇವರ ಪಿತನಾದ ವಾಸುದೇವ ನಾಮಕನಾದ ಶ್ರೀ ಹರಿಯನ್ನು, **ಬಿಡದೆ ಭಜಿಸಲು**=ಅನವರತ ಧ್ಯಾನ ಮಾಡಿದರೆ, **ಸಂಚಿತಾಗಾಮಿಗಳ ಕರ್ಮ**=ಹಿಂದಿನ ಜನ್ಮಗಳಲ್ಲಿ ಮಾಡಿದ, ಅನುಭವಿಸದಿರುವ ಶೇಷಕರ್ಮಗಳು ಸಂಚಿತಗಳು, ಮುಂದಿನ ಜನ್ಮಗಳಲ್ಲಿ ಸಂಚಿತ ಕರ್ಮಗಳ ಫಲವಾಗಿ ಬರುವ ಆಗಾಮಿ ಕರ್ಮಗಳು, ಇವುಗಳು, **ಮುಂಚಿನಂದದಲಿ ಇರದೆ**=ಪೂರ್ವ ಸ್ಥಿತಿಯಲ್ಲಿರದಂತೆ (ಮೂಲ ಸಹಿತ ನಿಶ್ಶೇಷವಾಗಿ)

**ಕ್ರಮದಿಂ** = ಪ್ರತಿ ಜನ್ಮಜನ್ಮಗಗಳಲ್ಲಿ **ನಾಶಐದುವುವು** = ಪರಿಹಾರವಾಗುವುವು, **ವಂಚಿಸುವ** = ಆತ್ಮ ವಂಚನೆ ಮಾಡಿಕೊಳ್ಳುವ (ಶ್ರೀ ಹರಿಯೇ ಸರ್ವಕ್ಕೂ ಕರ್ತನಾಗಿದ್ದರೂ, ಅವನ ಕ್ರಿಯಾ ವಿಶೇಷಗಳನ್ನು ಮುಚ್ಚಿಟ್ಟು, ತಾನೇ ಕರ್ತೃವೆಂಬ ದುರಭಿಮಾನಿಯು) **ಜನರೊಲ್ಲ** ಮಂದಿಯನ್ನು ಶ್ರೀ ಹರಿಯು ಅನುಗ್ರಹಿಸುವುದಿಲ್ಲ, **ಶ್ರೀವತ್ಸಾಂಚಿತ** = ಶ್ರೀ ರಮಾದೇವಿಯೇ ಶ್ರೀ ಹರಿಯ ವಕ್ಷ ಸ್ಥಳದಲ್ಲಿ ಶ್ರೀ ವತ್ಸವೆಂಬ ಲಾಂಛನದಿಂದ ಶೋಭಿಸುತ್ತಿದ್ದಾಳೆ. **ಸುಸದ್ವಕ್ಷ** = ಅಪ್ರಾಕೃತವಾದ ಶ್ರೀ ಲಕ್ಷ್ಮೀನಿವಾಸವೆನಿಪ ವಕ್ಷಸ್ಥಳವುಳ್ಳವನು, **ತಾ ನಿಷ್ಕಿಂಚನಪ್ರಿಯ** = ಸ್ವಯಂ ದೇವತೆಗಳಿಗೆ ಅತ್ಯಂತ ಪ್ರಿಯನಾದವನು, **ಹೃದಯಾಂಬರ** = ಸಜ್ಜನರ ಹೃದಯಾಕಾಶದಲ್ಲಿ **ಪುರುಷೇಶ** = ಕ್ಷರಾಕ್ಷರ ಪುರುಷರಿಗೆ ಸ್ವಾಮಿಯಾದ ಶ್ರೀ ಹರಿಯು, **ಮಿಂಚಿನಂದದಿ ಪೊಳೆವ** _ ಮಿಂಚಿನ ಕಾಂತಿಯಂತೆ ಪ್ರತ್ಯಕ್ಷನಾಗುವನು ॥೧೬॥

## ವ್ಯಾಖ್ಯಾನಗಳು

### ೧ ಸಂಕರ್ಷಣ ಒಡೆಯರ ವ್ಯಾಖ್ಯಾನ

ಸಂಚಿತಾಗಾಮಿಕರ್ಮ ನಾಶವಾಗೋ ಮಾರ್ಗ ಹೇಳತಾರೆ. ಬಡವರಾದ ತನ್ನ ಭಕ್ತ ಜನರಲ್ಲಿ ಪ್ರೀತಿ ವಿಷಯವಾದ ಬ್ರಹ್ಮದೇವನ ತಂದಿಯಾದ ವಾಸುದೇವನ ಹೃದಯಾಕಾಶದಲ್ಲಿ ವಾಸನಾಪ್ರತಿಮಾನ್ನ ನಿಲ್ಲಿಸೋವರಾಗಿರಿ (ಎಂತ ಸಂಬೋಧನ), ನಿಲ್ಲಿಸಿ, ಮನಸ್ಸು ಪ್ರಾಕೃತ ವಿಷಯಭೋಗಾದಿಗಳಲ್ಲಿ ಸಂಚಾರ ಮಾಡದಂತೆ ತದೇಕ ಧ್ಯಾನಪರರಾಗಿ, ಏಕಚಿತ್ತರಾಗಿ ಬಿಡಧಾಂಗೆ ಧ್ಯಾನ ಮಾಡಲು, ವಿದ್ಯಮಾನ ಜನ್ಮದಲ್ಲಿ ಅನುಭವ ಮಾಡತಕ್ಕ ಕರ್ಮ, ಹಿಂದೆ ಏಳು ಜನ್ಮದೊಳಗೆ ಈ ಮಧ್ಯದಲ್ಲಿ ಮಾಡಿದ ಪಾಪವೋ, ಪುಣ್ಯವೋ ಅದರನ್ನ ಈ ಜನ್ಮದಲ್ಲಿ ಕೊಟ್ಟು, ಅದು ಇಂಥಾ ಜನ್ಮದ್ದು ಎಂತ ತಿಳಿಸದೇ ಇದ್ದು, ಹಿಂದೆ ಏಳುಜನ್ಮದ ಕರ್ಮದಾವದದೆ ಆದು ಆಗಾಮಿ ಎಂತ ಕರಸತದೆ. ಅದಕ್ಕೆ ಮ್ಯಾಲೆ ಇರತಕ್ಕ ಕರ್ಮ ಸಂಚಿತಕರ್ಮ, ಇದು ಅಪರೋಕ್ಷಾತ್ಪೂರ್ವಕಾಲೀನವಾದದ್ದು. ಪ್ರಾರಬ್ಧಕರ್ಮ, ತತ್ಕಾಲದಲ್ಲಿ ಭೋಗ ಮಾಡತಾ ಇರತಕ್ಕ ಕರ್ಮ.

ಅಪರೋಕ್ಷಾನಂತರ ಸಂಚಿತಾಗಾಮಿಪ್ರಾರಬ್ಧ ಕರ್ಮಗಳು ಎಂಥಾವೆಂದರೆ, ಅಪರೋಕ್ಷಕಾಲಕ್ಕೂ ಭೋಗಮಾಡತಾ ಇರತಕ್ಕಕರ್ಮಗಳು ಪ್ರಾರಬ್ಧಕರ್ಮಗಳು ಎಂತ ಕರಸೋವಾಗತವೆ. ಈ ಪ್ರಾರಬ್ಧ ಎಂಬುದು ನಾಶವಾಗಲಾರದು. ಭೋಗಿಸೇ ತೀರಬೇಕು. ತದನ್ಯ ಆಗಾಮಿ ಎನತಕ್ಕ ಕರ್ಮವೆಂಬ ಏಳು ಜನ್ಮದ ಕರ್ಮ ನಿರ್ಲೇಪ ಎಂದರೆ ಭೋಗಕ್ಕೆ ಬೇದು ನಿರಭಿಮಾನದಿಂದ ಪದ್ಮಪತ್ರಗತ ಜಲವತ್ ಸ್ಪರ್ಶವಾಗಿ, ನಿರ್ಲೇಪವಾಗಿ ಭೋಗಿಸೋದು. ಅತ ಏವ ಆಗಾಮಿ ನಿರ್ಲೇಪ ಎಂಬುದು. ಧ್ಯಾನೋಪಾಸನಕ್ಕೆ ಪೂರ್ವದಲ್ಲಿ ಇದ್ದದ್ದು ಎಷ್ಟು ಮಾತ್ರ ರಾಶೀಭೂತವಾಗಿತ್ತೋ ಅಷ್ಟು ರಾಶಿ ಇರದೆ ಧ್ಯಾನೋ ಪಾಸನ ಬಲದಿಂದ ಹ್ಯಾಂಗೆ ಹ್ಯಾಂಗೆ ಅಧಿಕವಾಗತದೋ ಹಾಂಗೆ ಹಾಂಗೆ ಎಲ್ಲಾ ಅಧಿಕವಾಗತಾ ಆ ಕ್ರಮದಿಂದ ನಾಶ ಐದೋವಾಗ ತವೆ. ಹೃದಯಾಕಾಶದಲ್ಲಿ ಧ್ಯಾನೋಪಾಸನ ಮಾಡತಕ್ಕ ಪಾಸನಾ ಪ್ರತೀಕಾಂತರ್ಗತ ಚಿದಾನಂದನಾದ ಕ್ಷರಾಕ್ಷರ ಪುರುಷರಿಗೆ ಸ್ವಾಮಿಯಾದ ಪರಮಾತ್ಮ ಮಿಂಚಿನ ಕಾಂತಿಯೋಪಾದಿಯಲ್ಲಿ ಕಾಂತಿಯುಕ್ತವಾಗಿ ಪ್ರತ್ಯಕ್ಷ ನಾಗುವ. ಅಗ್ಗ ಸಂಚಿತಾಗಾಮ್ಯಗಳು ನಿಶ್ಶೇಷವಾಗಿ ಪರಿಹಾರ. ಪ್ರಾರಬ್ಧ ಮಾತ್ರ ಪರಿಹಾರವಾಗದೆ ಭೋಗಿಸಬೇಕಾಗಿ ಉಳಿದಿರೋದಾಗತದೆ.

**ವಿಶೇಷಾರ್ಥ :** ಮತ್ತು ಏಳು ಜನ್ಮದ ಅಗಾಮಿ, ಒಂದು ಪ್ರಾರಬ ಕರ್ಮ ಭೋಗಿಸೋಕಾಲದಲ್ಲಿ ಆ ಕರ್ಮದಿಂದ ಅನೇಕ ಕರ್ಮಗಳು ಉತ್ಪತ್ತಿ ಆಗಿ ಮುಂದೆ ಭೋಗಿಸತಕ್ಕದ್ದಾಗಿ ಇರತವೆ. ಅವು ಸ್ಪರ್ಶವಿಲ್ಲದೆ ನಿರ್ಲೇಪವಾಗಿ ಹೋಗತವೆ. ಅಪರೋಕ್ಷಾತ್ಪೂರ್ವಕಾಲೀನ ಕರ್ಮ ಸಂಚಿತಕರ್ಮವೆನಿಸತದೆ ಅಪರೋಕ್ಷವಾಗಿ ಭೋಗಿಸತಾ ಇರುವ ಕರ್ಮ ಪಾರಬ್ಧ ಕರ್ಮವೆನಿಸತದೆ. ಇದರಿಂದ ಉತ್ಪನ್ನವಾದ ಕರ್ಮ ಆಗಾಮಿ ಎಂತ ಕರಸತದೆ. ಇದೇ ಸ್ಪರ್ಶ ವಾಗದೇ ನಿರ್ಲೇಪವಾಗತಕ್ಕ ಕರ್ಮ. ಸಂಚಿತಕ್ಕೆ ನಾಶ ಎಂದರೆ ಭೋಗಕ್ಕೆ ಬಾರದೇನೇ ನಷ್ಟವಾಗತದೆ. ಈ ಸಂಚಿತಾಗಾಮಿಕರ್ಮಗಳ ಉತ್ಪತ್ತಿ ಹ್ಯಾಂಗೆಂದರೆ, ಅನಾದಿಕರ್ಮವೆಂಬ ಬೀಜ ಸೃಷ್ಟಿಕಾಲದಲ್ಲಿ ಅಂಕುರವಾಗಿ ವೃಕ್ಷ

ವಾಯಿತು. ಈ ವೃಕ್ಷಕ್ಕೆ ಶಾಖೆಗಳು ಮೂರು. ಅಂಕುರ ಆಗಾಮಿ, ಸಂಚಿತ, ಪ್ರಾರಬ್ಧ. ಈ ಶಾಖಾತ್ರಯದಲ್ಲಿ ಫಲಗಳ ಕ್ರಮದಾವವೆಂದರೆ, ಆಗಾಮಿಕರ್ಮಶಾಖಾದಲ್ಲಿ ಲಕ್ಷಫಲವದೆ. ಸಂಚಿತಕರ್ಮಶಾಖಾದಲ್ಲಿ ಲಕ್ಷಫಲ ವದೆ. ಪ್ರಾರಬ್ಧಕರ್ಮಶಾಖಾದಲ್ಲಿ ಹತ್ತು ಫಲವದೆ. ಆದಿಯಲ್ಲಿ ಜೀವನಾದವ, ಆಗಾಮಿಕರ್ಮವೆಂಬ ಶಾಖಾದಲ್ಲಿ ಸಂಚಾರ ಮಾಡತಾ, ತದ್ಗತ ಫಲಗಳ ಭೋಗಿಸತಾ ಇರ್ತಾನೆ. ಮಧ್ಯೆ ಅಪರೋಕ್ಷವಾಗತದೆ. ಅಗ್ಗ ಭೋಗಿಸತಾ ಇರತಕ್ಕ ಫಲ ಅನುಭವಿಸೇ ತೀರಬೇಕು. ಆ ಶಾಖಾದಲ್ಲಿ ಅವಶಿಷ್ಟ ಇರುವ ಫಲಗಳು ಆಗಾಮಿ ಎಂತ ಕರಸತವೆ. ಇವು ನಿರ್ಲೇಪ. ಸಂಚಿತಶಾಖಾ ಫಲಗಳು ನಾಶ. ಪ್ರಾರಬ್ಧಶಾಖಾಗತ ಹತ್ತು ಫಲಗಳ ಭೋಗ ಮಾಡ ಬೇಕು. ಪೂರ್ವೋಕ್ತ ಸಂಚಿತಾಗಾಮಿ ಶಾಖಾದ್ವಯಗಳಲ್ಲಿ ಅನೇಕ ಅಂತ ರಾಂತರ ಶಾಖಾಫಲಭೋಗಗಳು ಅವೆ. ಆಗಾಮಿಶಾಖಾದಲ್ಲೂ, ಸಂಚಿತ ಶಾಖಾದಲ್ಲೂ, ತ್ರಿವಿಧ ಪ್ರಕಾರ ಶಾಖಾಗಳುಂಟು. ಫಲಭೋಗಗಳೂ ಉಂಟು. ಇದರ ಪ್ರಮಾಣ ಬಾದರಾಯಣಕೃತ ತತ್ತ್ವಸಾರದಿಂದ ತಿಳೀಬೇಕು. ॥೧೬॥

## ೨ ಭಾವಪ್ರಕಾಶಿಕೆ

"ಪ್ರಾರಬ್ಧ ಕರ್ಮಣೋ ಅನ್ಯಸ್ಯ ಜ್ಞಾನಾದೇವ ಪರಿಕ್ಷಯಃ" ಎಂಬ ಅಣುಭಾಷ್ಯವಾಕ್ಯದಲ್ಲಿ, ಪ್ರಾರಬ್ಧಕರ್ಮ ಒಂದು ಹೊರತು, ಮಿಕ್ಕ ಆಗಾಮಿ ಸಂಚಿತಗಳೆಂಬ ಎರಡು ಕರ್ಮಗಳೂ ಅಪರೋಕ್ಷ ಜ್ಞಾನವಾದ ಕೂಡಲೇ ನಾಶವಾಗುವುವು. ಪ್ರಾರಬ್ಧವುಮಾತ್ರ ಅನುಭವಿಸೇ ಆಗಬೇಕೆಂದು ಹೇಳಿರುವರು. ಮತ್ತು "ಭಿದ್ಯತೇ ಹೃದಯಗ್ರಂಥಿ, ಛಿದ್ಯಂತೇ ಸರ್ವ ಸಂಶಯಾಃ । ಕ್ಷೀಯಂತೇಚಾಸ್ಯ ಕರ್ಮಾಣಿ ದೃಷ್ಟ ಏವಾತ್ಮಾನೀಶ್ವರ" ಎಂಬ ಭಾಗವತ ಪ್ರಥಮ ಸ್ಕಂಧದ ವಾಕ್ಯಾನುಸಾರ ಅಪರೋಕ್ಷದಲ್ಲಿ ಪರಮಾತ್ಮನನ್ನು ಕಂಡ ಕೂಡಲೇ ಮನಃ ಕಲ್ಮಶವು ಪರಿಹಾರವಾಗುವುದು. ಆದರಿಂದ ಸಕಲವಾದ ಸಂಶಯಗಳೂ ಪರಿಹಾರವಾಗುವುವು ಮತ್ತು ಇವನ ಆಗಾಮಿ ಸಂಚಯ ಕರ್ಮಗಳೆಲ್ಲವೂ ನಾಶ ಹೊಂದುವುವು, ಎಂದು ನಿಶ್ಚಯವಾಗುವುದು ಈ ಅರ್ಥವನ್ನೇ ಇಲ್ಲಿ ಹೇಳಿರುತ್ತಾರೆ. ಪರಮಾತ್ಮನನ್ನೇ ಬಿಡದೇ ಭಜಿಸುತ್ತಾ,

ಮನಸ್ಸನ್ನು ನಿಶ್ಚಲವಾಗಿ ಪರಮಾತ್ಮನಲ್ಲಿ ನಿಲ್ಲಿಸಿದರೆ, ತನ್ನನ್ನು ನಂಬಿದ ಜನರಲ್ಲಿ ಪ್ರೀತಿಯನ್ನು ಮಾಡುವ ಪರಮಾತ್ಮನು, ಹೃದಯಾಕಾಶದಲ್ಲಿ ಮಿಂಚಿನಂತೆ ಪ್ರಕಾಶಮಾನನಾಗಿ ಗೋಚರನಾಗುವನು. ಪರಮಾತ್ಮನನ್ನು ಕಂಡ ಕೂಡಲೇ ಇವನ ಆಗಾಮಿ ಸಂಚಿತಗಳೆಂಬ ಎರಡು ವಿಧವಾದ ಕರ್ಮಗಳು ನಾಶವಾಗಿ ಮುಕ್ತಿಯಲ್ಲಿ ಪರಮ ಸುಖವನ್ನು ಹೊಂದುವನೆಂಬ ತಾತ್ಪರ್ಯ. ॥೧೬॥

## ೩ ಭಾವ ದರ್ಪಣ

"ಭಿದ್ಯತೇ ಹೃದಯಗ್ರಂಥಿ ಶ್ಛಿದ್ಯಂತೇ ಸರ್ವಸಂಶಯಾಃ । ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾಪರೇ" ಎಂಬುದಾಗಿ ಭಾಗವತೋಕ್ತಿ ಇರೋಣದರಿಂದ ಸಚ್ಚಿದಾನಂದಾತ್ಮರೂಪಿಯಾದ ಪರಬ್ರಹ್ಮನು, ಸ್ವಹೃದಯದಲ್ಲಿ ಹೊಳೆದನೆಂದರೆ ಸಂಚಿತಾಗಾಮಿನಾಶವಾಗಿಹೋಗುತ್ತವೆಂದು ದಾರ್ಢ್ಯವಾಗಿ ಹೇಳುತ್ತಾರೆ, ಸಂಚಿತೇತಿ. "ಓಂ ತದಧಿಗಮ ಉತ್ತರ ಪೂರ್ವಾಘಯೋರಶ್ಲೇಷವಿನಾಶೌ ತದ್ವ್ಯಪದೇಶಾತ್ ಓಂ" ಇತಿ ಬ್ರಹ್ಮಸೂತ್ರಾತ್ । "ಯಥೈಷಿಕಾತೂಲಂ ತದ್ಯಥಾ ಪುಷ್ಕರಪಲಾಶ" ಇತಿ ಶ್ರುತೇಶ್ಚ ॥ ॥೧೬॥

## ೪ ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

"ಸಂಚಿತ". ಇತಿ॥ ತದಧಿಗಮನಯಾರ್ಥಃ ॥

"ಶ್ರೀವತ್ಸಾಂಚಿತ ಸದ್ವಕ್ಷ" —ಓಂ॥ ಮೇಧಾ ಅಸೃಕ್ಷತ ಸಮಿಂದ್ರೋ ರಾಯೋ ಬೃಹತೀರಧೂನುತ ಸಂಕ್ಷೋಣಿ ಸಮು ಸೂರ್ಯಂ ಸಂ ಶುಕ್ರಾಸಃ ಶುಚಯಃ ಸಂಗವಾಶಿರಃ ॥ ॥ಓಂ॥ ಶ್ರಿಯಂ ಕಾಂತಿಂಚ ವಹತಿ ಇತಿ ಶ್ರೀವತ್ಸಃ ಸೂರ್ಯಃ॥ ತಂ ವಕ್ಷತಿ ಚಾಲಯತಿ ಇತಿ ಸರ್ವಾಶ್ರಯಾ ಶ್ರೀಃ (ಭೂಃ) । ತೇಜೋ ವಹಾ ಸೂರಃ॥ ತೌ ಕಂಪಯತಿ ಇತಿ ॥ ಶ್ರೀವತ್ಸಧರೋ ವಾ ॥೧೬॥

## ಕನ್ನಡಾರ್ಥ

ಈ ಪದ್ಯ "ತದಧಿಗಮ" ಅಧಿಕರಣದ ಅರ್ಥವನ್ನು ವಿವರಿಸುತ್ತದೆ. (ಬ್ರ. ಸೂ. (೪-೧-೧೩). ಶ್ರೀ-ಕಾಂತಿಯನ್ನು ಧರಿಸಿರುವವನು ಸೂರ್ಯ. ಅವನನ್ನು ಪ್ರಚಾಲಿಸುವವಳು, ಸರ್ವಾಶ್ರಯಳಾದ ರಮಾದೇವಿ, ಆಕೆಯನ್ನೂ ಸೂರ್ಯನನ್ನೂ ನಡೆಯಿಸತಕ್ಕವನು, ಅಥವಾ ಶ್ರೀವತ್ಸ ಲಕ್ಷಣ ಉಳ್ಳವನು ಎಂದು 'ಶ್ರೀ ವತ್ಸ' ಎಂಬ ಪದಕ್ಕೆ ಅರ್ಥವನ್ನು ತಿಳಿಯಬೇಕು. ॥೧೬॥

## ಜ ಶ್ರೀ ಗುರು ಹೃದಯ ಪ್ರಕಾಶಿಕೆ

ಉಪಾಸನೆಗೆ ತಕ್ಕ ಫಲವಾದ್ದರಿಂದಲೇ ಸದುಪಾಸಕರಿಗೆ ದೇವರ ಪ್ರತ್ಯಕ್ಷಾನಂತರ ಪ್ರಾರಬ್ಧ ಮಾತ್ರ ಉಳಿವುದೆಂದು ತಿಳಿಸುತ್ತಾರೆ, ಸಂಚಿತ ವೆಂದು. ಕ್ಷರಾಕ್ಷರವೆಂಬ ಬ್ರಹ್ಮಾದಿ ಜೀವರಿಗೆ, ಶ್ರೀದೇವಿಗೂ ಸಹ ಉತ್ತಮ ನಾದ್ದರಿಂದ ಪುರುಷೋತ್ತಮನೆಂಬ ದೇವರು, ಮನುಷ್ಯೋತ್ತಮರಿಗೆ, ಮಿಂಚುವ ವರ್ಣದಂತೆ ಅಪ್ರಾಕೃತ ಸ್ವರ್ಣವರ್ಣದಿಂದ ಹೃದಯಾಕಾಶದಲ್ಲಿ ಶ್ರೀಹರಿ ಪ್ರಕಾಶಿಸಿ ಪ್ರತ್ಯಕ್ಷವಾಗಲು ಬ್ರಹ್ಮಜನಕನಾದ ಆ ದೇವರನ್ನು, ಸಚ್ಚಿದಾನಂದ ಅತ್ಮನೆಂಬ ನಾಲಕ್ಕು ಗುಣಗಳಿಂದ ಉಪಾಸನೆಯನ್ನು ಮಾಡು ತ್ತಿರಲಾಗಿ, ಸಂಚಿತವೆಂಬ ಜನ್ಮಾಂತರ ಕರ್ಮಬಂಧಗಳು, ಆಗಾಮಿ ಎಂಬ ಮುಂದಲ ಜನ್ಮಗಳ ಕರ್ಮಬಂಧ ಸಹ ತಪ್ಪಿ ಹೋಗುವುವು. ಪ್ರಾರಬ್ಧವೆಂಬ ಅನುಭವಿಸತಕ್ಕ ಕರ್ಮಫಲ ಮಾತ್ರ ಉಳಿಯುವುದೆಂದು ಅರ್ಥಾತ್ ಸಿದ್ಧ. ನಿಷ್ಕಿಂಚನರೆಂಬ ಇತರಾಸಕ್ತಿ ಬಿಟ್ಟವರಲ್ಲಿ ಪ್ರೀತಿಯುಳ್ಳ, ಶ್ರೀವತ್ಸವೆಂಬ ಹೃದಯಲಾಂಛನವುಳ್ಳ ಶ್ರೀ ಹರಿಯು, ವಂಚಿಸುವ ಜನರೊಲ್ಲ, ಎಂದರೆ, ಜೀವಾಭೇದ ಮೊದಲಾದ ನವವಿಧ ದ್ವೇಷ ಸ್ವಭಾವ ವಂಚನೆಯುಳ್ಳ ಜೀವರಿಗೆ ಸಜ್ಜನರಿಗೊಲಿದಂತೆ ವಲಿಯಲೊಲ್ಲನೆಂದರ್ಥ. **ಪ್ರಾರಬ್ಧಕರ್ಮಣೋಸ್ಯಸ್ಯ ಜ್ಞಾನಾದೇವ ಪರಿಕ್ಷಯಃ** ಎಂಬ ಅಣು ಭಾಷ್ಯಾರ್ಥ ವಿವರಿಸಿತು ॥೧೬॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಸೂಕ್ಷ್ಮ ಸೃಷ್ಟಿಯಲ್ಲಿ ಮೂಲನಾರಾಯಣನು ವಾಸುದೇವ ನಾಮಕನಾಗಿ ಪ್ರಕಟನಾದನು. ಆಗ ಶ್ರೀ ಲಕ್ಷ್ಮೀದೇವಿಯು ಮಾಯಾನಾಮಕಳಾದಳು. ವಾಸುದೇವನಿಂದ ಮಾಯಾ ದೇವಿಯಲ್ಲಿ ಜ್ಯೇಷ್ಠಪುತ್ರರಾಗಿ ಸೃಷ್ಟರಾದವರೇ ಚತುರ್ಮುಖಬ್ರಹ್ಮದೇವರು. ಜ್ಯೇಷ್ಠಪುತ್ರರಾದ್ದರಿಂದ ಬ್ರಹ್ಮದೇವರಿಗೆ "ವಿರಿಂಚಿ" ಎಂದು ಹೆಸರು.

ವಿರಿಂಚಿಜನಕನಾದ ವಾಸುದೇವನಾಮಕ ಶ್ರೀ ಪರಮಾತ್ಮನನ್ನು ಎಡಬಿಡದೆ ಭಜಿಸುತ್ತಿರುವ ಏಕಾಂತ ಭಕ್ತರ ಸಂಚಿತ ಮತ್ತು ಆಗಾಮಿಗಳೆಂಬ ಕರ್ಮಗಳು ನಾಶವನ್ನೈದುವುವು. ಸೃಷ್ಟಿ ಕಾಲದಲ್ಲಿ ಅನಾದಿಕರ್ಮದ ಬೀಜವು ಅಂಕುರಿಸಿ, ಕರ್ಮವೃಕ್ಷವಾಯಿತು ಅದಕ್ಕೆ ಮೂರು ಶಾಖಾಗಳು (೧) ಸಂಚಿತ (೨) ಆಗಾಮಿ ಮತ್ತು (೩) ಪ್ರಾರಬ್ಧ ಎಂದು.

**ಸಂಚಿತಕರ್ಮ** — ಹಿಂದಿನ ಜನ್ಮಗಳಲ್ಲಿ ಮಾಡಿದ ಪುಣ್ಯ-ಮಿಶ್ರ-ಪಾಪ ರೂಪವಾದ ಕರ್ಮರಾಶಿಗಳು "ಸಂಚಿತಕರ್ಮ"ವೆನಿಸುವುವು "ಸಂಚಿತ"- ಎಂದರೆ ಕೂಡಿಡಲ್ಪಟ್ಟ ಅಥವಾ ಸಂಗ್ರಹವಾದ ಎಂದರ್ಥ. ಒಂದು ಜನ್ಮ ಕಾಲದಲ್ಲಿ ಜೀವನು ಮಾಡುವ ಕರ್ಮರಾಶಿಯನ್ನು ಪೂರ್ತಿಯಾಗಿ ಭೋಗಿಸಲು ಶಕ್ಯವಿಲ್ಲ. ಪ್ರತಿಕ್ಷಣಕ್ಕೂ ಐದು ಜನ್ಮಗಳನ್ನು ಎತ್ತುವುದಕ್ಕೆ ಕಾರಣವಾದ ಕರ್ಮಗಳನ್ನು ಜೀವನು ಮಾಡುತ್ತಾನೆಂದು ಶಾಸ್ತ್ರವಿಧಿ, ಇನ್ನು ಒಂದು ಜನ್ಮದ ಅವಧಿಯಲ್ಲಿ ಕೃತ ಕರ್ಮಗಳನ್ನು ಪೂರ್ಣವಾಗಿ ಭೋಗಿಸಲು ಸಾಧ್ಯವೇ ?

**ಆಗಾಮಿಕರ್ಮ** — ಮುಂದಿನ ಜನ್ಮಗಳಲ್ಲಿ ಭೋಗಿಸಬೇಕಾದ ಕರ್ಮ ರಾಶಿಗಳಿಗೆ "ಆಗಾಮಿ" ಎಂದು ಹೆಸರು. ಅಂದರೆ "ಮುಂದೆ ಬರುವುದು"- ಎಂದರ್ಥ. ಹಿಂದಿನ ಜನ್ಮದಲ್ಲಿ ಭೋಗಿಸದೇ ಇರುವ ಅವಶಿಷ್ಟರೂಪದಲ್ಲಿರುವ ಕರ್ಮವು ಮುಂದಿನ ಜನ್ಮಕ್ಕೆ ಕಾರಣವಾಗಿ ಆಗಾಮಿ ಎನಿಸುವುದು. ಸೃಷ್ಟಿಗೆ ಬಂದ ನಂತರ, ಜೀವನು ಸಂಚಿತ ಆಗಾಮಿಗಳನ್ನು ಅನುಭವಿಸುತ್ತಾ ಜನ್ಮಾಂತರಗಳನ್ನು ಹೊಂದುವನು. ತನ್ಮಧ್ಯೆ ಶ್ರೀ ಹರಿಯ ಪರಮ ಪ್ರಸಾದ ದಿಂದ ಅಪರೋಕ್ಷ ಜ್ಞಾನವುಂಟಾಗುವುದು. ಬಿಂಬಾಪರೋಕ್ಷವಾದ ಕೂಡಲೇ ಬಿಂಬನ ಕೃಪಾ ಕಟಾಕ್ಷ ವೀಕ್ಷಣದಿಂದ ಸಂಚಿತ ಕರ್ಮಗಳೆಲ್ಲವೂ ಹತ್ತಿಯ

ರಾಶಿಗೆ ಕಿಡಿ ತಗುಲಿದಂತೆ ಭಸ್ಮೀಭೂತವಾಗಿ ನಾಶವಾಗುವುವು. ಮುಂದೆ ಬರುವ ಆಗಾಮಿ ಕರ್ಮಗಳು ಅವನನ್ನು ಲೇಪಿಸುವುದಿಲ್ಲ. ಆದರೆ ಭಗವದ ಪರೋಕ್ಷಿಯು ಪ್ರಾರಬ್ಧ ಕರ್ಮವನ್ನು ಮಾತ್ರ ಭೋಗಿಸುವನು. ಕರ್ಮ ಕ್ಷಯವಾಗುತ್ತಾ, ಜೀವನ್ಮುಕ್ತಸ್ಥಿತಿಯನ್ನು ಹೊಂದುವನು. ನಂತರ ವಿರಜಾನದಿಯ ಸ್ನಾನದ ದ್ವಾರಾ ಲಿಂಗಭಂಗ. ಅದರ ದ್ವಾರಾ ಕರ್ಮಬಂಧನ ದಿಂದ ಮುಕ್ತಿ. ಮೋಕ್ಷ ಪ್ರದನಾದ ವಾಸುದೇವನ ಪ್ರಸಾದದಿಂದ ಸ್ವರೂಪ ಗತ ನಿತ್ಯಾನಂದ ರೂಪವಾದ ಮೋಕ್ಷಸುಖ ಪ್ರಾಪ್ತಿ. ಇದರಿಂದ ವಿರಿಂಚ ಜನಕ ಅಂದರೆ ವಾಸುದೇವ ಎಂಬ ಶಬ್ದದ ಪ್ರಯೋಗ,

**ಪ್ರಮಾಣ :**

೧ "ಪ್ರಾರಬ್ಧ ಕರ್ಮಣೋ ಅನ್ಯಸ್ಯ ಜ್ಞಾನಾದೇವ ಪರಿಕ್ಷಯ :"

**— ಅಣುಭಾಷ್ಯ ವಚನ**

೨ "ಭಿದ್ಯತೇ ಹೃದಯಗ್ರಂಥಿ ಛಿದ್ಯಂತೇ ಸರ್ವ ಸಂಶಯಾಃ ।
ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ।"

**— ಭಾಗವತ ಪ್ರಥಮಸ್ಕಂದ**

ಅಪರೋಕ್ಷಾನಂತರ ಸಂಚಿತ ಕರ್ಮನಾಶ. ಆಗಾಮಿಯಿಂದ ನಿರ್ಲೇಪ ಸರ್ವಸಂಶಯಗಳೂ ಪರಿಹಾರವಾಗುವುವು.

ಆತ್ಮ ವಂಚಕರಾದ ಜನರ ಸೇವೆಯನ್ನು ಶ್ರೀ ಹರಿಯು ಸ್ವೀಕರಿಸು ವುದಿಲ್ಲ. ಸರ್ವಕರ್ತನಾದ ಶ್ರೀ ಹರಿಯನ್ನು ಮರೆತು. ಅಹಂಕರ್ತೃತ್ವಾ ಭಿಮಾನದಿಂದ ಕರ್ಮ ಮಾಡುವ ಜನರೆಲ್ಲರೂ "ವಂಚಕರು"

ಶ್ರೀ ಹರಿಯು **ಶ್ರೀ ವತ್ಸವಕ್ಷಾಂಕಿತನು** ಶ್ರೀ ಲಕ್ಷ್ಮೀದೇವಿಯು "ಶ್ರೀವತ್ಸ"ವೆಂಬ ಲಾಂಛನದಿಂದ ಶ್ರೀ ಹರಿಯ ವಕ್ಷ ಸ್ಥಳದಲ್ಲಿ ಆಶ್ರಯ ಪಡೆದಿದ್ದಾಳೆ. ಇದರಿಂದ **ಶ್ರೀ ವತ್ಸಾಂಚಿತ ಸುಸದ್ವಕ್ಷ**-ಎಂದಿದ್ದಾರೆ.

ಶ್ರೀ ವತ್ಸ ಲಾಂಛನನಾದ ಶ್ರೀ ಕಾಂತನು ದೇವತೆಗಳಿಗೆ ಅತ್ಯಂತ

ಪ್ರಿಯನು. (ನಿಷ್ಕಿಂಚನ ಪ್ರಿಯ) ಅಂತಹ ನಿಷ್ಕಿಂಚನ ಪ್ರಿಯನಾದ ನಿರಂಜನನು ಕ್ಷರಾಕ್ಷರ ಪುರುಷರಿಗಿಂತ ಉತ್ತಮೋತ್ತಮನು. ದೇಹನಾಶ ಹೊಂದುವ ಬ್ರಹ್ಮಾದಿ ದೇವತೆಗಳು-"ಕ್ಷರ" ಪುರುಷರು. ನಾಶರಹಿತಳಾದ ಶ್ರೀ ಲಕ್ಷ್ಮೀದೇವಿಯು "ಅಕ್ಷರ" ಪುರುಷಳು. ರಮಾ ಬ್ರಹ್ಮಾದಿಗಳಿಗಿಂತ ಅನಂತಾನಂತಕೋಟಿ ಗುಣಗಳಿಂದ . ಉತ್ತಮನಾದ ಶ್ರೀ ಹರಿಯು **ಪುರುಷೋಶನು.**

ಅಂತಹ ಪುರುಷೋಶನಾದ ಶ್ರೀ ಹರಿಯು ಜೀವರ ಹೃದಯಾಕಾಶದಲ್ಲಿ ಮಿಂಚಿನಂತೆ, ಅಪ್ರಾಕೃತ ಸ್ವರ್ಣವರ್ಣ ವಿಶಿಷ್ಟನಾಗಿ ಹೊಳೆದು, ಪ್ರತ್ಯಕ್ಷ ನಾಗುವನು. ಅದೇ ಬಿಂಬಾಪರೋಕ್ಷವು. ಬಿಂಬಾಪರೋಕ್ಷದಿಂದ ಜೀವನು ಸಂಚಿತಾಗಾಮಿ ಕರ್ಮಗಳಿಂದ ಮುಕ್ತನಾಗುವನೆಂದು ಪ್ರಸಕ್ತ ಪದ್ಯದ ತಾತ್ಪರ್ಯ ॥೧೬॥

## ಪದ್ಯ- ೧೭

**ಮೂಲ:**

**ಕಾಲ ದ್ರವ್ಯ ಸುಕರ್ಮ ಶುದ್ಧಿಯ ।**
**ಪೇಳುವರು ಅಲ್ಪರಿಗೆ ಇವು ನಿ ।**
**ರ್ಮೂಲಗೈಸವು ಎಲ್ಲ ಪಾಪಗಳೆಲ್ಲ ಕಾಲದಲಿ ॥**
**ತೈಲಧಾರೆಯೊಂತವನ ಪದ ।**
**ಓಲಯಿಸಿ ತುತಿಸದಲೆ ನಿತ್ಯದಿ ।**
**ಬಾಲಿಶರು ಕರ್ಮಾದಿಗಳೆ ತಾರಕವೆನುತಹಲಿರು ॥ ॥೧೭॥**

**ಅವತರಣಿಕೆ ;**

ತೈಲಧಾರೆಯಂತೆ ಶ್ರೀ ಹರಿಯ ಪಾದಾರವಿಂದಗಳಲ್ಲಿ ಭಕ್ತಿ ಪೂರ್ವಕ ಉಪಾಸಿಸುವುದು ಪರಮ ತಾರಕವೆಂದು ತಿಳಿಸುತ್ತಾರೆ ॥೧೭॥

**ಪ್ರತಿಪದಾರ್ಥ :**

**ಕಾಲ** = ಪುಣ್ಯಪ್ರದವಾದ ಕಾಲವಿಶೇಷಗಳು (ಹಬ್ಬ, ಹರಿದಿನ. ಪರ್ವ ಕಾಲ ಇತ್ಯಾದಿ). **ದ್ರವ್ಯ** = ದ್ರವ್ಯಾದಿ ದಾನಗಳು. **ಸುಕರ್ಮ** = ಸಮೀಚೀನ ವಾದ ಕೃಚ್ಛ್ರ, ಚಾಂದ್ರಾಯಣ, ಏಕಾದಶಿ ಉಪವಾಸ, ವ್ರತೋಪವಾಸ, ಚಾತುರ್ಮಾಸ್ಯಕಾಲ ಇತ್ಯಾದಿ ಸತ್ಕರ್ಮಗಳು. **ಶುದ್ಧಿಯ ಪೇಳುವರು** = ಶಾಸ್ತ್ರಜ್ಞರು ಇವುಗಳಿಂದ ಪರಿಶುದ್ಧಿಯಾಗುತ್ತದೆ ಎಂದು ಹೇಳುತ್ತಾರೆ, **ಅಲ್ಪರಿಗೆ** = ಮಂದಮತಿಗಳಿಗೆ (ಅಜ್ಞಾನಿಗಳಿಗೆ), **ಇವು** = ಪೂರ್ವೋಕ್ತ ಪ್ರಾಯಶ್ಚಿತ್ತರೂಪವಾದ ಕರ್ಮವಿಶೇಷಗಳು, **ಪಾಪಗಳೆಲ್ಲ** = ಅವರು ಮಾಡಿದ ಪಾಪಸಮೂಹಗಳನ್ನೆಲ್ಲಾ, **ಎಲ್ಲ ಕಾಲದಲಿ** - ಸದಾಕಾಲವೂ, **ನಿರ್ಮೂಲಗೈಸವು** = ಪೂರ್ತಿಯಾಗಿ ಪರಿಹರಿಸಲಾರವು. ಪ್ರಬಲಪಾಪಗಳು ಹಾಗೆಯೇ ಅವಶಿಷ್ಟವಾಗಿ ಉಳಿದು ಬಿಡುವುವು. (ನಿಶ್ಶೇಷವಾಗಿ ಪರಿಹಾರ ವಾಗುವುದಿಲ್ಲ), **ತೈಲಧಾರೆಯಂತೆ** = ತೈಲ ಧಾರೆಯು ಅವಿಚ್ಛಿನ್ನವಾಗಿರು ವಂತೆ, **ಅವನ ಪದ** = ಬಿಂಬರೂಪಿಯಾದ ಶ್ರೀ ಹರಿಯ ಪಾದ ಪದ್ಮಗಳನ್ನು, **ನಿತ್ಯದಿ** = ಪ್ರತಿದಿನವೂ, **ತುತಿಸದಲೆ** = ಗುಣಾವಳಿಗಳನ್ನು ಸ್ತೋತ್ರ ಮಾಡದೇ, **ಬಾಲಿಶರು** = ಮಾಹಾತ್ಮ್ಯ ಜ್ಞಾನರಹಿತರಾದ ಅಜ್ಞಾನಿಗಳು **ಕರ್ಮಾದಿಗಳೆ** = ಜಡಕರ್ಮಗಳೇ, **ತಾರಕವೆಸುತಲಿಹರು** = ಗತಿಪ್ರದವೆಂದು ಹೇಳುತ್ತಾರೆ ||೧೭||

## ವ್ಯಾಖ್ಯಾನಗಳು

### ೧ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಗಂಗಾದಿ ತೀರ್ಥಸ್ನಾನಾದಿಗಳಿಂದಲೂ. ಪುಣ್ಯಕಾಲ ವಿಶೇಷಗಳಲ್ಲಿ ಮಾಡಿದ ಸತ್ಕರ್ಮಗಳಿಂದಲೂ. ಇನ್ನೂ ಪ್ರಾಯಶ್ಚಿತ್ತರೂಪವಾದ ಕರ್ಮ ಗಳಿಂದಲೂ, ದೋಷದಿಂದ ಶುದ್ಧ ಆಗತಾನೆ ಎಂತ ಶಾಸ್ತ್ರ ಆದಲ್ಲಾ, (ಇದೆಯಲ್ಲಾ) ಅದರಿಂದ ದೋಷಗಳು ಪರಿಹಾರವಾಗತದ ಎಂದರೆ ಹೇಳತಾರೆ

ಜ್ಞಾನ ಅಲ್ಪವಾಗಿ ಇರೋಣ, ಅಜ್ಞಾನ ಬಹಳವಾಗಿ ಇರೋಣ ಇಂಥಾ ಅಲ್ಪರಿಗೆ ಅವರು ಮಾಡಿದ ಪಾಪಗಳಿಗೆ, ಪುಣ್ಯಕಾಲವಾದ ಸರ್ವಕಾಲ ವಿಶೇಷ ಕಾಲಗಳಲ್ಲಿ, ದ್ರವ್ಯಾದಿ ದಾನಗಳಿಂದೇನು, ಅಥವಾ ಸಾಧಾರಣ ಕಾಲಗಳಲ್ಲಿ ಹಿರಣ್ಯದಾನ ದೊದಲಾದ ಇನ್ನೂ ಅನೇಕ ದಾನಧರ್ಮಗಳೇನು. ಸಮೀಚೀನವಾದ ಕೃಚ್ಛ, ಚಾಂದ್ರಾಯಣ, ವ್ರತೋಪಾಸ, ತೀರ್ಥಯಾತ್ರೆ, ದೇವರ ಪೂಜಾದಿ ಅನೇಕ ಸತ್ಕರ್ಮಗಳಿಂದ, ಶಾಸ್ತ್ರಜ್ಞರು ಪ್ರಾಯಶ್ಚಿತ್ತರೂಪವಾದ ಪರಿಶುದ್ಧಿಯನ್ನು ಹೇಳತಾರೆ. ಇದು ಸತ್ಯವೇ ಹೊರ್ತು ಅನೃತವಲ್ಲ. ಈ ಪೂರ್ವೋಕ್ತ ಪ್ರಾಯಶ್ಚಿತ್ತಗಳು ಸಮಸ್ತವಾದ ಪಾಪಗಳನ್ನು ನಿರ್ಮೂಲವಾಗಿ ಹೋಗಲಾಡಿಸಲಾರವು. ಅವಶಿಷ್ಟ ಉಳಿದಿರತದೆ. ಅಲ್ಪಪಾಪಗಳು ನಾಶವಾಗಿ ಪ್ರಬಲ ಪಾಪಗಳು ಶೇಷ ಉಳಿದಿರತವೆ. ಸಮಸ್ತ ಪಾಪಗಳೂ ನಿರ್ಮೂಲವಾಗಿ ನಾಶ ಐದಬೇಕಾದರೆ. ಶ್ರೀ ಭಗವತ್ಪ್ರಸಾದ ಹೊರತು ಕರ್ಮರೂಪ ಪ್ರಾಯಶ್ಚಿತ್ತಾದಿಗಳಿಂದ ಆಗೋದಿಲ್ಲ. ಆದಕಡಿಯಿಂದ ಸದಾ ಸರ್ವಕಾಲದಲ್ಲಿ ಹೃದಯಾಕಾಶಗತ ಲಕ್ಷ್ಮೀಪತಿಯಾದ ಪರಮಾತ್ಮನ ಪಾದಗಳ, ತೈಲಧಾರೆ ಅವಿಚ್ಛಿನ್ನವಾಗಿ ಹ್ಯಾಂಗೆ ಇರತದೋ ತದ್ವತ್ ಅವಿಚ್ಛಿನ್ನವಾಗಿ ಪ್ರತಿದಿನದಲ್ಲೂ ಭಜನಾರೂಪದಿಂದ ಸೇವಾಮಾಡಿ, ಗುಣ ಮಾಹಾತ್ಮ್ಯಗಳನ್ನು ಸ್ತೋತ್ರ ಮಾಡದೆ ಸರ್ವಪಾಪಗಳೂ ನಾಶವಾಗಲಾರವು. ಅಜ್ಞಾನಿಗಳು ಸರ್ವಪಾಪಗಳು ಸುಕರ್ಮರೂಪವಾದ ಪ್ರಾಯಶ್ಚಿತ್ತಾದಿಗಳಿಂದ ನಾಶವಾಗತವೆ ಎಂತಲೂ, ಪಾಪ ಕರ್ಮಗಳ ನಾಶಕ್ಕೆ ಸುಕರ್ಮಗಳೇ ಗತಿ ಐದಸತಕ್ಕವೆಂದು ಹೇಳೋವರಾಗತಾರೆ. ಆದರೆ ಸರ್ವಕರ್ಮಗಳನ್ನ ಶ್ರೀ ಪರಮಾತ್ಮನ ಸ್ಮರಣ ಪೂರ್ವಕ ಮಾಡಿ, ಸಮರ್ಪಣಮಾಡಿ, ಭಗವತ್ಪ್ರಸಾದ ಸಂಪಾದಿಸಿ ಗತಿ ಹೊಂದಬೇಕೇ ಹೊರತು, ಅನ್ಯವಾದ ಶುಷ್ಕ ಕರ್ಮಗಳು ಅಧಿಕಾರಿಗಳನ್ನು ಪವಿತ್ರಮಾಡಿ ಸದ್ಗತಿ ಐದಿಸಲಾರವು ಎಂತ ತಾತ್ಪರ್ಯ ॥೧೭॥

### ೨. ಭಾವಪ್ರಕಾಶಿಕೆ

ಕಾಲಶುದ್ಧಿ, ದ್ರವ್ಯಶುದ್ಧಿ, ಕರ್ಮಶುದ್ಧಿ ವಿಷಯಗಳನ್ನು, ಭಾಗವತ

ಏಕಾದಶಸ್ಕಂದ ೨೧ನೆಯ ಅಧ್ಯಾಯದಲ್ಲಿ ಹೇಳಿರುವರು. ಅದೆಂತೆನೆ (ಇದು ಶ್ರೀ ಕೃಷ್ಣನು ಉದ್ಧವನಿಗೆ ಉಪದೇಶ ಮಾಡಿದುದು) ಎಲೈ ಉದ್ಧವ! ಈ ದೇಶದಲ್ಲಿ, ಈ ಕಾಲದಲ್ಲಿ, ಈ ದ್ರವ್ಯದಿಂದ ಮಾಡುವ ಕರ್ಮವು ಯೋಗ್ಯವಾದುದು. ಹಾಗಿಲ್ಲದಿರುವುದು ಅಯೋಗ್ಯವಾಗಿರುವುದು, ಎಂದು ಕರ್ಮಗಳ ನಿಯಮಕ್ಕಾಗಿ ನನ್ನ ವಚನದ ಮೇಲೆ ಗುಣದೋಷಗಳು ವಿಧಿಸಲ್ಪಡುವುವು. ದೇಶದಲ್ಲಿ ಯಾವ ದೇಶವು ಶುದ್ಧವಾದುದೆಂದರೆ, ಯಾವ ದೇಶದಲ್ಲಿ ಜಿಂಕೆಗಳು ತಾವಾಗಿಯೇ ವಾಸಮಾಡುತ್ತಿರುವುವೋ, ಆದೇಶವು ಶುದ್ಧವಾದುದೆಂದು ತಿಳಿಯಬೇಕು. ಇದಲ್ಲದೆ ಮತ್ತೂ ಕೆಲವು ದೇಶಗಳು ಶುಚಿಯಾಗಿರುವುವೆಂದು ಸೂಚಿಸುತ್ತಾರೆ. ನದೀ, ಸಮುದ್ರ, ಪರ್ವತಗಳು, ಆಶ್ರಮ, ಉಪವನ. ಪುಣ್ಯಕರವಾದ ಅಯೋಧ್ಯಾ ಮೊದಲಾದ ನಗರಗಳು, ಶಾಲಿಗ್ರಾಮ ಇರುವ ದೇಶಗಳು, ಇವುಗಳಿಗೆ ಸುತ್ತಲೂ ಒಂದು ಗಾವುದದ ಒಳಗಿನ ದೇಶಗಳು ಕರ್ಮ ಮಾಡಲು ಯೋಗ್ಯವಾದುವು. ಈಗ ಹೇಳಿದುದಕ್ಕೆ ಅಪವಾದವನ್ನು ಹೇಳುತ್ತಾರೆ. ಜಿಂಕೆಗಳು ತಾವಾಗಿ ವಾಸ ಮಾಡುತ್ತಿದ್ದರೂ ಸೌವೀರ, ಕೀಕಟ. ಅಸಂಸ್ಕೃತ, ಈರಣ ದೇಶಗಳು ಮಾತ್ರ ಯಾವಾಗಲೂ ಅಶುದ್ಧವೆಂದು ತಿಳಿಯಬೇಕು. ಸೌವೀರವೆಂಬ ದೇಶವು ೫೬ ದೇಶಗಳ ಪೈಕಿ ಒಂದು. ಕೀಕಟವೆಂದರೆ ನದಿಗಳಾಗಲೀ, ಸಾಲಿಗ್ರಾಮ, ಪರ್ವತ ಮೊದಲಾದ ಯಾವುದೂ ಇಲ್ಲದ ದೇಶವೆಂದರ್ಥ. ಪಾಷಂಡಿಗಳು ವಾಸ ಮಾಡುವ ದೇಶವು ಅಸಂಸ್ಕೃತವೆನಿಸುವುದು. ಈರಣವೆಂದರೆ ಸಮುದ್ರದ ಮಧ್ಯದಲ್ಲಿರುವ ಉಪ ದ್ವೀಪಗಳು. ಇವುಗಳೆಲ್ಲವೂ ಕರ್ಮ ಮಾಡಲು ಯೋಗ್ಯವಲ್ಲದ ದೇಶಗಳು ಅಂದರೆ ನದೀ, ಸಮುದ್ರ ಮೊದಲಾದವೇನಿದ್ದರೂ "ಯದಿನಾಧ್ಯಷಿತಾಃ ಖಲೈ" ಅಲ್ಲಿನ ಜನರೆಲ್ಲರೂ ತಮೋಯೋಗ್ಯರೇ ಆಗಿದ್ದರೆ ಅಲ್ಲಿ ವಾಸಕ್ಕೂ ಯೋಗ್ಯವಲ್ಲ. ಕರ್ಮಮಾಡಲು ಸುತರಾಂ ಯೋಗ್ಯವಾದುದಲ್ಲವೆಂದು ತಾತ್ಪರ್ಯ. ಇದರಲ್ಲಿ ಒಂದು ವಿಶೇಷವುಂಟು. ಅಯೋಗ್ಯರು ವಾಸ ಮಾಡುತ್ತಿದ್ದರೂ ಸಜ್ಜನರೂ ಆ ಸ್ಥಳದಲ್ಲಿ ವಾಸ ಮಾಡುತ್ತಿದ್ದರೆ ಅದು ಕರ್ಮಣ್ಯವೆನಿಸುವುದು ಮತ್ತು ವಿಷ್ಣುಮೂರ್ತಿಗಳು ಇರುವ ಪ್ರದೇಶಗಳೂ ಸಹ ಕರ್ಮಣ್ಯವೆನಿಸುವುವು.

ದೇಶಗಳನ್ನು ಹೇಳಿ, ಕರ್ಮಯೋಗ್ಯವಾದ ಕಾಲವನ್ನು ಹೇಳುತ್ತಾರೆ. ಯಾಗಾದಿ ಕರ್ಮಗಳನ್ನು ಮಾಡಲು ಯೋಗ್ಯವಾದ ಕಾಲವೇ ಶುಚಿಯಾದ ಕಾಲವೆನಿಸುವುದು ಆ ಕಾಲ ಶುದ್ಧಿಯು ಸ್ವತಃ ಕರ್ಮಣ್ಯವೆಂತಲೂ ದ್ರವ್ಯದಿಂದ ಕರ್ಮಣ್ಯವೆಂತಲೂ ಎರಡು ಪ್ರಕಾರ. ಅದರಲ್ಲಿ ಸಂಧ್ಯಾಕಾಲ ಮೊದಲಾದುವುಗಳು ಸ್ವತಃ ಕರ್ಮಯೋಗ್ಯವಾದ ಶುದ್ಧವಾದ ಕಾಲವು. ದ್ರವ್ಯದಿಂದ ಕಾಲಕ್ಕೆ ಕರ್ಮಣ್ಯವೆಂದರೆ ವಸಂತಕಾಲ ಮೊದಲಾದುವು, ಯಾಗಕಾಲವೆಂದು ಹೇಳಿರುವರು. ಇದು ವಸಂತಋತುವಿನ ಸಂಬಂಧದಿಂದ ಕಾಲಕ್ಕೆ ಕರ್ಮಣ್ಯ ಪ್ರಾಪ್ತಿಯಾಗುವುದು. ಯಾವ ಕಾಲದಲ್ಲಿ ಕರ್ಮಮಾಡಬಾರದೆಂದು ನಿಷೇಧ ಮಾಡಿರುವರೋ ಆ ಕಾಲವು ಅಶುದ್ಧವೆಂದು ತಿಳಿಯಬೇಕು. ಅದಾವುವೆಂದರೆ, ನಿಶೀಥವಾದ ಮಧ್ಯರಾತ್ರಿಯಲ್ಲಿ ಕರ್ಮವನ್ನು ಮಾಡಿದರೆ ರಾಕ್ಷಸರ ಪಾಲಾಗುವುದು. ಅದು ರಾಕ್ಷಸಯೋಗ್ಯವಾದ ಕಾಲವೆಂದು ಹೇಳಿರುವರು. ಆದ್ದರಿಂದ ಆ ಕಾಲಕ್ಕೆ ಅಶುದ್ಧಿಯನ್ನು ಹೇಳಿದಂತಾಯಿತು. ಅಂದರೆ ಕರ್ಮಕ್ಕೆ ಯೋಗ್ಯವಾದ ಕಾಲವಲ್ಲವೆಂದರ್ಥ.

ದ್ರವ್ಯದ ಶುದ್ಧಿಯು ಬಹು ಪ್ರಕಾರವೆಂದು ಹೇಳುತ್ತಾರೆ. ದ್ರವ್ಯವನ್ನು ಶುದ್ಧಿಮಾಡಲು, ದ್ರವ್ಯಸಂಬಂಧದಿಂದ ಕೆಲವು ದ್ರವ್ಯಗಳಿಗೆ, ಕೆಲವು ಪದಾರ್ಥಗಳಿಗೆ, ವಾಕ್ಯದಿಂದಲೂ, ಸಂಸ್ಕಾರದಿಂದಲೂ, ಕಾಲದಿಂದಲೂ, ದೊಡ್ಡವಸ್ತು, ಸಣ್ಣ ವಸ್ತುಗಳ ಭೇದದಿಂದಲೂ, ಶಕ್ತಿ, ಅಶಕ್ತಿ, ವಾಕ್, ಬುದ್ಧಿ, ದೇಶಾದಿಗಳಿಂದ ಅನೇಕ ಪ್ರಕಾರವಾಗಿ ಶುದ್ಧಿಯನ್ನು ತಿಳಿಯಬೇಕು. ಇದರ ವಿವರ—ತಾಮ್ರ ಮೊದಲಾದ ಪಾತ್ರೆಗಳಿಗೆ ಉಚ್ಚಿಷ್ಟ, ಅಮೇಧ್ಯಾದಿ ಸಂಬಂಧದಿಂದ ಅಶುದ್ಧಿಯಾಗುವುದು. ಅದು ಹುಳಿಹಣ್ಣು ಮೊದಲಾದ ಪದಾರ್ಥಗಳ ಸಂಬಂಧದಿಂದ ಶುದ್ಧಿಯಾಗುವುದು. ದೊಡ್ಡ ದೊಡ್ಡ ಭಾಂಡಾದಿಗಳಿಗೆ, ಉಚ್ಚಿಷ್ಟಾದಿಗಳಿಂದ ಅಶುದ್ಧಿಯಾದರೆ ಮಹಾತ್ಮರ ಬಾಯಿಂದ ಅದು ಶುದ್ಧವೆಂದು ಬಂದರೆ ಅದು ಶುದ್ಧವಾಗುವುದು. ಆ ಭಾಂಡವು ಎತ್ತಲು, ತೊಳೆಯಲು ಸಾಧ್ಯವಲ್ಲದಿದ್ದರೆ ಮಾತ್ರ ದೊಡ್ಡವರ ವಾಕ್ಯದಿಂದಲೆ ಶುದ್ಧಿಯೆಂದು ಭಾವಿಸಬೇಕು. ಕೆಲವು ಪದಾರ್ಥಗಳು ತೊಳೆಯುವುದರಿಂದಲೇ ಶುದ್ಧಿಯಾಗವು. ಪುಷ್ಪ, ಹಿತ್ತಾಳೆ. ತಾಮ್ರ

ಮೊದಲಾದವು ತೊಳೆದರೆ ಶುದ್ಧಿಯು-ಇಲ್ಲವಾದರೆ ಅಶುದ್ಧವು. ಕೆಲವು ಯಾವಾಗಲೂ ಅಶುದ್ಧವೇ. ಅವು ಯಾವುವೆಂದರೆ-ಕತ್ತೆಯ ವಾಹನ, ಅಸಂಸ್ಕೃತವಾಣಿ ಅಂದರೆ ಭಗವತ್ಸಂಬಂಧವಲ್ಲದ ಊರಹರಟೆಗಳೆಂದರ್ಥ. ಮ್ಲೇಂಛರು ಮೊದಲಾದವರ ಮನೆಯನ್ನು ತೆಗೆದುಕೊಂಡರೆ ಕಾಲದಿಂದ ಶುದ್ಧಿಯಾಗುವುದು ಅಂದರೆ ಕೆಲಕಾಲ ಹಾಳುಹಾಕಿ ಕಾಲಾಂತರದಲ್ಲಿ ಪುಣ್ಯಾಹ ವಾಚನಾದಿಗಳಿಂದ ಶುದ್ಧಿಮಾಡಬೇಕೆಂಬ ಭಾವ. ಅನ್ನಾದಿಗಳನ್ನು ಮಾಡಿದ ಮೇಲೆ ಒಂದು ಯಾಮದವರೆಗೂ ಶುದ್ಧಿಯು, ಒಂದು ಯಾಮಾನಂತರ ಅನ್ನಕ್ಕೆ ಅಶುದ್ಧಿ, ಅನ್ನವೆಂದು ಹೇಳಿದ್ದರಿಂದ ಭಕ್ಷ್ಯಾದಿಗಳು ಇದರಲ್ಲಿ ಸೇರಿಲ್ಲ. "ವಿನೋದಕೇನ ಯತ್ಪಕ್ವಂ ಯತ್ಪಕ್ವಂಚ ಘೃತಾದಿನಾ । ಸರ್ವಂ ತತ್ಫಲವದ್ಗ್ರಾಹ್ಯಂ"॥ ಎಂಬ ಧರ್ಮಶಾಸ್ತ್ರವಚನದಿಂದ, ನೀರಿಲ್ಲದೆ ಹಾಲು, ತುಪ್ಪ ಮೊದಲಾದುವುಗಳಿಂದ ಪಕ್ವವಾದ ಪದಾರ್ಥಗಳನ್ನು ಹಣ್ಣಿನಂತೆ ಸ್ವೀಕರಿಸಬಹುದೆಂದು ಹೇಳಿರುವರು. "ಅನ್ನಾದೀನಾಂ ಮಹತ್ವೇಶ್ವಾದಿಸ್ಪರ್ಶೇ ಸ್ಪಂಷ್ಟಾಂಶತ್ಯಾಗೇನ ಸಿಷ್ಟಸ್ಯ ಶುದ್ಧಿಃ । ಅಥವಾ ಅನ್ನಸ್ಯ ಅಲ್ಪಶಯಾ ಶ್ವನಾಸ್ಪೃಷ್ಟತಸಾ ಶುದ್ಧಿಃ॥" ಅನ್ನಾದಿಗಳನ್ನು ರಾಶಿ ಹಾಕಿರುವಾಗ ಯಾವುದಾದರೂ ಒಂದು ಭಾಗದಲ್ಲಿ ನಾಯಿ ಮುಟ್ಟಿಬಿಟ್ಟರೆ ಮುಟ್ಟಿದ ಭಾಗವನ್ನು ಬಿಟ್ಟು ಹಾಕಿ ಉಳಿದ ಭಾಗವನ್ನು ತೆಗೆದುಕೊಳ್ಳಬಹುದು. ಒಂದು ಪಾತ್ರೆಯಲ್ಲಿ ಸ್ವಲ್ಪ ಅನ್ನವಿಟ್ಟದ್ದು ನಾಯಿ ಮುಟ್ಟಿ ಬಿಟ್ಟರೆ ಎಲ್ಲವೂ ಅಶುದ್ಧಿಯಾಗುವುದು. ಅಲ್ಪವಾದ ಇರುವೆ ಮುಂತಾದುವು ಮೃತವಾದುದನ್ನು ಮುಟ್ಟಿಕೊಂಡರೆ ಅಶುದ್ಧಿ ಅಲ್ಲ, ದೊಡ್ಡದಾದ ವಸ್ತು ಮೃತವಾದುದನ್ನು ಮುಟ್ಟಿದರೆ ಅಶುಚಿಯುಂಟು. ಶಕ್ತನಾದ ಪುರುಷನು ಅಶುಚಿತ್ವಕ್ಕೆ ಪ್ರಾಯಶ್ಚಿತ್ತರೂಪವಾಗಿ ತೀರ್ಥಯಾತ್ರಾದಿಗಳನ್ನೂ, ಚಾಂದ್ರಾಯಣಾದಿ ವ್ರತಾದಿಗಳನ್ನೂ ಮಾಡಿಕೊಂಡರೆ ಶುದ್ಧನಾಗುವನು. ಜ್ವರಾದಿಗಳಿಂದ ರೋಗಿಯಾದವನಿಗೆ ದೇವತಾರಾಧನೆ, ನಿತ್ಯಕರ್ಮಾನುಷ್ಠಾನದಿಂದ ಶುದ್ಧನಾಗುವನು. ಶುದ್ಧನಾದರೂ ಮಹಾತ್ಮರು ಅಶುದ್ಧನೆಂದು ಬಿಟ್ಟರೆ ಅಶುದ್ಧನೇ ಆಗುವನು. ಅಶುದ್ಧನಾದರೂ ಮಹಾತ್ಮರ ವಾಕ್ಯದಿಂದ ಶುದ್ಧನಾಗುವನು. ಬುದ್ಧಿಗೆ ಶುದ್ಧಿಯನ್ನು ಹೀಗೆ ತಿಳಿಯಬೇಕು, ಸುರಾಪಾನಾದಿಗಳಲ್ಲಿ

ಬುದ್ಧಿಯು ಪ್ರವೇಶ ಮಾಡಿದರೆ ಬುದ್ಧಿಗೆ ಅಶುಚಿಯು ಬಂದಿತು. ಹರಿಕಥಾ ಶ್ರವಣಾದಿಪುಣ್ಯ ನಿಶ್ಚಯವಾದರೆ ಬುದ್ಧಿಗೆ ಶುದ್ಧಿಯು. ತನಗೆ ಇರುವ ಸಂಪತ್ತಿನಿಂದ ಪುರುಷನಿಗೆ ಶುದ್ಧಿಯೂ, ಅಶುದ್ಧಿಯೂ ಪ್ರಾಪ್ತವಾಗುವುವು. ಹೇಗೆಂದರೆ ದ್ರವ್ಯವನ್ನು ಸತ್ಪಾತ್ರದಲ್ಲಿ ದಾನ ಮಾಡುವುದರಿಂದ ಶುದ್ಧನಾಗುವನು. ಅಸತ್ಪಾತ್ರದಲ್ಲಿ ದಾನ, ವೇಶ್ಯಾ ಮೊದಲಾದವರಲ್ಲಿ ಹಣವನ್ನು ಖರ್ಚು ಮಾಡುವುದರಿಂದ ಅಶುದ್ಧನಾಗುವನು. ಇತ್ಯಾದಿ ಬಹುವಿಧವಾದ ದ್ರವ್ಯ ಶುದ್ಧಿಯನ್ನು ಹೇಳಿರುವರು. ಕರ್ಮಶುದ್ಧಿಯಾಗಬೇಕಾದರೆ ಕರ್ಮಾಂಗ ಶುದ್ಧಿಯು ಅವಶ್ಯಕವು. ಸ್ನಾನ, ದಾನ, ತಪಸ್ಸು, ಇವುಗಳನ್ನು ತನ್ನ ಯೌವನಾದಿ ಅವಸ್ಥೆಗಳನ್ನೂ. ತನ್ನ ಶಕ್ತಿಯನ್ನೂ ಅನುಸರಿಸಿ ಯೋಗ್ಯತಾನುಸಾರ ಮಾಡಬೇಕು. ಊರ್ಧ್ವಪುಂಡ್ರಧಾರಣ, ಸಂಧ್ಯಾವಂದನೆ ಮೊದಲು ದೇವ ಪೂಜಾಪರ್ಯಂತರವಾದ ಕರ್ಮಾದಿಗಳನ್ನು ಮಾಡಿ ಇದರಿಂದ ಮನಶುದ್ಧಿಮಾಡಿಕೊಂಡು ಆಮೇಲೆ ತನ್ನಿಷ್ಟವಾದ ವಿಶೇಷಕರ್ಮಗಳನ್ನು ಮಾಡಬೇಕು. ಮಂತ್ರಾದಿಗಳನ್ನು ಜಪಿಸಿ ಸಾಧನೆ ಮಾಡಿಕೊಳ್ಳಬೇಕಾದರೆ ನನಗೆ ಕರ್ಮಗಳನ್ನರ್ಪಿಸಬೇಕು. ಅಂದರೆ ಶ್ರೀ ಕೃಷ್ಣಾರ್ಪಣವೆಂದು ಸಮರ್ಪಣೆ ಮಾಡಿದರೆ ಕರ್ಮ ಶುದ್ಧಿಯಾಗುವುದೆಂದು ಹೇಳಿರುವರು. ಇನ್ನೂ ಹೆಚ್ಚಿನ ವಿಷಯವನ್ನು ತಿಳಿಯಬೇಕಾದರೆ, ಭಾಗವತ ಏಕಾದಶ ಸ್ಕಂಧದಲ್ಲಿ ತಿಳಿಯತಕ್ಕದ್ದು. ಹೀಗೆ ಪ್ರಾಯಶ್ಚಿತ್ತರೂಪವಾಗಿ ಕರ್ಮಗಳ ಶುದ್ಧಿಯನ್ನೂ, ಕಾಲ ದ್ರವ್ಯಗಳ ಶುದ್ಧಿಯನ್ನೂ ಹೇಳಿರುವರು. ಆದರೂ ಬರೇ ಪ್ರಾಯಶ್ಚಿತ್ತರೂಪವಾದ ಕರ್ಮಗಳನ್ನು ಮಾಡಿಕೊಂಡರೂ ಅಜ್ಞಾನಿಗಳಿಗೆ ಇವು ಎಲ್ಲಾ ಪಾಪವೂ ಪರಿಹಾರ ಮಾಡುವಂತಿಲ್ಲ. ಪರಮಾತ್ಮನ ಪಾದಾರವಿಂದದಲ್ಲಿ ಅವಿಚ್ಛಿನ್ನವಾಗಿ ಮನಸ್ಸನ್ನಿಟ್ಟು ಭಜನೆ ಮಾಡದೇ ಬರೇ ಕರ್ಮವನ್ನು ಮಾತ್ರ ಮಾಡಿದರೆ ಅದರಿಂದೇನೂ ಪ್ರಯೋಜನವಿಲ್ಲ. ಇದರಿಂದ ನಿತ್ಯಕರ್ಮಗಳು, ಸಂಧ್ಯಾವಂದನಾದಿಗಳು ಮಾಡೇ ತೀರಬೇಕು, ಆ ಕರ್ಮಗಳು ಭಗವದರ್ಪಣದಿಂದ ಶುದ್ಧಿಯಾಗುವುವು. ನೈಮಿತ್ತಿಕ ಕರ್ಮಗಳು ದಾನಾದಿಗಳನ್ನು ಮಾಡಿದರೆ ಸ್ವರ್ಗಾದಿ ಭೋಗಕ್ಕೆ ಅನುಕೂಲವೇ ಹೊರತು ಮುಕ್ತಿಗೆ ಸಾಧನವಲ್ಲ. ಆದ್ದರಿಂದಲೆ ದಾಸಾರ್ಯರು ಕರ್ಮವೇ ತಾರಕವೆನ್ನುವರು

ಮೂರ್ಖರೆಂದು ಹೇಳಿರುವರು. ಆದ್ದರಿಂಹಲೂ ಕರ್ಮಮಾರ್ಗಕ್ಕಿಂತಲೂ ಜ್ಞಾನಮಾರ್ಗ ಉತ್ತಮವೆಂಬ ತಾತ್ಪರ್ಯ, ಮತ್ತು ಕೆಸರಿಂದ ಕೆಸರ ತೊಳೆದಂತೆ ಕರ್ಮದ ಪಥವೆಂದು ದಾಸರ ವಾಕ್ಯವಿರುವುದು. ॥೧೭॥

## ೩ ಭಾವದರ್ಪಣ

ಕರ್ಮವೇ ಪ್ರಾಧಾನ್ಯವೆಂದು ಆಚರಿಸತಕ್ಕವರು ಕೆಡುತ್ತಾರೆಂದು ಹೇಳುತ್ತಾರೆ. ಕಾಲ ಇತಿ. "ಕರ್ಮದಾರಿಯಾ ಪಿಡಿದು ಕಡಿಬಿದ್ದವರಾ ಕಾಣೆ । ನಿರ್ಮಲಾತ್ಮಕ ವಿಜಯವಿಠಲನ ನೆರೆನಂಬು" ಎಂದು ದೊಡ್ಡವರ ಉಕ್ತಿ ಇರೋಣದರಿಂದ ದಾರ್ಢ್ಯ ಮಾಡತಕ್ಕದ್ದು ಬಾಲಿಶ ಇತಿ. "ಮೂರ್ಖೋ ವೈಧೇಯ ಬಾಲಿಶ" ಇತ್ಯಮರಃ ॥೧೭॥

## ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

'ಕಾಲ' ಇತಿ ಕಾಲಃ ವಸಂತಃ, ಕರ್ಮ ಸ್ನಾನಾದಿ, ದ್ರವ್ಯಂ ಧರ್ಮೋಪಯೋಗಿ । ನೈತಾವತ್ ಪಾಪಭೇದಾಯ **ಅಲಮ್** ಓಲಯಿಸಿ" ಸ್ತುತಿಸಿ ತತ್ಪ್ರದ ಸೂಚಿತಾ ಶುದ್ಧಿಃ ಗುಣಾನುವಾದಃ ಕಾಲಃ **ತತ್** ಕರ್ಮ ಹರಿತೋಷಕಮ್ । ದ್ರವ್ಯಂ ನಿಷ್ಕಾಮ ಧರ್ಮೋಪಯೋಗಿ ॥೧೭॥

### ಕನ್ನಡಾರ್ಥ

"ಕಾಲ" = ವಸಂತ ಮುಂತಾದ ಕಾಲ, ಕರ್ಮಗಳು ಸ್ನಾನ ಮುಂತಾದವುಗಳು, ದ್ರವ್ಯಂ ಧರ್ಮೋಪಯೋಗಿಯಾದುದು. ಒಳ್ಳೇಕಾಲ, ಒಳ್ಳೇ ಕರ್ಮ, ಒಳ್ಳೇದ್ರವ್ಯ, ಇವುಗಳಷ್ಟೇ ಪಾಪನಿವಾರಣೆಗೆ ಸಾಕಾಗುವುದಿಲ್ಲ. ಪರಮಾತ್ಮನ ಗುಣಾನುವಾದ ನಡೆಯುವ ಕಾಲವೇ ನಿಜವಾದ ಕಾಲ, ಹರಿತೋಷಕರವಾದುದೇ ನಿಜವಾದ ಕರ್ಮ, ನಿಷ್ಕಾಮ ಧರ್ಮೋಪಯೋಗಿಯಾದುದೇ ದ್ರವ್ಯ. ಆದುದರಿಂದ ಶ್ರೀ ಹರಿಯನ್ನು ಸ್ತುತಿಸುವುದೇ ಪರಮ ಪಾವನಕರವೆಂದು ಜ್ಞಾನಿಗಳ ಸನ್ಮತ ॥೧೭॥

## ೧ ಶ್ರೀಗುರು ಹೃದಯ ಪ್ರಕಾಶಿಕೆ

ಆದ್ದರಿಂದ ದೇಶಕಾಲೋಚಿತ ಸತ್ಕರ್ಮ ಮಾತ್ರದಿಂದ ದೇವರು ಲಭ್ಯನಲ್ಲ ವೆಂದು ತಿಳಿಸುತ್ತಾರೆ, ಕಾಲವೆಂದು. ಕಾಲವೆಂಬ ವೈಶಾಖ ಮಾಘ ಚಾತುರ್ಮಾಸ್ಯಾದಿ ಕಾಲ ವಿಶೇಷದಿಂದಲೂ. ದ್ರವ್ಯವೆಂಬ ನ್ಯಾಯಾರ್ಜಿತ ಸತ್ಪಾತ್ರದಾನ ಮೊದಲಾದ ದ್ರವ್ಯಶುದ್ಧಿಯಿಂದಲೂ, **ಕರ್ಮವೆಂಬ ಸಂಧ್ಯೋಪಾಸನ ತೀರ್ಥಯಾತ್ರಾದಿಗಳಿಂದಲೂ** ಶುದ್ಧಿ ಎಂದರೆ ಕರ್ಮಬಂಧಮೋಕ್ಷವನ್ನು ಅಲ್ಪರೆಂಬ ಅಜ್ಞ ಸಾಮಾನ್ಯಜನರಿಗೆ ವಿಷಯಲಂಪಟ ಬಿಡಿಸಿ ಸತ್ಕರ್ಮಾಭಿರುಚಿ ಹುಟ್ಟಿಸಿ ಕ್ರಮೇಣ ವೈರಾಗ್ಯದಿಂದ ಜ್ಞಾನ ಉಂಟಾಗಲೆಂಬ ಅಭಿಪ್ರಾಯದಿಂದ ಆ ಕರ್ಮ ಬಂಧ ಮೋಕ್ಷಕಾರಣ ಆಗುವುದೆಂದು ಹೇಳುವರು. ತೈಲಧಾರೆಯಂತೆ ಎಂದರೆ ಅಖಂಡ ಏಕಾಗ್ರಚಿತ್ತದಿಂದ ಆ ದೇವರ ಪಾದವೆಂಬ ಸಚ್ಛಾಸ್ತ್ರ ಗುರು ಚಿಂತನಾದಿಗಳನ್ನು ಮಾಡಿದ ಹೊರ್ತು ದೇವರ ಸಾಕ್ಷಾತ್ಕಾರವೂ ಮೋಕ್ಷವೂ ಆಗಲಾರದು. ಬಾಲಿಶರೆಂಬ ವೇದ ಹೃದಯವನ್ನರಿಯದ ಜನರು ಕರ್ಮ ಮೊದಲಾದ್ದನ್ನು ಸಾಕ್ಷಾನ್ಮೋಕ್ಷಸಾಧನವೆಂದು ಹೇಳುವರು, ಅದು ಸರಿಯಲ್ಲವೆಂದರ್ಥ.

**ನಾಸ್ತ್ಯಕೃತಃ ಕೃತೇನ ತದ್ವಿಜ್ಞಾನಾರ್ಥಂ ಸಗುರುಮೇವಾಭಿಗಚ್ಛೇತ್**

ಎಂಬ ಶ್ರುತ್ಯರ್ಥ ವಿವರಿಸಿತು ॥೧೭॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಕರ್ಮಶುದ್ಧಿಯು ಮೂರು ಪ್ರಕಾರ, (೧) ಕಾಲಶುದ್ಧಿ, (೨) ದ್ರವ್ಯಶುದ್ಧಿ ಮತ್ತು (೩) ಸುಕರ್ಮ ಶುದ್ಧಿ ಎಂದು. "ಚಾತುರ್ಮಾಸ ವ್ರತ, ಏಕಾದಶೀ ಉಪವಾಸವ್ರತ, ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಣೆ, ಸಮೀಚೀನವಾದ ಕೃಚ್ಛ್ರ, ಚಾಂದ್ರಾಯಣ, ಇತ್ಯಾದಿ ಸತ್ಕರ್ಮಗಳನ್ನು ವಿಧ್ಯುಕ್ತ ಕಾಲಗಳಲ್ಲಿ ಆಚರಿಸುವುದರಿಂದ ಕಾಲಶುದ್ಧಿ ಉಂಟಾಗುವುದು,

ಮಾರ್ಗಶಿರ ಮಾಸವು ಶ್ರೀ ಹರಿಯ ವಿಭೂತಿಯುಕ್ತವಾದ ಸನ್ನಿಧಾನ ವಿಶೇಷವಾಗಿದೆ. ಹಾಗೆಯೇ ವಸಂತಋತು. ಇವು ಕಾಲಾನುಸಾರ ಅನುಸರಿಸುವ ಸತ್ಕರ್ಮಗಳು. ಅಂದರೆ ಕಾಲೋಚಿತವಾದ ಸತ್ಕರ್ಮಗಳೆಂದರ್ಥ, ಹಾಗೆಯೇ ಸಕಾಲದಲ್ಲಿ ಆಚರಿಸುವ ಸಂಧ್ಯಾವಂದನೆ, ದೇವಪೂಜೆ ಇತ್ಯಾದಿಗಳೂ ಕೂಡ ಈ ವರ್ಗಕ್ಕೆ ಸೇರಿವೆ.

ನಾವು ಸಂಪಾದಿಸುವ ಹಣ. ಗಳಿಸುವ ಸಂಪತ್ತು ಶುದ್ಧವಾಗಿರಬೇಕು. ಕಷ್ಟಪಟ್ಟು ಸಂಪಾದಿಸುವ ಹಣವು ಶುದ್ಧವಾದುದು. ಸತ್ಪಾತ್ರರಿಗೆ ದಾನ ಧರ್ಮಗಳನ್ನು ಮಾಡುವುದು. ಅತಿಥಿಸತ್ಕಾರ, ಗುರು ಹಿರಿಯರ ಸೇವೆ ಇತ್ಯಾದಿಗಳಿಗೆ ವಿನಿಯೋಗಿಸುವ ಹಣವು ದ್ರವ್ಯ ಶುದ್ಧಿ ಎನಿಸುವುದು ದೇಶ ಕಾಲೋಚಿತವಾದ ಕರ್ಮಗಳು ಸುಕರ್ಮಗಳೆನಿಸುವುವು, ಶ್ರೀ ಹರಿಯ ಮಹಿಮಾ ಜ್ಞಾನಾನುಸಂಧಾನವಿಲ್ಲದೆ ಮಾಡಿದ ಕರ್ಮಗಳು ವ್ಯರ್ಥ. ಕೇವಲ ವಿಷ್ಣುಪ್ರೇರಣೆಯಾ ವಿಷ್ಣು ಪ್ರೀತ್ಯರ್ಥವಾಗಿ ಮಾಡುವ ಕರ್ಮಗಳು ಭಗವದನುಗ್ರಹ ಪ್ರಾಪ್ತಿಗೆ ಕಾರಣವಾಗುವುವು, ಶ್ರೀಹರಿಯ ಸರ್ವಕರ್ತೃತ್ವ ಜ್ಞಾನರಹಿತರಾಗಿ, ಜಡರೂಪವಾದ ಶುಷ್ಕ ಕರ್ಮಗಳನ್ನು ಮಾಡುವ ಜನರಿಗೆ **ಅಲ್ಪರು** ಎಂದಿದ್ದಾರೆ ದಾಸರಾಯರು ಅಂತಹ ಅಜ್ಞಾನಿಗಳಾದ ಅಲ್ಪಮತಿಗಳು ಮಾಡುವ ದೇಶಕಾಲೋಚಿತ ಕರ್ಮಗಳು, ಸುಕರ್ಮಗಳಾಗಿದ್ದರೂ ಅವರು ಮಾಡಿದ ಪಾಪರಾಶಿಗಳನ್ನು ಪೂರ್ಣವಾಗಿ ಪರಿಹಾರ ಮಾಡಲಾರವು. ಸ್ವರ್ಗಭೋಗಾದಿಗಳ ಪ್ರಾಪ್ತಿಯಾಗಬಹುದೇ ಹೊರತು, ಮುಕ್ತಿಗೆ ಸಾಧನವಾಗುವುದಿಲ್ಲ. ಕೇವಲ ಕರ್ಮಾನುಷ್ಠಾನವೇ ತಾರಕವಲ್ಲ. ಉತ್ತಮ ಜ್ಞಾನಾನುಸಂಧಾನ ಪೂರ್ವಕವಾಗಿ ಮಾಡುವ ಕರ್ಮಗಳು ಮಾತ್ರ ಶ್ರೀ ಹರಿಯ ಪ್ರೀತಿಗೆ ಕಾರಣವಾಗುವುವು. ಈ ಅಭಿಪ್ರಾಯವನ್ನೇ **ಶ್ರೀ ವಿಜಯದಾಸವರ್ಯರು** ತಮ್ಮ ಸುಳಾದಿಯಲ್ಲಿ-

"ಕರ್ಮಾದಾರಿಯುಪಿಡಿದು ಕಡೆ ಬಿದ್ದವರ ಕಾಣೆ ।
ನಿರ್ಮಲಾತ್ಮಕ **ವಿಜಯವಿಠ್ಠಲನ** ನೆರೆನಂಟು" ।

ಎಂದು ಸುಕರ್ಮದ ಮಾರ್ಗವನ್ನು ತೋರಿಸಿದ್ದಾರೆ.

ಶ್ರೀ ಹರಿಯ ಪಾದಕಮಲಗಳಲ್ಲಿ ನಮ್ಮ ಭಕ್ತಿ ತೈಲಧಾರೆಯಂತಿರಬೇಕು. ತೈಲಧಾರೆಯು ಏಕ ಪ್ರಕಾರವಾಗಿ ಅವಿಚ್ಛಿನ್ನವಾಗಿರುವುದು. ನಿರಂತರ ಅವಿಚ್ಛಿನ್ನವಾದ ಭಕ್ತಿಯಿಂದ ಮಾಡುವ ಕರ್ಮಗಳು ಮಾತ್ರ ತಾರಕ ಬಾಲಿಶರು, ಅಂದರೆ ಶುಷ್ಕ ಕರ್ಮಾನುಷ್ಠಾನ ಮಾಡುವ ಹಠಯೋಗಿಗಳು ಎಂದರ್ಥ. ಸಕಲ ಕರ್ಮಗಳೆಲ್ಲವನ್ನೂ ಶ್ರೀ ಹರಿಯ ಚರಣ ಕಂಜಗಳಿಗೆ ಅರ್ಪಿಸುತ್ತಾ ಅವನ ಸರ್ವಕರ್ತೃತ್ವವನ್ನು ಜ್ಞಾನ ದ್ವಾರಾ ತಿಳಿದು, ಭಕ್ತಿ ಭಾವದಿಂದ ಶ್ರೀ ಹರಿಯನ್ನು ಭಜಿಸುತ್ತಾ, ನಿರಂತರವೂ ಅವನ ಮಹಿಮಾತಿಶಯಗಳನ್ನು ಕೊಂಡಾಡುತ್ತಿರುವ ಜನರ ಕರ್ಮಗಳು ಸತ್ಕರ್ಮಗಳೆನಿಸಿ, ಶ್ರೀ ಹರಿಯ ಪ್ರೀತಿಗೆ ಪಾತ್ರರಾಗುವವು.

"ಮೂರ್ಖೋ ವೈಧೇಯ ಬಾಲಿಶ :"-**ಇತ್ಯಮರಃ**

ಹಠದಿಂದ ಸಾಧನ ಮಾಡುವ ಶುಷ್ಕ ಕರ್ಮಕರಿಗೆ ಬಾಲಿಶರೆಂದು ಕರೆದಿದ್ದಾರೆ.

## ಪದ್ಯ-೧೮

**ಮೂಲ:**

**ಕಮಲಸಂಭವ ಶರ್ವ ಶಕ್ರಾ |**
**ದ್ಯಮರರೆಲ್ಲರು ಇವನ ದುರತಿ |**
**ಕ್ರಮ ಮಹಿಮೆಗಳ ಮನವಚನದಿಂ ಪ್ರಾಂತಗಾಣದಲೆ ||**
**ಶ್ರಮಿತರಾಗಿ ಪದಾಬ್ಜ ಕಲ್ಪ |**
**ದ್ರುಮದ ನೆಳಲಾಶ್ರಯಿಸಿ ಲಕ್ಷ್ಮೀ |**
**ರಮಣ ಸಂತೈಸೆಂದು ಪ್ರಾರ್ಥಿಪರತಿಭಕುತಿಯಿಂದ ||೧೮||**

**ಅವತರಣಿಕೆ:**

ಬ್ರಹ್ಮಾದಿ ತೃಣಾಂತ ಸಮಸ್ತ ಜೀವರೂ ಶ್ರೀಹರಿಯ ಪಾದಾರವಿಂದಗಳನ್ನು ಆಶ್ರಯಿಸಿ, ಭಕ್ತಿಪೂರ್ವಕವಾಗಿ ಧ್ಯಾನಿಸುತ್ತಾರೆಂದು ತಿಳಿಸುತ್ತಾನೆ ||೧೮

**ಪ್ರತಿಪದಾರ್ಥ**

**ಕಮಲಸಂಭವ** = ಬ್ರಹ್ಮದೇವರು, **ಶರ್ವ** = ರುದ್ರದೇವರು, **ಶಕ್ರಾದಿ** = ಇಂದ್ರನೇ ಮೊದಲಾಗಿ, **ಅಮರರೆಲ್ಲರು** = ಸಮಸ್ತ ದೇವತೆಗಳು. **ಇವನ** = ಶ್ರೀ ಪರಮಾತ್ಮನ, **ದುರತಿಕ್ರಮ** = ತಿಳಿದುಕೊಳ್ಳುವುದಕ್ಕೆ ಅಶಕ್ಯವಾದ (ಮಿತಿ ಮೀರಿದ), **ಮಹಿಮೆಗಳ** = ಮಹಾತ್ಮ್ಯೆಯನ್ನು **ಮನ ವಚನದಿಂ** = ಮನಸಾ ಆಲೋಚನೆಯಿಂದಲಾಗಲೀ, ವಾಕ್ಯದಿಂದ ಹೇಳಿ ವಿವರಿಸಲೂ, **ಪ್ರಾಂತಗಾಣದಲೆ** = ಅಂತ್ಯ (ಕೊನೆ) ಕಾಣದೇ, **ಶ್ರಮಿತರಾಗಿ** = ಚಿತ್ತಭ್ರಮೆಯುಳ್ಳವರಾಗಿ, **ಪದಾಬ್ಜ** = ಶ್ರೀಹರಿಯ ಚರಣ ಕಮಲಗಳೆಂಬೋ, **ಕಲ್ಪದ್ರುಮ** = ಕಲ್ಪವೃಕ್ಷದ (ಸರ್ವಾಭೀಷ್ಟಪ್ರದವು), **ನೆಳಲಾಶ್ರಯಿಸಿ** = ಅನುಗ್ರಹಾರ್ಥ ಆಶ್ರಯ ಮಾಡಿ, **ಲಕ್ಷ್ಮೀರಮಣ** = ಇಂದಿರಾಪತಿಯಾದ ಶ್ರೀಮನ್ನಾರಾಯಣನೇ, **ಸಂತೈಸೆಂದು** = ಸಂರಕ್ಷಿಸೆಂದು, **ಅತಿಭಕುತಿಯಿಂದ** = ಅತಿಶಯವಾದ ಭಕ್ತಿ ಭಾವದಿಂದ, **ಪ್ರಾರ್ಥಿಪರು** = ಪ್ರಾರ್ಥನೆ ಮಾಡುತ್ತಾರೆ. ॥೧೮॥

## ವ್ಯಾಖ್ಯಾನಗಳು

### ೧ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ದೋಷದಿಂದ ನಿರ್ಮೂಲರಾಗಬೇಕಾದರೆ ತೃಣಜೀವಾರಂಭಮಾಡಿ ಬ್ರಹ್ಮಾಂತವರೆಗೆ ಪರಮಾತ್ಮನ ಭಕ್ತಿಪೂರ್ವಕವಾದ ಧ್ಯಾನವೇ ಪ್ರಾಯಶ್ಚಿತ್ತ ಎಂತ ಹೇಳುತಾರೆ.

ಬ್ರಹ್ಮದೇವರು, ರುದ್ರ ಇಂದ್ರ ಇವರೇ ಮೊದಲಾದ ಯಾವತ್ತೂ ಮಂದಿ ದೇವತೆಗಳು, ಈ ಪೂರ್ವೋಕ್ತ ಪರಮಾತ್ಮನ ತಿಳಕೊಂಬೋದಕ್ಕೆ ಅಶಕ್ಯವಾದ ಅತಿಕ್ರಮಿಸಿದ ಆದ್ಯಂತ ಶೂನ್ಯಗಳಾದ ಮಹಿಮೆಗಳ ಮನಸಾ ಆಲೋಚನೆ ಮಾಡಿನ್ನೂ ವಾಕ್ಯದಿಂದ ಉಚ್ಚಾರ ಮಾಡಿನ್ನೂ ಕೊನಿಗಾಣದೆ, ತಮ್ಮ ಯೋಗ್ಯತಾನುಸಾರ ತಿಳಕೊಂಬೋವರಾಗಿ, ಅಪಾರ ಮಹಿಮೆಗಳ

ಸಾಕಲ್ಯೇನ ತಿಳಕೊಂಬೋದಕ್ಕೆ ಯೋಗ್ಯತಾ ಇಲ್ಲದೆ ಚಿತ್ತಭ್ರಮೆಯುಕ್ತರಾಗಿ ಪರಮಾತ್ಮನ ಪಾದಕಮಲಗಳೆಂಬೋ ಸರ್ವಾಭೀಷ್ಟ ಕೊಡತಕ್ಕ ಕಲ್ಪ ವೃಕ್ಷದ ಅನುಗ್ರಹಾರ್ಥ ಆಶ್ರಯ ಮಾಡಿ, ರಮಾಪತಿಯಾದ ಶ್ರೀನಾರಾಯಣನೇ, ನಿನ್ನ ಮಹಾತ್ಮ್ಯ ತಿಳಕೊಂಬೋದಕ್ಕೆ ನಾವೇನು, ಲಕ್ಷ್ಮೀದೇವೇರೂನೂ ಸಮರ್ಥರಲ್ಲ. ನಿನಗೆ ನೀನೇ ಕರುಣಾ ಮಾಡಿ ಸಂರಕ್ಷಣ ಮಾಡಬೇಕಂತ ಅತ್ಯಂತವಾದ ಅವಿಚ್ಛಿನ್ನ ಭಕುತಿಯಿಂದ ಪ್ರಾರ್ಥನಾ ಮಾಡತಾರೆ, ಆದ್ದರಿಂದ ಸರ್ವಪಾಪಗಳು ಪರಿಹಾರವಾಗಬೇಕಾದರೆ ಪೂರ್ವೋಕ್ತಪ್ರಕಾರ ಧ್ಯಾನಯುಕ್ತರಾಗಿ, ಮಾಹಾತ್ಮ್ಯ ಜ್ಞಾನಪೂರ್ವಕ ಸುದೃಢ ಸ್ನೇಹರೂಪವಾದ ಭಕುತಿಯಿಂದ ಪ್ರಾರ್ಥಿಸಿದರೆ, ಪ್ರಾಯಶ್ಚಿತ್ತದಿಂದ ಹೋಗತಕ್ಕ ಪಾಪಗಳೇನು, ತದನ್ಯ ಪಾಪಗಳೇನು ಸಮೂಲವಾಗಿ ನಾಶವಾಗತವೆ. ಪ್ರಾಯಶ್ಚಿತ್ತರೂಪವಾದ ಕರ್ಮದಲ್ಲಿ ಲೋಪವಾದರೆ, ಆ ಲೋಪವಾದದ್ದಕ್ಕೆ ಬ್ಯಾರೇ ಪ್ರಾಯಶ್ಚಿತ್ತವಾಗಬೇಕು. ಕರ್ಮ, ಪ್ರಾಯಶ್ಚಿತ್ತ ಗಹನವಾದದ್ದು. ಅದಕಡಿಯಿಂದ ಶ್ರೀಶನ ಧ್ಯಾನರೂಪವಾದ ಪ್ರಾಯಶ್ಚಿತ್ತವೇ ಸರ್ವಕ್ಕೂ ಶ್ರೇಷ್ಠ ಎಂತ ತಿಳಿದು ಸರ್ವಕರ್ಮದಲ್ಲೂ ಶ್ರೀ ಪರಮಾತ್ಮನ ಧ್ಯಾನ, ಸ್ಮರಣವಿರಬೇಕಂತ ತಾತ್ಪರ್ಯ ||೧೮||

## ೨. ಭಾವ ಪ್ರಕಾಶಿಕೆ

ಲೋಕೇಶರಾದ ಬ್ರಹ್ಮದೇವರು, ರುದ್ರದೇವರು, ಇಂದ್ರದೇವರು ಮೊದಲಾದ ಮಹಾನುಭಾವರೆಲ್ಲರು, ಈ ಪರಮಾತ್ಮನ ಅಪಾರವಾದ ಮಹಾ ಮಹಿಮೆಗಳನ್ನು ಮನೋವಾಕ್ಕುಗಳಿಂದ ಸ್ತೋತ್ರಮಾಡಿ, ಪಾರಗಾಣದೆ, ಅವನ ಪಾದಾರವಿಂದವೆಂಬ ಕಲ್ಪವೃಕ್ಷದ ನೆಳಲನ್ನು ಆಶ್ರಯಿಸಿ, ಲಕ್ಷ್ಮೀಕಾಂತ! ನಮ್ಮನ್ನು ರಕ್ಷಿಸೆಂದು, ಪರಮ ಭಕ್ತಿಯಿಂದ ಪ್ರಾರ್ಥಿಸುವರು. ಹೀಗಿರಲು, ಮಿಕ್ಕಜನರು ಪರಮಾತ್ಮನನ್ನು ಆರಾಧಿಸದಿದ್ದರೆ ಗತಿಯಾಗಲಾರದೆಂದು ಬೇರೆಯಾಗಿ ಹೇಳಬೇಕೆ ? ಎಂದಿಗೂ ಒಳ್ಳೇ ಗತಿಯಾಗಲಾರದೆಂಬ ಭಾವ. ||೧೮||

## ೩. ಭಾವದರ್ಪಣ

ಬ್ರಹ್ಮಾದಿ ದೇವತೆಗಳು ತಮ್ಮ ತಮ್ಮ ಗತಿ ಹೊಂದೋ ಉದ್ದಿಶ್ಯ ಸಾಧನ ಮಾಡುವಾಗ್ಗೆ ಇತರರು ಸುಮ್ಮಗೆ ಇದ್ದರೆ ಹ್ಯಾಗೆ ಆದೀತೆಂದು ಭಾವ ತೋರಿಸುತ್ತಾರೆ. ಕಮಲಸಂಭವೇತಿ. ದುರತಿಕ್ರಮ = ದಾಟಲಿಕ್ಕೆ ಅಶಕ್ಯ ಎಂಬರ್ಥ. ॥೧೮॥

## ೪ ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

"ಕಮಲ" ಇತಿ॥ ದುಃಖೇನಾದಿ ಅತಿಕ್ರಾಂತುಂ ಪಾರಂ ಗಂತುಂ ಅಶಕ್ಯಃ ದುರತಿಕ್ರಮಃ॥ "ಪ್ರಸನ್ನತಾಪೋಪಶಮಾತಪತ್ರಮ್" ಇತ್ಯುಕ್ತೇಃ ॥೧೮॥

### ಕನ್ನಡಾರ್ಥ

ಯಾವನ ಮಹಿಮೆಯನ್ನು ಬಹು ಪರಿಶ್ರಮದ ಪ್ರಯತ್ನಗಳಿಂದಲೂ ಅತಿಕ್ರಮಿಸಲು ಸಾಧ್ಯವಿಲ್ಲವೋ ಅವನ ಮಹಿಮೆಯು ದುರತಿಕ್ರಮವೆನಿಸುವುದು.

ಭಾಗವತದಲ್ಲಿ ಶರಣಾಗತ ಭಕ್ತ ಜನರ ತಾಪಗಳನ್ನು ಉಪಶಮಗೊಳಿಸುವ ಆತಪತ್ರ ಭವತಾಪನಿವಾರಕ ಛತ್ರವೆಂದು ಪರಮಾತ್ಮನ ಪದಪದ್ಮವನ್ನು ಸ್ತುತಿಸಿರುತ್ತಾರೆ. ಅದನ್ನೇ ಈ ಪದ್ಯದಲ್ಲಿ "ಪದಾಬ್ಜಕಲ್ಪದ್ರುಮದ ನೆಳಲನಾಶ್ರಯಿಸಿ" ಎಂಬುದಾಗಿ ಅನುವಾದಿಸುತ್ತಾರೆ. ॥೧೮॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ಗುರು ಶಾಸ್ತ್ರಮುಖಾಂತರ ದೇವರನ್ನು ತಿಳಿದರೂ, ಯಥಾಶಕ್ತಿಯಲ್ಲದೆ ಪಾರಗಂಡವರಿಲ್ಲವೆಂದು ತಿಳಿಸುತ್ತಾರೆ, ಕಮಲ ಎಂದು. ಕಮಲಸಂಭವ ಎಂಬ ಬ್ರಹ್ಮ, ಶರ್ವನೆಂಬ ರುದ್ರ, ಶಕ್ರನೆಂಬ ಇಂದ್ರ ಮೊದಲಾದ

ಸರ್ವದೇವತೆಗಳೂ ಈ ವಿಷ್ಣುವಿನ ದುರತಿಕ್ರಮ ಮಹಿಮೆಗಳ ಅಂದರೆ, ಶ್ರಮಪಟ್ಟಾಗ್ಯೂ ಯೋಗ್ಯತೆ ಮೀರಿ ತಿಳಿಯುವುದಕ್ಕೆ ಅಸಾಧ್ಯವಾದ ಸ್ವಾತಂತ್ರ್ಯ ಸಾಮ್ಯಸಂಗಾದಿ ಗುಣಮಹಿಮೆಗಳನ್ನು ಕೊನೆಗಾಣದೆ, ವೇದ ಶಾಸ್ತ್ರ ವಿಚಾರ ಧ್ಯಾನಾದಿಗಳಿಂದ ಶ್ರಮಪಟ್ಟು ಆ ಸ್ವಾಮಿಯ ಪಾದವೆಂಬ ಕಲ್ಪವೃಕ್ಷದ ನೆರಳು ಆಶ್ರಯಿಸಿ, ಲಕ್ಷ್ಮೀರಮಣನೇ ನೀನೇ ರಕ್ಷಿಸೆಂದು ಅತಿ ಭಕ್ತಿಯಿಂದ ಪ್ರಾರ್ಥಿಸುವರು.

**ನಾಯಮಾತ್ಮಾ ಪ್ರವಚನೇನಲಭ್ಯೋ ನ ಮೇಧಯಾ ಬಹುನಾ ಶ್ರುತೇನ । ಯಮೇವೈಷ ವೃಣುತೇ ತೇನಲಭ್ಯಸ್ತ್ಯೈಷ ಆತ್ಮಾವಿ ವೃಣುತೇ ತನೂಂ ಸ್ವಾಂ** ಎಂಬ ಶ್ರುತ್ಯರ್ಥ ವಿವರಿಸಿತು ॥೧೮॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಶ್ರೀಪದ್ಮನಾಭರೂಪೀ ಶ್ರೀ ಹರಿಯ ನಾಭೀ ಕಮಲದಿಂದ ಅವನ ಇಚ್ಛಾಮಾತ್ರದಿಂದ ಸುವರ್ಣಾತ್ಮಕವಾದ ಕಮಲವು ಉತ್ಪನ್ನವಾಯಿತು. ಆನಾಭೀಕಮಲದಲ್ಲಿ ಚತುರ್ಮುಖ ಬ್ರಹ್ಮದೇವರು ಸೃಷ್ಟರಾದ ಇದರಿಂದ **ಕಮಲಸಂಭವ**ನೆಂದರೆ, ಚತುರ್ಮುಖ ಬ್ರಹ್ಮದೇವರು, ಋಜುಗಣಾಧಿಪರು, ಶ್ರೀ ರುದ್ರದೇವರಿಗೆ **ಶರ್ವ** ಎಂದು ಹೆಸರು. ಶರ್ವನಾಮಕರಾದ ಶಂಕರನು ಅಹಂಕಾರ ತತ್ವಾಭಿಮಾನಿಯು,

**ಶಕ್ರನೆಂದರೆ**, ಸುರಪತಿಯಾದ ಇಂದ್ರನೆಂದರ್ಥ, ಬ್ರಹ್ಮ, ರುದ್ರ, ಇಂದ್ರಾದಿ ಸಕಲ ದೇವತೆಗಳು ಅಪಾರ ಮಹಿಮಾಸಂಪನ್ನನಾದ ಆ ಅಪ್ರಮೇಯನ ಮಹಿಮೆಯನ್ನು ಸಾಕಲ್ಯೆನ ತಿಳಿಯಲಾರರು ಶ್ರಮಪಟ್ಟರೂ ತಿಳಿಯಲಶಕ್ಯ, ಇದರಿಂದ **ದುರತಿಕ್ರಮ** ಎಂದಿದ್ದಾರೆ. "ಅತಿಕ್ರಮ"- ಎಂದರೆ ಕ್ರಮಿಸಲು ಸಾಧ್ಯ. ದುರತಿಕ್ರಮವೆಂದರೆ, ಅವರ ಯೋಗ್ಯತೆಗೆ ಮೀರಿದ್ದು ಎಂದರ್ಥ. ಮನಸ್ಸಿನಿಂದ ಆಲೋಚನೆ ಮಾಡಿ ತಿಳಿಯುವುದಕ್ಕಾಗಲೀ, ಅವನ ಮಹಾಮಹಿಮೆಗಳನ್ನು ಇಷ್ಟೇ ಎಂದು ವಚನದಿಂದಾಗಲೀ **(ಮನವಚನದಿಂ)** ವಿವರಿಸಲು ಅಸಾಧ್ಯನಂತಕಾಲದಿಂದಲೂ

ಅಸಾಧ್ಯ. ಆ ಅಪಾರ ಗುಣಸಾಗರನ ಮಹಿಮಾತಿಶಯಗಳ ಅಂತ್ಯವನ್ನು (ಕೊನೆ) ಯಾರೂ ಕಡೆಗಾಣರು, (**ಪ್ರಾಂತ**-ಕೊನೆ ಅಥವಾ ಅಂತ್ಯ), ಸಾದ್ಯಂತವಾಗಿ ತಿಳಿಯಲು ಸಾಧ್ಯವೇ ಇಲ್ಲ. ವೇದಶಾಸ್ತ್ರಾದಿ ಧ್ಯಾನ ಮನನಗಳಿಂದ ಶ್ರಮಪಟ್ಟು, ಅವನ ಪ್ರಾಂತಗಾಣದೇ, ಕಲ್ಪ ವೃಕ್ಷ ಸದೃಶನಾಗಿರುವ ಆ ಕರುಣಾಮಯನ ಆಶ್ರಯವೆಂಬ ನೆರಳನ್ನು ಸೇರಿ-"ಮಹಾಮಹಿಮನೇ, ಹೇ ಲಕ್ಷ್ಮೀಪತಿಯೇ, ನೀನು ಅಪಾರ ಮಹಿಮಸಂಪನ್ನನು ನಿನ್ನನ್ನು ಯಾರೂ ಸಾದ್ಯಂತವಾಗಿ ಅಂದರೆ ಸಾಕಲ್ಯೇನ ಅರಿಯಲು ಅಸಾಧ್ಯ. ಅಪರಿಮಿತ ಅಪರಿಚ್ಛಿನ್ನ ಗುಣಾತಿಶಯವುಳ್ಳ ಅಪ್ರಮೇಯು ನೀನಾಗಿದ್ದಿ. ನಾವು ಅಸ್ವತಂತ್ರರು. ನಿನ್ನ ಅಧೀನದಲ್ಲಿ ಸದಾ ಇದ್ದೇವೆ. ನೀನೇ ನಮ್ಮನ್ನು ಅನುಗ್ರಹಿಸಿ, ಸಂರಕ್ಷಿಸು"-ಎಂದು ಮಹಾತ್ಮಜ್ಞಾನಪೂರ್ವಕವಾದ ಸುಧೃಢ ಸ್ನೇಹರೂಪವಾದ ಭಕ್ತಿ ಭಾವದಿಂದ ಸಕಲ ದೇವತಾವರ್ಗ ನಿರಂತರವೂ ಆ ನಿಗಮಾತೀತನನ್ನು ಪ್ರಾರ್ಥಿಸುವರು,

**ಪ್ರಮಾಣ :**

"ನಾಯಮಾತ್ಮಾ ಪ್ರವಚನೇನ ಲಭ್ಯಃ ನಮೇಧಯಾ ಬಹುನಾ ಶ್ರುತೇನ । ಯಮೇವೈಷ ವೃಣತೇ ತೇ ನಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ತನೂಂ ॥" **ಶ್ರುತ್ಯರ್ಥ** ॥೧೮॥

## ಪದ್ಯ-೧೯

**ಮೂಲ :**

**ವಾರಿಚರವೆನಿಸುವವು ದುರ್ಧರ ।**
**ತಾರಕಗಳಿಂದರಿದು ಭೇಕವ ।**
**ನೇರಿ ಜಲಧಿಯ ದಾಟುವೆನು ಎಂಬುವನ ತೆರನಂತೆ ॥**
**ತಾರತಮ್ಯಜ್ಞಾನಶೂನ್ಯರು ।**
**ಸೂರಿಗಮ್ಯನ ತಿಳಿಯಲರಿಯದೆ**
**ಸೌರಶೈವಮತಾನುಗರನನುಸರಿಸಿ ಕೆಡುತಿಹರು ॥ ॥೧೯॥**

**ಅವತರಣಿಕೆ :**

ತಾರತಮ್ಯ ಜ್ಞಾನ ರಹಿತವಾದ ಮಂದಮತಿಗಳು ಜ್ಞಾನಗಮ್ಯನಾದ ಆ ನಿತ್ಯಾನಂದಮೂರ್ತಿಯ ಅನುಗ್ರಹದಿಂದ ದುಸ್ತರವಾದ ಸಂಸಾರ ಸಾಗರವನ್ನು ದಾಟಲು ಮಾರ್ಗ ತಿಳಿಯದೆ. ಸೌರಶೈವ ಇತ್ಯಾದಿ ಅನ್ಯ ಮತಗಳನ್ನು ಅನುಸರಿಸಿ ಕೆಡುವರು ಎಂದು ತಿಳಿಸುತ್ತಾರೆ. ॥೧೯॥

**ಪ್ರತಿಪದಾರ್ಥ :**

**ದುರ್ದರ=** ಒಂದು ಜಾತಿಯ ಕಪ್ಪೆಗಳು, **ವಾರಿಚರವೆನಿಸುವುವು=** ನೀರಿನಲ್ಲಿ ಸಂಚರಿಸುವ ಪ್ರಾಣಿಗಳೆಂದು ಕರೆಯಲ್ಪಡುವುದು (ಜಲಚರಗಳು) **ತಾರಕನೆಂದರಿದು=** ಅಂತಹ ಕಪ್ಪೆಯನ್ನೇ ಸಮುದ್ರವನ್ನು ದಾಟಿಸುವ ಸಾಧನವೆಂದು ತಿಳಿದು **ಭೇಕವನೇರಿ=** ಕಪ್ಪೆಯಮೇಲೆ ಕುಳಿತುಕೊಂಡು, **ಜಲಧಿಯ=** ಸಮುದ್ರವನ್ನು **ದಾಟುವೆನು ಎಂಬುವನತೆರನಂತೆ=** ದಾಟುತ್ತೇನೆ ಎಂದು ತಿಳಿಯುವವನೋಪಾದಿಯಲ್ಲಿ, **ತಾರತಮ್ಯಜ್ಞಾನ ಶೂನ್ಯರು=** ಪಂಚಬೇಧ, ತಾರತಮ್ಯ, ಹರಿಯ ಸರ್ವೋತ್ತಮತ್ವ, ವಾಯು ಜೀವೋತ್ತಮತ್ವ, ಜಗತ್ಸತ್ಯತ್ವ ಜ್ಞಾನವಿಲ್ಲದ ಜನರು, **ಸೂರಿ ಗಮ್ಯನ=** ಜ್ಞಾನಿಗಳಿಂದ ಹೊಂದಲ್ಪಡುವ ಶ್ರೀ ಪರಮಾತ್ಮನನ್ನು **ತಿಳಿಯಲು ಅರಿಯದೆ=** ತಿಳಿಯಲು ಅಶಕ್ಯರಾಗಿ, **ಸೌರ=** ಸೂರ್ಯನೇ ಸರ್ವೋತ್ತಮ ಎಂದ ಸಾರುವ ಮತ, **ಶೈವ=** ಶಿವ ಸರ್ವೋತ್ತಮತ್ವ ಪ್ರತಿ ವಾದಕವಾದ, **ಮತಾನುಗರನು=** ಅನ್ಯ ಮತಾವಲಂಬಿಗಳನ್ನು (ಭೇಕ ಸದೃಶ), **ಅನುಸರಿಸಿ=** ಅವಲಂಬನ ಮಾಡಿ, **ಕೆಡುತಿಹರು=** ನಾಶ ಹೊಂದುವರು ॥೧೯॥

## ವ್ಯಾಖ್ಯಾನಗಳು

### ೧ ಶ್ರೀ ಸಂಕರ್ಷಣ ಒಡೆಯರವ್ಯಾಖ್ಯಾನ

ಕರ್ಮ ಪ್ರಾಯಶ್ಚಿತ್ತಕ್ಕೆ ದೃಷ್ಟಾಂತವನ್ನೂ, ಹರಿಭಕ್ತಿ ಮಾಡದವ ದುಃಖ

ಐದತಾನೆ ಎಂಬೋದಕ್ಕೆ ದೃಷ್ಟಾಂತವನ್ನೂ ಹೇಳತಾರೆ.

ಕಪ್ಪೆಗಳು ಜಲಚರಜೀವಗಳೆಂದು ಕರಸತವೆ. ಸಮುದ್ರೋದಕಗತ ಈ ಕಪ್ಪೆಗಳವ್ಯಾಲೆ ಕೂತು ಹೋದರೆ ಸಮುದ್ರದ ಆಚೆಕಟ್ಟೆ ಸೇರಿಸೋವಾಗತವೆ. ಈ ಕಪ್ಪೆಗಳೇ ತಾರಕಗಳೆಂದು ತಿಳಿದವನಾಗಿ, ಈ ಕಪ್ಪೆಗಳ ವ್ಯಾಲೆ ಕೂತವನಾಗಿ ಸಮುದ್ರವ ದಾಟುವೆನು ಎಂಬುವನೋಪಾದಿಯಲ್ಲಿ (ಅಂದರೆ ಅದು ಹ್ಯಾಂಗೆ ಅಸಂಭಾವಿತವೋ ಅದೆರಂತೆ) ಪಾಪಾಖ್ಯ ಸಮುದ್ರದಾಟೋ ಉದ್ದಿಶ್ಯ, ಸುಕರ್ಮರೂಪವಾದ ಪ್ರಾಯಶ್ಚಿತ್ತಗಳೆಂಭೋ ಕಪ್ಪೆಗಳವ್ಯಾಲೆ ಏರೋಣದರಿಂದ ಪಾಪಸಮುದ್ರದಾಟಲಾರ ಎಂತ ಅರ್ಥ. ಸಮುದ್ರದಾಟ ಬೇಕಾದರೆ ನಾವಿಯೇ ಆಗಬೇಕು. ಪರಮಾತ್ಮನ ಧ್ಯಾನ ಸೇವಾದಿಗಳೇ ಆ ನಾವಿಯು. ಅನ್ಯಸಾಮಗ್ರಿಗಳಿಂದ ದಾಟೋಣ ಆಗೋದಿಲ್ಲ. ಇದರನ್ನ ಬಿಟ್ಟವರಾಗಿ ಶ್ರೀಹರಿಸರ್ವೋತ್ತಮ, ವಾಯುಜೀವೋತ್ತಮ, ತಾರತಮ್ಯ ಪಂಚಭೇದಜ್ಞಾನವೆಂಬ ಜ್ಞಾನಾಖ್ಯನಾವಿದ್ವಾರಾ ಸಂಸಾರಸಮುದ್ರದಾಟ ಬೇಕು. ಅನ್ಯಮಾರ್ಗಗಳಿಂದ ಆಗೋದಿಲ್ಲ ಎಂಬ ಜ್ಞಾನಶೂನ್ಯರಾದವರು ಜ್ಞಾನಿಗಳಿಂದ ತಿಳಿದ ಪರಮಾತ್ಮನೆಂಬೋ ನಾವಿದ್ವಾರಾ ಸಂಸಾರಸಮುದ್ರ ದಾಟಬೇಕೆಂಬೋದರನ್ನ ತಿಳಿಯದೆ, ಸೂರ್ಯ, ಈ ಸೂರ್ಯನೇ ಸರ್ವೋತ್ತಮ ಎಂತಲೂ, ರುದ್ರ, ಈ ರುದ್ರನೇ ಸರ್ವೋತ್ತಮ ಎಂತಲೂ ತಿಳಿದಿರುವ ಭೇಕಸದೃಶವಾದ ಮತಗಳ, ಆಯಾ ಮತಾವಲಂಬಿಗಳು ರುದ್ರ ಗಣಪತಿ ಸೂರ್ಯಾದಿಗಳ ಆಶ್ರಯ ಮಾಡಿ ರುದ್ರ ಸೂರ್ಯ ಮೊದಲಾದವರದ್ವಾರಾನೇ ಸುಖಗಳಿಂದ ನಾಶ ಐದಿ, ಅಂಧಂತಮೋಲೋಕದಲ್ಲಿ ದುಃಖಾನುಭವ ಮಾಡತಾರೆ. ರುದ್ರಾದಿ ದೇವತೆಗಳು ಸರ್ವೋತ್ತಮರಲ್ಲ, ಅವರಿಗೆ ಮೋಕ್ಷ ಕೊಡೋ ಶಕ್ತಿಯಿಲ್ಲ ಶ್ರೀಪರಮಾತ್ಮ ಒಬ್ಬನೇ ಮೋಕ್ಷಕೊಡುವವನು ಎಂತ ತಿಳಿದು ಉಪಸನ ಮಾಡತಾ ಬಂದರೆ ಕರ್ಮವಿಮೋಚನಿಯಾಗತಾ ಬರತದೆ ಎಂತ ತಾತ್ಪರ್ಯ ॥೧೯॥

## ೨. ಭಾವಪ್ರಕಾಶಿಕೆ

ಲೋಕದಲ್ಲಿ ಸಮುದ್ರ ಮೊದಲಾದವುಗಳನ್ನು ದಾಟಬೇಕಾದರೆ

ತೆಪ್ಪಗಳು ನಾವಿಗಳು (ಹಡಗುಗಳು) ಇವುಗಳು ಅದಕ್ಕೆ ಸಾಧಕವಾಗಿರುವವು. ಇದನ್ನರಿಯದೆ ಹಡಗುಗಳೂ ನೀರಿನಲ್ಲಿ ಓಡಾಡುತ್ತಿರುವುವು, ಕಪ್ಪೆಗಳೂ ನೀರಿನಲ್ಲಿ ಓಡಾಡುತ್ತಿರುವವು, ಅದ್ದರಿಂದ ಕಪ್ಪೆಗಳ ಮೇಲೇರಿ ಸಮುದ್ರವನ್ನೇಕೆ ದಾಟಬಾರದೆಂಬ ಕುಯುಕ್ತಿಯಿಂದ ಅವುಗಳ ಮೇಲೆ ಕೂತುಕೊಳ್ಳಲು ಪ್ರಯತ್ನಮಾಡುವವರು ಹೇಗೆ ಕೆಡುವರೋ, ಹಾಗೆಯೇ ಹರಿ ಸರ್ವೋತ್ತಮನು, ಅವನಕಿಂತಲೂ ಅನೇಕ ಗುಣಗಳಿಂದ ಲಕ್ಷ್ಮೀದೇವಿಯರು ಕಮ್ಮಿಯಾದವರು ಬ್ರಹ್ಮವಾಯುಗಳು ಅವರಕಿಂತಲೂ ಕಮ್ಮಿಯಾದವರೆಂಬ ತಾರತಮ್ಯವನ್ನು ಬೋಧಿಸುವ ಮಧ್ವಮತವನ್ನು ಬಿಟ್ಟು ಸೂರ್ಯನೇ ಸರ್ವೋತ್ತಮನು, ಶಿವನೇ ಸರ್ವೋತ್ತಮನೆಂದು ಉಪಾಸನೆ ಮಾಡುವವರ ಮತವನ್ನಾಶ್ರಯಿಸಿ ಕೆಡುತ್ತಿರುವರು. ॥೧೩॥

## ೩ ಭಾವ ದರ್ಪಣ

ಅನ್ಯದೇವತೆಗಳಾರಾಧನೆಯಿಂದ ಕೆಡುತ್ತಾರೆಂದು ಹೇಳುತ್ತಾರೆ. ವಾರಿಚರೇತಿ ಭೇಕ = ಕಪ್ಪೆ ಎಂಬರ್ಥ ॥೧೯॥

## ೪ ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

"ವಾರಿ" ಇತಿ ॥೧೯॥

## ಕನ್ನಡಾರ್ಥ

ತಾರತಮ್ಯಜ್ಞಾನದಿಂದ ಪರಮಾತ್ಮನ ಸರ್ವೋತ್ತಮತ್ವವನ್ನು ತಿಳಿಯದೆ ಅನ್ಯಮತಾವಲಂಬನದಿಂದ ಕೆಡುವರು ; ಎಂಬುದಾಗಿ ಈ ಪದ್ಯದಿಂದ ಹೇಳುತ್ತಾರೆ ॥೧೯॥

## ೫ ಶ್ರೀ ಗುರು ಹೃದಯ ಪ್ರಕಾಶಿಕೆ

ಇತರ ಮತ ಗುರು ಶಾಸ್ತ್ರಗಳು ತಾರಕವಾಗಲಾರವೆಂದು ಸದೃಷ್ಟಾಂತ

ತಿಳಿಸುತ್ತಾರೆ, ವಾರಿಚರ ಎಂದು. ದರ್ದುರವೆಂಬ ಕಪ್ಪೆಯು ಸದಾ ವಾರಿ ಎಂಬ ನೀರಿನಲ್ಲಿ ಸಂಚರಿಸುವುದ್ದರಿಂದ ವಾರಿಚರವೆಂದು ಕರೆಸುವುದು. ವಾರಿ ಚರವೆಂದರೆ ಹಡಗಿಗೂ ಅರ್ಥವಾಗುವುದು. ಇದನ್ನು ಬಿಟ್ಟು ದರ್ದುರವೆಂಬ ಕಪ್ಪೆಯ ಮೇಲೆ ಹತ್ತಿಕೊಂಡರೆ ತಾರಕಗಳೂ ಎಂದರೆ ಸಮುದ್ರವನ್ನು ದಾಟಿಸುವುವು ಎಂದು ತಿಳಿದು. ಆ ಕಪ್ಪೆಯನ್ನು ಹತ್ತಿ ಸಮುದ್ರವನ್ನು ದಾಟುವೆನೆಂಬುವವನ ಮನೋರಥ ಹೇಗೆ ಎಂದಿಗೂ ಆಗುವುದಿಲ್ಲವೋ ಹಾಗೆ ಮನುಷ್ಯಾರಭ್ಯ ಬ್ರಹ್ಮಾಂತ ತಾರತಮ್ಯವನ್ನು ಶ್ರುತಿ ಮೂಲಕ ಅರಿಯ ದವನು, ಜ್ಞಾನಿಗಳಿಗೆ ಪ್ರಾಪ್ಯನಾದ ಶ್ರೀ ವಿಷ್ಣುವನ್ನು ತಿಳಿಯುವುದಕ್ಕೂ ಶಕ್ತಿ ಇಲ್ಲದೆ ಸೂರ್ಯನು ಸರ್ವೋತ್ತಮ ಪಶುಪತಿ ಸರ್ವೋತ್ತಮನೆಂದು ಹೇಳುವ ಸೌರ ಶೈವ ಮೊದಲಾದ ಮತದವರನ್ನನುಸರಿಸಿ ಸದ್ಗತಿಯಿಲ್ಲದೆ ಕೊನೆಗೆ ಕೊಡುವನು.

**ಏಷ ನಿಷ್ಕಂಟಕಃ ಪಂಥಾ ಯತ್ರ ಸಂಪೂಜ್ಯತೇ ಹರಿಃ ।**
**ಕುಪಥಂ ತಂ ವಿಜಾನೀಯಾದ್ಗೋವಿಂದ ರಹಿತಾಗಮಂ॥**

ಎಂಬ ಭಾರತಾರ್ಥ ವಿವರಿಸಿತು. ॥೧೩॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ದುರ್ದುರವೆಂಬ ಒಂದು ಜಾತಿಯ ಕಪ್ಪೆಯು ಯಾವಾಗಲೂ ಸಮುದ್ರ ದಲ್ಲಿಯೇ ಇರುವುದು. ಸಾಮಾನ್ಯವಾಗಿ ಕಪ್ಪೆಗಳು ದ್ವಿಚರ ಪ್ರಾಣಿಗಳು ಅಂದರೆ ಭೂಮಿಯ ಮೇಲೂ ಮತ್ತು ನೀರಿನಲ್ಲಿಯೂ ವಾಸಿಸುವುವು. ದುರ್ದುರವೆಂಬ ಜಾತಿಯ ಕಪ್ಪೆಯು ಯಾವಾಗಲೂ ಜಲಚರಜಂತುವಾಗಿದೆ. ಅಪಾರವಾದ ಸಮುದ್ರವನ್ನು ದಾಟಬೇಕಾದರೆ, ಹಡಗು (ನಾವೆ) ಅತ್ಯಗತ್ಯ, ನಾವೆಯೂ ನೀರಿನ ಮೇಲೆ ಸಂಚರಿಸುವುದು. ಭೇಕವೂ ಸಹ (ಕಪ್ಪೆ) ನೀರಿನಲ್ಲಿ ಸಂಚಾರ ಮಾಡುವುದು. ತಾರಕವಾದ ನಾವೆಯನ್ನು ಬಿಟ್ಟು. ಅಜ್ಞಾನಿಯಾದವನು ಕಪ್ಪೆಯ ಬೆನ್ನಿನ ಮೇಲೇರಿ, ಸಮುದ್ರವನ್ನು ದಾಟುವೆ ನೆಂದು ಹೋದರೆ, ಅದು ಸಾಧ್ಯವೇ ? ಕೇವಲ ಅಸಂಭಾವಿತವು. ಅಂತೆಯೇ

ಪಾಪರಾಶಿ ಎಂಬ ಮಹಾಸಾಗರವನ್ನು ದಾಟಲು ಶ್ರೀ ಹರಿಯ ಸ್ಮರಣೆ, ಧ್ಯಾನ, ಉಪಾಸನಾದಿಗಳು ಅತ್ಯವಶ್ಯಕ. ಹರಿಯ ನಾಮವೇ ಭವಸಾಗರ ತಾರಕವಾದ ನಾವೆಯು ಸರ್ವೋತ್ತಮನಾದ ಶ್ರೀಹರಿಯನ್ನು ಬಿಟ್ಟು, ಭೇಕ ವನ್ನೇರಿದ ಅಜ್ಞಾನಿಯಂತೆ, ಸೌರ, ಗಾಣಪತ್ಯ, ಶೈವ ಇತ್ಯಾದಿ ಅನ್ಯಮತ ಗಳನ್ನು ಆಶ್ರಯಿಸಿ, ಮುಕ್ತಿ ಎಂಬ ದಡವನ್ನು ಸೇರದೆ, ಭವಸಾಗರದಲ್ಲಿ ಮುಳುಗಿ, ನಾಶವಾಗುವರು. ಅನ್ಯಮತಗಳು ಭೇಕಸದೃಶ (ತುಚ್ಛವಾದುವು) ಶ್ರೀ ಹರಿಯ ನಾಮಸ್ಮರಣೆ, ಶ್ರೀ ಹರಿಸರ್ವೋತ್ತಮ ಜ್ಞಾನ, ವಾಯು ಜೀವೋತ್ತಮತ್ವ ಜ್ಞಾನ, ಪಂಚಭೇದ ತಾರತಮ್ಯಗಳ ಅರಿವು, ಜಗತ್ಸತ್ಯತ್ವ ದಲ್ಲಿ ಧೃಡವಾದ ನಂಬಿಕೆ ಈ ಸುಜ್ಞಾನಗಳೇ ಭವತಾರಕವಾದ ನಾವೆಯು ಪಾಪಕರ್ಮಗಳೆಂಬ ಸಮೂಹವೇ ಸಮುದ್ರವು. ಪಂಚಬೇಧ ತಾರತಮ್ಯ ಜ್ಞಾನ ರಹಿತರಾದವರು ಭೇಕವನ್ನೇರುವ ಅಜ್ಞಾನಿಗಳ ಸದೃಶ. ಸೂರ್ಯನೇ ಸರ್ವೋತ್ತಮನೆಂಬ ಸೌರಮತ, ರುದ್ರನೇ ಸರ್ವೋತ್ತಮನೆಂಬ ಶೈವಮತ, ಗಣಪತಿಯೇ ಸರ್ವಶ್ರೇಷ್ಠನೆಂಬ ಗಾಣಪತ್ಯಮತ ಇತ್ಯಾದಿ ಅನ್ಯಮತ ಗಳೆಲ್ಲವೂ ಅಪಾರವಾದ ಭವಸಾಗರವನ್ನು ದಾಟಿಸಿ, ಜೀವನ ಉದ್ಧಾರಕ್ಕೆ, ಅಂದರೆ ಅವನ ಮೋಕ್ಷ ಪ್ರಾಪ್ತಿಗೆ ಕಾರಣವಾಗಲಾರವು ಎಂದು ಧೃಡನಿಶ್ಚಯ ದಿಂದ ಪ್ರತಿಜ್ಞೆ ಮಾಡುತ್ತಾರೆ ಜ್ಞಾನಿವರೇಣ್ಯರಾದ ದಾಸವರ್ಯರು. ಪಂಚ ಬೇಧ ತಾರತಮ್ಯ ಮತವೊಂದೇ ಸದ್ಗತಿಗೆ ಸಾಧನವಾದ ತಾರಕಮಾರ್ಗ.

"ಏಷನಿಷ್ಕಂಟಃ ಪಂಥಾ ಯತ್ರ ಸಂಪೂಜ್ಯತೇ ಹರಿಃ ।
ಕುಪಥಂ ತಂ ವಿಜಾನಿಯಾದ್ಗೋವಿಂದರಹಿತಾಗಮಮ್ ॥ **-ಭಾರತಾರ್ಥೆ**

ಎಲ್ಲಿ ಶ್ರೀಹರಿಯು ಸಂಪೂಜ್ಯನೋ ಆಮತವೇ ನಿಷ್ಕಂಟಕವು, ಗೋವಿಂದನ ರಹಿತವಾದ ಶಾಸ್ತ್ರಗಳು ಕುಪಥಗಳು ॥೧೯॥

# ಪದ್ಯ-೨೦

**ಮೂಲ:**

**ಕ್ಷೋಣಿಪತಿಸುತನೆನಿಸಿ ಕೈದು ।**
**ಗ್ಗಾಣಿಗೊಡ್ಡುವ ತೆರದಿ ಸುಮನಸ ।**
**ಧೇನು ಮನೆಯೊಳಗಿರಲು ಗೋಮಯ ಬಯಸುವಂದದಲಿ ॥**
**ವೇಣುಗಾನಪ್ರಿಯನ ಅಹಿಕ ಸು ।**
**ಖಾನುಭವ ಬೇಡದಲೆ ಲಕುಮಿಾ ।**
**ಪ್ರಾಣನಾಥನ ಪಾದಭಕುತಿಯ ಬೇಡು ಕೊಂಡಾಡು ॥ ॥೨೦॥**

**ಅವತರಣಿಕೆ ;**

ಸರ್ವೋತ್ತಮನೂ, ಸರ್ವಾಭೀಷ್ಟಪ್ರದನೂ ಆದ ಆ ಸರ್ವೇಶನಲ್ಲಿ ಕೇವಲ ಕ್ಷಣಿಕವಾದ ವಿಷಯಭೋಗರೂಪವಾದ ಅಹಿಕ ಸುಖವನ್ನು ಎಂದೆಂದಿಗೂ ಬೇಡ ಬೇಡ ಅವನ ಪಾದಾರವಿಂದಗಳಲ್ಲಿ ಭಕ್ತಿಯನ್ನು ಬೇಡಿ, ಅವನನ್ನು ಅನವರತವೂ ಕೊಂಡಾಡುತ್ತಿರೆಂದು ಸದ್ಗತಿಯ ಪಥವನ್ನು ತೋರಿಸಿದ್ದಾರೆ ದಾಸರಾಯರು ॥೧೪॥

**ಪ್ರತಿಪದಾರ್ಥ :**

**ಕ್ಷೋಣಿಪತಿ** = ಭೂಮಿಯನ್ನು ಪಾಲನ ಮಾಡುವ ರಾಜನ. **ಸುತನೆನಿಸಿ** = ಮಗನಾದವನು, **ದುಗ್ಗಾಣಿಗೆ** = ಎರಡು ಕಾಸಿಗೋಸ್ಕರವಾಗಿ. **ಕೈ ಒಡ್ಡುವತೆರದಿ** = ಕೈ ಚಾಚಿ,ಬೇಡುವಂತೆ, **ಸುಮನಸಧೇನು** = ಸ್ವರ್ಗದ ಹಸುವಾದ ಕಾಮಧೇನುವು, **ಮನೆಯೊಳಗಿರಲು** = ಮನೆಯಲ್ಲಿ ಇರುತ್ತಿರಲಾಗಿ, **ಗೋಮಯ** = ಸಗಣಿಯನ್ನು, **ಬಯಸುವಂದದಲಿ** = ಅಪೇಕ್ಷಿಸುವವರಂತೆ, **ವೇಣುಗಾನಪ್ರಿಯನ** = ಕೊಳಲಿನ ರೂಪದಲ್ಲಿರುವ ಶ್ರೀ ಲಕ್ಷ್ಮೀ

ದೇವಿಯರಿಗೆ ಅತ್ಯಂತ ಪ್ರೀತಿ ವಿಷಯಕನಾದ ಶ್ರೀಹರಿಯಲ್ಲಿ. **ಐಹಿಕ ಸುಖಾನುಭವ**= ನಶ್ವರವಾದ ಪ್ರಾಪಂಚಿಕ ಸುಖವನ್ನು, **ಬೇಡದಲೆ**= ಪ್ರಾರ್ಥಿಸದೇ, **ಲಕುಮಿಾ ಪ್ರಾಣನಾಥನ**= ಶ್ರೀ ಲಕ್ಷ್ಮೀದೇವಿ, ಶ್ರೀವಾಯುದೇವರು ಇವರಿಗೆ ಸ್ವಾಮಿಯಾದ ಶ್ರೀ ಪರಮಾತ್ಮನ, **ಪಾದ ಭಕುತಿಯ**= ಚರಣಕಮಲಗಳಲ್ಲಿ ನಿಶ್ಚಲವಾದ ಭಕ್ತಿ ಎಂಬ ಭಾಗ್ಯವನ್ನು, **ಬೇಡು**= ಕೊಡೆಂದು ಪ್ರಾರ್ಥಿಸುವವನಾಗು, **ಕೊಂಡಾಡು**= ಅವನ ಮಹಾತ್ಮ್ಯವನ್ನು ಹೊಗಳಿ ಸ್ತೋತ್ರ ಮಾಡು ॥೨೦॥

## ವ್ಯಾಖ್ಯಾನಗಳು

### ೧ ಸಂಕರ್ಷಣ ಒಡೆಯರ ವ್ಯಾಖ್ಯಾನ

ಅನ್ಯ ದೇವತಿಗಳಾದ ರುದ್ರಾದಿ ದೇವತಿಗಳ ಸರ್ವೋತ್ತಮತ್ವೇನ ಭಜಿಸಿದವರಿಗೆ ಅಂಧಂತಮದುಃಖ ಪ್ರಾಪ್ತಿ. ಆದ್ದರಿಂದ ಅನ್ಯ ಸೂರ್ಯ ಶಿವಾದಿಗಳ ಸರ್ವೋತ್ತಮತ್ವೇನ ತಿಳೀಕೂಡದು ಎಂತಲೂ, ಐಹಿಕಸುಖಕ್ಕಾಗಿ ಪರಮಾತ್ಮನ ಬೇಡಬ್ಯಾಡಾ ಎಂತಲೂ ಹೇಳತಾರೆ.

ಭೂಮಿಯನ್ನು ಪರಿಪಾಲನಿ ಮಾಡತಕ್ಕ ಅರಸನ ಪುತ್ರ ಎನಿಸಿ, ಬೇಕಾದ ಇಷ್ಟಾರ್ಥಗಳನ್ನು ಪೂರ್ತಿಮಾಡತಕ್ಕ ತನ್ನ ತಂದಿಯನ್ನು ಕುರಿತು ಎರಡು ಪೈಸಾಗೋಸ್ಕರ ತನ್ನ ಕರಗಳ ನೀಡಿ ಬೇಡಿದೋಪಾದಿಯಲ್ಲಿ, ಸ್ವರ್ಗಲೋಕಗತ ದೇವತಿಗಳ ಆಕಳು ಆದ ಕಾಮಧೇನು ಸರ್ವ ಇಷ್ಟಾರ್ಥಗಳ ಕೊಡತಕ್ಕದ್ದು. ಇಂಥಾಕಾಮಧೇನು ಮನಿಯೊಳಗೆ ಇರಲಾಗಿ, ಅದರ ಬಳಿಗೆ ಹೋಗಿ ಸೆಗಣಿ ಬೇಕು ಎಂತ ಅಪೇಕ್ಷಿಸಿ ಯಾಚನ ಮಾಡಿದೋಪಾದಿಯಲ್ಲಿ, ಹದಿನಾಲ್ಕು ಲೋಕಕ್ಕೆ ರಾಜನಾದ ಕ್ಷೋಣಿಪತಿ ಸಾಂಕೇತನಾದ ಪರಮಾತ್ಮಗೆ ಪುತ್ರರಾದವರು ಪ್ರಾಣಿಗಳಾದ ನಾವು, ನಮಗೆ ತಂದಿ ಪರಮಾತ್ಮ ಕಾಮಧೇನು ಸದೃಶನಾದವ, ಈ ದೇಹಾಖ್ಯಮನೆಗಳ ಒಳಗೆ ಇದ್ದಾನೆ. ಇಂಥಾ ಪರಮಾತ್ಮ ಅವರವರ ಯೋಗ್ಯತಾನುಸಾರ ಸರ್ವ ಅಭೀಷ್ಟಗಳ ಕೊಡತಕ್ಕವ. ಲಕ್ಷೀದೇವೇರು ಗಾನ ಮಾಡೋದಕ್ಕೆ ವೇಣುರೂಪ ಧರಿಸಿ

ಶ್ರೀ ಕೃಷ್ಣನ ಮುಖಕಮಲಗಳ ಮಕರಂದಾಸ್ವಾದನ ಮಾಡಿ ಕ್ರೀಡಾಮಾಡಿದ ಈ ರಮಾದೇವಿಯರಿಗೆ ಪ್ರೀತಿವಿಷಯಕನಾದ ಇಂಥಾ ಶ್ರೀಪರಮಾತ್ಮನ್ನ ಐಹಿಕಸುಖ ಕೊಡು ಎಂತ ಬೇಡೋಣ ದಾವದದೆ ಅದು ಪೂರ್ವೋಕ್ತ ದೃಷ್ಟಾಂತಾನುಸಾರ ಅಲ್ಪವಾದ ಎರಡು ಕಾಸು, ಗೋಮಯ ಬಯಸಿದಂತೆ ಆಗತದೆ, ಅದರನ್ನೇ ಕೊಡತಾನೆ. ಅದು ಅಲ್ಪಪ್ರಯೋಜನವು, ದುಃಖ ಪರಿಹಾರ ಆಗಲಾರದು. ಆದ್ದರಿಂದ ನಶ್ವರವಾದ ದುಗ್ಗಾಣಿ, ಸೆಗಣಿ ಸದೃಶವಾದ ಅನಿತ್ಯಸುಖವನ್ನ ಕೇಳದೇ, ಐಹಿಕಸುಖಗಳ ತ್ಯಾಗಮಾಡಿ, ಲಕ್ಷ್ಮೀದೇವರು ವಾಯುದೇವರು ಇವರಿಗೆ ಸ್ವಾಮಿಯಾದ ಬಿಂಬರೂಪಿ ಪರಮಾತ್ಮನ ಪಾದದಲ್ಲಿ ಅಚಂಚಲ ಭಕುತಿಯನ್ನು ಕೊಡು ಎಂತ ಬೇಡು. ಅನ್ಯವಾದದ್ದು ಬೇಡಬ್ಯಾಡಾ, ಬಿಂಬಮೂರ್ತಿ ಮಹಾತ್ಮ್ಯವನ್ನ ಹೊಗಳತಾ ಇರು ಎಂತ ತಾತ್ಪರ್ಯ ॥೨೦॥

## ಭಾವ ಪ್ರಕಾಶಿಕೆ

(ಈ ವ್ಯಾಖ್ಯಾನದಲ್ಲಿ ಈ ಪದ್ಯವನ್ನು ೨೧ನೇ ಪದ್ಯವೆಂದು ಪರಿಗಣಿಸ ಲಾಗಿದೆ)

ಮಹಾರಾಜನ ಮಗನೆಂದೆನಿಸಿ ಎರಡು ದಂಬಡಿಗಗಳಿಗೆ ಕೈಯೊಡ್ಡಿದರೆ ಹೇಗೋ, ಅಥವಾ, ಮನೆಯೊಳಿಗೆ ಕಾಮಧೇನುವಿರಲು ಸಗಣಿಬೇಕೆಂದು ಮನೆಮನೆ ತಿರುಗುವವನ ಯೋಗ್ಯತೆ ಹೇಗಿರುವುದೋ ಹಾಗೆ ಲಕ್ಷ್ಮೀಪತಿ ಯಾದ ಭಗವಂತನ ಅನುಗ್ರಹವನ್ನು ಪಡೆದು ಐಹಿಕಸುಖವನ್ನು ಬೇಡು ವುದೂ ಸಹ ಮೇಲಿನ ಉಪಮಾನಗಳಿಗೆ ಸರಿಹೋಗುವುದು, ಇದರಂತೆಯೇ ಮುಕ್ತಿಯನ್ನು ಕೊಟ್ಟು ಸ್ವರೂಪಾನಂದವನ್ನು ಅಭಿವ್ಯಕ್ತಿಮಾಡಿಕೊಡುವ ಪರಮಾತ್ಮನನ್ನು ಅಲ್ಪವಾದ, ನಶ್ವರವಾದ ಐಹಿಕ ಸುಖವನ್ನು ಬೇಡುವವನ ಯೋಗ್ಯತೆಯು ಅಷ್ಟೇಆಗಿರುವುದು ಆದ್ದರಿಂದ ಇಂತಹ ಅಲ್ಪವನ್ನು ಅಪೇಕ್ಷಿಸದೆ ಆರಾಧನೆ ಮಾಡಿ ಅವನಲ್ಲಿ ದೃಢವಾದ ಭಕ್ತಿಯನ್ನೇ ಬೇಡ ಬೇಕೆಂದು ತಾತ್ಪರ್ಯ ॥೨೦॥

## ೩ ಭಾವದರ್ಪಣ

(ಈ ವ್ಯಾಖ್ಯಾನದಲ್ಲಿ ಈ ಪದ್ಯವನ್ನು ೨೧ನೇ ಪದ್ಯವೆಂದು ಪರಿಗಣಿಸಲಾಗಿದೆ)

ಐಹಿಕ ಫಲಾದಿಗಳನ್ನು ಅಪೇಕ್ಷಿಸದೆ ಜ್ಞಾನಭಕ್ತಿ ಬೇಕೆಂದು ಉಪಾಸನೆ ಮಾಡೆಂದು ಹೇಳತ್ತಾರೆ. ಕ್ಷೋಣೀತಿ. ಕ್ಷೋಣಿಪತಿ=ರಾಜ, ಸುಮನಸ ಧೇನು=ಕಾಮಧೇನು. ॥೨೦॥

## ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

ಕಾಮ್ಯಸೇವಾಂ ಧಿಕ್ಕರೋತಿ-"ಕ್ಷೋಣಿ" ಇತಿ ।.೨೦॥

## ಕನ್ನಡಾರ್ಥ

ಕಾಮ್ಯಫಲವನ್ನು ಉದ್ದೇಶಿಸಿ, ಪರಮಾತ್ಮನ ಸೇವೆಯನ್ನು ಮಾಡಬಾರದೆಂದು ಹೇಳುತ್ತಾರೆ-"ಕ್ಷೋಣಿಪತಿ" ಎಂಬ ಪದ್ಯದಿಂದ ॥೨೦॥

## ೫ ಶ್ರೀ ಗುರುಹೃದಯ ಪ್ರಕಾಶಿಕೆ

ತಾರತಮ್ಯಪೂರ್ವಕ ವಿಷ್ಣುಸರ್ವೋತ್ತಮ ಜ್ಞಾನಿಯಾದಗ್ಯೂ ಕರ್ತೃತ್ವಾಭಿಮಾನಿಯಾಗಿ ಸಕಾಮನಾಗಬಾರೆದೆಂದು ಸದೃಷ್ಟಾಂತವಾಗಿ ತಿಳಿಸುತ್ತಾರೆ, ಕ್ಷೋಣಿ ಎಂದು. ಕ್ಷೋಣಿಪತಿಸುತನೆಂಬ ದೊರೆಯ ಮಗನಾಗಿ ದುಗಾಣಿ ಎಂಬ ಎರಡುಕಾಸಿನ ದಕ್ಷಿಣೆಗೆ ಕೈವೊಡ್ಡುವ ಅವಮಾನದಂತೆಯೂ, ಸುಮನಸದೇನುವೆಂಬ ಕಾಮಧೇನು ಮನೆಯಲ್ಲಿದ್ದಾಗ್ಯೂ ಸಗಣಿ ಅಪೇಕ್ಷಿಸಿ ಕಂಡವರ ಮನೆಗೆ ಹೋಗುವ ಅನ್ಯಾಯದಂತೆಯೂ ವೇಣುಗಾನಪ್ರಿಯನಾದ ಶ್ರೀಕೃಷ್ಣನನ್ನು ಐಹಿಕ ಪಾರತ್ರಿಕ ಸುಖಬೇಡಿಕೊಳ್ಳದೆ ಲಕ್ಷೀಪ್ರಾಣ ಪ್ರಿಯನಾದ ಸ್ವಾಮಿಯ ಪಾದದಲ್ಲಿ ಭಕ್ತಿ ಎಂಬ ಸುದೃಢಸ್ನೇಹವನ್ನೇ ಬೇಡಿಕೊಂಡಾಡು.

**ನಾಯಂ ದೇಹೋ ದೇಹಭಾಜಾಂ ನೃಲೋಕೇಕಸ್ತಾಸ್ಕಾವಾ ವಿದ್ಭುಜಾಂಯೇ||** ಎಂಬ ಭಾಗವತಾರ್ಥ ವಿವರಿಸಿತು ॥೨೦॥

# ಸರ್ವವ್ಯಾಖ್ಯಾನಸಾರ ಸಂಗ್ರಹ

**ಕ್ಷೋಣಿ-** ಎಂದರೆ ಭೂಮಿ ಭೂಮಿಯನ್ನು ಆಳುವ ಅರಸನಿಗೆ **ಕ್ಷೋಣಿ ಪತಿ** ಎಂದು ಹೆಸರು. ಕ್ಷೋಣಿಪತಿಯ ಮಗನಾದವನು. ರಾಜನ ಹತ್ತಿರ ಬಂದು ಚಿಕ್ಕಾಸುಗಳನ್ನು ಬೇಡಿದರೆ ಅದು ಅತ್ಯಲ್ಪ ಹಾಗೂ ಹೀನಾಯ, ರಾಜನಾದರೋ ಅತುಳವಾಗ ಸಂಪತ್ತಿಗೆ ಒಡೆಯ. ಅವನಲ್ಲಿ ದುಗ್ಗಾಣಿ ಬೇಡಿದರೆ ಹಾಸ್ಯಾಸ್ಪದವಾಗುವುದು ಅದು ಔಚಿತ್ಯರಹಿತವಾದ ಬೇಡಿಕೆ.

ಹಾಗೆಯೇ ಮನೆಯಲ್ಲಿ ಸರ್ವಾಭೀಷ್ಟಗಳನ್ನೂ ನೀಡುವ ಕಾಮಧೇನು ವಿರಲಾಗಿ **(ಸುಮನಸ ಧೇನು)** ಸಗಣಿ ಕೊಡು ಎಂದು ಬೇಡಿದಂತೆ ಅಲ್ಪ ಮಾನವನ ಸ್ಥಿತಿ.

ಶ್ರೀಕೃಷ್ಣನು ವೇಣುಗಾನಪ್ರಿಯನು. ಅವನು ಊದುತ್ತಿರುವ ಕೊಳಲು ಲಕ್ಷ್ಮ್ಯಾತ್ಮಕವಾದದ್ದು ಶ್ರೀಲಕ್ಷ್ಮಿಯೇ ಕೊಳಲಿನ ರೂಪದಲ್ಲಿ ಶ್ರೀಹರಿಯ ಸೇವೆಮಾಡುತ್ತಿದ್ದಾಳೆ. ಅಂತಹಲಕ್ಷ್ಮಿಗೆ ವೇಣುಗೋಪಾಲನು ಅತ್ಯಂತ ಪ್ರೀತಿಯ ವಿಷಯನು.

ಅಂತಹ ವೇಣುಗಾನಪ್ರಿಯನಲ್ಲಿ ಕೇವಲ ನಶ್ವರವಾದ ಐಹಿಕ ಸುಖಗಳನ್ನು ಎಂದೆಂದೂ ಬೇಡಬೇಡ ಮುಕ್ತಿ ಸಾಮ್ರಾಜ್ಯವನ್ನು ಕರುಣಿಸುವ ಆ ಮುಕುಂದನಲ್ಲಿ ಮುಂಕುಮತಿಗಳು ಪ್ರಾಪಂಚಿಕ ಸುಖಗಳನ್ನು ಬೇಡಿದರೆ. ಅದು ಅರಸನ ಪುತ್ರನು ರಾಜನಲ್ಲಿ ದುಗ್ಗಾಣಿ ಬೇಡಿದಂತಿಯೂ. ಕಾಮ ಧೇನುವಿನಲ್ಲಿ ಸಗಣಿ ದಯಪಾಲಿಸೆಂದು ಬೇಡಿದಂತಿಯೂ ಆಗುವುದು. ಈ ಉಪಮಾನದಲ್ಲಿ (೧) ಶ್ರೀಪತಿಯು ಬ್ರಹ್ಮಾಂಡ ಕೋಟಿಧಾರನು. ಅರಸನ ಸದೃಶನು. ಐಹಿಕಸುಖಗಳು ದುಗ್ಗಾಣಿಸದೃಶ (ಕ್ಷುಲ್ಲಕ ಅಪೇಕ್ಷಾ) ಅವನಿಂದ ಸೃಷ್ಟರಾದ ಮಾನವರು ಅರಸನಪುತ್ರ ಸದೃಶರು. ಅಂತೆಯೇ

ಶ್ರೀಹರಿಯು ಸರ್ವಾಭೀಷ್ಟ ಫಲಪ್ರದನಾದ್ದರಿಂದ, ಕಾಮಧೇನು ಸದೃಶನು ಆ ವಿರಿಂಚಿಜನಕನಲ್ಲಿ ಪ್ರಾಪಂಚಿಕ ಸುಖಗಳನ್ನು ಎಂದೆಂದೂ ಬೇಡಬಾರದು ಶ್ರೀಲಕ್ಷ್ಮೀ ಹಾಗೂ ಶ್ರೀ ಪ್ರಾಣದೇವರಿಗೆ ಸ್ವಾಮಿಯಾದ ಆ ಅಕ್ಷಯಾಂಬರ ದಃನನಲ್ಲಿ ಅವನಪಾದ ಭಕುತಿಯನು ಬೇಡಬೇಕೆಂದು ತಿಳಿಸುತ್ತಾರೆ. ಅವನ ಪಾದಕಂಜಗಳಲ್ಲಿ ಭಕ್ತ್ಯುದ್ರೇಕದಿಂದ ಹಾಡುತ್ತಾ, ಹೊಗಳುತ್ತಾ ಹಿಗ್ಗುತ್ತಲಿರು ಎಂದು ಸನ್ಮಾರ್ಗದ ಪಥವನ್ನು ತೋರಿಸಿದ್ದಾರೆ ದಾಸ ವರ್ಯರು ॥೨೦॥

## ಪದ್ಯ-೨೧

**ಮೂಲ :**

**ಜ್ಞಾನ ಜ್ಞೇಯಜ್ಞಾತೃವೆಂಬಭಿ।**
**ಧಾನದಿಂ ಬುದ್ಧ್ಯಾದಿಗಳಧಿ।**
**ಷ್ಠಾನದಲಿ ನೆಲೆಸಿದ್ದು ಕರೆಸುತ ತತ್ತದಾಹ್ವದಿ ॥**
**ಭಾನುಮಂಡಲಗಭ ಪ್ರದರ್ಶಕ ।**
**ತಾನೆನಿಸಿ ವಶನಾಗುವನು ಶುಕ ।**
**ಶೌನಕಾದಿ ಮುನೀಂದ್ರ ಹೃದಯಾಕಾಶಗತ ಚಂದ್ರ॥ ॥೨೧॥**

**ಅವತರಣಿಕೆ:**

ಜ್ಞಾನ-ಜ್ಞೇಯ-ಜ್ಞಾತೃ ಎಂಬ ರೂಪತ್ರಯಗಳಿಂದ ತತ್ತನ್ನಾಮ ವಾಚ್ಯನಾಗಿ ಮನಾದಿ ಪಂಚಮನೋವೃತ್ತಿಗಳಲ್ಲಿ ವಿದ್ಯಮಾನನಾಗಿರುವ ಆ ಜ್ಞಾನಾನಂದ ಪರಿಪೂರ್ಣನ ವಿಷಯ ತಿಳಿಸುತ್ತಾರೆ. ॥೨೧॥

**ಪ್ರತಿಪದಾರ್ಥ:**

**ಜ್ಞಾನ**=ಸುಸಮೀಚೀನವಾದ ತಿಳುವಳಿಕೆಯೇ ಜ್ಞಾನವು. ಜ್ಞಾನ

ಶಬ್ದವಾಚ್ಯನಾಗಿ. **ಜ್ಞೇಯ** = ತಿಳಿಯಲ್ಪಡುವ ಮುಖ್ಯ ವಸ್ತು ಎಂದು ಕರಯಿಸುವ ಜ್ಞೇಯಶಬ್ದವಾಚ್ಯನಾಗಿ, **ಜ್ಞಾತೃ** = ತಿಳಿಯುವವನು ಎಂದು ಜ್ಞಾತೃ ಶಬ್ದವಾಚ್ಯನಾಗಿ, **ಎಂಬ ಅಭಿಧಾನದಿಂ** = ಹೀಗೆ ಜ್ಞಾನ-ಜ್ಞೇಯ-ಜ್ಞಾತೃ ಎಂದು ಆಯಾಯಾ ಹೆಸರುಗಳಿಂದಲೇ ಕರೆಯಿಸುತ್ತಾ (ತತ್ತನ್ನಾಮಕನಾಗಿ) **ಬುದ್ಧ್ಯಾದಿಗಳ** = ಬುದ್ಧಿಯೇ ಮೊದಲಾದ ಪಂಚಮನೋವೃತ್ತಿಗಳಲ್ಲಿ, ಅಂತೆಯೇ ಪಂಚಜ್ಞಾನ ಮತ್ತು ಕರ್ಮೇಂದ್ರಿಯಗಳೆಂಬ **ಅಧಿಷ್ಠಾನದಲಿ** = ಏಕಾದಶೇಂದ್ರಿಯಗಳಲ್ಲಿ, **ನೆಲೆಸಿದ್ದು** = ವಿದ್ಯಮಾನನಾಗಿದ್ದು. **ತತ್ತದಾಹ್ವಯದಿ** = ಆಯಾಯಾ ಅಧಿಷ್ಠಾನಗಳ ಹೆಸರಿನಿಂದಲೇ **ಕರೆಸುವ** = ಕರೆಯಿಸಿಕೊಳ್ಳುತ್ತಾ, **ಭಾನುಮಂಡಲಗಭ** = ಸೂರ್ಯಮಂಡಲಗತ ಪ್ರಕಾಶದೋಪಾದಿಯಲ್ಲಿ (ಗಭ — ಕಾಂತಿ, ಪ್ರಕಾಶ, ಗಭಸ್ತಿ — ಕಿರಣಗಳು) **ಪ್ರದರ್ಶಕ ತಾನೆನಿಸಿ** — ಪ್ರದರ್ಶಿಸುವವನು ಎಂದೆನಿಸಿ, ಜ್ಞಾನ ಪ್ರದರ್ಶಕನಾಗಿದ್ದು. **ವಶನಾಗುವನು** — ಏಕಾದಶೇಂದ್ರಿಯಗಳ ದ್ವಾರಾ ಪ್ರತ್ಯಕ್ಷನಾಗುವನು, **ಶುಕ** — ಜ್ಞಾನಿಶ್ರೇಷ್ಠರಾದ ಶುಕಾಚಾರ್ಯರು **ಶೌನಕಾದಿ** — ಶೌನಕರು ಮೊದಲಾದ. **ಮುನೀಂದ್ರ** — ಋಷಿಶ್ರೇಷ್ಠರ, **ಹೃದಯಾಕಾಶಗತ ಚಂದ್ರ** — ಹೃದಯಾಕಾಶದಲ್ಲಿ ಚಂದ್ರ ಸದೃಶನಾಗಿದ್ದು, ಅಂತಃಕರಣವೆಂಬುವ ತನ್ನ ಕಿರಣಗಳಿಂದ ಭಕ್ತರ ಪಾಪಗಳನ್ನು ಪರಿಹರಿಸಿ, ಆನಂದಪ್ರದನಾಗುವನು ॥೨೦॥

## ವ್ಯಾಖ್ಯಾನಗಳು

### ೧ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನು ಭಕ್ತಿ ಬೇಡಿದವರಿಗೆ ಭಕ್ತಿ ಕೊಟ್ಟು ಪ್ರತ್ಯಕ್ಷನಾಗ ತಾನೆ ಎಂತ ಹೇಳತಾರೆ.

ಬುದ್ಧಿಯೇ ಆದಿಯಾಗಿ ಏಕದಶೇಂದ್ರಿಯಾದಿಗಳ ಅಧಿಷ್ಠಾನದಲ್ಲಿ ಅಂದರೆ, ಅದರ ವಿವರ-ಜ್ಞಾನಶಬ್ದವಾಚ್ಯನಾದ ಪರಮಾತ್ಮ ಮನಸ್ಸು ಬುದ್ಧಿ ಚಿತ್ತ ಅಹಂಕಾರ ಅಂತಃಕರಣ ಈ ಐದು ಮನೋವೃತ್ತಿಗಳಲ್ಲಿ,

ಜ್ಞೇಯಶಬ್ದವಾಚ್ಯನಾದ ಪರಮಾತ್ಮ ಪಂಚಜ್ಞಾನೇಂದ್ರಿಯಗಳಲ್ಲಿ, ಜ್ಞಾತೃ ಶಬ್ದವಾಚ್ಯನಾದ ಪರಮಾತ್ಮ ಪಂಚಕರ್ಮೇಂದ್ರಿಯಗಳಲ್ಲಿ, ಈ ಪ್ರಕಾರ ಏಕಾದಶೇಂದ್ರಿಯಗಳಲ್ಲಿ ಜ್ಞಾನ, ಜ್ಞೇಯ, ಜ್ಞಾತೃ ನಾಮದಿಂದಲಿ ಆ ವಾಸನಾಗಿ ಇದ್ದು ಆಯಾ ಪೃಥಪೃಥಕ್ ಆಗಿ ಇರತಕ್ಕ ಮನೋವೃತ್ತಿಗಳು ಐದರಲ್ಲಿ ಐದು, ಜ್ಞಾನರೂಪದಿಂದ ಅಂಶಗಳು. ಜ್ಞಾನೇಂದ್ರಿಯ ಐದರಲ್ಲಿ ಜ್ಞೇಯರೂಪದ ಅಂಶಗಳು/ಐದು. ಕರ್ಮೇಂದ್ರಿಯ ಐದರಲ್ಲಿ ಜ್ಞಾತೃರೂಪದ ಅಂಶಗಳು ಐದು. ಈ ಪ್ರಕಾರ ಇದ್ದು ಆಯಾ ಇಂದ್ರಿಯನಾಮಗಳಿಂದ ಕರಸೋವನಾಗಿ ಸೂರ್ಯಮಂಡಲಗತ ಕಾಂತಿಯೋಪಾದಿಯಲ್ಲಿ ಜ್ಞಾನವನ್ನು ಪ್ರದರ್ಶನ ಮಾಡತಕ್ಕವನು. ಮನ ಆದಿ ಐದು ವೃತ್ತಿಗಳ ಜ್ಞಾನರೂಪ ಗಳಾದ ಐದುರೂಪಗಳಿಂದ ಜ್ಞಾನಪ್ರದರ್ಶಕ ತಾನೆನಿಸಿ ಜ್ಞಾನಪ್ರದರ್ಶನ ಮಾಡಿ, ಮನೋಇಂದ್ರಿಯಕ್ಕೆ ವಶನಾಗಿ ಪ್ರತ್ಯಕ್ಷನಾಗುವನು. ಜ್ಞಾನಿಶ್ರೇಷ್ಠ ರಾದ ಶುಕಾಚಾರ್ಯರು ಶೌನಕರು ಇವರೇ ಮೊದಲಾದ ತನ್ನ ಭಕ್ತರು ದಾರೋ ಆ ಯಾವತ್ತೂಮಂದಿಯ ಅಹಂಮಮತಾವೆಂಬ ತಾಪತ್ರ ಯವನ್ನು, ಹೃದಯಾಕಾಶದಲ್ಲಿ ಬಿಂಬನಾಗಿದ್ದು ಚಂದ್ರಸದೃಶನಾಗಿ ತನ್ನ ಅಂತಃಕರಣಗಳೆಂಬೋ ಕಿರಣಗಳಿಂದ ತಾಪಶಮನ ಮಾಡತಾ ಭಕ್ತರ ಆನಂದ ಬಡಿಸತಾನೆ. ಎಂದರೆ ಹೃದಯಾಕಾಶಗತ ಬಿಂಬ ಸೂರ್ಯಸದೃಶನಾಗಿ ಅಜ್ಞಾನ ಪರಿಹಾರ ಮಾಡಿ ಜ್ಞಾನಪ್ರಕಾಶವೂ, ಚಂದ್ರಸದೃಶನಾಗಿ ತಾಪ ತ್ರಯ ಶಮನ ಮಾಡತಾನೆ ಎಂತ ತಾತ್ಪರ್ಯ.

**ವಿಶೇಷಾರ್ಥ :**

ಪರಮಾತ್ಮನ ರೂಪಗಳು ಮೂರು ಜ್ಞಾನ, ಜ್ಞೇಯ, ಜ್ಞಾತೃ ಎಂತ ಈ ನಾಮಗಳಿಂದ ಕರಸಿದವನಾಗಿ ಪಂಚಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯಗಳು, ಬುದ್ಧಿಮನ ಆದಿ ಪಂಚಮನೋವೃತ್ತಿಗಳಾದ ಇಂದ್ರಿ ಯಗಳಲ್ಲಿ ಜ್ಞಾನನಾಮಕ ಪರಮಾತ್ಮ, ಜ್ಞಾನೇಂದ್ರಿಯಗಳಲ್ಲಿ ಜ್ಞೇಯ ನಾಮಕ ಪರಮಾತ್ಮ, ಕರ್ಮೇಂದ್ರಿಯಗಳಲ್ಲಿ ಜ್ಞಾತೃನಾಮಕ ಪರಮಾತ್ಮ ಅಧಿಷ್ಠಾನಗಳಲ್ಲಿ ಆವಾಸನಾಗಿದ್ದು, ಆಯಾ ನಾಮಗಳಿಂದಲೂ, ಪ್ರತಿಪ್ರತಿ

ಇಂದ್ರಿಯಗಳಲ್ಲಿ ಬ್ಯಾರೆ ಬ್ಯಾರೆ ರೂಪಗಳಿಂದಲೂ ಕರಸೋವನಾಗಿ, ಜ್ಞಾನ ಶಬ್ದವಾಚ್ಯ ಪರಮಾತ್ಮ ಬುದ್ಧ್ಯಾದಿ ಐದು ಮನೋವೃತ್ತಿಗಳಲ್ಲಿ ಐದು ರೂಪಗಳಿಂದ, ಅಭಿಮಾನಿಗಳಾದ ದೇವತಾಂತರ್ಗತನಾಗಿದ್ದು, ಶುಭಾಶುಭ ಜ್ಞಾನವನ್ನು ಉತ್ಪತ್ತಿಮಾಡೋವನಾಗತಾನೆ. ಪಂಚಜ್ಞಾನೇಂದ್ರಿಯಗಳಲ್ಲಿ ಇರತಕ್ಕ ಜ್ಞೇಯನಾಮಕ ಪರಮಾತ್ಮ ಪಂಚಜ್ಞಾನೇಂದ್ರಿಯ ನಾಮಗಳಿಂದ, ಐದು ರೂಪಗಳ ಧರಿಸ್ಯಿ ಐದು ಇಂದ್ರಿಯಗಳಿಗೆ ಅಭಿಮಾನಿಗಳಾದ ದೇವತೆಗಳ ಅಂತರ್ಗತನಾಗಿದ್ದು, ಆಯಾ ಇಂದ್ರಿಯನಾಮಗಳಿಂದ ಕರಸಿ, ಆಯಾ ಇಂದ್ರಿಯಗಳ ವ್ಯಾಪಾರಗಳ ಅಂಕುರ ಮಾಡಿ ತಿಳಿಸತಾನೆ. ಜ್ಞಾತೃನಾಮಕ ಪರಮಾತ್ಮ ಪಂಚಕರ್ಮೇಂದ್ರಿಯಗಳಲ್ಲಿ ಇರತಕ್ಕ ಅಭಿಮಾನಿಗಳಾದ ದೇವತಾಂತರ್ಗತನಾಗಿದ್ದು, ಕರ್ಮೇಂದ್ರಿಯನಾಮಗಳಿಂದ ಕರಸಿ ಕರ್ಮೇಂದ್ರಿಯಗಳ ದ್ವಾರಾ ಈ ಕರ್ಮಗಳು ಈ ಈ ರೀತಿ ಮಾಡಬೇಕೆಂದು ತಿಳಿಸಿಕೊಡೋವನಾಗತಾನೆ. ಈ ಪ್ರಕಾರ ತಿಳಿಸಿಕೊಟ್ಟ ನಂತರ ಕ್ರಿಯಾದಿಗಳ ಮಾಡೋದಕ್ಕೆ ಅಧಿಕಾರಿಯಾದವ ಕರ್ಮೇಂದ್ರಿಯಗಳ ದ್ವಾರಾ ಮಾಡೋದಕ್ಕೆ ಉಪಕ್ರಮ ಮಾಡತಾನೆ. ಹ್ಯಾಂಗೆಂದರೆ, ಸೂರ್ಯಮಂಡಲಗತ ಶ್ರೀನಾರಾಯಣ ದೇವೆರು ಸೂರ್ಯ ವಿಷಯವಾದ ತೇಜಸ್ಸು, ಗಮನಾಗಮನಗಳೇನು ತಾನೇ ಎಂತ ಎನಿಸದವನಾಗಿ ಸೂರ್ಯನಿಂದ ವಾಪಾರಗಳ ಹ್ಯಾಂಗೆ ವ್ಯಕ್ತ ಮಾಡತಾ ಇದ್ದಾನೋ, ಈ ಪ್ರತ್ಯಕ್ಷ ದೃಷ್ಟಾಂತವತ್ ಬುದ್ಧ್ಯಾದಿ ಇಂದ್ರಿಯಾದಿಷ್ಠಾನಗತ ಅಭಿಮಾನಿದೇವತಾಂತರ್ಗತನಾಗಿದ್ದು ಇಂದ್ರಿಯ ವ್ಯಾಪಾರಗಳ ಅಂಕುರ ಮಾಡತಾ, ರೂಪಾಂತರದಿಂದ ತತ್ಕ್ರಿಯ ನಡಸತಾ ಇರೋವನಾಗಿದ್ದಾನೆ. ಆಯಾ ಇಂದ್ರಿಯಗಳನ್ನ ಜೈಸಬೇಕಾದರೆ ಆಯಾ ಇಂದ್ರಿಯಾಭಿಮಾನಿ ದೇವತಾಂತರ್ಗತ ಭಗವಂತನ್ನ ತಿಳದು ಆಯಾ ದೇವತಿಗಳ ಭಜನಿ ಮಾಡಿದರೆ, ಆಯಾ ದೇವತಿಗಳ ದ್ವಾರಾ ತದ್ಗತ ಪರಮಾತ್ಮ ಆಯಾ ಇಂದ್ರಿಯಗಳಿಗೆ ಜಯಕೊಟ್ಟು, ಇಂದ್ರಿಯಗಳ ಚಾಂಚಲ್ಯ ಇಲ್ಲದಂತೆ ಮಾಡಿ, ಆಯಾ ದೇವತಿಗಳ ದ್ವಾರಾ ತನ್ನ ಪರವಾದ ಇಂದ್ರಿಯಗಳ ವ್ಯಾಪಾರ ನಡಸಿ ಹೃದಯಾಕಾಶದಲ್ಲಿ ಪ್ರತ್ಯಕ್ಷನಾಗುವನು. ಆದ ಕಾರಣ ವಿಷ್ಣು ಭಕ್ತರಾದವರು ಪೂರ್ವೋಕ್ತ ಪ್ರಕಾರ ಸೂರ್ಯಶಿವಾದಿಗಳ ಭಜಿಸಬೇಕು,

ತದ್ವ್ಯತಿರಿಕ್ತ ಭಜಿಸಿದವರಿಗೆ ಪರಮಾತ್ಮ ಒಲಿಯೋದಿಲ್ಲ. ಆದ ಕಾರಣ ದೇವ ಮಾನವ ದಾನವರಲ್ಲಿ ಕೂಡಾ ಅನುಸಂಧಾನಪೂರ್ವಕ ಭಗವಂತನ್ನ ಭಜಿಸಬೇಕೇ ಹೊರತು ಅನ್ಯವಿಧವಾಗಿ ಮಾಡಕೂಡದು ॥೨೦॥

## ೨ ಭಾವಪ್ರಕಾಶಿಕೆ

(ಈ ವ್ಯಾಖ್ಯಾನದಲ್ಲಿ ಈ ಪದ್ಯವನ್ನು ೨೪ನೇ ಪದ್ಯವೆಂದು ಪರಿಗಣಿಸಲಾಗಿದೆ)

ಶ್ರೀ ಪರಮಾತ್ಮನು ಜ್ಞಾನವಾಚಕನಾಗಿ ತಿಳಿದುಕೊಳ್ಳಲು ಯೋಗ್ಯವಾದ ವಸ್ತುವಿನಲ್ಲಿ ತದ್ರೂಪನಾಗಿಯೂ, ತಿಳವಳಿಕೆ ಉಳ್ಳವರಲ್ಲಿ ತದ್ರೂಪಿಯಾಗಿಯೂ, ಆಯಾ ಹೆಸರುಗಳಿಂದ ಕರೆಸಿಕೊಳ್ಳುತ್ತಾ ಮಹಾಜ್ಞಾನಿಗಳಾದ ಶುಕಾಚಾರ್ಯರು, ಶೌನಕಾದಿ ಮಹರ್ಷಿಗಳು ಮೊದಲಾದವರ ಹೃದಯಾಕಾಶವಾಸಿಯಾಗಿ ಅವರಿಗೆ ಚಂದ್ರನ ದರ್ಶನದಿಂದ ಆನಂದವಾಗುವಂತೆ ಸುಖಬಡಿಸುತ್ತಾ ಸೂರ್ಯಮಂಡಲಮಧ್ಯವರ್ತಿಯಾಗಿ ಸವಿತೃನಾಮಧೇಯದಿಂದ ಜ್ಞಾನಬೋಧಕನೆನಿಸಿ ತನ್ನನ್ನು ಆರಾಧನೆ ಮಾಡುವವರಿಗೆ ವಶನಾಗುವನು ॥೨೦॥

## ೩ ಭಾವ ದರ್ಪಣ

(ಈ ವ್ಯಾಖ್ಯಾನದಲ್ಲಿ ಈ ಪದ್ಯವನ್ನು ೨೪ನೇ ಪದ್ಯವೆಂದು ಪರಿಗಣಿಸಲಾಗಿದೆ)

ಜ್ಞಾನಮಿತಿ, ಜ್ಞಾನನಾಮಕ, ಜ್ಞಾತುಂ ಯೋಗ್ಯಃ ಜ್ಞೇಯಃ, ಜ್ಞಾತೃ— ತಿಳಕೊಂಬುವವ, ಅಭಿದಾನ— ಹೆಸರು. ॥೨೦॥

## ೪ ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

(ಈ ವ್ಯಾಖ್ಯಾನದಲ್ಲಿ ಈ ಪದ್ಯವನ್ನು ೨೨ನೇ ಪದ್ಯವೆಂದು ಪರಿಗಣಿಸಲಾಗಿದೆ)

"ಜ್ಞಾನ" ಇತಿ ॥೨೦॥

## ಕನ್ನಡಾರ್ಥ

ಜ್ಞಾನ-ಜ್ಞಾತೃ-ಜ್ಞೇಯ, ಭೋಕ್ತೃ, ಭೋಜ್ಯ, ಭೋಜನ, ಕರ್ತೃ-ಕಾರ್ಯ-ಕ್ರಿಯಾ, ಹೀಗೆ ಬುದ್ಧಿ ಮುಂತಾದ ಅಧಿಷ್ಠಾನಗಳಲ್ಲಿದ್ದು, ತತ್ತನ್ನಾಮಗಳಿಂದ, ತದಂತರ್ನಿಯಮನ ಮಾಡುತ್ತ, ಜ್ಞಾನಾದಿಗಳನ್ನು ಪ್ರವರ್ತಿಸುವ, ಬಿಂಬರೂಪಿ ಶ್ರೀ ಹರಿಯನ್ನು ಆಕಾಶಾದಿಗಳಲ್ಲಿ ಸೂರ್ಯಾದಿಗಳಲ್ಲಿ ನಿಂತು ವ್ಯಾಪಿಸಿ ಪ್ರಕಾಶದಿ ಪ್ರೇರಕನೆಂದು ತಿಳಿದು ಉಪಾಸನೆಯನ್ನು ಮಾಡಬೇಕು ॥೨೦॥

## ॐ ಶ್ರೀಗುರುಹೃದಯ ಪ್ರಕಾಶಿಕೆ

ಸರ್ವಕರ್ಮದಲ್ಲೂ ಹರಿಸ್ಮೃತಿರೂಪ ಭಜನೆಯನ್ನು ಆಚರಿಸೆಂದು ಸದೃಷ್ಟಾಂತ ವಿಧಿಸುತ್ತಾರೆ, ಉದಯವೆಂದು. ಸೂರ್ಯ ಉದಯ ಕಾಲಕ್ಕೆ ಅಮಾವಾಸ್ಯತಿಥಿಯಿದ್ದರೂ, ಅಧಿಕಯಾಮವೆಂಬ ಝಾವದ ವ್ಯಾಪ್ತ ಮೇಲೆ ಪೌರ್ಣಿಮಿಯಿದ್ದರೂ, ಅಭಿಜಿತುಸದನವೆಂಬ ಮಧ್ಯಾಹ್ನ ವ್ಯಾಪ್ತಿ ಶ್ರವಣ ನಕ್ಷತ್ರಯಿದ್ದರೂ ನಿರ್ವಿವಾದವಾಗಿ ವಿಷ್ಣುಪಂಚಕ ಉಪವಾಸವನ್ನು ಮಾಡುವಂತೆ, ಹರಿ ಸೇವೆ ಎಂಬ ಸರ್ವತ್ರ ದೇವರ ಸ್ವಾತಂತ್ರ್ಯಾದಿ ಸ್ಮೃತಿಯನ್ನು ವಿಧಿ-ನಿಷೇಧಗಳೇನೂ ನೋಡದೆ ವಿಧಿಸುತ್ತಿರು ಅಂದರೆ, ಮೈಲಿಗೆಯಲ್ಲಿ ಮಾಡಬಾರದೆಂಬ ನಿಷೇಧವನ್ನೂ, ಮಡಿಯಿಂದ ಮಾಡಬೇಕೆಂಬ ವಿಧಿಯನ್ನು ವರ್ಜಿಸಿ ಸದಾ ಆಚರಿಸುತ್ತಿರಬೇಕು. ಭಕ್ತ ವತ್ಸಲನಾದ ದೇವರು ಸದಾ ತನ್ನನ್ನು ಸ್ಮರಿಸುವವರನ್ನು ತನ್ನ ಸದನವೆಂಬ ವೈಕುಂಠಾದಿ ಲೋಕದಲ್ಲಿ ಇಂಬೆಂಬ ಆಶ್ರಯ ಕೊಟ್ಟು ಸಲಹುವನು.

**ಪ್ರಮಾಣ : ದೇವತಾ ಋಷಿ ನಾಮಾನಿ ನ ಶುಚಿಃ ಪರಿಕೀರ್ತಯೇತ್।**
**ವಿಷ್ಣೋರ್ದಿವ್ಯಾನಿ ನಾಮಾನಿ ಸರ್ವದಾ ಪರಿಕೀರ್ತಯೇತ್॥**

ಎಂಬ ವಿಷ್ಣುರಹಸ್ಯ **ಅಪವಿತ್ರಃ ಪವಿತ್ರೋ ವಾ** ಎಂಬ ಶ್ರುತ್ಯರ್ಥವೂ ವಿವರಿಸಿತು ॥೨೦॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಶ್ರೀ ಹರಿಗೆ, (೧) ಜ್ಞಾನ, (೨) ಜ್ಞೇಯ ಮತ್ತು (೩) ಜ್ಞಾತೃ-ಎಂದು ಮೂರು ಪ್ರಕಾರವಾದ ರೂಪಗಳಿವೆ.

(೧) **ಜ್ಞಾನ**— ಸುಸಮೀಚೀನವಾದ ಶಾಸ್ತ್ರೋಕ್ತ ತಿಳಿವಳಿಕೆಗೆ "ಜ್ಞಾನ"-ಎನ್ನುವರು. ಪಂಚಬೇಧ, ತಾರತಮ್ಯ, ಹರಿಯ ಸರ್ವೋತ್ತಮತ್ವ-ವಾಯು ಜೀವೋತ್ತಮತ್ವ, ಜಗತ್ತಿನ ಸತ್ಯತೆ ಇತ್ಯಾದಿ ಜ್ಞಾನಕ್ಕೆ ವಿಷಯಗಳು ಜ್ಞಾನಾಂತರ್ಗತನಾಗಿ ಶ್ರೀ ಹರಿಯು ಜ್ಞಾನಶಬ್ದ ವಾಚ್ಯನಾಗಿದ್ದಾನೆ. ಮನಸ್ಸು-ಬುದ್ಧಿ-ಚಿತ್ತ-ಅಹಂಕಾರ-ಅಂತಃಕರಣ ಎಂಬ ಪಂಚ ಮನೋವೃತ್ತಿಗಳಲ್ಲಿ ಜ್ಞಾನ ನಾಮಕವಾಗಿ ವಿದ್ಯಮಾನನಾಗಿದ್ದಾನೆ.

(೨) **ಜ್ಞೇಯ**

"ಜ್ಞಾತುಂ ಯೋಗ್ಯಃ ಜ್ಞೇಯಃ"-ಎಂಬ ವಿವರಣೆಗನುಗುಣವಾಗಿ, ಯಾವುದನ್ನು ಅತ್ಯವಶ್ಯವಾಗಿ ತಿಳಿಯಲೇ ಬೇಕೋ: ಅಂದರೆ, ತಿಳಿಯಲ್ಪಡುವುದು-ಎಂಬುದಕ್ಕೆ "ಜ್ಞೇಯ" ಎಂದು ಹೆಸರು. ಶ್ರೀ ಪರಮಾತ್ಮನು ಪಂಚ ಜ್ಞಾನೇಂದ್ರಿಯಗಳಲ್ಲಿ ತತ್ಪತಿಗಳ ಅಂತರ್ಯಾಮಿಯಾಗಿ ಜ್ಞೇಯ ಶಬ್ದದಿಂದ ವಾಚ್ಯನಾಗಿದ್ದಾನೆ.

(೩) **ಜ್ಞಾತೃ**

ತಿಳಿಯುವವನು, ಎಂದರೆ, ಜ್ಞಾನವಂತನೆಂದರ್ಥ. ಪಂಚ ಕರ್ಮೇಂದ್ರಿಯಗಳಲ್ಲಿ ತದಭಿಮಾನಿ ದೇವತೆಗಳಲ್ಲಿ ಅಂತರ್ಯಾಮಿಯಾಗಿ "ಜ್ಞಾತೃ" ಶಬ್ದ ವಾಚ್ಯನಾಗಿದ್ದಾನೆ.

ಜ್ಞಾನ-ಜ್ಞೇಯ-ಜ್ಞಾತೃ-ಎಂಬ ಹೆಸರಿನಿಂದಲೇ ಕರೆಯಿಸುತ್ತಾ, ಪಂಚಮನೋವೃತ್ತಿಗಳು- ಪಂಚಜ್ಞಾನೇಂದ್ರಿಗಳು-ಪಂಚ ಕರ್ಮೇಂದ್ರಿಯಗಳೆಂಬ ಅಧಿಷ್ಠಾನಗಳಲ್ಲಿದ್ದು, ತತ್ಸಂಬಂಧವಾದ ಕ್ರಿಯೆಗಳನ್ನು ಮಾಡಿ ಮಾಡಿಸುತ್ತಿರುವನು.

ತೇಜೋಮಯನಾದ ಸೂರ್ಯನಿಗೆ ಪ್ರಕಾಶಪ್ರದನಾಗಿದ್ದಾನೆ. ಸೂರ್ಯಾಂತರ್ಗತ "ಘೃಣೀ" ನಾಮಕ ಶ್ರೀ ಪರಮಾತ್ಮನು ಸೂರ್ಯನ

ಕಾಂತಿಯುಕ್ತ ಕಿರಣಗಳಲ್ಲಿ ವ್ಯಾಪ್ತನಾಗಿದ್ದು, ಸೂರ್ಯನ ಮೂಲಕ ಜಗತ್ತಿಗೆ ಬೆಳಕು ಉಷ್ಣವನ್ನು, ಕೊಡುತ್ತಾನೆ. ಇದರಿಂದ **ಭಾನುಮಂಡಲಗಭ ಪ್ರದರ್ಶಕ** ಎಂದಿದ್ದಾರೆ.

ಜ್ಞಾನಿಶ್ರೇಷ್ಠರೂ, ಪರೀಕ್ಷಿದ್ರಾಜನಿಗೆ ಭಾಗವತಾಮೃತವನ್ನು ಉಣಿಸಿದವರೂ ಆದ ಶ್ರೀ ವೇದವ್ಯಾಸರ ಪುತ್ರ ಶುಕಾಚಾರ್ಯರ ಮತ್ತು ಶೌನಕಾದಿ ಋಷಿಶ್ರೇಷ್ಠರ ಹೃದಯವೆಂಬ ಆಕಾಶದಲ್ಲಿ ಚಂದ್ರಬಿಂಬನಂತೆ ಇದ್ದಾನೆ. ಚಂದ್ರನ ಶೀತಲ ಕಿರಣಗಳು ತಾಪವನ್ನು ಪರಿಹರಿಸುವಂತೆ, ಆ ಋಷಿ ಪುಂಗವರ ಹೃದಯಾಕಾಶಗತ ಬಿಂಬನು ಚಂದ್ರ ಸದೃಶನಾಗಿದ್ದು, ತನ್ನ ಕಾರುಣ್ಯವೆಂಬ ತಂಪಾದ ಕಿರಣಗಳಿಂದ ಭಕ್ತರ ಹೃತ್ತಾಪಗಳನ್ನು ಪರಿಹರಿಸುವನು, ॥೨೦॥

## ಪದ್ಯ-೨೨

**ಮೂಲ :**

**ಉದಯವ್ಯಾಪಿನಿ ದರ್ಶ ಪೌರ್ಣಿಮ ।**
**ವಧಿಕಯಾಮವು ಶ್ರವಣಭಿಜಿತು ।**
**ಸವಸನ್ನೈದರೆ ಮಾಳ್ಪ ತೆರದಿಂದಲಿ ಹರಿಸೇವೆ ॥**
**ವಿಧಿನಿಷೇಧಗಳೇನು ನೋಡದೆ ।**
**ವಿಧಿಸುತಿರು ನಿತ್ಯದಲಿ ತನ್ನಯ ।**
**ಸದನದೊಳಗಿಂ ಬಿಟ್ಟು ಸಲಹುವ ಭಕ್ತವತ್ಸಲನು ॥** ॥೨೨॥

**ಅವತರಣಿಕೆ:**

ಶ್ರೀ ಪರಮಾತ್ಮನ ಧ್ಯಾನೋಪಾಸನೆಗೆ ಕಾಲನೇಮಗಳೇನು ಇಲ್ಲ ಎಂದು ದೃಷ್ಟಾಂತಪೂರ್ವಕವಾಗಿ ತಿಳಿಸುತ್ತಾರೆ ॥೨೨॥

**ಪ್ರತಿಪದಾರ್ಥ**

**ದರ್ಶ** = ಅಮಾವಾಸ್ಯೆ, **ಪೌರ್ಣಿಮ** = ಹುಣ್ಣಿಮೆ, **ಉದಯ ವ್ಯಾಪಿನಿ** = ಇವೆರಡೂ ಸೂರ್ಯೋದಯಕ್ಕೆ ವ್ಯಾಪಿಸಿ ಇದ್ದು, **ಅಭಿಜಿತು** = ಹಗಲು ಹದಿನೈದು ಘಳಿಗೆಗೆ ಅಭಿಜಿತ್ ಎಂದು ಸಾಂಕೇತ, **ಅಧಿಕ** = ಹದಿನೈದು ಘಳಿಗೆ ಮೇಲೆ, ಇರುವ ಕಾಲವು, **ಯೊಮವು** = ತೃತೀಯ ಯಾಮವೆಂದು ಸಾಂಕೇತವಾಗುವುದು, **ಸದನವ** = ಆ ತೃತೀಯ ಯಾಮ ವೆಂಬ ಮನೆಯನ್ನು, **ಶ್ರವಣವು** = ಶ್ರವಣ ನಕ್ಷತ್ರವು, **ಐದಿರೆ** = ಹೊಂದು ತ್ತಿರಲಾಗಿ, **ಮಾಳ್ಪ ತೆರದಿಂದಲಿ** = ಆಚರಿಸುವ ರೋಪಾದಿಯಲ್ಲಿ (ಧನಿಷ್ಠಾ ನಕ್ಷತ್ರವಾದರೂ ಸರಿಯೆ, ಅಮಾವಾಸ್ಯೆ-ಪಾಡ್ಯಮಿ, ಕಲೆತಿರುವ ತಿಥಿ-ಪೌರ್ಣಮಿ-ಪಾಡ್ಯ ಕಲೆತಿರುವ ತಿಥಿ, ಶ್ರವಣ ಧನಿಷ್ಠಾ ನಕ್ಷತ್ರಗಳು ಕಲೆತಿರುವ ತಿಥಿ-ಇವು ಮೂರೂ ಶುಭ ದಿನಗಳೆಂದು ಗ್ರಾಹ್ಯ) **ವಿಧಿನಿಷೇಧಗಳೇನು ನೋಡದೆ** = ವಿಧಿ ನಿಷೇಧಗಳೇನನ್ನೂ ನೋಡದೆ, **ಹರಿಸೇವೆ** = ಶ್ರೀ ಪರಮಾತ್ಮನ ಸೇವಾ ರೂಪವಾದ ವಿಧಿಯನ್ನು, **ವಿಧಿಸುತಿರು** = ಅನುಷ್ಠಾನ ಮಾಡುವವನಾಗು, **ನಿತ್ಯದಲಿ** = ಸದಾಕಾಲವೂ, **ತನ್ನಯ ಸದನದೊಳಗೆ** = ತನ್ನ ಧಾತುವಾದ ವೈಕುಂಠ ಲೋಕದಲ್ಲಿ, **ಇಂಬಿಟ್ಟು** = ಆಶ್ರಯಕೊಟ್ಟು, **ಭಕ್ತವತ್ಸಲನು** = ಭಕ್ತರಲ್ಲಿ ಅಂತಃಕರಣವುಳ್ಳ ಶ್ರೀಹರಿಯು, **ಸಲಹುವ** = ಸಂರಕ್ಷಿಸುತ್ತಾನೆ ॥೨೨॥

## ವ್ಯಾಖ್ಯಾನಗಳು

### ೧ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಪರಮಾತ್ಮನ ಧ್ಯಾನೋಪಾಸನಕ್ಕೆ ಕಾಲನೇಮ ಕೆಲಸವಿಲ್ಲ ಎಂತ ಹೇಳತಾರೆ.

ಅಮಾವಾಸ್ಯೆ ಹುಣ್ಣಿಮಿ ಇವೆರಡೂ ಸೂರ್ಯೋದಯಕ್ಕೆ ವ್ಯಾಪಿಸಿ ಇದ್ದು ತದನಂತರ ಇವತ್ತು ಕಾಲವೂ (ಆ ದಿನಪೂರ್ತಿ) ಪಾಡ್ಯಮಿ ಸಂಬಂಧಿಸಿ

ಇದ್ದರೂ ಸರಿಯೇ, ಹಗಲು ಹದಿನೈದು ಘಳಿಗಿಗೆ ಅಭಿಜಿತ್ ಎಂತ ಸಾಂಕೇತ, ಹದಿನೈದು ಘಳಿಗೆಗೆ ಮ್ಯಾಲೆ ಅಧಿಕವಾದ ಕಾಲ ಅಲ್ಪಕಾಲವಾದರೂ ತೃತೀಯ ಯಾಮ ಎಂತ ಸಾಂಕೇತವಾಗತದೆ, ತೃತೀಯ ಯಾಮದ ಅಲ್ಪಕಾಲವೆಂಬೋ ಮನಿಯನ್ನು ಶ್ರವಣ ನಕ್ಷತ್ರವು ಐದು ತಿರಲಾಗಿ, ತದನ್ಯಕಾಲ ಧನಿಷ್ಠಾನಕ್ಷತ್ರವಾದರೂ ಸರಿಯೇ, ಅಮಾವಾಸ್ಯ ಪಾಡ್ಯಮಿ ಕಲತಿರುವ ತಿಥಿ ಒಂದು, ಪೌರ್ಣಮಿ ಪಾಡ್ಯಮಿ ಕಲಿತಿರುವ ತಿಥಿ ಒಂದು, ಶ್ರವಣ ಧನಿಷ್ಠಾ ನಕ್ಷತ್ರಗಳು ಕಲತಿರುವ ತಿಥಿ ಒಂದು ಅಂತು ಮೂರು ತಿಥಿಗಳು ಶುಭವಾದ ಅಮಾವಾಸ್ಯೆ, ಪೌರ್ಣಮಿ ಶ್ರವಣಗಳ ಪೂರ್ಣವಾಗಿ ಗ್ರಾಹ್ಯಮಾಡಿ ಆಚರಣಿ ಮಾಡಿದೋಪಾದಿಯಲ್ಲಿ, ಪೂರ್ವೋಕ್ತವಾದ ವಿಧಿಕಾಲವಾದ ಸ್ನಾನಾದಿಗಳ ಮಾಡಿ ಶುಚಿರ್ಭೂತರಾಗಿ ಇದ್ದ ಕಾಲ, ಅಶುಭನಾಗಿದ್ದ ಕಾಲ ಎಂತಲೂ, ಬಾಹ್ಯಗಳ ಏತಾದೃಶ ವಿಧಿ ನಿಷೇಧಗಳು ಏನೂ ನೋಡದೇನೆ ಅಂತಃ ಶುಚಿಯಾಗಿ ಹೃದಯಾಕಾಶದಲ್ಲಿ ಶ್ರೀಪರಮಾತ್ಮನ್ನ ಸೇವಾ ಮಾಡತಾ ಇರು. ಪ್ರತಿಪ್ರತೀದಿನದಲ್ಲೂ ಈ ಪ್ರಕಾರ ಧ್ಯಾನೋಪಾಸನಾದಿಗಳು ಮಾಡತಾ ಬಂದರೆ ಇದರಿಂದ ಭಕ್ತವತ್ಸಲನಾದ ಶ್ರೀ ಪರಮಾತ್ಮನು ಸಂದರ್ಶನ ಕೊಟ್ಟು ತನ್ನ ಮನಿಯಾದ ವೈಕುಂಠ ಲೋಕದಲ್ಲಿ ಆಶ್ರಯಕೊಟ್ಟು ಇಟ್ಟು ಸಂರಕ್ಷಣಿ ಮಾಡತಾನೆ.

**ವಿಶೇಷಾರ್ಥ :** ವಿಷ್ಣುಪಂಚಕ ಉಪವಾಸ ಮಾಡತಕ್ಕವರು ಶ್ರವಣ ಅಭಿಜಿತು ವ್ಯಾಪ್ತವಾಗಿದ್ದರೆ ಆ ದಿನದಲ್ಲಿ ಶ್ರವಣೋಪವಾಸ ಮಾಡತಾರೆ. ಅದೇ ಪ್ರಕಾರ ದರ್ಶ ಪೌರ್ಣಿಮಾಗಳು ಸೂರ್ಯೋದಯ ಕಾಲಕ್ಕೆ ವ್ಯಾಪಿಸಿದ್ದರೆ ಉಪವಾಸ ಮಾಡತಾರೆ. ಈ ದೃಷ್ಟಾಂತ ಯಾಕಂದರೆ ಉಪವಾಸ ಮಾಡೋದಕ್ಕೆ ಪೌರ್ಣಿಮಾ ಅಮಾವಾಸ್ಯ ಶ್ರವಣ ಇವು ಮೂರೂ ಯೋಗ್ಯವಾದುವು. ಉಪವಾಸಕ್ಕೆ ಶುಚಿ ಆದದ್ದು ಇವು ಮೂರೂ ಆಯಾ ದಿನಗಳಲ್ಲಿ ಕ್ವಚಿದ್ಭಾಗವೇ, ಮಿಗಿಲಾದ ಕಾಲದಲ್ಲಿ ಪೌರ್ಣಿಮಾದಿಗಳು ಇಲ್ಲವಾದ್ದರಿಂದ ಉಪವಾಸ ಬ್ಯಾಡಾ ಎಂತಲೂ ಮತ್ತು ಅಭಿಜಿತ್ತಿಗೆ ಮ್ಯಾಲೆ ಶ್ರವಣ ನಕ್ಷತ್ರವಿಲ್ಲ, ಧನಿಷ್ಠಾ ಎಂತಲೂ ಕರಸಿದ ಕಾಲ ಉಪವಾಸಕ್ಕೆ ಯೋಗ್ಯವಲ್ಲದ ಅಶುಚಿಕಾಲ ಅನ್ನಬಹುದೇ, ಅನ್ನಕೂಡದು. ಶುಚಿ, ಅಶುಚಿ ಎರಡರಿಂದ ಯುಕ್ತವಾದ ದರ್ಶ ಪೌರ್ಣಿಮಿ ಶ್ರವಣ ಇವು ಮೂರೂ ಉಪವಾಸಕ್ಕೆ

ಶುಚಿತ್ವೇನ ಭಾವನಾ ಮಾಡಿ ಆಚರಣೆ ಮಾಡತಾರೆ. ಮಾಡಿದರೂ ಅಶುಚಿ ದೋಷ ಪ್ರಾಪ್ತವಾಗತದಾ ? ಪೂರ್ಣತಿಥಿಯಲ್ಲಿ ಉಪವಾಸ ಮಾಡಿದರೆ ದಾವ ಫಲವನ್ನ ಹೊಂದತಾರೋ ಅಂಥಾ ಫಲವನ್ನೇ ಹೊಂದತಾರೆ. ಯಾಕಂದರೆ ಉದಯವ್ಯಾಪಿನೀ ಎಂಬುದು ದರ್ಶ ಪೌರ್ಣಮಿಗಳಿಗೆ ಶ್ರೇಷ್ಠ ವಾದದ್ದು. ಅಭಿಜಿತುವ್ಯಾಪಿನಿ ಶ್ರವಣಕ್ಕೆ ಶ್ರೇಷ್ಠವಾದದ್ದು. ಆದ್ದರಿಂದ ಅಶುಚಿಯಾದ ಅನ್ಯತಿಥಿ ಅನ್ಯನಕ್ಷತ್ರ ಅನ್ಯಯಾಮಗಳಲ್ಲಿ ಸಂಬಂಧಿಸಿದ್ದರೂ ದೋಷವಾದದ್ದಲ್ಲ. ಆದ್ದರಿಂದ ಅಧಿಕಾರಿಗಳು ಮನಸ್ಸನ್ನು ಹೃದಯಾ ಕಾಶವೆಂಬ ಸದನದಲ್ಲಿರಿಸಿ, ಅದರಲ್ಲಿರತಕ್ಕ ಪರಮಾತ್ಮನ್ನ ಸದಾ ಧ್ಯಾನ ಪೂರ್ವಕ ಸಾಧಯುವ ವಿಶಿಷ್ಟನಾದ ಪರಮಾತ್ಮನ್ನ ಮನೋಪಾಸನಾದಿಂದ ವಾಸನಾಪ್ರತೀಕಾಂತರ್ಗತ ಗೋಳಕಾಂತರ್ಗತ ಬಿಂಬರೂಪಿಯಾದ ಶ್ರೀ ಪರಮಾತ್ಮನ, ಷೋಡಶಪೂಜಾದಿಗಳನ್ನು ಶುಚಿಯಾಗಿ ಇರತಕ್ಕ ಕಾಲದಲ್ಲಿ ಪೂಜಾಮಾಡಬೇಕೆಂಬ ವಿಧಿಕಾಲವೂ, ಅಶುಚಿಯಾಗಿರತಕ್ಕ ಕಾಲದಲ್ಲಿ ತತ್ಪೂಜ- ಮಾಡಕೂಡದೆಂಬ ವಿಧಿಯೂ ಇವೆರಡೂ ಶಾಸ್ತ್ರಸಿದ್ಧವಾದರೂ, ಇವೆರಡು ಬಾಹ್ಯಪೂಜಾ ವಿಷಯಗಳು. ಆದರೆ ಮಾನಸಪೂಜಾ ಮಾಡ ತಕ್ಕವರಿಗೆ ಇವೆರಡೂ ನಿಷೇಧಾ ನಿಷೇಧಗಳು ಇಲ್ಲಾ ಎಂತ ತಾತ್ಪರ್ಯ. ಮಾನಸ ಪೂಜಾ ಮಾಡತಕ್ಕ ಅಧಿಕಾರಿಗೆ ವಿಧಿನಿಷೇಧಗಳು ದಾವವೆಂದರೆ ಅಹಂ ಮಮತಾದಿಗಳೇ ನಿಷೇಧಗಳು, ಇವುಗಳ ತ್ಯಾಗವೇ ವಿಧಿ. ಬಾಹ್ಯ ವಿಧಿ ನಿಷೇಧಗಳು ಇವಗೆ ಇಲ್ಲ. ಆದ್ದರಿಂದ- ಪೂರ್ವೋಕ್ತ ಬಾಹ್ಯ ವಿಧಿ ನಿಷೇಧ ಗಳೇನೂ ನೋಡದೆ, ಹೃದಯಾಕಾಶದಲ್ಲಿ ವಾಸನಾರೂಪವಾದ ಮಾನಸ ಪೂಜಾ ವಿಧಿಸುತಿರು, ಈ ಪೂಜಾಬಲದಿಂದ ಪರಮಾತ್ಮ ತನ್ನ ಚಿದಾನಂದ ರೂಪವನ್ನು ದರುಶನಕೊಟ್ಟು ತನ್ನ ಭಕ್ತರೆಂಬೋ ಗೋವುಗಳಿಗೆ ವತ್ಸಲ ನೆಂಬೋ ಪರಮಾತ್ಮ ಎಡಬಿಡದೆ ಇದ್ದು, ತನ್ನ ವೈಕುಂಠಾಖ್ಯ ಸದನದಲ್ಲಿಟ್ಟು ಸಂರಕ್ಷಿಸುವನು. ಮುಖ್ಯತಾತ್ಪರ್ಯವೇನೆಂದರೆ, ವಿಷಯಾಶಾ ತ್ಯಾಗಮಾಡಿ ಮಾನಸಪೂಜಾ ಮಾಡತಕ್ಕ ಅಧಿಕಾರಿಗಳಿಗೆ ವಿಧಿ ಎಂಬೋ ಸ್ನಾನಾದಿಗಳು ಮಾಡಬೇಕೆಂಬೋ ನೇಮವಿಲ್ಲ. ಮಡಿಯಿಂದಿರಲಿ, ಮೈಲಿಗಿಯಿಂದಿರಲಿ ಮಾನಸಪೂಜಾಕ್ಕೆ ದೋಷವಿಲ್ಲ ಎಂತ ತಾತ್ಪರ್ಯ ॥೨೨॥

## ೨ ಭಾವ ಪ್ರಕಾಶಿಕೆ

ವಿಷ್ಣುಪಂಚಕ ಉಪವಾಸ ಮಾಡುವವರು ತಿಂಗಳಿಗೆ ೫ ಉಪವಾಸಗಳನ್ನು ಮಾಡಬೇಕು. ಅವುಗಳಲ್ಲಿ ಎರಡು ಏಕಾದಶಿ, ಪೌರ್ಣಿಮೆ, ಅಮಾವಾಸ್ಯೆ, ಶ್ರವಣ ಹೀಗೆ ೫ ಉಪವಾಸಗಳಾಗುವುವು. ಏಕಾದಶಿ ವಿಷಯದಲ್ಲಿ ದಶಮಿ ವೇಧೆಯು ಅರುಣೋದಯದಲ್ಲಿ ಬಂದರೆ ಮಾರನೆಯ ದಿವಸವೇ ಏಕಾದಶಿ ಮಾಡಬೇಕೆಂದು ಸರ್ವಸಾಮಾನ್ಯವಾಗಿ ಸಕಲ ವೈಷ್ಣವರಿಂದಲೂ ಅನುಷ್ಠಿತವಾಗಿರುವುದು, ಮಿಕ್ಕ ೩ ಉಪವಾಸಗಳು "ಉದಯವ್ಯಾಪಿನೀ ದರ್ಶಾ, ಪೌರ್ಣಮಾಸಿ ತುಯಾಮಿಕಾ । ಮಾಧ್ಯಾಹ್ನ ವ್ಯಾಪಿನಿ) ಶ್ರೋಣಾ ಉಪೋಷ್ಯಾವಿಷ್ಣ ತತ್ಪರೈಃ" ಎಂಬ ಧರ್ಮಶಾಸ್ತ್ರದ ವಾಕ್ಯವನ್ನನುಸರಿಸಿ ಸೂರ್ಯೋದಯವ್ಯಾಪಿನಿ ಉಳ್ಳ ಅಮಾವಾಸ್ಯೆಯಲ್ಲೂ, (೭॥ ಘಳಿಗೆಗೆ ಒಂದು ಯಾಮದವರೆಗೂ ವ್ಯಾಪಿಸಿಕೊಂಡಿರುವ ಪೌರ್ಣಿಮೆಯಲ್ಲೂ, ಮಧ್ಯಾಹ್ನವೆಂದರೆ ಪ್ರಾತಃಕಾಲ ೬ ಘಳಿಗೆ, ಸಂಗಮಕಾಲ ೬ ಘಳಿಗೆ ಹೀಗೆ ೧೨ ಘಳಿಗೆಗಳು ಕಳೆದರೆ ಮಧ್ಯಾಹ್ನ ಬರುವುದು. ಮಧ್ಯಾಹ್ನ ವ್ಯಾಪಿನೀ ಉಳ್ಳ ಶ್ರವಣದಲ್ಲೂ ಉಪವಾಸ ಮಾಡಬೇಕೆಂದು ನಿಶ್ಚಯವಾಗುವುದು. ಈ ಪ್ರಕಾರ ಆ ದಿನಗಳಲ್ಲಿ ವಿಷ್ಣುಪಂಚಕ ಮಾಡುವವರು ಹೇಗೆ ಉಪವಾಸವನ್ನು ಬಿಡದೆ ಮಾಡುವರೋ ಹಾಗೆ ನೀನು ಮಾಡುವ ವಿಧಿ ನಿಷೇಧ ಕರ್ಮಗಳನ್ನೂ ಕೂಡ ಯೋಚಿಸದೆ ಪರಮಾತ್ಮನಿಗರ್ಪಿಸು. ಪರಮಾತ್ಮನು ತನ್ನ ಲೋಕವನ್ನು ನಿನಗೆ ಕೊಟ್ಟು ಆದರದಿಂದ ನಿನ್ನನ್ನು ರಕ್ಷಿಸುವನು ॥೨೨॥

## ೩. ಭಾವದರ್ಪಣ

"ಉದಯಸ್ಪರ್ಶಯುಗ್ದಶಃ ಪೌರ್ಣಮಾಸಿತು ಯಾಮಿಕಾ । ಮಾಧ್ಯಾಹ್ನ ವ್ಯಾಪಿನೀ ಶ್ರೋಣಾ ಉಪೋಶ್ಯಾ ವಿಷ್ಣು ತತ್ಪರೈಃ॥", ಎಂಬಂಥ ವಿಷ್ಣು ಪಂಚಕದ ನಿರ್ಣಯಾನುಸಾರ ಶ್ರವಣೋಪವಾಸ ಮಾಡತಕ್ಕ ದೀಕ್ಷಾ ಉಳ್ಳವರು ಚ್ಯುತಿಯಿಲ್ಲಧಾಗೆ ಸಾಂಗವಾಗಿ ಹ್ಯಾಗೆ ನಡೆಸುತ್ತಾರೋ ಹಾಗೆ ಅನರ್ಪಿತವಾದ ಅನ್ನ ವೃದ್ಧಿಕ್ಷಯಾದಿಗಳಲ್ಲೂ ಸ್ಪರ್ಶಮಾಡದೆ ಮಾನಸಿಕವಾದ

ಉಪಾಸನೆ ನಡೆಸಿ ನಿವೇದನ ಮಾಡಿ ಶ್ರೀಹರಿಪ್ರೀತಿಬಡಿಸಿ ಉದರ ಕಾರ್ಯ ನಡೆಸಬೇಕೆಂದು ನಿರೂಪಿಸುತ್ತಾರೆ. ಉದಯ ವ್ಯಾಪಿನೀತಿ ॥ ಅಭಿಜಿತ್ ॥

ಮಧ್ಯಾಹ್ನಕ್ಕೆ ಸಂಜ್ಞಾ ॥೨೨॥

## ೪ ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

(ಈ ವ್ಯಾಖ್ಯಾನಡಲ್ಲಿ ಈ ಪದ್ಯವನ್ನು ೨೩ನೇ ಪದ್ಯವನ್ನಾಗಿ ಪರಿಗಣಿಸಲಾಗಿದೆ)

ಭಗವತ್ಸಂಬಂಧಿ ವಿಧಿ ನಿಷೇಧೌ ಅನಾಲೋಚ್ಯ ಉಕ್ತರೀತ್ಯಾ ಕರ್ಮ ಕುರ್ಯಾತ್ ಇತ್ಯೇತತ್ ನಿದರ್ಶಯತಿ "ಉದಯ" ಇತಿ॥ ಅಮಾಯಾ ಉದಯ ವ್ಯಾಪ್ತೌ ಪೌರ್ಣಿಮಾ ಸಂಬಂಧಾಧಿಕಾ ಯಾಮೇ ಅಭಿಜಿತ್ ಶ್ರವಣಾಗತೌ ಸೈವ ಯುಥಾ" ಇತಿ ಯೋಜ್ಯಮ್ ॥೨೨॥

## ಕನ್ನಡಾರ್ಥ

ಭಗವಂತನ ಪ್ರೀತಿಗೆ ಕಾರಣವಾಗದ ವಿಧಿನಿಷೇಧಗಳನ್ನು ಆಲೋಚಿಸದೆ ಹಿಂದೆ ಹೇಳಿದಂತೆ ಕರ್ಮವನ್ನು ಮಾಡಬೇಕು, ಎಂಬ ವಿಷಯುವನ್ನು ನಿದರ್ಶನದಿಂದ ತಿಳಿಸುತ್ತಾರೆ. "ಉದಯ" ಎಂಬ ಪದ್ಯದಿಂದ ಅಮಾವಾಸ್ಯೆಯು ಉದಯವ್ಯಾಪ್ತವಾಗಿರಬೇಕು. ಪೌರ್ಣಿಮೆಯು ಯಾಮಕ್ಕಿಂತ ಅಧಿಕವಾಗಿರಬೇಕು. ಅಭಿಜಿನ್ ಮುಹೂರ್ತದಲ್ಲಿರುವ ಶ್ರವಣ ನಕ್ಷತ್ರವಿರಬೇಕು. ಅಂಥ ದಿವಸಗಳಲ್ಲಿ ಉಪವಾಸರೂಪವಾದ ಹರಿಸೇವೆಯನ್ನು ಮಾಡಬೇಕು. ಅಂದರೆ ವಿಷ್ಣುಪಂಚಕ ವ್ರತೋಪವಾಸವನ್ನು ಮಾಡಬೇಕು. ಮುಖ್ಯವಾಗಿ ಹರಿಪ್ರೀತಿಗೆ ಕಾರಣವಾದುದೇ ವಿಧಿ ; ಅವನ ಅಪ್ರೀತಿಗೆ ಕಾರಣವಾದುದೇ ನಿಷೇಧ. ಹೀಗೆ ತಿಳಿಯಬೇಕು. ಹೊರತಾಗಿ ಸಾಮಾನ್ಯವಾದ ವಿಧಿ ನಿಷೇಧಗಳನ್ನು ಲಕ್ಷಿಸಬಾರದೆಂಬು ತಾತ್ಪರ್ಯ ॥೨೨॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ಶಾಸ್ತ್ರನಿಷಿದ್ಧ ದ್ರವ್ಯ ಕರ್ಮ ಸಹ ವರ್ಜಿಸಬೇಕೆಂದು ಸದೃಷ್ಟಾಂತ ತಿಳಿಸುತ್ತಾರೆ, ನಂದಿ ಎಂದು. ನಂದಿವಾಹನರಾತ್ರಿ ಎಂಬ ಶಿವರಾತ್ರಿ ದಿವಸದಲ್ಲಿಯೂ, ಸಾಧನದ್ವಾದಶಿಯಲ್ಲಿಯೂ, ದಶಮಿಯಲ್ಲಿಯೂ, ಪೈತೃಕವೆಂಬ ಮಾತಾ-ಪಿತೃಶ್ರಾದ್ಧದಲ್ಲಿಯೂ ಶ್ರವಣನಕ್ಷತ್ರ ಪೂರ್ಣ ಇದ್ದಾಗ್ಯೂ ಉಪವಾಸವನ್ನು ಬಿಡುವಂತೆ, ನಿಂದೆಯಿಂದಲಿ ಬಂದ ದ್ರವ್ಯವ ಅಂದರೆ ಶಾಸ್ತ್ರನಿಷಿದ್ಧದುಷ್ಪ್ರತಿಗ್ರಹ, ದುರ್ಭೋಜನಾದಿಗಳನ್ನು ಕಣ್ಣಿಂದ ನೋಡಿ ಕೂಡ ಅಂಗೀಕರಿಸದೆ ವರ್ಜಿಸಿ, ಇದರಿಂದ ಸೂಚಿತವಾದ ಶಾಸ್ತ್ರ ನಿಷಿದ ಬ್ರಹ್ಮಹತ್ಯಾದಿ ದುಷ್ಕರ್ಮಗಳನ್ನು ಸಹಾ ವರ್ಜಿಸಿ, ಶ್ರೀಮದಾನಂದತೀರ್ಥರ ಅಂತರ್ಗತ ಶ್ರೀಹರಿಯ ಸ್ಮರಣೆರೂಪ ಭಜನೆಯನ್ನು ಸರ್ವತ್ರ ಬಿಡಬಾರದೆಂದರ್ಥ,

ಪ್ರಮಾಣ :

**ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ ।**
**ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ ॥**
**ಶುನಿಚೈವ ಸ್ವಪಾಕೇ ಚ ಪಂಡಿತಾಸ್ಸಮದರ್ಶಿನಃ ।**
ಎಂಬ ಗೀತಾರ್ಥ ವಿವರಿಸಿತು ॥೨೨॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ವಿಷ್ಣುಪಂಚಕ ಉಪವಾಸವ್ರತವನ್ನು ಆಚರಿಸುವವರು. ತಿಂಗಳಿಗೆ ಐದು ಉಪವಾಸಗಳನ್ನು ಮಾಡಬೇಕು.

(೧) ಏಕಾದಶಿ =೨, (೨) ಪೌರ್ಣಿಮೆ= ೧, (೩) ಅಮಾವಾಸ್ಯೆ (ದರ್ಶ)= ೧ ಮತ್ತು (೪) ಶ್ರವಣನಕ್ಷತ್ರ ವ್ಯಾಪ್ತಿ (ಶ್ರವಣೋಪವಾಸ)

ಏಕಾದಶೀ ಉಪವಾಸದ ವಿಷಯದಲ್ಲಿ ದಶಮೀವೇಧೆಯು ಅರುಣೋ

ದಯದಲ್ಲಿ ಬಂದರೆ, ಮೂರನೆಯ ದಿನವೇ ಏಕಾದಶೀ ಆಚರಣೆ ಮಾಡತಕ್ಕದು ಎಂದು ಶಾಸ್ತ್ರ ಸಮ್ಮತವು,

ಮಿಕ್ಕ ಮೂರು ಉಪವಾಸಗಳು "ಉದಯ ವ್ಯಾಪಿನೀ ದರ್ಶ್ಯಾ ಪೌರ್ಣಿಮಿಸೀತಃ ಯಾಮುಕಾ। ಮಾಧ್ಯಾಹ್ನ ವ್ಯಾಪಿನೀ ಶ್ರೋಣಾ ಉಪೋಷ್ಯಾ ವಿಷ್ಣು ತತ್ಪರೈಃ"-ಎಂದು ಧರ್ಮಶಾಸ್ತ್ರದ ಪ್ರಕಾರ ಅನುಷ್ಠಾನ ಮಾಡಬೇಕು.

ಅಂದರೆ, (೧) ಸೂರ್ಯೋದಯ ವ್ಯಾಪಿನಿಯುಳ್ಳ ಅಮಾವಾಸ್ಯೆಯ ದಿನ (ದರ್ಶ) ಏಳೂವರೆ ಘಳಿಗೆ, (೨) ಒಂದು ಯಾಮದ ಪರ್ಯಂತ ವ್ಯಾಪಿಸಿಕೊಂಡಿರುವ ಪೌರ್ಣಿಮೆ ದಿನ ಮತ್ತು (೩) ಮಧ್ಯಾಹ್ನ ವ್ಯಾಪಿನೀ ಉಳ್ಳ ಶ್ರವಣದಲ್ಲೂ ಉಪವಾಸ ಆಚರಿಸಬೇಕು ಎಂದು ಧರ್ಮಶಾಸ್ತ್ರ ನಿರ್ಣಯ.

ಅಭಿಜಿತ ಮುಹೂರ್ತದಲ್ಲಿ ಶ್ರವಣ ನಕ್ಷತ್ರವಿರಬೇಕು. (ಶ್ರವಣೋಪವಾಸಕ್ಕೆ) ಇಂತು ಪೂರ್ವೋಕ್ತ ದಿನಗಳಲ್ಲಿ ಉಳಿದ ವಿಷಯಗಳನ್ನು ಗಣನೆಗೆ ತಾರದೇ ವಿಷ್ಣುಪಂಚಕ ಉಪವಾಸವನ್ನು ಆಚರಿಸುವಂತೆ, ಮಾನಸಿಕವಾಗಿ ಶ್ರೀ ಹರಿಯ ಪೂಜಾ ಮಾಡುವ ಸಾಧಕರು ಕಾಲದೋಷವನ್ನಾಗಲೀ ತದನುಗುಣವಾದ ಲೋಪಗಳನ್ನಾಗಲೀ ನೋಡದೆ, ಅನನ್ಯ ಭಕ್ತಿಯಿಂದ ಶ್ರೀ ಹರಿಯನ್ನು ಸೇವಿಸಬೇಕೆಂದು ತಿಳಿಸುತ್ತಾರೆ ದಾಸವರ್ಯರು. ವಿಧಿ ನಿಷೇಧಗಳು ಗೌಣ. ಶ್ರೀಹರಿಯ ಪ್ರೀತಿಯೇ ವಿಧಿ. ಅವನ ವಿಸ್ಮರಣೆಯೇ ನಿಷೇಧ. ಭಗವದನುಗ್ರಹಕ್ಕೆ ಮುಖ್ಯ ಕಾರಣವಾದ ಭಕ್ತಿ ರಹಿತನಾಗಿ, ವಿಧಿ ನಿಷೇಧಗಳನ್ನು ಶಾಸ್ತ್ರೋಕ್ತವಾಗಿ ಆಚರಿಸಿದರೂ ಅದು ನಿಷ್ಫಲ. ಅನವರತ. ಶ್ರೀ ಹರಿಯ ಪಾದ ಕಮಲಗಳಲ್ಲಿ ಅವಿಚ್ಛಿನ್ನವಾದ ಭಕ್ತಿ ಭಾವದಿಂದ ಭಜಿಸುತ್ತಿರುವ ಏಕಾಂತ ಭಕ್ತರನ್ನು ಭಕ್ತ ವತ್ಸಲನಾದ ಭಾರ್ಗವೀಪತಿಯು ಸ್ವಧಾತುವಾದ ವೈಕುಂಠದಲ್ಲಿ ಇಟ್ಟು, ಆನಂದಪ್ರದನಾಗಿ. ಸಂರಕ್ಷಣ ಮಾಡುತ್ತಾನೆ. ಅಂತಹ ಏಕಾಂತ ಭಕ್ತರಿಗೆ ಪೂರ್ವೋಕ್ತ ವಿಷ್ಣು ಪಂಚಕ ಉಪವಾಸವನ್ನು ಆಚರಿಸುವಂತೆ, ವಿಧಿ ನಿಷೇಧಗಳ ನಿಯಮವಿಲ್ಲ ॥೨೨॥

# ಪದ್ಯ-೨೩

**ಮೂಲ:**

**ನಂದಿವಾಹನ ರಾತ್ರಿ ಸಾಧನಿ ।**
**ಬಂದ ದ್ವಾದಶಿ ದಶಮಿ ಪೈತೃಕ ।**
**ಸಂಧಿಸಿಹ ಸಮಯದಲಿ ಶ್ರವಣವ ತ್ಯಜಸುವಂತೆ ಸದಾ ॥**
**ನಿಂದ್ಯರಿಂದಲಿ ಬಂದ ದ್ರವ್ಯವ**
**ಕಂದೆರದು ನೋಡದಲೆ ಶ್ರೀಮುದಾ ।**
**ನಂದತೀರ್ಥಾಂತರ್ಗತನ ಸರ್ವತ್ರ ಭಜಿಸುತಿರು ॥ ॥೨೩॥**

**ಅವತರಣಿಕೆ :**

ನೀಚರಲ್ಲಿ ಪೋಗಿ ಯಾಚಿಸದೆ, ಯಾವಾಗಲೂ ಮಧ್ವಾಂತರ್ಗತನಾದ ಮಾರಮಣನನ್ನು ಸರ್ವತ್ರ ನೋಡುತ್ತಾ ಭಜಿಸುತ್ತಿರು ಎಂದು ಶಿವರಾತ್ರಿ ದಿನ, ಸಾಧನ ದ್ವಾದಶಿಯ ದಿನ, ಮಾತಾ ಪಿತೃಗಳ ಶ್ರಾದ್ಧಗಳ ದಿನಗಳಲ್ಲಿ ಶ್ರವಣೋಪಾಸವನ್ನು ತ್ಯಜಿಸುವಂತೆ ಎಂಬ ದೃಷ್ಟಾಂತದಿಂದ ತಿಳಿಸುತ್ತಾರೆ ॥೨೩॥

**ಪ್ರತಿಪದಾರ್ಥ :**

**ನಂದಿವಾಹನ ರಾತ್ರಿ=** ವೃಷಭಾರೂಢನಾದ ರುದ್ರದೇವರ ದಿನ ಅಂದರೆ ಶಿವರಾತ್ರಿಯಂದು, **ಸಾಧನಿ ಬಂದ ದ್ವಾದಶಿ=** ಸಾಧನ ದ್ವಾದಶಿ ದಿನದಂದು, **ಪೈತೃಕ=** ಮಾತಾಪಿತೃಗಳ ಶ್ರಾದ್ಧ ದಿನಗಳಂದು, **ಸಂಧಿಸಿಹ ಸಮಯದಲಿ=** ಪೂರ್ವೋಕ್ತ ಕಾಲಗಳು ಪ್ರಾಪ್ತವಾಗಿರಲು, **ಶ್ರವಣನ ತ್ಯಜಿಸುವಂತೆ=** ಶ್ರವಣೋಪಾಸವನ್ನು ಬಿಡುವಂತೆ, **ಸದಾನಿಂದ್ಯರಿಂದಲಿ ಬಂದ=** ಯಾವಾಗಲೂ ಶ್ರೀ ಪರಮಾತ್ಮನನ್ನು ನಿಂದಾ ಮಾಡತಕ್ಕ ನೀಚ

ಜನರಿಂದ ಬರುವ **ದ್ರವ್ಯವ** = ದುಡ್ಡು ದುಗ್ಗಾಣಿಗಳನ್ನು **ಕಂಡೆರಡು ನೋಡಬೆಲೆ**= ಕಣ್ಣುಬಿಟ್ಟು ನೋಡದೆ **ಶ್ರೀಮದಾನಂದ ತೀರ್ಥಾಂತರ್ಗತ** = ಶ್ರೀಮನ್ಮಧ್ವಮುನಿಗಳ ಅಂತರ್ಯಾಮಿಯಾದ ಶ್ರೀಹರಿಯು **ಸರ್ವತ್ರ**= ಸಕಲ ಕಾಲ, ದೇಶ, ವಸ್ತುಗಳಲ್ಲಿಯೂ ವ್ಯಾಪಕನಾಗಿದ್ದಾನೆಂದು ತಿಳಿದು **ಭಜಿಸು**= ಕೊಂಡಾಡುವವನಾಗು ॥೨೩॥

# ವ್ಯಾಖ್ಯಾನಗಳು

## ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಸದಾ ಸರ್ವ ಕಾಲದಲ್ಲಿ ಪ್ರಾಕೃತದ್ರವ್ಯಗಳ ವೀಕ್ಷಣ ಮಾಡದೆ ತದಂತರ್ಗತ ಪರಮಾತ್ಮನ್ನ ವೀಕ್ಷಣ ಮಾಡುತ್ತಿರು ಎಂತ ಹೇಳತಾರೆ, ವೃಷಭ ವಾಹನವಾಗುಳ್ಳ ರುದ್ರದೇವರ ದಿನ ಎಂದು ಹೆಸರು ಪಡೆದ ಶಿವರಾತ್ರೀ ದಿನದಲ್ಲೇನು, ಸಾಧನೀ ಬಂದ ದ್ವಾದಶೀ ದಿನದಲ್ಲಿ, ದಶಮಿ ದಿನದಲ್ಲೇನು, ಮಾತಾಪಿತೃಗಳ ಶ್ರಾದ್ಧ ದಿನದಲ್ಲೇನು ಪ್ರಾಪ್ತವಾಗಿರತಕ್ಕ ದಿನಗಳಲ್ಲಿ ವಿಷ್ಣು ಪಂಚಕ ಉಪವಾಸ ಮಾಡತಕ್ಕವರು ಶ್ರವಣೋಪಾಸ ಮಾಡಬೇಕು. ಪೂರ್ವೋಕ್ತ ಶಿವರಾತ್ರಿ ಮೊದಲಾದ ತಿಥಿಗಳಲ್ಲಿ ಉಪವಾಸ ಮಾಡಬೇಕಾಪ ಶ್ರವಣನಕ್ಷತ್ರ ಪ್ರಾಪ್ತವಾದರೆ ಆ ಶ್ರವಣೋಪಾಸವನ್ನು ತ್ಯಾಗ ಮಾಡತಾರೆ ಶಿವರಾತ್ರಿ ಪೈತೃಕ ತಿಥಿಗಳೆರಡೂ ಅನ್ಯ ದೇವತಾಕವಾದ್ದರಿಂದ ಆ ತಿಥಿಗಳಲ್ಲಿ ಮಾಡಿದ, ವಿಷ್ಣುವಿಗೆ ಪ್ರೀತಿಕರವಾದ ಶ್ರವಣೋಪಾಸ ಮಾಡಿದರೆ ವಿಷ್ಣುವಿಗೆ ಪ್ರೀತಿಕರ ವಾಗೋದಿಲ್ಲ. ಆದ್ದರಿಂದ ಆ ದಿನಗಳಲ್ಲಿ ಶ್ರವಣೋಪಾಸ ತ್ಯಾಗವು. ದಶಮಿ ಶ್ರವಣ ತ್ಯಾಗ ಎಂಬುದು ದಶಮಿ ಏಕಾದಶಿ ದ್ವಾದಶಿ ದಿನ ತ್ರಯಾತ್ಮಕ ವ್ರತ ಮಹಾಫಲಪ್ರದವಾದದ್ದು, ನಿತ್ಯವ್ರತ. ವಿಷ್ಣು ಪಂಚಕ ನೈಮಿತ್ತಿಕ ವ್ರತ. ಶ್ರವಣ ದಶಮಿ ಎರಡೂ ವಿಷ್ಣು ವ್ರತಗಳೇ ಆದ್ಯ

ಕಾಲಕ್ಕೂ, ಪ್ರಬಲ ವ್ರತ ಸಂಪುಟಾಕಾರವಾದ ದಶಮ್ಯಾದಿ ದಿನತ್ರಯಾತ್ಮಕ ವ್ರತವಾದ್ದರಿಂದ, ಈ ಪ್ರಬಲ ವ್ರತದಿಂದ ಅಲ್ಪವಾದ ಶ್ರವಣವು ನಿಂದಿತ ವಾಗಿ ತತ್ಫಲ ದಶಮಿ ವ್ರತದಾಗೆ ಅಂತರ್ಭೂತವಾಯಿತು. ಇದರೋಪಾದಿ ಯಲ್ಲಿ ಪರಮಾತ್ಮನ್ನ ನಿಂದಾಮಾಡತಕ್ಕವರಿಂದ ಬಂದಂಥಾ ದ್ರವ್ಯವ ಕಣ್ಣು ತೆರೆದು ನೋಡದೇನೇ ಇರೋವನಾಗೆಂದು ತಾತ್ಪರ್ಯ. ಮತ್ತು ಭಗವನ್ನಿಂದಾ ಪೂರ್ವಕವಾಗಿ ಬಂದ ದ್ರವ್ಯ ಸಾಂಕೇತವಾದ ವಿಪರೀತ ಜ್ಞಾನ ಪ್ರತಿಪಾದಕ ವಾದ ಮಿಥ್ಯಾಶಾಸ್ತ್ರವನ್ನು ಕಣ್ಣು ತೆರೆದು ನೋಡದೇ ಎಂತಲೂ ತಾತ್ಪರ್ಯವೇ ಈ ಪ್ರಕಾರ ನಿಸ್ಪೃಹನಾಗಿದ್ದು, ನಿರಂತರದಲ್ಲೂ ಚರಾಚರ ಸರ್ವಾಧಿಷ್ಠಾನ ದಲ್ಲೂ ಜ್ಞಾನಾಖ್ಯ ಸಂಪತ್ತಿನಿಂದ ಪೂರ್ಣರಾದ ಶ್ರೀಮಧ್ವಾಚಾರ್ಯರ ಅಂತ ರ್ಗತನಾದ ಶ್ರೀಮನ್ನಾರಾಯಣದೇವರ ಸ್ತೋತ್ರ ಮಾಡತಾ ಇರೋವನಾಗು. ಸರ್ವತ್ರ ವ್ಯಾಪ್ತನಾದ ಶ್ರೀ ಪರಮಾತ್ಮನ್ನ ಬಿಂಬರೂಪಿ ಪರಮಾತ್ಮನಲ್ಲಿ ಐಕ್ಯ ಚಿಂತಿಸಿ, ಭಾರತೀರಮಣ ಮುಖ್ಯ ಪ್ರಾಣಾಂತರ್ಗತನಾಗಿ, ಗೋಳಕ ಚಿಂತನೆ ಕ್ರಮಾತ್ ಭಜಿಸಬೇಕಂತ ತಾತ್ಪರ್ಯ.

**ವಿಶೇಷಾರ್ಥ** : ಪಂಚಭೇಧ ತಾರತಮ್ಯಜ್ಞಾನ ಹರಿಸರ್ವೋತ್ತಮತ್ವ ವಾಯುಜೀವೋತ್ತಮತ್ವ ಇವುಗಳಿಂದ ಶೂನ್ಯವಾದ ಜ್ಞಾನವೂ ನಿಂದಾದ್ರವ್ಯ ಗಳೇ. ಮತ್ತು ಪ್ರತಿಮಾನೇ ದೇವರು ಎಂತ ಪೂಜಾ ಮಾಡೋಣ ದಾವದತೆ ಇದೇ ನಿಂದಾಯುಕ್ತವಾದ ಜ್ಞಾನ ದ್ರವ್ಯವು. ನಿರ್ದೋಷಯುಕ್ತ ಜ್ಞಾನ ದಿಂದ ಸಹಿತನಾಗಿರಬೇಕೆಂದು ತಾತ್ಪರ್ಯ ॥೨೩॥

## ೨. ಭಾವ ಪ್ರಕಾಶಿಕೆ.

ವಿಷ್ಣುಪಂಚಕದ ೫ ಉಪವಾಸಗಳಲ್ಲಿ ಶ್ರವಣೋಪವಾಸವು ಕೆಲವು ದಿವಸದಲ್ಲಿ ಮಾಡಬಾರದೆಂದು ಪ್ರಮಾಣವಿರುವುದು. ಬ್ರಹ್ಮಾಂಡಪುರಾಣದಲ್ಲಿ "ಪಿತ್ರಬ್ದೇಕೌದ್ರಿಕಾಬ್ದೇಚ ಸಾಧನ ದ್ವಾದಶೀದಿನೇ । ದಶಮ್ಯಾಂಚೈವ ವಿಬು-

ಧ್ಯೆನೋಪ್ಯೋಷ್ಯಂ ವಿಷ್ಣು ತತ್ಪರೈಃ ॥ ತಂದೆತಾಯಿಗಳ ಸಾಂವತ್ಸರಿಕ ಶ್ರಾದ್ಧದ ದಿವಸದಲ್ಲೂ ಪ್ರತಿ ಸಂವತ್ಸರದಲ್ಲೂ ಬರುವ ಮಹಾಶಿವರಾತ್ರಿಯಲ್ಲೂ ಪ್ರತಿ ಸಂವತ್ಸರದಲ್ಲೂ ದ್ವಾದಶಿ 12 ಘಳಿಗೆಗಳಿಗೆ ಕಮ್ಮಿ ಇರುವ ದಿವಸದಲ್ಲೂ ಶ್ರವಣ ಬಂದರೆ ವಿವೇಕಿಗಳು ಉಪವಾಸಮಾಡಬಾರದೆಂದು ಹೇಳಿರುವರು ವಿಷ್ಣು ಪಂಚಕ ನಿರ್ಣಯದಲ್ಲಿ "ವಿಷ್ಣುವ್ರತಾಭಿಮಾನಾದ್ವಾ ಶ್ರವಣೇಚಾಭಿ-ಮಾನತಃ । ಯಃ ಕುರ್ಯಾದ್ವಿಷ್ಣು ಭಕ್ತಸ್ತು ವಿಷ್ಣುದ್ರೋಹೀನ ಸಂಶಯಃ॥ ಸ ತತ್ಫಲಂ ಶಿವೇದತ್ವಾ ಯಾತಿ ಘೋರಂ ಮಹತ್ತಮಃ। ವಿಷ್ಣುವ್ರತವೆಂಬ ಅಭಿಮಾನದಿಂದಾಗಲೀ, ಶ್ರವಣದಲ್ಲಿ ಅಭಿಮಾನದಿಂದಾಗಲೀ ಶಿವರಾತ್ರಿ ದಿವಸ ದಲ್ಲಿ ಶ್ರವಣನಿಮಿತ್ತವಾದ ಉಪವಾಸವನ್ನು ಯಾವ ವಿಷ್ಣುಭಕ್ತನು ಮಾಡು-ವನೋ ಆವನು ವಿಷ್ಣುದ್ರೋಹಿ ಎನಿಸುವನು. ಆ ಉಪವಾಸದ ಫಲವನ್ನು ಈಶ್ವರನಿಗೆ ಕೊಟ್ಟು ಇವನು ಘೋರವಾದ ನರಕವನ್ನು ಸೇರುವನು. ಎಂದು ಹೇಳುವರು. ಮತ್ತು "ವಿಷ್ಣುವ್ರತಸ್ತೋ ರಾಜೇಂದ್ರ ಮಾತಾಪಿತ್ರೋರ್ಮೃತ್ಯೇಹನಿ। ಕುರ್ಯಾದ್ವಿಧಿವಚ್ಛ್ರಾದ್ಧಂ ಶೇಷಂಭುಂಜೀತ ಬಂಧುಭಿಃ॥ ಅನ್ಯಥಾ ಕರ್ಮಲೋಪಃ ಸಾದ್ವ್ರತ ಭಂಗೋಪಿ ಜಾಯತೆ॥" ವಿಷ್ಣು ಪಂಚಕವ್ರತವನ್ನು ಮಾಡುವವನು ತನ್ನ ತಾಯಿತಂದೆಗಳ ಶ್ರಾದ್ಧದ ದಿನದಲ್ಲಿ ಶ್ರವಣ. ಪೌರ್ಣಮಿ ಅಮಾವಾಸ್ಯೆ ಬಿದ್ದರೆ, ಆವತ್ತು ವಿಧ್ಯುಕ್ತಪ್ರಕಾರ ಶ್ರಾದ್ಧವನ್ನು ಮಾಡಿ ಆ ಶೇಷವನ್ನು ತನ್ನ ಬಂಧುಗಳಿಂದ ಕೂಡಿ, ತಾನು ಭೋಜನ ಮಾಡಬೇಕು. ಹಾಗಿಲ್ಲವೆಂದರೆ. ಕರ್ಮಲೋಪವು ಬರುವುದು. ವ್ರತಭಂಗವು ಆಗುವುದು, ಎಂದು ಹೇಳಿರುವರು. ಅದೇ ಅಭಿಪ್ರಾಯವನ್ನೇ ದಾಸಾರ್ಯರು ಇಲ್ಲಿ ಹೇಳಿರುತ್ತಾರೆ:- ಹೇಗೆ ಶ್ರವಣೋಪವಾಸವು ವಿಷ್ಣುಪಂಚಕದಲ್ಲಿ ಮುಖ್ಯವಾದರೂ ಕೆಲವು ದಿವಸಗಳಲ್ಲಿ ಬಿಟ್ಟುಬಿಡುವರೋ, ಹಾಗೆಯೇ ವಿಧಿ ನಿಷೇಧಗಳನ್ನು ಶ್ರೀಹರಿಗೆ ಸಮರ್ಪಣೆಮಾಡಬಹುದಾದರೂ, ನೀಚಸೇವಾದಿಗಳಿಂದ ದ್ರವ್ಯ ಸಂಪಾದನೆ ಮಾಡುವುದನ್ನು ಬಿಟ್ಟು, ಅಂತಹ ದ್ರವ್ಯವನ್ನು ಕಣ್ಣಿಂದಾದರೂ ನೋಡಬಾರದು. ಇಂತಹ ನಿಯಮದಿಂದ, ಶ್ರೀ ಮಧ್ವಾನಂದ ತೀರ್ಥರ ಅಂತರ್ಯಾಮಿಯಾದ ಶ್ರೀ ಪರಮಾತ್ಮನನ್ನು ಭಜಿಸಬೇಕೆಂಬ ತಾತ್ಪರ್ಯ॥ ೨೩ ॥

## ೩ ಭಾವದರ್ಪಣ

ಶಿವರಾತ್ರಿ ೧, ಸಾಧನ ದ್ವಾದಶಿ ೧, ಮಾತಾಪಿತೃ ಶ್ರಾದ್ಧ ಈ ನಾಲ್ಕು ದಿವಸಗಳಲ್ಲಿ ಮಾತ್ರ ವಿಷ್ಣುಪಂಚಕ ವ್ರತಾಚರಿಸತಕ್ಕವರು. ಶ್ರವಣೋಪವಾಸ ಪ್ರಾಪ್ತವಾದರೆ ಹ್ಯಾಗೆ ಪರಿತ್ಯಾಗ ಮಾಡುತ್ತಾರೋ ತದ್ವತ್ ಅನ್ಯಾಯದಿಂದ ಬಂದ ದ್ರವ್ಯ ಪರಿತ್ಯಾಗವೇ ಮಾಡಿ ಸದ್ವೃತ್ತಿಯಿಂದ ಅಲ್ಪದ್ರವ್ಯ ಪ್ರಾಪ್ತಿ ಆದರೂ ಅಷ್ಟರಿಂದಲೇ ಶ್ರೀಹರಿಯನ್ನು ಪ್ರೀತಿಬಡಿಸೆಂದು ಹೇಳುತ್ತಾರೆ. ನಂದಿವಾಹನ ರಾತ್ರೀ. ಉಕ್ತಂಚ, "ಪಿತ್ರಬ್ದೇರೌದ್ರಿಕಾಬ್ದೇಚ ಸಾಧನ ದ್ವಾದಶೀದಿನೇ। ದಶವನ್ಯಾಂಚೈವ ವಿಬುಧೈನೋಪೋಷ್ಯಂ ವಿಷ್ಣುಶತ್ಪಶೈರಿತಿ " ಬ್ರಾಹ್ಮೇ । ವಿಷ್ಣುಪಂಚಕ ನಿರ್ಣಯೋಪ್ಯುಕ್ತಂ । "ವಿಷ್ಣುವ್ರತಾಭಿಮಾನಾ-ದ್ವಾಶ್ರವಣೇಭಾಭಿಮಾನತಃ । ಯಃ ಕುರ್ಯಾದ್ವಿಷ್ಣು ಭಕ್ತಃಸ್ಯಾತ್ ವಿಷ್ಣುದ್ರೋಹೀನ ಸಂಶಯಃ । ಸ ತತ್ಫಲಂಶಿವೇದತ್ವಾ ಯಾತಿ ಘೋರಂ ಮಹತ್ತಮ "ಇತಿ । ಮತ್ತೊಂದು ಪ್ರಮಾಣ । " ವಿಷ್ಣುವ್ರತಸ್ಥೋ ರಾಜೇಂದ್ರ ಮಾತಾಪಿತ್ರೋರ್ಮೃತೈ ಹನಿ । ಕುರ್ಯಾದ್ವಿಧಿವ ಚ್ಛ್ರಾದ್ಧಂ ತಚ್ಛೇಷಂ ಭೋಜಯೋತ್ಸುಧೀಃ ॥ ಅನ್ಯಥಾ ಕರ್ಮಲೋಪಸ್ಯಾದ್ವ್ರತ ಭಂಗೋಪಿಜಾಯತ್ ಇತಿ ॥೨೩॥

## ೪ ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

ವ್ಯತಿರೇಕಂ ಆಹ "ನಂದಿವಾಹನ" ಇತಿ ॥ "ಸಾಧನೆ" ಇತಿ ದ್ವಾದಶ್ಯ ಹೇತುಃ ॥ ಏವಂ ಉತ್ತರೆತ್ರ ಜ್ಞೇಯಮ್ ॥೨೪॥

## ಕನ್ನಡಾರ್ಥ

ಶ್ರವಣೋಪಾಸವನ್ನು ಯಾವಾಗ ಮಾಡಬಾರದು ಎಂಬುದರ ದೃಷ್ಟಾಂತದಿಂದ ನಿಂದ್ಯರಿಂದ ಬಂದ ದ್ರವ್ಯವನ್ನು ವರ್ಜಿಸಬೇಕು ಎಂದು ಹೇಳುತ್ತಾರೆ ನಂದಿವಾಹನ ಎಂಬ ಪದ್ಯದಿಂದ.

ಇಲ್ಲಿ "ಸಾಧನೆ ಬಂದ ದ್ವಾದಶಿ" ಎಂಬಲ್ಲಿ "ಸಾಧನೆ ಬಂದ" ಎಂಬ ಪದವು ದ್ವಾದಶೀ ಪಾರಣೆಯನ್ನು ಬಿಡದಿರುವುದರಲ್ಲಿ ಕಾರಣವನ್ನು ಹೇಳುತ್ತದೆ. ಅಂದರೆ ಸಾಧನೆ ದ್ವಾದಶಿ ಇರುವಾಗ ಶ್ರವಣವನ್ನು ಬಿಡಬೇಕು, ಎಂತ ತಾತ್ಪರ್ಯ. ಇದರಂತೆ ಮುಂದಿನ ಸಂದರ್ಭಗಳಲ್ಲಿಯೂ ಜೋಡಿಸಬೇಕು ||೨೪||

## ಶ್ರೀ ಗುರುಹೃದಯ ಪ್ರಕಾಶಿಕೆ

ಸಚ್ಛಾಸ್ತ್ರ ಪಠನಾದಿಗಳನ್ನು ನಿತ್ಯದಲ್ಲಿಯೂ ಬಿಡದೆ ಆಚರಿಸಬೇಕೆಂದು ತಿಳಿಸುತ್ತಾರೆ ಶ್ರೀ ಮನೋರಮ ಎಂಬ ಮೇರು ತ್ರಿಕಕುದ್ಧಾಮ ಸಮೀಪ ಎಂದರೆ ಮೇರು ಪರ್ವತದಲ್ಲೂ, ಧ್ರುವಲೋಕದಲ್ಲೂ, ಇಂದ್ರಲೋಕದಲ್ಲೂ ಮೂರು ಉತ್ಕೃಷ್ಟ ಲೋಕವುಳ್ಳಂಥಾ ಸತ್ಕಲ್ಯಾಣವೆಂಬ ನಿರ್ದೋಷ ಅಪ್ರಾಕೃತ ಜ್ಞಾನಾದಿ ಗುಣಗಳುಳ್ಳ ನಿಸ್ಸೀಮ ಎಂಬ ಅಪಾರನಾದ ಪವಿತ್ರಕರ ನಾರಾಯಣಾದಿ ನಾಮವುಳ್ಳ, ದಿವಿಜರೆಂಬ ಸರ್ವದೇವತೆಗಳಿಗೂ ಉತ್ಕೃಷ್ಟನಾದ ಲಕ್ಷ್ಮೀಮನೋಹರನಾದ ರಘುರಾಮ ಮೂರ್ತಿಯು ಪ್ರೇಮಪೂರ್ವಕವಾಗಿ ತನ್ನ ಮಹಾಮಹಿಮೆ ಎಂದರೆ ಮಹಾತ್ಮೆ ಹೇಳುವ ಸಚ್ಛಾಸ್ತ್ರವನ್ನು ಸ್ತುತಿಸುತ್ತಾ, ಸದಾ ಪಠನಾಧಿಗಳನ್ನು ಮಾಡುವವರಿಗೆ ಸುಧಾಮನೆಂಬ ಕುಚೇಲನಿಗೆ ಒಲಿದಂತೆ ಅನುಗ್ರಹಿಸಿ ಸಕಲ ಪುರುಷಾರ್ಥಗಳನ್ನೂ ಕೊಡುತ್ತಿರುವನು

**ಸ ಏವಾಸ್ಯ ಸ್ವರೂಪೇಣ ಶಕ್ರಲೋಕ ಸಮೀಪಗಃ।**
**ಇಜ್ಯೋ ಯಜ್ಞ ಪುನಾನ್ನಾಮ ಜ್ಞಾನಿನಾಂ ಗೃಹಿಣಾಂ ಪದಂ।**
**ಯತೀನಾಂ ಧ್ರುವಲೋಕಸ್ಥೋ ವನಿನಾಂ ಮೇರುಮಧ್ಯಗಃ॥**

ಎಂಬ ಭಾಗವತ ತಾತ್ಪರ್ಯವೂ ವಿವರಿಸಿತು ||೨೩||

# ಸರ್ವವ್ಯಾಖ್ಯಾನಸಾರ ಸಂಗ್ರಹ

ನಂದಿಯನ್ನು ತನ್ನ ವಾಹನವನ್ನಾಗಿ ಉಳ್ಳ ಶ್ರೀ ರುದ್ರದೇವರಿಗೆ "ನಂದಿ ವಾಹನ" ನೆಂದು ಹೆಸರು. ಅದರ ರಾತ್ರಿ-ಎಂದರೆ ಮಹಾಶಿವರಾತ್ರಿ"ಎಂದರ್ಥ

ವಿಷ್ಣು ಪಂಚಕ ಉಪವಾಸವನ್ನು ಆಚರಿಸುವವರು. (೧) ಶಿವರಾತ್ರಿಯ ದಿನ (೨) ಸಾಧನವ್ಯಾಪ್ತವಾದ ದ್ವಾದಶೀ ತಿಥಿಯೊಂದು, ಅಂದರೆ, ಸಾಧನ ದ್ವಾದಶಿಯಂದು (೩) ತಿಥಿತ್ರಯಗಳಲ್ಲಿ ಮೊದಲನೆಯದಾದ ದಶಮೀ ತಿಥಿ ಯಂದು. ಮತ್ತು (೪) ಮಾತಾಪಿತೃಗಳ ಸಾಂವತ್ಸರಿಕ ಶ್ರಾದ್ಧಗಳು ಬೀಳುವ ತಿಥಿಯಂದು, ಶ್ರವಣೋಪಾಸವನ್ನು ತ್ಯಜಿಸುವರು. ಇದು ವಿಧಿ ಪೂರ್ವಕ ವಾದ ನಿಯಮ.

**ಪ್ರಮಾಣ :**

॥ಪಿತ್ರಾಬ್ದೇ ರೌದ್ರಿಕಾಬ್ದೇಚ ಸಾಧನ ದ್ವಾದಶೀ ದಿನೇ ।
ದಶಮ್ಯಾಂಚೈವ ವಿಟು ಧೈರ್ಯೋಪೋಷ್ಯಂ ವಿಷ್ಣು ತತ್ಪರಿತಿ॥

**ಇತಿ ಬ್ರಾಹ್ಮೀ ವಿಷ್ಣುಪಂಚಕ ನಿರ್ಣಯೋಕ್ತಿ**

॥ವಿಷ್ಣು ವ್ರತಾಭಿಮಾನಾದ್ವಾಶ್ರವಣೇಚಾಭಿಮಾನತಃ ಯಃ ಕುರ್ಯಾದ್ವಿಷ್ಣು ಭಕ್ತಸ್ತು ವಿಷ್ಣು ದ್ರೋಹೀ ನ ಸಂಶಯಃ॥ ಸ ತತ್ಫಲಂ ಶಿವೇ ದತ್ವಾ ಯಾತಿ ಘೋರಂ ಮಹತ್ತಮಿ

ಈ ರೀತಿ ಪ್ರಮಾಣೋಕ್ತಿಗಳಾನುಸಾರ ಮಾತಾಪಿತೃಗಳ ಶ್ರಾದ್ಧದಿನ ಗಳಲ್ಲಿ (ಪಿತ್ರಾಬ್ದೇ) ಶಿವರಾತ್ರಿ ದಿನದಂದು (ರೌದ್ರಿಕಾಬ್ದೇಚ) ಸಾಧನ ದ್ವಾದಶೀ ದಿನದಿಂದ (ಸಾಧನ ದ್ವಾದಶೀ ದಿನೇ) ಮತ್ತು ದಶಮಿ ದಿನದಂದು (ದಶಮ್ಯಾಂ ಚೈವ) ವಿಷ್ಣು ಪ್ರೀತ್ಯರ್ಥವಾಗಿ ಜ್ಞಾನಿಗಳು ಶ್ರವಣೋಪವಾಸ

ವನ್ನು ತ್ಯಜಿಸುವರು. ಯಾರು ಶ್ರವಣೋಪವಾಸದಲ್ಲಿ ಅಭಿಮಾನದಿಂದ ಪೂರ್ವೋಕ್ತ ದಿನಗಳಲ್ಲಿ ಉಪವಾಸ ಮಾಡುತ್ತಾರೋ ಆ ಫಲವನ್ನು ರುದ್ರ ದೇವರಿಗೆ ಕೊಟ್ಟು ಅಂತಹ ಹಠವಾದಿಗಳಿಗೆ ನರಕಾಜ್ಯಸರ್ಗಗಳನ್ನು ಕೊಡುವನು ಎಂದು ವಿಷ್ಣುಪಂಚಕ ನಿರ್ಣಯದಲ್ಲಿ ಹೇಳಿದೆ ಪೂರ್ವೋಕ್ತ ದಿನಗಳು ಉತ್ತಮ ಪಕ್ಷ ಶ್ರವಣೋಪಾಸವು ಗೌಣವಾಗುತ್ತದೆ.

ಅಂತೆಯೇ ಪಂಚಬೇಧ ತಾರತಮ್ಯ ಜಗತ್ಸತ್ಯತ್ವವಾದವನ್ನು ಒಪ್ಪದ ಮಿಥ್ಯಾವಾದಿಗಳು 'ನಿಂದ್ಯರು' ನಿಂದ್ಯರಾದ ಅಂತಹ ನೀಚ ಜನರಲ್ಲಿ ಹೋಗಿ ಯಾಚಿಸದೆ, ಅವರು ನೀಡುವ ದ್ರವ್ಯರೂಪವಾದ ಹಣ, ಸಂಪತ್ತುಗಳನ್ನು ಕಣ್ಣೆತ್ತಿಯೂ ನೋಡದೆ ನಿರಾಕರಿಸಬೇಕು. ಶ್ರೀಮನ್ಮಧ್ವಮುನಿ ಮಾನಸ ಮಂದಿರವಾದ ಆ ಮಧುಸೂದನನನ್ನು ಅನವರತ ಸರ್ವ ಕಾಲ, ದೇಶ, ವಸ್ತು ಗಳಲ್ಲಿ ಚಿಂತಿಸುತ್ತಾ ಸರ್ವತ್ರ ವ್ಯಾಪ್ತನಾದ ಆ ಸರ್ವೋತ್ಕೃಷ್ಟನನ್ನು ಭಜಿಸಿ ಕೊಂಡಾಡುತ್ತಿರೆಂದು ತಿಳಿಸುತ್ತಾರೆ ॥೨೩॥

## ಪದ್ಯ-೨೪

**ಮೂಲ :**

**ಶ್ರೀ ಮನೋರಮ ಮರುತೇಶ ತ್ರಿಕಕು ।**
**ದ್ಧಾಮ ಸತ್ಕಲ್ಯಾಣಗುಣ ನಿ ।**
**ಸ್ಸೀಮ ಪಾವನನಾಮ ದಿವಿಜೋದ್ಧಾಮ ರಘುರಾಮ ॥**
**ಪ್ರೇಮಪೂರ್ವಕ ನಿತ್ಯ ತನ್ನ ಮ ।**
**ಹಾಮಹಿಮೆಗಳ ತುತಿಸುವರಿಗೆ ಸು ।**
**ಪಾಮಗೊಲಿದಂದದಲಿ ಅಖಿಳಾರ್ಥಗಳ ಕೊಡುತಿಪ್ಪ ॥೨೪॥**

**ಅವತರಣಿಕೆ :**

ಅನಂತ ಕಲ್ಯಾಣಗುಣ ಸಾಗರನಾದ ಆ ಅಪಾರ ಮಹಿಮೆಗಳನ್ನು ಪ್ರೇಮಪೂರ್ವಕ ನಿತ್ಯ ಕೊಂಡಾಡುತ್ತಿರುವ ತನ್ನ ಏಕಾಂತ ಭಕ್ತರಿಗೆ ಒಲಿದು ಸಕಲಾಭೀಷ್ಟಗಳನ್ನು ಕೊಡುತ್ತಾನೆಂದು ತಿಳಿಸುತ್ತಾರೆ ॥೨೪॥

**ಪ್ರತಿಪದಾರ್ಥ :**

**ಶ್ರೀ ಮನೋರಮ** = ಶ್ರೀ ಲಕ್ಷ್ಮೀದೇವೇರಿಗೆ ಮನೋಹರನಾದ (ಅವರ ಮನಾಪಾಹಾರಕನಾದ) **ಮರುತೇಶ** = ಶ್ರೀ ವಾಯುದೇವರಿಗೆ ನಿಯಾಮಕನಾದ **ಕಕುರ** = ಗೂಳಿಯ ಹೆಗಲಿನಂತೆ (ವೃಷಭ ಸ್ಕಂದ) ಶ್ರೇಷ್ಠವಾದ **ತ್ರಿಧಾಮ** = ವೈಕುಂಠ, ಅನಂತಾಸನ ಮತ್ತು ಶ್ವೇತದ್ವೀಪಗಳೆಂಬ ಧಾತುತ್ರಯಗಳುಳ್ಳ (ಮುಕ್ತಸ್ಥಿವಗಳು) **ಸತ್ಕಲ್ಯಾಣಗುಣ** = ಸಮೀಚೀನವಾದ ಮಂಗಳಕರವಾದ ಅಪ್ರಾಕೃತಗುಣಪೂರ್ಣನಾದ **ನಿಸ್ಸೀಮ** = ಯಾರ ಆದ್ಯಂತಗಳನ್ನು ಸಾಕಲ್ಯೇನ ಇವರ್ಯಾರೂ ತಿಳಿಯಲಾರರೋ (ಅಜೇಯನಾದ) **ಪಾವನ ನಾಮ** = ಪತಿತರಾದವರನ್ನು ಪವಿತ್ರೀಕರಿಸುವ ನಾಮವುಳ್ಳವ (ಹರಿಯ ನಾಮಸ್ಮರಣೆ ಮಾತ್ರದಿಂದ ಸಕಲ ದುರಿತ ಪರಿಹಾರವು) **ದಿವಿಜೋತ್ತಮ** = ರಮಾಬ್ರಹ್ಮಾದಿಗಳಿಗಿಂತಲೂ ಉತ್ತಮೋತ್ತಮನಾದ **ರಘುರಾಮ** = ರಘುವಂಶಲಲಾಮನಾದ ಶ್ರೀರಾಮಚಂದ್ರನು **ಪ್ರೇಮಪೂರ್ವಕ** = ಅತ್ಯಂತ ಭಕ್ತಿ ಪುರಸ್ಸರವಾಗಿ **ನಿತ್ಯ** = ಎಡಬಿಡದೆ **ತನ್ನ ಮಹಾಮಹಿಮೆಗಳ** = ತನ್ನ ಅಪಾರವಾದ ಅಸದೃಶವಾದ ಮಹಿಮೆಗಳನ್ನು **ತುತಿಸುವರಿಗೆ** = ಸ್ತೋತ್ರ ಮಾಡುವವರಿಗೆ **ಸುದಾಮಗೊಲಿದಂದದಲಿ** = ಕುಚೇಲನಿಗೆ ಅನುಗ್ರಹಿಸಿ ಒಲಿದೋಪಾದಿಯಲ್ಲಿ **ಅಖಿಳಾರ್ಥಗಳ** = ಇಹಪರಗಳಲ್ಲಿ ಅವರವರ ಯೋಗ್ಯತಾನುಸಾರ ಸಮಸ್ತ ಇಷ್ಟಾರ್ಥಗನಳನ್ನು **ಕೊಡುತಿಪ್ಪ** = ನೀಡುತ್ತಿರುವನು.

॥೨೩॥

## ವ್ಯಾಖ್ಯಾನಗಳು

### ೧ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಸರ್ವಾಧಿಷ್ಠಾನದಲ್ಲಿ ಪರಮಾತ್ಮನ್ನ ಅನುಸಂಧಾನ ಮಾಡಿ ಸ್ತೋತ್ರ ಮಾಡುವವರಿಗೆ ಅಖಿಳಾರ್ಥಗಳ ಕೊಡತಾನಾದ ಕಾರಣ. ಸರ್ವಾಂತರ್ಗತನಾದ

ಪರಮಾತ್ಮನ್ನ ಸ್ತೋತ್ರ ಮಾಡಬೇಕೆಂದು ಹೇಳತಾರೆ.

ಶ್ರೀ ಲಕ್ಷ್ಮೀದೇವರಿಗೆ ಮನೋಹರನಾದವ ಜೀವೋತ್ತಮರಾದ ವಾಯುದೇವರಿಗೆ ಸ್ವಾಮಿಯಾದವ ವೃಷಭ ಸ್ಕಂದದೋಪಾದಿಯಲ್ಲಿ ಶ್ರೇಷ್ಠ ವಾದ ಉನ್ನತವಾವ ಮೂರಾದಂಥಾ ವೈಕುಂಠ ಅನಂತಾಸನ ಶ್ವೇತದ್ವೀಪಗಳೇ ಮನೆಗಳಾಗಿ ಉಳ್ಳವ. ಸಮೀಚೀನಗಳಾದ ಮಂಗಳಕರಗಳಾದ ಗುಣಗಳಿಂದ ಪೂರ್ಣನಾದವ. ಅನ್ಯರಿಂದ ಜಯಿಸುವುದಕ್ಕೆ ಅಶಕ್ಯನಾದವ. ಪತಿತರಾದವರ ಪುನೀತರನ್ನಾಗಿ ಮಾಡತಕ್ಕ ಹೆಸರುಳ್ಳವ. ರಘುರಾಯನ ಕುಲದಲ್ಲಿ ಹುಟ್ಟಿ ರಾಮಾವತಾರವನ್ನೆತ್ತಿದವ. ಬ್ರಹ್ಮಾದಿ ದೇವತೆಗಳಿಂದಲೂ ಶ್ರೇಷ್ಠನಾದವ ಎಂತ ಈ ಪ್ರಕಾರ ಪ್ರತಿದಿನದಲ್ಲೂ ಅತ್ಯಂತ ಆದರಪೂರ್ವಕವಾಗಿ, ಪರಮಾತ್ಮ ನಾದ ತನ್ನ ಶ್ರೇಷ್ಠವಾದ ಅಸದೃಶವಾದ ಅಪಾರವಾದ ಮಹಿಮೆಗಳ ಸ್ತೋತ್ರ ಮಾಡತಕ್ಕವರಿಗೆ ಕುಚೇಲನೆಂಬ ಬ್ರಾಹ್ಮಣನಿಗೆ ಒಲಿದೋಪಾದಿಯಲ್ಲಿ ಇಹಪರ ದಲ್ಲಿ ಯೋಗ್ಯತಾನುಸಾರ ಸಮಸ್ತ ಇಷ್ಟಾರ್ಥಗಳ ಕೊಡೋವನಾಗತಾನೆ॥೨೪॥

**೨. ಭಾವ ಪ್ರಕಾಶಿಕೆ.**

(ಈ ವ್ಯಾಖ್ಯಾನದಲ್ಲಿ ಈ ಪದ್ಯವನ್ನು ೨೫ನೇ ಪದ್ಯವೆಂದು ಪರಿಗಣಿಸ ಲಾಗಿದೆ)

ಶ್ರೀ ಮನೋರಮ ರಘುರಾಮ ಎಂಬ ಪದದವರೆವಿಗೂ ಇರುವ ಪದ ಗಳಿಗೆ ಪದಾರ್ಥದಲ್ಲಿ ಅರ್ಥವು ಬರೆಯಲ್ಪಟ್ಟಿದೆ. ಇಂತಹಾ ಪರಮಾತ್ಮನ ಮಹಾಮಹಿಮೆಗಳನ್ನು ಭಕ್ತಿಪೂರ್ವಕವಾಗಿ ಸ್ತೋತ್ರಮಾಡುವರಿಗೆ ಶ್ರೀ ಪರ ಮಾತ್ಮನು ಕುಚೇಲನಿಗೆ ಒಲಿದಂತೆ ಒಲಿದು ಅಖಿಲಾರ್ಥಗಳನ್ನು ಕೊಡುವನು. ॥೨೪॥

**೩ ಭಾವದರ್ಪಣ**

(ಈ ವ್ಯಾಖ್ಯಾನದಲ್ಲಿ ಈ ಪದ್ಯವನ್ನು ೨೫ನೇ ಪದ್ಯವೆಂದು ಪರಿಗಣಿಸ ಲಾಗಿದೆ) ಶ್ರೀ ಮನೋರಮೇತಿ ॥೨೪॥

## ೪ ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

"ಶ್ರೀ" ಇತಿ॥ 'ಶ್ರೀಣಿ' ಶ್ವೇತ ದ್ವೀಪಾದೀನೀ "ನಿಸ್ಸೀಮ" ಅಪರಿಮಿತ॥ ಉದ್ದಾಮ ಚೇಷ್ಟ ॥೨೪॥

## ಶ್ರೀ ಗುರುಹೃದಯ ಪ್ರಕಾಶಿಕೆ

ಆದ್ದರಿಂದಲೇ ಸಜ್ಜನರು ಸದಾ ಸಚ್ಛಾಸ್ತ್ರವನ್ನು ವಿಚಾರಮಾಡುತ್ತಿರುವರೆಂದು ಸದಾಚಾರವನ್ನು ತಿಳಿಸುತ್ತಾರೆ ತಂದೆ ಎಂದು. ಮೊದಲು ಮೂರು ಪದ್ಯದಿಂದ, ಕ್ಷಾಮ ಮೊದಲಾದ ದೋಷ ಮೂಲಕ ಪರಿತ್ಯಾಗ ಮಾಡಲ್ಪಟ್ಟ ಶಿಶು ದೇಶಾಂತರಗಳಲ್ಲಿ ಬೆಳೆದು ತನ್ನ ತಾಯಿ-ತಂದೆಗಳ ಗುರುತನ್ನು ಅರಿಯದೆ ಸ್ವಲ್ಪ ಬುದ್ಧಿ ತಿಳಿದ ಮೇಲೆ ಆ ಬಾಲಕನು ತನ್ನ ಹಾಗೆ ಇರುವ ಹುಡುಗರು ತಂದೆ ತಾಯಿಗಳಿಂದ ಮುದ್ದಿಸಿಕೊಂಡು ಲಾಲಿತರಾಗುತ್ತಿರುವುದನ್ನಾ ಕಂಡು ತಂದೆ ತಾಯಿಗಳು ಸಮೀಪದಲ್ಲಿದ್ದರೆ ನಾನೂ ಅವರಿಂದ ಈ ಹುಡುಗರ ಹಾಗೆ ಸಂತೋಷಪಡುವೆನಲ್ಲ. ಆದ್ದರಿಂದ ತನ್ನ ತಂದೆ ತಾಯಿಗಳನ್ನು ಎಂದು ಕಂಡು ಕೃತಾರ್ಥನಾಗುವೆನೆಂಬ ಕುತೂಹಲದಿಂದ ಎಲ್ಲಾದೇಶದಲ್ಲೂ ಹುಡುಕುತ್ತಾ ತಿರುಗುವಂತೆ ಶಾಸ್ತ್ರಜ್ಞರಾದವರು ದೇವರನ್ನು ಸಾಕ್ಷಾತ್ತಾಗಿ ಕಾಣಬೇಕೆಂಬ ಅಪೇಕ್ಷೆಯಿಂದ ಶ್ರುತಿ ಎಂಬ ವೇದ ಭಾಗವತಾದಿ ಹದಿನೆಂಟು ಪುರಾಣ. ಮಹಾ ಭಾರತ ಪ್ರತಿ ಪ್ರತಿ ಶ್ಲೋಕ ಇದೇ ಮೊದಲಾದ ಸರ್ವ ಸಚ್ಛಾಸ್ತ್ರವೆಂಬ ಸಾರಸ್ವತ ಸಮುದ್ರನಾಮಕ ಸರಸ್ವತೀ ಅಭಿಮನ್ಯಮಾನ ಆ ಗ್ರಂಥ ಸಮೂಹದಲ್ಲಿ ವಿಚಾರಬುದ್ಧಿ ಕುಶಲವುಳ್ಳವರಾಗಿ ಸಮುದ್ರದಲ್ಲಿ ಶಫರಿ ಎಂಬ ಮೀನು ಸ್ವಸುಖಾರ್ಥವಾಗಿ ಸಂಚರಿಸುವಂತೆ ಸ್ವಾಭಾವಿಕ ಸ್ನೇಹವೆಂಬ ಸಂತೋಷದಿಂದ ಸದಾ ಸಂಚರಿಸುವರು ಎಂದರೆ ನಿರ್ಜಿತನೆಂದರೆ ಪರಾಜಯಾದಿ ದೋಷರಹಿತನಾದ ದೇವರ ಸ್ವಾತಂತ್ರ್ಯಾದಿ ಗುಣ ಜ್ಞಾನಾನಂದಾತ್ಮಕ ರೂಪಗಳನ್ನು ಶಾಸ್ತ್ರವಿಚಾರದಿಂದ ತಿಳಿದುಕೊಳ್ಳುತ್ತಾ ಶ್ರವಣ ಮನನಾದ್ಯಭ್ಯಾಸದಲ್ಲಿರುವುದೆಂದರ್ಥ ॥೨೪॥೨೫॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಕಾಂತಿ ಸಂಪನ್ನಳಾದ ನಿತ್ಯಯೌವನಯುಕ್ತಳಾದ ಸತ್ವಗುಣಾಭಿಮಾನಿಯೊದ ಮಂಗಳಪ್ರದಳಾದ ಶ್ರೀ ಲಕ್ಷ್ಮೀದೇವಿಗೆ **ಶ್ರೀ** = ಎಂತನಾಮ ಅಂತಹ ಶ್ರೀ ನಾಮಕಳಾದ ಇಂದಿರೆಯ ಮನಸ್ಸನ್ನು ತನ್ನ ಅಪಾರ ಗುಣರತ್ನಗಳಿಂದ ಅಪಹರಿಸಿರುವುದರಿಂದ ಶ್ರೀಹರಿಯು **ಶ್ರೀ ಮನೋರಮನು** = ಶ್ರೀಯ ಮನಸ್ಸಿನಲ್ಲಿ ಕ್ರೀಡೆಯಾಡುವವನು (ರಮು-ಕ್ರೀಡತೀ-ಎಂಬ ಧಾತುವಿನ ಪರಿಷ್ಕಾರ ರೀತ್ಯಾ) ಜೀವೋತ್ತಮರಾದ ಮರುತ್ಪುತ್ರರಾದ ಶ್ರೀ ವಾಯುದೇವರಿಗೆ ನಿಯಾಮಕನಾದ್ದರಿಂದ **ಮರುತೀಶನು**

'ಕಕುತ್'- ಎಂದರೆ ಎತ್ತಿನ ಹೆಗಲು. ಅದು ಉನ್ನತವಾಗಿರುವುದು ಅಂತೆಯೇ ವೈಕುಂಠ-ಶ್ವೇತದ್ವೀಪ ಮತ್ತು ಅನಂತಾಸನ ಎಂಬ ಮುಕ್ತಿ ಸ್ಥಾನಗಳು ಉನ್ನತ, ಅಂದರೆ ಶ್ರೇಷ್ಠಸ್ಥಾನಗಳಾದ ಕಾರಣ ಅವುಗಳಿಗೆ **ಶ್ರೀಕಕುದ್** ಎಂದಿದ್ದಾರೆ, ಅವರು ಮುಕ್ತಸ್ಥಾನಗಳಲ್ಲಿ ವಿಹರಿಸುವುದರಿಂದ ಮೋಕ್ಷಾನಂದಪ್ರದವಾದ ಮುಕುಂದನಿಗೆ **ಶ್ರೀಕುಕುದ್ಧಾಮ**ನೆಂದು ಹೆಸರು,

ಸಮೀಚೀನಗಳಾದ ಪರಮ ಮಂಗಳಕರಗಳಾದ ಅನಂತ ಕಲ್ಯಾಣಗುಣ ಸಂಪನ್ನನಾದ್ದರಿಂಬ **ಸತ್ಕಲ್ಯಾಣಗುಣನು** ಅವನ ಮಹಿಮಾತಿಗಳು ಅಪಾರ. ಅನಂತ, ಅಪರಿಚ್ಛಿನ್ನ ಅವುಗಳಿಗೆ ಮಿತಿ (ಎಲ್ಲೆ) ಇಲ್ಲವೇ ಇಲ್ಲ. ಇದರಿಂದ **ನಿಸ್ಸೀಮ** ಅಪರಿಮಿತ ಮಹಿಮಾಸಂಪನ್ನನಾದ ಶ್ರೀ ಹರಿಯ ನಾಮವು ಸಜ್ಜನರ ಸಕಲ ಪಾಪಗಳ ಪರಿಹಾರಕವು ಪತಿತರನ್ನು ಪವಿತ್ರೀಕರಿಸುವುದರಿಂದ **ಪಾವನನಾಮನು**

ರಮಾಬ್ರಹ್ಮಾದಿ ದೇವತೆಗಳಿಗಿಂತಲೂ ಉತ್ತಮೋತ್ತಮನು ಇದರಿಂದ **ದಿವಿಜೋದ್ಧಾಮನು** (ದಿವಿಜ+ಉದ್ದಾಮ) ರಘುಕುಲಲಲಾಮನಾದ ಶ್ರೀ ರಾಮಚಂದ್ರನು **ರಘುರಾಮನು** ಸಜ್ಜನರ ಮನಸ್ಸಿನಲ್ಲಿ ರಮಿಸುವುದರಿಂಪ 'ರಾಮ' ನಾಮಕನು. ತನ್ನ ಅಪರಿಮಿತ ಗುಣಾತಿಶಯಗಳನ್ನು ಮಹಿಮಾ ವಿಶೇಷಗಳನ್ನು ಅನವರತ ಭಕ್ತಿ ಶ್ರದ್ಧಾದಿಗಳಿಂದ ಯಾರು ಕೊಂಡಾಡುತ್ತಿರು

ವರೋ ಅಂತಹ ಏಕಾಂತಭಕ್ತವರ್ಗಕ್ಕೆ ಸಕಲ ಮನೋಭೀಷ್ಟಗಳನ್ನು ಅನುಗ್ರಹಿಸುವೆನು. ಇದಕ್ಕೆ ದೃಷ್ಟಾಂತವಾಗಿ ಕುಚೇಲನಿಗೆ ಶ್ರೀಕೃಷ್ಣನು ಅನುಗ್ರಹಿಸಿದ ಪ್ರಸಂಗವನ್ನು ತಿಳಿಸುತ್ತಾರೆ. ಸುದಾಮನು ಶ್ರೀಕೃಷ್ಣನ ಏಕಾಂತಭಕ್ತನು ಅವನ ದರ್ಶನಾರ್ಥಿಯಾಗಿ ದ್ವಾರಕಾ ನಗರಿಗೆ ಬಂದ ಸುದಾಮನನ್ನು ಅಂತಃಕರಣಪೂರ್ವಕ ಆದರಿಸಿ ಅವನ ಅಖಿಳಾರ್ಥಗಳನ್ನು ಸಲ್ಲಿಸಿ ಒಲಿದನು॥೨೪॥

## ಪದ್ಯ-೨೫

**ಮೂಲ:**

**ತಂದೆ ತಾಯ್ಗಳ ಕುರುಹನರಿಯದ ।**
**ಕಂದ ದೇಶಾಂತರದೊಳಗೆ ತ ।**
**ನ್ನಂದದಲಿ ಇಪ್ಪವರ ಜನನೀಜನಕರನು ಕಂಡು ॥**
**ಹಿಂದೆ ಎನ್ನನು ಪಡೆದವರು ಇವ ।**
**ರಂದದಲಿ ಇಪ್ಪರೋ ನಾನಿವ ।**
**ರೆಂದು ಕಾಣುವೆನೆನುತ ಹುಡುಕುವ ತೆರದಿ ಕೋವಿದರು ॥೨೫॥**

**ಅವತರಣಿಕೆ ;**

ಬ್ರಹ್ಮಜ್ಞಾನಿಗಳು ತಮಗೆ ಅಗೋಚರನಾಗಿರುವ ಸರ್ವತ್ರವ್ಯಾಪ್ತನಾದ ಆ ಸರ್ವೇಶ್ವರನನ್ನು ಎಂದು ಕಾಣುವೆವೋ ಎಂಬ ಹಂಬಲದಿಂದ ಹುಡುಕುವರೆಂದು ದೃಷ್ಟಾಂತಪೂರ್ವಕ ತಿಳಿಸುತ್ತಾರೆ ॥೨೫॥

**ಪ್ರತಿಪದಾರ್ಥ :**

**ತಂದೆತಾಯ್ಗಳ** = ಮಾತಾಪಿತೃಗಳ **ಕುರುಹನು ಅರಿಯದ** = ಗುರುತುತಿಳಿಯದ **ಕಂದ** = ಬಾಲಕನೋರ್ವನು **ದೇಶಾಂತರದೊಳಗೆ** =

ಅವರಿರುವ ಸ್ಥಳವನ್ನು ಬಿಟ್ಟು ಅನ್ಯ ಪ್ರದೇಶಗಳಲ್ಲಿ ಎಲ್ಲೆಲ್ಲೂ **ತನ್ನಂದದಲಿ**=ತನ್ನಂತೆಯೇ ಬಾಲಕರಾಗಿ **ಇಪ್ಪವರ**=ಇರತಕ್ಕವರ **ಜನನೀಜನಕರನು ಕಂಡು** = ಮಾತಾಪಿತೃಗಳನ್ನು ನೋಡಿ (ಅಥವಾ ತನ್ನನ್ನು ಹೋಲುವ ಮಾತಾಪಿತೃಗಳನ್ನು ಕಂಡವನಾಗಿ) **ಹಿಂದೆ**=ಪೂರ್ವದಲ್ಲಿ **ಎನ್ನನು ಪಡೆದವರು**=ತನ್ನನ್ನು ಪುತ್ರನನ್ನಾಗಿ ಹೊಂದಿದವರು (ತನ್ನ ಉತ್ಪತ್ತಿಗೆ ಕಾರಣರಾದವರು) **ಇವರಂದದಲಿ ಇಪ್ಪರೋ**=ಆ ಬಾಲಕರು ತಂದೆ ತಾಯಿಗಳ ಕಂಡೋಪಾದಿಯಲ್ಲಿ **ನಾನು ಅವರೆಂದು** = ನಾನು ಎಂದು ಅವರನ್ನು **ಕಾಣುವೆನೆನುತ** = ನೋಡುವೆನೋ ಎಂಬ ಹಂಬಲದಿಂದ **ಹುಡುಕುವ ತೆರದಿ**= ಅದೇ ಸುವ್ರೋಪಾದಿಯಲ್ಲಿ **ಕೋವಿದರು** = ಜ್ಞಾನಿಗಳು ಹುಡುಕುತ್ತಿರುತ್ತಾರೆಂದು ತಾತ್ಪರ್ಯ ॥೦೩॥

# ವ್ಯಾಖ್ಯಾನಗಳು

## ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಸರ್ವೋತ್ತಮನಾದ ಪರಮಾತ್ಮನ್ನ ತಿಳಕೋಬೇಕಾದರೆ ಅವನಮಹಾತ್ಮ ತಿಳಕೊಂಡು ಮಹಾತ್ಮ್ಯಜ್ಞಾನಪೂರ್ವಕ ಸುಧೃಡ ಸ್ನೇಹ ಮಾಡಬೇಕಾದರೂ ಶಾಸ್ತ್ರದಲ್ಲಿ ಹುಡುಕಿ ತಿಳಕೋಬೇಕು, ಅನ್ಯವಿಧದಿಂದ ತಿಳಿಯಲಾರದು ಎಂತಲೂ, ಗುರುಗಳ ದ್ವಾರಾ ಶಾಸ್ತ್ರವನ್ನು ಹುಡುಕಬೇಕು ಎಂತಲೂ ಎರಡು ಶ್ಲೋಕಗಳಿಂದ ಹೇಳತಾರೆ.

ಮಾತಾಪಿತೃಗಳ ಗುರ್ತು ಅರಿಯದ, ಪೂರ್ವದಲ್ಲೇ ತಂದೆತಾಯಿಗಳು ಇರತಕ್ಕ ಪ್ರದೇಶವನ್ನು ಕಾರಣಾಂತರಗಳಿಂದ ಬಿಟ್ಟು ದೇಶಾಂತರದಲ್ಲಿರತಕ್ಕ ಅನ್ಯದೇಶ ಪ್ರವೇಶಮಾಡಿದ ಬಾಲಕನು ತನ್ನಂತೆ ಬಾಲಕರಾಗಿ ಇರತಕ್ಕವರ ಮಾತಾ-ಪಿತೃಗಳನ್ನ ನೋಡಿದವನಾಗಿ ಸಂಗಾತಲೇ ಯೋಚನೆ ಮಾಡಿದವನಾದ. ಏನೆಂತೆಂದರೆ ತನ್ನನ್ನು ಉತ್ಪಾದನೆ ಮಾಡಿದವರು ಈ ಬಾಲಕರ ತಂದೆ

ತಾಯಿಗಳ ಕಂಡೋಪಾದಿಯಲ್ಲಿ ಇರವರೋ. ಈ ಬಾಲಕರು ತಂದೆತಾಯಿಗಳ ಕಂಡೋಪಾದಿಯಲ್ಲಿ ನಾನೂನೂ ನನ್ನ ತಂದೆ ತಾಯಿಗಳ ಯಾವಾಗ ಎಂದಿಗೆ ನೋಡೆನೆನುತ ಮನಸಾ ಆಲೋಚನೆ ಮಾಡಿ ಹುಡುಕಿದೋಪಾದೆಯಲ್ಲಿ ಜ್ಞಾನಿಗಳು ಭಗವಂತನ್ನ ಹುಡುಕತಾರೆ ಎಂತ ತಾತ್ಪರ್ಯ.

**ವಿಶೇಷಾರ್ಥ :** ಸೃಜ್ಯರಾಶಿಯಲ್ಲಿ ವಿದ್ಯಮಾನರಾದ ಜೀವರನ್ನ ಸ್ಥೂಲ ದೇಹದಿಂದ ಸೃಷ್ಟಿಮಾಡಬೇಕಾವರೆ ಆದಿಯಲ್ಲಿ ಬ್ರಹ್ಮಾಂಡದ ಹೊರಭಾಗದ ಪ್ರದೇಶದಲ್ಲಿ ಮಾತಾ ಪಿತೃಗಳಾದ ರಮಾ-ಮಧುಸೂಧನರಿಂದ ಜೀವ ಸೃಷ್ಟನಾಗಿ ತದನಂತರ ದೇಶಾಂತರವಾದ ಬ್ರಹ್ಮಾಂಡದೊಳಗೆ ಪ್ರವೇಶಮಾಡೋವ ಅಲ್ಲಿ ಸಾಧನ ಸಂಪೂರ್ತಿಗೋಸ್ಕರ ಸಾಧನ ಮಾಡಿ ಮಾತಾ ಪಿತೃಗಳಾದ ರಮಾ ಮಾಧುಸೂಧನರ ಹೃದಯಾಕಾಶದಲ್ಲಿ ಧ್ಯಾನ ಮಾಡತಾ ಆ ವಾಸನಾರೂಪಗಳ ಕಣ್ಣಿನಿಂದ ನೋಡತಾ ಇರತಕ್ಕ ಸಂಪೂರ್ಣ ಪಕ್ವರಲ್ಲದ ಬಾಲಕ ಸದೃಶರಾದ ಜ್ಞಾನಿಗಳು ಅವರ ಮಾತಾ ಪಿತೃಗಳಾದ ರಮಾ ಮಧುಸೂದನರ ಪ್ರತೀಕಗಳನ್ನು ನೋಡತಾ ಈ ಪ್ರಕಾರ ತಾವೂ ಉಪಾಸನಾ ಮಾಡಿ ತಾಯಿ ತಂದಿಗಳಾದ ರಮಾ ಮಧುಸೂದನರ ಹೃದಯಾಕಾಶದಲ್ಲಿ ಎಂದು ಕಾಣುವೆವೆನುತ ಕೋವಿದರು ಹುಡುಕುತ್ತಾರೆಂತ ತಾತ್ಪರ್ಯ ॥೨೫॥

## ೨ ಭಾವಪ್ರಕಾಶಿಕೆ

ಈ ವ್ಯಾಖ್ಯಾನದಲ್ಲಿ ಈ ೨೫ನೇ ಪದ್ಯ ಮತ್ತು ೨೬ನೇ ಪದ್ಯಗಳನ್ನು ೨೬ ಮತ್ತು ೨೭ನೇ ಪದ್ಯಗಳೆಂದು ಪರಿಗಣಿಸಿ ಎರಡೂ ಪದ್ಯಗಳ ವ್ಯಾಖ್ಯಾನವನ್ನು ಒಂದೇಕಡೆ ಕೊಟ್ಟಿದ್ದಾರೆ)

ಮಗುವಾಗಿರುವಾಗಲೇ ತಂದೆ ತಾಯಿಗಳನ್ನು ಕಳೆದುಕೊಂಡಿರುವ ಮಗುವು ಪರಾಶ್ರಯದಿಂದ ದೇಶಾಂತರವಲ್ಲಿ ವಾಸಮಾಡುವಾಗ ತನ್ನ ವಯಸ್ಸಿನ ಹುಡುಗರು ತಮ್ಮ ತಂದೆ ತಾಯಿಗಳಿಂದ ಲಾಲಿಸಲ್ಪಡುವುದನ್ನು ನೋಡಿ

ತನ್ನ ತಂದೆ ತಾಯಿಗಳ ಗುರುತನ್ನು ಅರಿಯದಿಹ ಬಾಲಕನು ನನಗೂ ತಂದೆ ತಾಯಿಗಳು ಇರಬಹುದಲ್ಲವೆ? ಅವರನ್ನು ನಾನು ನೋಡಿದರೆ ನನ್ನನ್ನು ಇವರಂತೆ ಲಾಲಿಸುವರಲ್ಲವೆ? ಅವರನ್ನು ನಾನೆಂದು ಕಾಣುವೆನು ಎಂದು ಹುಡುಕುವಂತೆ ಜ್ಞಾನಿಗಳು ಪರಮಾತ್ಮನನ್ನು ಕಾಣದೆ ಪ್ರತಿಪದಕ್ಕೂ ೧೦ ಅರ್ಥಗಳಿಂದ ಕೂಡಿದ ಮಹಾಭಾರತದಲ್ಲೂ, ಭಾಗವತಾದಿ ಪುರಾಣಗಳಲ್ಲೂ ವೇದಗಳಲ್ಲೂ ಸಹ ಪ್ರತಿ ಪದದಲ್ಲೂ ಕಾಣುವ ಭಗವನ್ಮಹಿಮೆಗಳನ್ನು ಹುಡುಕುತ್ತಾ ಈ ಪರಮಪುರುಷನಾದ ಪರಮಾತ್ಮನನ್ನು ಎಂದು ಕಾಣುವೆ ವೆಂಬ ಲವಲವಿಕೆಯಿಂದ ಸಂಚರಿಸುವರು ಅಂದರೆ ಭಗವದ್ದರ್ಶನಕ್ಕಾಗಿ ಶಾಸ್ತ್ರಾರ್ಥ ವಿಚಾರದಲ್ಲೇ ನಿರತರಾಗಿರುವರೆಂಬ ಭಾವ. ॥೨೫॥ ॥೨೬॥

## ೩ ಭಾವ ದರ್ಪಣ

(ಈ ವ್ಯಾಖ್ಯಾನದಲ್ಲಿ ಈ ೨೫ನೇ ಪದ್ಯವನ್ನು ೨೬ನೇ ಪದ್ಯವೆಂದು ಪರಿಗಣಿಸಿದ್ದಾರೆ).

ಜ್ಞಾನಿಗಳು ಪರಮಾತ್ಮನನ್ನ ಹುಡಕೋ ಲಕ್ಷಣ ಹೇಳುತ್ತಾರೆಃ ತಂದೆತಾಯಿ. ॥೨೫॥

## ೪ ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

ಅನವರತಂ ಶ್ರೀ ಕಮಲಾಪತಿ ಮುಹುಃ ಶ್ರವಣಮನನಾದಿಕಂ ಅವಶ್ಯಂ ಅನುಷ್ಠೇಯಂ ಇತ್ಯತ್ರ ಅಪೂರ್ವ ದೃಷ್ಟಾಂತದ್ವಯಂ ಪದ್ಯ ದ್ವಯೇನ (ದ್ವಂದ್ವೇನ) ಆಹ " ತಂದೆ " ಇತಿ॥

"ಕುರುಹು" ಗುರುತು॥ "ಕಂದಃ" ಬಾಲಃ ॥"ತನ್ನಂದದಲಿ" ಸ್ವಮಾತಾ ಪಿತೃವತ್॥ ಇಪ್ಪರಲ-ಇರುವರು. "ಪುಡುಕುವೆ"-ಹುಡುಕುವ. ॥೨೫

## ಕನ್ನಡಾರ್ಥ

ಶ್ರೀ ಕಮಲಾಪತಿ ನಾರಾಯಣನ ವಿಷಯಕವಾದ ಕಥಾಶ್ರವಣ ಮನನ ಮುಂತಾದುವುಗಳನ್ನು ಯಾವಾಗಲೂ (ಸದಾ) ಅವಶ್ಯವಾಗಿ ಅನುಷ್ಠಿಸಲೇ ಬೇಕೆಂಬ ವಿಷಯದಲ್ಲಿ ಅಪೂರ್ವವಾದ ಎರಡು ದೃಷ್ಟಾಂತಗಳನ್ನು ಈ ಎರಡು ಪದ್ಯಗಳಿಂದ ಹೇಳುತ್ತಾರೆ. "ತಂದೆ" ಎಂಬ ಪದ್ಯದಿಂದ "ಕುರುಹು" = ಗುರುತು. "ತನ್ನಂಪದಲಿ" ಎಂಬ ವಾಕ್ಯದ ಅಭಿಪ್ರಾಯ "ತನ್ನಂತಿರುವ ಬಾಲಕರ ತಂದೆತಾಯಿಗಳಂತೆ ತನಗೂ ತನ್ನ ತಂದೆತಾಯಿಗಳಿರುವರು" ಎಂಬುದಾಗಿ ॥೨೫॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಚಿಕ್ಕಂದಿನಲ್ಲಿಯೇ ಮಾತಾಪಿತೃಗಳ ವಿಯೋಗವನ್ನು ಹೊಂದಿರುವ ಬಾಲಕನೋರ್ವನು ದೇಶಾಂತರಗಳಲ್ಲಿ ಸಂಚರಿಸುತ್ತಿರುವಾಗ ಅಲ್ಲಿ ಮಾತಾ ಪಿತೃಗಳಿಂದ ಲಾಲಿಸಿ, ಪಾಲಿಸಲ್ಪಡುತ್ತಿರುವ ತನ್ನಂತೆಯೇ ಇರುವ ಇತರ ಬಾಲಕರನ್ನು ಕಂಡು, ದುಃಖಿಸುವನು. ಹಿಂದೆ ನನ್ನ ಜನ್ಮಕ್ಕೆ ಕಾರಣರಾದ ನನ್ನ ಮಾತಾಪಿತೃಗಳು ಇವರಂತೆ ಇದ್ದರೋ ಏನೋ? ಎಂದು ಕಳವಳಿಸು ತ್ತಾನೆ.

ಅಂತೆಯೇ ಜ್ಞಾನಿಗಳು ಸರ್ವತ್ರವ್ಯಾಪ್ತನಾದ ಸರ್ವೇಶ್ವರನನ್ನು ಎಲ್ಲೆಲ್ಲೂ ಅರಸುತ್ತಾ ತಮ್ಮ ಹೃದಯಾಕಾಶದಲ್ಲಿ ಅಗೋಚರನಾಗಿರುವ ಆ ಅನಂತಗುಣಸಾಗರನನ್ನು. ಎಂದು ಕಾಣುವೆವೊ ಎಂದು ಹಂಬಲಿಸುತ್ತಾ ಆ ಅರವಿದೂಶನನ್ನು ಅರಸುತ್ತಿರುವರು ಎಂದು ಪ್ರಸಕ್ತ ಪದ್ಯದ ತಾತ್ಪರ್ಯಾರ್ಥವು.

**ವಿಶೇಷಾರ್ಥ :**

ಶ್ರೀ ಲಕ್ಷ್ಮೀನಾರಾಯಣರು ಈ ಜಗತ್ತಿನಲ್ಲಿರುವ ಸರ್ವ ಜೀವರ ಮಾತಾ ಪಿತೃ ಸದೃಶರು. ಅಸ್ಮಜ್ಯರಾಶಿಯಲ್ಲಿರುವ ದೇವರನ್ನು ಶ್ರೀ ಇಂದಿರಾಧವನು ತನ್ನ ಇಚ್ಛಾಮಾತ್ರದಿಂದ. ಅವರಿಗೆ ಸಾಧನಸಾಮಗ್ರಿಗಳನ್ನು ಒದಗಿಸಿ, ಅವರವರ ಗತಿಯನ್ನು ನೀಡಲೋಸುಗ ಸೃಷ್ಟಿಸುವನು. ಸ್ಥೂಲದೇಹರಿಂದ ದೇವರು ಬ್ರಹ್ಮಾಂಡದ ಬಾಹ್ಯ ಪ್ರದೇಶದಲ್ಲಿ ರಮಾ ಮಧುಸೂದನರಿಂದ ಸೃಷ್ಟರಾಗಿ. ತದನಂತರ ದೇಶಾಂತರವಾದ ಬ್ರಹ್ಮಾಂಡದಲ್ಲಿ ಶ್ರೀ ಹರಿಯ ಕಾರುಣ್ಯ ವಿಶೇಷದಿಂದ ಪ್ರವೇಶಿಸುವರು. ಜಗತ್ತಿನಲ್ಲಿ ಪ್ರವೇಶಮಾಡಿದ ಜೀವರು ಸಾಧನ ಪೂರ್ತಿಗೋಸುಗ.

ಸಾಧನ ಮಾಡುತ್ತಾ ಮಾತಾಪಿತೃ ಸದೃಶರಾದ ರಮಾ ಮಧುಸೂದನರನ್ನು ಹೃದಯಾಕಾಶದಲ್ಲಿ ಧ್ಯಾನರೂಪದಿಂದ ಉಪಾಸನ ಮಾಡುತ್ತಿರುವರು. (೧) ಜೀವರ ಸೃಷ್ಟಿಗೆ ಮುಖ್ಯ ಕಾರಣನಾದ ಶ್ರೀ ಹರಿಯು ಪಿತೃ ಸದೃಶನು. ರಮಾದೇವಿ ಮಾತೃಸದೃಶಳು. (ಜಗಜ್ಜನನೀ) (೨) ಸೃಷ್ಟಿಗೆ ತರಲ್ಪಟ್ಟ ಜೀವರು ಬಾಲಕರ ಸದೃಶರು. (೩) ಬ್ರಹ್ಮಾಂಡ ಪ್ರವೇಶವೇ ದೇಶಾಂತರಗಳಲ್ಲಿ ಮಾಡುವ ಸಂಚಾರವು. ಕರ್ಮಾನುಸಾರವಾಗಿ ನಾನಾಜನ್ಮಗಳನ್ನು ಎತ್ತುವುದೂ. ದೇಶಾಂತರವೇ, (೪) ಹೃತ್ಕಮಲದಲ್ಲಿ ಬಂದ ದರ್ಶನ ಭಾಗ್ಯ ಹೊಂದಿದ ಜ್ಞಾನಿಶ್ರೇಷ್ಠರನ್ನು ನೋಡುತ್ತಾ, ಅವರಂತೆ ನಾನು ಎಂದಿಗೆ ಆ ಪರಮಾಪ್ತ ಬಂಧುವನ್ನು ಯಾವಾಗ ಕಾಣುವನೋ . ಎಂಬ ಹಂಬಲದಿಂದ. ತಮ್ಮ ಹೃದಯಾಂಬರದಲ್ಲಿ ಅಖಿಲದಾರ್ಕನನ್ನು ಧ್ಯಾನಕ್ಕೆ ವಿಷಯವನ್ನಾಗಿ ಮಾಡಿ ಉಪಾಸಿಸುತ್ತಿರುವುದೇ, ಆ ಹೃನ್ಮಂದಿರವಾಸಿಯನ್ನು ಹುಡುಕುವುದೆಂದರ್ಥ ॥೨೫॥

## ಪದ್ಯ-೨೬

**ಮೂಲ :**

**ಶ್ರುತಿ ಪುರಾಣ ಸಮೂಹದೊಳು ಭಾ ।**
**ರತ ಪ್ರತಿ ಪ್ರತಿ ಪದಗಳೊಳು ನಿ ।**
**ರ್ಜಿತನ ಗುಣರೂಪಗಳ ಹುಡುಕುತ ಪರಮಹರುಷದಲಿ ॥**
**ಮತಿಮತರು ಪ್ರತಿ ದಿವಸ ಸಾರ ।**
**ಸ್ವತ ಸಮುದ್ರದಿ ಶಫರಿಯಿಂದದಿ ।**
**ಸತತ ಸಂಚರಿಸುವರು ಕಾಣುವ ಲವಲವಿಕೆಯಿಂದ ॥೨೬॥**

**ಅವತರಣಿಕೆ ;**

ಜ್ಞಾನಿಗಳು ಶ್ರೀ ಹರಿಯ ಅನಂತಾನಂತ ಗುಣ, ರೂಪ, ಕ್ರಿಯಾದಿಗಳನ್ನು ವೇದ ಪುರಾಣಾದಿ ಸಚ್ಛಾಸ್ತ್ರಗಳ ಪ್ರತಿ ಪ್ರತಿ ಪದಗಳಲ್ಲಿ ಹುಡುಕುತ್ತಾ ಅತ್ಯಾನಂದದಿಂದ ಶಾಸ್ತ್ರ ಸಾಂಕೇತವಾದ ಜ್ಞಾನ ಸಮುದ್ರದಲ್ಲಿ ಮೀನಿನಂತೆ ಲೀಲಾಜಾಲವಾಗಿ ಸಂಚರಿಸುತ್ತಿರುವರು ಎಂದು ತಿಳಿಸುತ್ತಾರೆ. ॥೨೬॥

**ಪ್ರತಿಪದಾರ್ಥ :**

**ಶ್ರುತಿ** = ಋಗಾದಿ ಅಪೌರುಷೇಯವಾದ ಚತುರ್ವೇದಗಳು, **ಪುರಾಣ** = ಸ್ಮೃತಿಗ್ರಂಥಗಳಾದ ಅಷ್ಟಾದಶ ಪುರಾಣಗಳು. **ಸಮೂಹದೊಳು** = ಗುಂಪಿನಲ್ಲಿ **ಭಾರತ** = ಪಂಚಮವೇದವೆಂದು ಖ್ಯಾತವಾದ ಭಾರತದ (ಇತಿಹಾಸ), **ಪ್ರತಿ ಪ್ರತಿ ಪದಗಳೊಳು** = ಪ್ರತಿ ಪ್ರತಿ ಪದ, ಪಂಕ್ತಿಗಳಲ್ಲಿ. **ನಿರ್ಜಿತನ** = ಅನ್ಯರಾರಿಂದಲೂ ಅಜೇಯನಾದ. ಶ್ರೀ ಪರಮಾತ್ಮನ, **ಗುಣರೂಪಗಳ** = ಅನಂತಾನಂತ ಗುಣರಾಶಿಗಳೇನು, ರೂಪಗಳೇನು. **ಹುಡುಕುತ** = ಅನ್ವೇಷಣ ಮಾಡುತ್ತಾ, **ಮತಿಮತರು** = ಜ್ಞಾನವಂತರು. **ಪ್ರತಿದಿವಸ** = ನಿತ್ಯದಲ್ಲಿಯೂ **ಪರಮಹರುಷದಲಿ** = ಅತ್ಯಂತ ಸಂತೋಷದಿಂದ, **ಸಾರಸ್ವತಸಮುದ್ರದಿ** = ಸರಸ್ವತಿ ಸಾಂಕೇತವಾದ ಜ್ಞಾನವೆಂಬ ಮಹಾಸಮುದ್ರಲ್ಲಿ,

**ಶಫರಿಯಂದದಿ** = ಮೀನಿನೋಪಾದಿಯಲ್ಲಿ. **ಕಾಣುವ** = ಶ್ರೀಹರಿಯನ್ನು ದರ್ಶನಮಾಡಬೇಕೆಂಬ. **ಲವಲವಿಕೆಯಿಂದ** = ಅತ್ಯಧಿಕ ಉತ್ಸಾಹದಿಂದ, **ಸತತ** = ಎಡಬಿಡದೆ, **ಸಂಚರಿಸುವರು** = ಧ್ಯಾನೋಪಾಸನೆಗಳಿಂದ ಅಡ್ಡಾಡುತ್ತಿರುವರು ॥೨೬॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಜ್ಞಾನಿಗಳಾದವರು ತಂದೆ-ತಾಯಿಗಳಾದ ಲಕ್ಷ್ಮೀ-ನಾರಾಯಣರನ್ನು ಎಲ್ಲಿ ಹುಡುಕುತಾರೆ ಎಂತ ಹೇಳತಾರೆ.

ವೇದ ಶೃತಿಗಳಲ್ಲಿ ಪುರಾಣಗಳಲ್ಲಿ ಐದನೇ ವೇದವಾದ ಭಾರತದ ಪ್ರತಿ ಪ್ರತೀ ಪದಗಳಲ್ಲಿ ಏತಾದೃಶವಾದ ಸರಸ್ವತೀ ಸಾಂಕೇತವಾದ ಸಮುದ್ರದಲ್ಲಿ, ಅನ್ಯರಿಂದ ಜೈಸೋದಕ್ಕೆ ಅಶಕ್ಯನಾದ ಪರಮಾತ್ಮನ್ನ ಮತ್ತು ಅನ್ಯರಾದ ದೈತ್ಯರು ಉಪಾಸನಮಾಡಿ ಪ್ರತ್ಯಕ್ಷೀಕರಿಸಿಕೊಂಬೋದಕ್ಕೆ ಅಶಕ್ಯನಾದವನ ಮಚ್ಛದೋಪಾದಿಯಲ್ಲಿ ಮುಣಗಿ-ಮಚ್ಛವಾದದ್ದು ಸಮುದ್ರದಲ್ಲಿ ಮುಣಗಿ ತನಗೆ ಬೇಕಾದ ಆಹಾರವನ್ನು ಹುಡುಕುವೋಪಾದಿಯಲ್ಲಿ-ಜ್ಞಾನಿಗಳಾದ ಮಚ್ಛಗಳು ಸಾರಸ್ವತ ಸಮುದ್ರದಲ್ಲಿ ಮುಣಗಿ. ಜ್ಞಾನವಂತರು ಅತ್ಯಂತ ಸಂತೋಷದಿಂದ ನಿರಂತರದಲ್ಲೂ ಶ್ರೀ ಪರಮಾತ್ಮನ ಗುಣಗಳೇನು. ರೂಪಗಳೇನು, ಎಂಥಾದ್ದು, ಅವ ಪ್ರತ್ಯಕ್ಷನಾಗಬೇಕಾದರೆ ಮಾರ್ಗ ಎಂತಾದ್ದು ಎಂತ ಹುಡುಕತಾ ನಿರಂತರದಲ್ಲೂ ಸಾರಸ್ವತ ಸಮುದ್ರದಲ್ಲಿ ಸಂಚರಿಸುವರು, ಸಂಚರಿಸಿ ಧ್ಯಾನೋಪಾಸನಾದಿಗಳಿಂದ ಹೃದಯಾಕಾಶದಲ್ಲಿ ಕಂಡೂ ಕಾಣದಂತ ಈ ಪ್ರಕಾರ ಅಧಿಕಾರಿಯಾದವ ಪ್ರಥಮತಃ ಈ ಪ್ರಕಾರ ಕಾಣತಾನಂತ ತಾತ್ಪರ್ಯ ॥೨೬॥

### ೨. ಭಾವ ಪ್ರಕಾಶಿಕೆ.

ಈ ಪದ್ಯದ ವ್ಯಾಖ್ಯಾನವನ್ನು ಹಿಂದಿನ ಪದ್ಯದ ವ್ಯಾಖ್ಯಾನದಲ್ಲೇ ಕೊಟ್ಟಿದೆ.

## ೩ ಭಾವದರ್ಪಣ

ಈ ವ್ಯಾಖ್ಯಾನದಲ್ಲಿ ಈ ಪದ್ಯವನ್ನು ೨೭ನೇ ಪದ್ಯವೆಂದು ಪರಿಗಣಿಸ-ಲಾಗಿದೆ.)

ಪರಮಾತ್ಮನ ಹುಡುಕೋರೀತಿ ಹೇಳುತ್ತಾರೆ; ಶ್ರುತಿರಿತಿ. ಸಾರಸ್ವ-ತ= ಸರಸ್ವತೀ ಸಂಬಂಧ ಅಂದರೆ ಶಾಸ್ತ್ರಾದಿಗಳು ಎಂಬ ಭಾವ. ಶಫರಿ= ಮತ್ಸ್ಯ, ಲವಲವಿಕೆ= ತಚ್ಚಿಂತಾ ಎಂಬರ್ಥ. ಮತಿ ಮತರು= ಜ್ಞಾನಿಗಳು ॥೨೬॥

## ೪ ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

ಶ್ರುತಿ ನಿತಿ॥ "ಸಾರಸ್ವತ" ಇತಿ॥ "ಶಫರಿ" ಮತ್ಸ್ಯಃ ॥ ಪ್ರಮಾಣಂತು "ಯತ್ ಕೀರ್ತನಾತ್ ಯಚ್ಛ್ರವಣಾಚ್ಚ ಗಾನತ್ ಯತ್ಸಂಸ್ಮೃತೇ ಶ್ಚಾಪಿ ಯ ದರ್ಚನೇನ ॥ ಸರ್ವೇಷ್ಟ ಸಿದ್ಧಿಃ ಸತತಂ ಪ್ರಜಾಯತೇ ಸಏಕ ಏವಾಸ್ತಿ ರಮಾ ಪತಿಃ ಪ್ರಭುಃ ॥೧॥ ಯತ್ ಶ್ರೂಯಮಾಣಂ ಹರತೇ ಮನಾಂಸಿ ಯಾಪ್ಪಾನತಃ ಸ್ಯಾದಧಿಕಾ ಪಿಪಾಸಾ॥ ನಪ್ಯೋಯತ್ರ ರಸಶ್ಯ ಲಭ್ಯತೇ ಕೋನಾಮ ತಸ್ಮಾದ್ ವಿರಜೇತ್ ರಸಜ್ಞಃ ॥೨॥ ಏವಂ ವಿಧಾತ್‌ಯೋ ಹರಿಸತ್ಕಥಾಮೃತಾತ್ ವಿರಕ್ತ ಚಿತ್ತಃ ಪಶುರೇವ ಸಾಕ್ಷಾತ್॥ ಅಶ್ನಂಗ ಪುಚ್ಛಃ ದ್ವಿಪತೇರ್ಥ ತಂಯೋ ನಹೀ ತಸ್ಸಾಸ್ಯತ್ ತಮ್ನತೇ ನಾರಕಿಂಚ ಪತಾಪತಾದಿಂ ಸಕಲೇಶ್ವರಾಹಂ ಯ-ಚ್ಛ್ರೀಪತೇಃ ಸದ್ಗುಣವೀರ್ಯ ಸಂಘಾನ್ ಶೃಣ್ವನ್ ಪ್ರಗಾಯನ್ ಅಥ ಕೀರ್ತ ಯನ್ ಚತ್ನಪ್ಯಾಮಿ ನಾದ್ಯಾಪಿ ನವಂನವಂ ಸ್ವದನ್ ॥ ಇತಿ ದ್ವಾದಶ ವಿಷ್ಣು ರಹಸ್ಯೇ ॥೨೬॥

### ಕನ್ನಡಾರ್ಥ :

ಶಫರೀಮೀನ, ಭಾರತ ಮುಂತಾದ ಶಾಸ್ತ್ರಸಾಗರದಲ್ಲಿ ಮಿಂದು ಜ್ಞಾನಿ

ಗಳು ಮೊನದಂತೆ ಹರಿಕಥಾಮೃತವನ್ನು ಆಸ್ವಾದಿಸುತ್ತಾ ವಿವರಿಸುವರು. ಈ ವಿಷಯದಲ್ಲಿ ಪ್ರಮಾಣಗಳನ್ನು ಹೇಳುತ್ತಾರೆ. "ಯಾರ ಸಂಕೀರ್ತನಗಳಿಂದ, ಶ್ರವಣದಿಂದ. ಗುಣಗಾನಗಳಿಂದ. ಸ್ಮರಣಮಾತ್ರದಿಂದ, ಮತ್ತು ಅರ್ಚನ-ದಿಂದ ಭಕ್ತರಿಗೆ ಸತತ ಸರ್ವಾಭೀಷ್ಟವಾಗುವುದೋ ಅವನು ಪ್ರಭುವಾದ ರಮಾ ಪತಿಯೊಬ್ಬನೇ ! ಶ್ರವಣ ಮಾತ್ರದಿಂದ ಮನಸ್ಸನ್ನು ಯಾವುದು ಆಕರ್ಷಿಸುವುದೋ, ಯಾವುದರ ಪಾನಮಾತ್ರದಿಂದ ಇನ್ನಷ್ಟು ಪಾನಮಾಡುವ ಅಭಿಲಾ-ಷೆಯು ಇನ್ನೂ ಹೆಚ್ಚಾಗುವುದೋ. ಯಾವುದರಲ್ಲಿ ನೂತನ ನೂತನ ರಸವು ಲಭಿಸುತ್ತದೋ. ಅಂಥ ಶ್ರೀಹರಿಯ ಸತ್ಕಥೆಯಲ್ಲಿ ಯಾವ ರಸಜ್ಞನು ಅಸಕ್ತನಾಗುವುದಿಲ್ಲ? ಇಂಥಾ ಶ್ರೀ ಹರಿ ಕಥಾಮೃತದಲ್ಲಿ ಅನಾಸಕ್ತವಾದ ಮನಸ್ಸುಳವನು ಸಾಕ್ಷಾತ್ ಬಾಲಕೋಡುಗಳಿಲ್ಲದ ಪಶುವೇ ಸರಿ. ಅವನ ಹೊರತು ಈ ಹರಿ ಕಥೆಯನ್ನು ಧ್ವೇಷಿಸುವರಾರು? ಅವನಿಗೆ ನರಕವೇ ಸರಿ! ಹೇ ಶ್ರೀ ಹರಿಯೇ! ಶ್ರೀ ಹರಿಯ ಸದ್ಗುಣಗಳ ಸದ್ವೀರ್ಯ, ಚರಿತ್ರಗಳ ಪರಂಪರೆಯನ್ನ ಕೇಳಿ, ಅವುಗಳನ್ನು ಗಾಯನ-ಸಂಕೀರ್ತನಗಳನ್ನು ಮಾಡಿದರೂ ಇಂದಿಗೂ ತೃಪ್ತನಾಗುವುದಿಲ್ಲ ನೂತನ ನೂತನ ರಸಾವಿಷ್ಕಾರವಾಗುವುದು, ಇದಿಷ್ಟೇ ನನಗೆ ಸಾಕು. ಈ ರೀತಿಯಾಗಿ ವಿಷ್ಣುರಹಸ್ಯ ಹನ್ನೆರಡನೆಯ ಅಧ್ಯಾಯದಲ್ಲಿ ಹೇಳಲಾಗುತ್ತದೆ. ॥೨೬॥

## ಶ್ರೀ ಗುರುಹೃದಯ ಪ್ರಕಾಶಿಕೆ

ಮತ್ಸ್ಯಕೇತನನೆಂಬ ಮೀನಧ್ವಜ ಕಾಮಗೆ ತಂದೆಯಾದವನೇ, ಹರಿ ಎಂದರೆ ದುರಿತಪರಿಹಾರಕನೇ. ಶ್ರೀ ವತ್ಸ ಎಂಬ ಲಕ್ಷ್ಮೀವಾಸವಾದ ಮಚ್ಚೆ ಎದೆಯಲ್ಲಿ ಉಳ್ಳವನೇ, ನಿಜಶರಣರೆಂಬ ಸ್ವಾಭಾವಿಕ ಭಕ್ತರಲ್ಲಿ ಪ್ರೀತ್ಯತಿಶಯ-ವುಳ್ಳವನೇ, ವರಾರೋಹ ಎಂದರೆ, **ಸ್ವರ್ಣಮಂಜೀರ ಸಂವೀತಮಾರೂಡಂ ಜಗದಂಬಯಾ** ಎಂಬಮಹದ್ವಚನಾನುಸಾರ ಉತ್ಕೃಷ್ಟ ರೂಪವನ್ನು ಲೋಬದಲ್ಲಿ ಎತ್ತಿಕೊಂಡಿರುವನೇ, ವೈಕುಂಠಾಲಯ ನಿವಾಸಿ ಎಂದರೆ, ವೈಕುಂಠವೆ.

ಮನೆಯಲ್ಲಿ ಸ್ವರೂಪಾಂಶದಿಂದ ಸದಾ ಇರುವನೆ, ಚಿತ್ಸುಖಪ್ರದ ಎಂದರೆ ಸ್ವ-ರೂಪಜ್ಞಾನಾನಂದವನ್ನು ವ್ಯಕ್ತಿ ಮಾಡುವನೇ ನಮ್ಮನ್ನು ರಕ್ಷಿಸೆಂದು ಆ ಶಾಸ್ತ್ರ ವಿಚಾರದಲ್ಲೇ ಅತ್ಯಾಸಕ್ತರಾದ ಸದ್ಭಕ್ತರು ಭಕ್ತ್ಯುದ್ರೇಕದಿಂದ ಕೂಗಲು, ಗೋವು ಕರುವಿನ ಧ್ವನಿ ಕೇಳಿ ಬಂದು ಒದಗುವಂತೆ ಪರಮಸಂತೋಷದಿಂದ ನಿರ್ಮತ್ಸರರೆಂಬ ಇತರರು ತವ್ಮ ಸ್ವಾದೀನವಾಗಲಿಲ್ಲವೆಂಬ ಚಿಂತೆ ಇಲ್ಲದ ಸಜ್ಜನರ ಬಳಿಗೆ ಬಂದು ದೇವರು ಇಷ್ಟಾರ್ಥ ಸಲ್ಲಿಸುವನೆಂದರ್ಥ ॥೨೬॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಅಪೌರುಷೇಯುವಾದ ವೇದಗಳು ಶ್ರೀ ಹರಿಯ ಗುಣಾತಿಶಯಗಳನ್ನು ಜಗತ್ತಿಗೆ ಪ್ರತಿಪಾದಿಸುವ ಶಾಸ್ತ್ರ ಭಂಡಾರ, ವೇದಗಳು ಸಂಖ್ಯೆಯಲ್ಲಿ ಅನಂತ-ವಾಗಿವೆ.

ಭಗವಾನ್ ಶ್ರೀ ವೇದವ್ಯಾಸರಿಂದ ರಚಿಸಲ್ಪಟ್ಟ ಭಾಗವತಾದಿ ಅಷ್ಟಾ-ದಶ ಪುರಾಣಗಳು ಸ್ಮೃತಿಗಳು ಶ್ರೀಮನ್ ಮಹಾಭಾರತವು ಪಂಚಮವೇದ ವೆಂದು ಜಗತ್ಪ್ರಸಿದ್ಧವಾಗಿದೆ. ಇಂತಹ ಶ್ರುತಿ ಪುರಾಣ. ಭಾರತಾದಿ ಶಾಸ್ತ್ರ ಸಮೂಹಗಳೆಲ್ಲವು ಸಾರಸ್ವತ ಸಮುದ್ರಗಳೆನಿಸುವವು. ಸರಸ್ವತೀ-ತತ್ಸಂಬಂದೀ ಸಾರಸ್ವತ ಅಂದರೆ ಜ್ಞಾನಪ್ರದವಾದ ಶಾಸ್ತ್ರಗ್ರಂಥಗಳು

ಜ್ಞಾನಿಗಳು ಇಂತಹ ಸಾರಸ್ವತ ಸಮುದ್ರದಲ್ಲಿ ಮೀನಿನಂತೆ ಲೀಲಾಜಾಲ-ವಾಗಿ ಈಜುತ್ತಾ ಶಾಸ್ತ್ರೋಕ್ತ ವಿಷಯುಗಳಲ್ಲಿ ಅಪಾರ ಮಹಿಮನ ಅನಂತಾನಂತ ರೂಪ, ಗುಣ, ಕ್ರಿಯಾದಿಗಳನ್ನು ಚಿಂತಿಸುತ್ತಾ ಆನಂದ ಪರವಶರಾಗಿರುತ್ತಾರೆ ಆ ಸಾರಸ್ವತ ಸಮುದ್ರದಲ್ಲಿ ಮೀನಿನಂತೆ ಆಳಕ್ಕೆ ಮುಳುಗಿ, ತಲ ಸ್ಪರ್ಶಿಗಳಾಗಿ ವೇದಾರ್ಥಗಳ ಅಂತರಂಗವನ್ನು ಒಳಹೊಕ್ಕು, ಅಲ್ಲಿ ವೇದ ಪ್ರತಿಪಾದ್ಯನಾದ ಅವಾಸುದೇವನನ್ನು ಸದಾ ಧ್ಯಾನೋಪಾಸನೆ ಮಾಡುತ್ತಿರುವರು. ಅವರ ಉ-ತ್ಸಾಹ, ಊಹಾತೀತ, ಶ್ರದ್ಧಾ ಭಕ್ತಿಗಳಿಂದ ಶಾಸ್ತ್ರಗಳ ಪ್ರತಿ ಪ್ರತಿ ಪದಗಲ್ಲಿ ಪಂಕ್ತಿಗಳಲ್ಲಿ ಶ್ರೀ ಹರಿಯ ಗುಣರೂಪಕ್ರಿಯಾದಿ ವಿಶೇಷಗಳನ್ನು ಉಪಾಸಿ ಸುತ್ತಾ ನೋಡಿ ಹಿಗ್ಗುತ್ತಾ ಸಂಚರಿಸುತ್ತಿರುವರು. ಮಂತ್ರ ದೃಷ್ಟಾರರಾದ ಋಷಿಗಳ ಜ್ಞಾನವೇ ಇಂತಹುದು ! ॥೨೬॥

## ಪದ್ಯ-೨೭

ಮೂಲ :

**ಮತ್ಸ್ಯ ಕೇತನ ಜನಕ ಹರಿಶ್ರೀ ।**
**ವತ್ಸಲಾಂಛನ ನಿಜಶರಣಜನ ।**
**ವತ್ಸಲ ವರಾರೋಹ ವೈಕುಂಠಾಲಯನಿವಾಸಿ ॥**
**ಚಿತ್ಸುಖಪ್ರದ ಸಲಹೆನಲು ಗೋ।**
**ವತ್ಸಧ್ವನಿಗೊದಗುವ ತೆರದಿ ಪರ।**
**ನೋತ್ಸಹದಿ ಬಂದೊದಗುವನು ನಿರ್ಮತ್ಸರರ ಬಳಿಗೆ ॥೨೭॥**

**ಅವತರಣಿಕೆ ;**

ಮಹತ್ಮಜ್ಞಾನ ಪೂರ್ವಕವಾಗಿ ಭಕ್ತಿಭಾವದಿಂದ ಶ್ರೀಹರಿಯೇ, ಎನ್ನನ್ನು ಸಲಹು-ಎಂದು ಮೊರೆ ಇಡುವ ನಿರ್ಮತ್ಸರರಾದ ಭಕ್ತರ ಅವಸರಕ್ಕೆ, ಗೋವು ಕರುವಿನ ಧ್ವನಿಗೆ ಓಗೊಡುವಂತೆ ಓಡಿಬಂದು ಒದಗುವನು-ಎಂದು ತಿಳಿಸುತ್ತಾರೆ. ॥೨೭॥

**ಪ್ರತಿಪದಾರ್ಥ :**

**ಮತ್ಸ್ಯಕೇತನ ಜನಕ**= ಮೀನ ಧ್ವಜನಾದ ಮನ್ಮಥನ ತಂದೆಯೇ, **ಹರಿ**= ಸಜ್ಜನರ ಪಾಪಪರಿಹಾರಕನಾದ ಶ್ರೀಹರಿಯೇ, **ಶ್ರೀವತ್ಸಲಾಂಛನ** ವಕ್ಷಸ್ಥಳದಲ್ಲಿ ಶ್ರೀ ರಮಾಸಾಂಕೇತವಾದ ಶ್ರೀ ವತ್ಸ ಚಿಹ್ನೆಯುಳ್ಳವನೇ, **ನಿಜಶರಣವತ್ಸಲ**= ಶರಣಾಗತರಾಗಿ ಮೊರೆ ಹೊಕ್ಕ ಏಕಾಂತ ಭಕ್ತರಲ್ಲಿ ಪ್ರೀತಿಯುಳ್ಳವನೇ, **ವರಾರೋಹ**= ಉತ್ತಮವಾದ ಗರುಡದೇವರನ್ನೇ ವಾಹನವನ್ನಾಗಿ ಉಳ್ಳವನೇ (ವರ+ಆರೋಹ. ವರ= ಶ್ರೇಷ್ಠರಾದ ಗರುಡ ದೇವರು. ಆರೋಹ= ಹತ್ತುವ ವಾಹನ). **ವೈಕುಂಠಾಲಯ ನಿವಾಸಿ** ವೈಕುಂಠವೆಂಬ ಮುಕ್ತಿಧಾಮದಲ್ಲಿ ವಾಸ ಮಾಡುವವನೇ **ಚಿತ್ಸುಖಪ್ರದ**=

ಭಕ್ತರಿಗೆ ಸ್ವರೂಪಗತ ಸುಖವನ್ನು (ಮೋಕ್ಷಾನಂದ) ಕೊಡುವವನೇ, **ಸಲಹೆನಲು**=ಸಂರಕ್ಷಿಸು-ಎಂದು ಮೊರೆ ಇಡಲು. **ಗೋವತ್ಸಧ್ವನಿಗೆ= ಒದಗುವ ತೆರದಿ**=ಹಸುವು (ಗೋ) ತನ್ನ ಕರುವಿನ (ವತ್ಸ) ಧ್ವನಿಗೆ ಓಡೋಡಿಬರುವಂತೆ, **ಪರಮೋತ್ಸಹದಿ**=ಅತ್ಯಂತ ಉತ್ಸುಕತೆಯಿಂದ (ಭಕ್ತರವಶನಾಗಿ) **ನಿರ್ಮತ್ಸರರ ಬಳಿಗೆ**=ಅಹಂಮತಾದಿಗಳು ಕಾಮಾದಿ ಕಾಮಾದಿ ಅರಿಷಡ್ವರ್ಗಗಳು, ರಾಗ ದ್ವೇಷಾದಿಗಳನ್ನು ಬಿಟ್ಟು ಕೇವಲ ಗುಣ ಗ್ರಾಹಿಗಳಾದ ಭಕ್ತರ ಸಮೀಪಕ್ಕೆ **ಬಂದು ಒದಗುವನು**=ಗೋಸದೃಶನಾದ ಶ್ರೀ ಪರಮಾತ್ಮನು ಭಕ್ತರ ಆಪತ್ತಿಗೆ ಬಂದು ಸಂರಕ್ಷಿಸುವನು. ॥೨೭॥

# ವ್ಯಾಖ್ಯಾನಗಳು

## ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಪರಮಾತ್ಮನ್ನ ಕಾಣತಕ್ಕ ಲವಲವಕಿಯಿಂದ ನಿರ್ಮತ್ಸರರಾಗಿ ಪ್ರಾರ್ಥನಾ ಮಾಡತಾ ಬಂದರೆ ಪ್ರತ್ಯಕ್ಷನಾಗತಾನೆ ಎಂತ ಹೇಳತಾರೆ.

ಅಹಂಮಮತಾದಿಗಳು ಕಾಮಕ್ರೋಧಾದಿಗಳು ಈಷಣತ್ರಯಗಳ ತ್ಯಾಗಮಾಡಿ ನಿರ್ಮತ್ಸರರಾದವರು ಗುಣಪೂರ್ಣನಾದ ಶ್ರೀ ಪರಮಾತ್ಮನ್ನ ಹೃದಯಾಕಾಶದಲ್ಲಿ ಧ್ಯಾನಮಾಡತಾ, ಮೀನಧ್ವಜನಾದ ಮನ್ಮಥನ ತಂದಿ ಯಾದವನೇ ಪಾಪಪರಿಹಾರಕನೇ. ಶ್ರೀ ವತ್ಸಚಿನ್ಹ ಉಳ್ಳವನೇ, ತನ್ನ ಭಕ್ತ ರಾಗಿಯೂ ನಿಜವಾಗಿ ಶರಣು ಹೊಕ್ಕವರಾಗಿಯೂ ಇರತಕ್ಕ ಜನರಲ್ಲಿ ವಾಂಛಲ್ಯ ಉಳ್ಳವನೇ, ಉತ್ತಮನಾದ ಗರುಡದೇವರೆ ವಾಹನವಾಗುಳ್ಳವನೇ ವೈಕುಂಠವೆಂಬ ಮನಿಯಲ್ಲಿ ನಿವಾಸನಾದವನೇ, ಭಕ್ತರಿಗೆ ಸ್ವರೂಪಸುಖ ಪ್ರದನೇ ಈ ಪ್ರಕಾರ ಸ್ತೋತ್ರಮಾಡಿ ಸಂರಕ್ಷಣ ಮಾಡು ಎಂದರೆ, ಅತ್ಯಂತ ವಾಗಿ ಭಕ್ತರಲ್ಲಿ ಉತ್ಸಾಹದಿಂದಲಿ, ಕರುವಿನ ಧ್ವನಿಗೆ ಆಕಳು ಕರುವು ಇದ್ದ ಸ್ಥಳಕ್ಕೆ, ಕರವಿನ ಸಮೀಪಕ್ಕೆ ಎದುರಿಗೆ ಬಂದು ನಿಲ್ಲುವ ತೆರದಿ, ಭಕ್ತರೆಂಬೋ ವತ್ಸಗಳ ಸ್ತೋತ್ರವೆಂಭೋ ಧ್ವನಿ ಕೇಳಿ, ಆ ಕೇಳಿದ ಸ್ತೋತ್ರ ತನ್ನ ಚಿತ್ತಕೆ

ತಂದುಕೊಂಡು, ವತ್ಸಸದೃಶರಾದ ಭಕ್ತರಿಗೆ ಗೋಸದೃಶನಾದ ಪರಮಾತ್ಮ ಪ್ರತ್ಯಕ್ಷನಾಗತಾನೆಂತ ತಾತ್ಪರ್ಯ.

**ವಿಶೇಷಾರ್ಥ :** ವರಾರೋಹ ಎಂದರೆ, **ಸ್ವರ್ಣಮಂಜೀರಸಂವೀತಮಾರೂಢಂ ಜಗದಂಬಯಾ** ಎಂಬ ಶ್ರೀಮದಾಚಾರ್ಯರ ವಚನರೀತಿಯಾ ಉತ್ಕೃಷ್ಟಳಾದ ರಮಾದೇವಿಯನ್ನ ಟೊಂಕದಲ್ಲಿ ಎತ್ತಿಕೊಂಡಿರುವನೇ ಎಂತಲೂ ತಾತ್ಪರ್ಯವೇ, ॥೨೭॥

**೨ ಭಾವಪ್ರಕಾಶಿಕೆ**

(ಈ ವ್ಯಾಖ್ಯಾನದಲ್ಲಿ ಈ ಪದ್ಯವನ್ನು ೨೮ನೆಯ ಪದ್ಯವೆಂದು ಪರಿಗಣಿಸಲಾಗಿದೆ) ಶ್ರೀಹರೇ ! ನನ್ನನ್ನು ರಕ್ಷಿಸೆಂದು ಭಕ್ತಿಯಿಂದ ಪ್ರಾರ್ಥನೆ ಮಾಡುವ ಭಕ್ತರ-ಧ್ವನಿಯನ್ನು ಕೇಳಿದ ಕೂಡಲೇ ಕರುವಿನ ಧ್ವನಿಯನ್ನು ಕೇಳಿದ ಕೂಡಲೇ ಹಸುವು ಓಡಿ ಬರುವಂತೆ ಶ್ರೀಹರಿಯು ಆ ಭಕ್ತರಬಳಿಗೆ ಬಂದು ಸಂರಕ್ಷಣೆ ಮಾಡುವನೆಂಬ ತಾತ್ಪರ್ಯ ॥೨೭॥

**೩ ಭಾವದರ್ಪಣ**

ಈ ವ್ಯಾಖ್ಯಾನದಲ್ಲಿ ಈ ಪದ್ಯವನ್ನು ೨೮ನೆಯ ಪದ್ಯವೆಂದು ಪರಿಗಣಿಸಲಾಗಿದೆ) "ಮತ್ಯ" ಇತಿ॥ "ವರಾರೋಹ"-ಓಂ ಸೇನಾನಿರಥ ನೃಭ್ಯೋ ಅತೀನಃ ಸತ್ವಾಗವೇಷಣಃ ಸಧೃಷ್ಣುಃ॥ ಮಾ ಚಿತ್ ಸ ಭ್ರೇಷತೇ ಜನೂನೆ ರ್ರೇಷನ್ ಮನೋ ಯೋ ಅಸ್ಯ॥ ॥ಓಂ॥ ವರತ್ವೇನ ಸರ್ವಾರೂಢಃ ॥೨೭॥

## ಕನ್ನಡಾರ್ಥ

ಭಕ್ತ ಮೊರೆಯಿಟ್ಟು ಕರೆದಲ್ಲಿಗೆ ಶ್ರೀಹರಿಯು ಗೋವತ್ಸನ್ಯಾಯದಂತೆ ಬಂದೊದಗುವನೆಂದು ಹೇಳುತ್ತಾರೆ, ಈ ಪದ್ಯದಿಂದ "ವರಾರೋಹ" ಶ್ರೇಷ್ಠನೆನಸಿ ಸರ್ವರ ಮೇಲೆ ಇರುವವನು, ಆರೋಹಿಸುವವನು.

**ತದ್ದೂರೇ ತದ್ವಂತಿಕೇ** ಎಂಬ ಈಶಾವಾಸ್ಯೋಪನಿಷದರ್ಥ ತಿಳಿಸು-ತ್ತಾರೆ ಸೂರಿ ಎಂದು, ಮೇಲಿನ ಪದ್ಯದಲ್ಲಿ ಹೇಳಿದ ಜ್ಞಾನಿಗಳಿಗೆ ಸಮೀಪದ-ಲ್ಲೇ ದೇವರು ಇರುವನು. ದುರಾಚಾರಿಗಳಿಗೆ ಎಂದರೆ ಶಾಸ್ತ್ರತಾತ್ಪರ್ಯ ತಿಳಿ-ಯದೇ ಮನಸ್ಸೀ ನಡೆಯುವವರಿಗೆ ದೂರಕ್ಕಿಂತ ಬಹುದೂರನು. ದೈತ್ಯಸಂತತಿ ಎಂಬ ಜೀವಾಭೇದಾದಿ ನವವಿಧದ್ವೇಷ ದೇವರಲ್ಲಿ ಮಾಡುವವರಿಗೆ ಎಂದಿಗೂ ದೂರ ಕಡೆ ದುರ್ಲಭನೆನಿಸಿಕೊಳ್ಳುವನು. ಸಾರಿ ಸಾರಿ ಎಂಬ ತತ್ತತ್ಕಾಲ ಸರ್ವ ಕ್ರಿಯೆಗಳಲ್ಲೂ ದೇವರ ಸ್ವಾತಂತ್ರ್ಯಾದಿಗಳನ್ನು ಸ್ಮರಿಸುವ ನಿಜ ಭಕ್ತರ ಸಂಸಾರವೆಂಬ ಜನನ ಮರಣಾದಿ ರೂಪ ಸರ್ಪಕ್ಕೆ ಸರ್ಪಾರಿ ಎಂಬ ಗರುಡನಂತೆ ಪರಿಹರಿಸಿ ಸದಾ ಸುಸೌಖ್ಯವನ್ನು ಕೊಡುವನು.

**ಸಂತತಂ ಚಿಂತಯೇನಂತಂ, ದೂರದ್ದೂರತರಂ ಮತ್ತು ತದೇವಾಂತಿಕೆ ಮಂತಿಕಾತ್** ॥ ಇತ್ಯಾದರ್ಥ ವಿವರಿಸಿತು ॥೨೭॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಅಹಂಮಮತಾದಿಗಳನ್ನು ಬಿಟ್ಟು, ಕಾಮಾದಿ ಅರಿಷಡ್ವರ್ಗಗಳಿಂದ ದೂರನಾಗಿ, ಕೇವಲ ಗುಣಗ್ರಾಹಿಗಳಾದ. ಇತರರಲ್ಲಿ ಮಾತ್ಸರ್ಯ ರಹಿತರಾಗಿ ರುವ ಸಜ್ಜನರನ್ನು **ನಿರ್ಮತ್ಸರರು**— ಎಂದು ಹೇಳಿದ್ದಾರೆ. ದಾಸರಾಯರು ಅಂತಹ ಏಕಾಂತ ಭಕ್ತರು. ಭಕ್ತಪರವಶರಾಗಿ. ಶ್ರೀಹರಿಯ ಮಹಾತ್ಮ್ಯೆಯನ್ನು ಶಾಸ್ತ್ರಯೋನಿತ್ವಾತ ತಿಳಿದು. ಗುರೂಪದೇಶದ್ವಾರಾ ಅಂತು ಧ್ಯಾನೋಪಾಸನೆ ಗಳಿಂದ ಸರ್ವಶುಭಗುಣಗಣ ಧಾಮನಾದ ಶ್ರೀ ಹರಿಯನ್ನು ನಾನಾ ಪರಿಯಲ್ಲಿ ಸ್ತೋತ್ರಮಾಡುತ್ತಿರುವರು.

ಮನ್ಮಥನ ಧ್ವಜದಲ್ಲಿ ಮೀನಿನ ಲಾಂಛನವಿದೆ. ಮೀನು ಚಂಚಲಪ್ರವೃ-ತ್ತಿಯುಳ್ಳ ಪ್ರಾಣಿ ಮನಸ್ಸೂ ಹಾಗೆಯೇ ಚಪಲವೃತ್ತಿಯುಳ್ಳದ್ದು. ಮೀನಿನ

ಲಾಂಛನವು ಉಪ ಮನಸ್ಸಿಗೆ ಅಭಿಮಾನಿಯಾದ **ಕಾಮದೇವನ** ಪ್ರತಿಮಾ ದದ್ದು. ಅಂತಹ ಮನ್ಮಥನ ತಂದೆಯೇ ಶ್ರೀಹರಿಯು ಪುರುಷನಾಮಕನ **ಬಗೆ** ನಸ್ಸಿನಿಂದ ಮನ್ಮಥನ ಉತ್ಪತ್ತಿ. ಇದರಿಂದ ಮನ್ಮಥನಿಗೆ **ಮತ್ಸ್ಯಕೇತನ** ನೆಂ-ದು ಹೆಸರು.

ಸಜ್ಜನರ ಸರ್ವಪಾಪಗಳನ್ನು ಪರಿಹಾರ ಮಾಡುವ ಭಗವನ್ಮೂರ್ತಿಯು **ಶ್ರೀಹರಿಯು** = ಶ್ರೀಮನ್ನಾರಾಯಣನ ವಕ್ಷಸ್ಥಳದಲ್ಲಿಶ್ರೀವತ್ಸವೆಂಬ ಮಚ್ಚೆ ಇದೆ ಶ್ರೀಹರಿಯ ವಕ್ಷೋನಿವಾಸಿನಿಯಾದ ಶ್ರೀ ಲಕ್ಷ್ಮೀದೇವಿಯ ಸಾಂಕೇತವು ಶ್ರೀವತ್ಸವು ಇದರಿಂದ ಶ್ರೀಹರಿಯು **ಶ್ರೀ ವತ್ಸಲಾಂಛನನು** = ತನ್ನನ್ನು ಸದಾ ನಂಬಿ, ಶರಣಾಗತರಾಗುವ ಭಕ್ತವೃಂದಕ್ಕೆ ಅತ್ಯಂತ ಪ್ರೀತಿಯ ವಿಷಯ ನು ಭಕ್ತರಲ್ಲಿ ಪ್ರೇಮವುಳ್ಳವನಾದ್ದರಿಂದ **ನಿಜಶರಣಜನವತ್ಸಲನು**

ವರ-ಎಂದರೆ, ಶ್ರೇಷ್ಠರಾದ ಗರುಡ ದೇವರು. ಆರೋಹ-ಎಂದರೆ ಗರುಡನ ಹೆಗಲಿನಮೇಲೆ ಏರಿ ಸಂಚರಿಸುವ ಗರುಡವಾಹನನಾದ ಶ್ರೀಹರಿಯು ಇದನ್ನು **ವರಾರೋಹ** = ಎಂದಿದ್ದಾರೆ. ಇದಕ್ಕೆ ಇನ್ನೊಂದು **ವಿಶೇಷಾರ್ಥ** ಇದೆ

**ಸ್ವರ್ಣ ಮಂಜೀರಸಂವೀತಂಆರೂಢಂ ಜಗದಂಬಯಾ-**

ಎಂಬ ಶ್ರೀಮದಾನಂದ ತೀರ್ಥರ ದ್ವಾದಶಸ್ತೋತ್ರದ ವಚನದಂತೆ. ಉತ್ಕೃಷ್ಟ ಳಾದ ಶ್ರೀ ರಮಾದೇವಿಯನ್ನು ತನ್ನ ಸೊಂಟದಲ್ಲಿ ಎತ್ತಿಕೊಂಡಿರುವವನು ಎಂಭ ವಿಶೇಷಾರ್ಥ ವಿದೆ,

ತ್ರಿಧಾಮಗಳಲ್ಲಿ ಒಂದಾದ ವೈಕುಂಠವು **ಮುಕ್ತಜೀವರ** ವಾಸಸ್ಥಾನವು. ಅಂತಹ ವೈಕುಂಠದಲ್ಲಿ ವಾಸಿಸುವ ಮುಕ್ತಾಶ್ರಯನಾದ ಶ್ರೀಹರಿಯು **ವೈಕುಂಠಾಲಯ ನಿವಾಸಿಯು** ಅವನಿಗೆ "ವೈಕುಂಠ" ನೆಂದೇನಾಮ.

ಮುಕ್ತಿ ಯೋಗ್ಯ ಜೀವರ ಸ್ವರೂಪಗತ ಮೋಕ್ಷಾನಂದವನ್ನು ಕೊಡುವನಾದ್ದರಿಂದ **ಚಿತ್ಸುಖಪ್ರದನು** = ಈ ರೀತಿ ಶ್ರೀಹರಿಯನ್ನು ನಾನಾಪರಿ.

ಯಿಂದ ಕೂಗಲು ಆಕಳು ತನ್ನ ಕರುವಿನ ಧ್ವನಿಗೆ ಓಗೊಟ್ಟು, ಓಡಿಬಂದು, ಕರುವನ್ನು ಲಾಲಿಸುವಂತೆ, ಗೋಸದೃಶನಾದ ಗೋವಿಂದನು ನಿರ್ಮತ್ಸರರಾದ ಭಕ್ತರ. ಅವಸರಕ್ಕೆ ಒದಗಿ ಬಂದು ಪರಿಪಾಲಿಸುವನು ॥೨೭॥

## ಪದ್ಯ-೨೮

**ಮೂಲ**

**ಸೂರಿಗಳಿಗೆ ಸಮೀಪಗ ದುರಾ ।**
**ಚಾರಗಳಿಗೆಂದೆಂದು ದೂರಾ ।**
**ದ್ದೂರತರ ದುರ್ಲಭನೆನಿಸುವನು ದೈತ್ಯಸಂತತಿಗೆ ॥**
**ಸಾರಿಸಾರಿಗೆ ನೆನೆದು ಸುಖಿಸುವ ।**
**ಸಾರಹೃದಯರ ಸಂಸಾರ ದುಃಖ ವು ।**
**ಹೋರಗ ದ್ವಿಜರಾಜನೆನಿಸುವನು ದೈತ್ಯದಲ್ಲಣನು॥** ॥೨೮॥

**ಅವತರಣಿ :**

ಘೋರಸಂಸಾರವೆಂಬ ಮಹಾಸರ್ಪಕ್ಕೆ ಗರುಡಸದೃಶನಾದ ಆ ಗಜವರದನು ಜ್ಞಾನಿಗಳಿಗೆ ಅತ್ಯಂತ ಸುಲಭನು, ದುಷ್ಟರಿಗೆ ದುರ್ಲಭನೆಂದು ತಿಳಿಸುತ್ತಾರೆ. ॥೨೮॥

**ಪ್ರತಿ ಪದಾರ್ಥ :**

**ದೈತ್ಯದಲ್ಲಣನು** = ದೈತ್ಯರಪಾಲಿಗೆ ಭಯರೂಪಿಯಾಗಿ, ಸಂಹಾರಕನಾದ, ಶ್ರೀ ಹರಿಯು **ಸೂರಿಗಳಿಗೆ** = ಜ್ಞಾನಿಗಳಿಗೆ, **ಸಮೀಪಗ** = ಅತ್ಯಂತ ಸಮೀಪದಲ್ಲಿರುವನು (ಅತ್ಯಂತ ಸುಲಭವಾಗಿ ಪ್ರಾಪ್ತನು). **ದುರಾಚಾರಿಗಳಿಗೆ** = ಶ್ರೀಹರಿಯಲ್ಲಿ ದ್ವೇಷಮಾಡುವ ತಮೋಯೋಗ್ಯರಿಗೂ. ಉದಾಸೀನ ಮನೋಭಾವವುಳ್ಳ ನಿತ್ಯಸಂಸಾರಿಗಳಿಗೂ, **ದೂರಾತಿ ದೂರತರ** = ಅತ್ಯಂತ ದೂರನು. (ಅಲಭ್ಯನು) **ದೈತ್ಯಸಂತತಿಗೆ** = ಶ್ರೀ ಹರಿ ದ್ವೇಷಿಗಳಾದ

ದೈತ್ಯರ ಸಮೂಹಕ್ಕೆ, **ದುರ್ಲಭನೆನಿಸುವನು**=ಅಲಭ್ಯನು. **ಸಾರಿಸಾರಿಗೆ** ಪದೇ ಪದೇ **ನೆನೆದು**=ಸ್ಮರಿಸುತ್ತಾ, **ಸುಖಿಸುವ** ॥ ಸಂತೋಷವನ್ನು ಹೊಂದುವ, **ಸಾರ ಹೃದಯರ**=ಸರ್ವಸಾರಭೂತನಾದ ಶ್ರೀ ಹರಿಯನ್ನು ಸದಾ ತಮ್ಮ ಹೃನ್ಮಂದಿರದಲ್ಲಿ ಧ್ಯಾನೋಪಾಸನ ಮಾಡತಕ್ಕ ಭಕ್ತರಿಗೆ, **ಸಂಸಾರ ದುಃಖಮಹೋರಗ** = ದುಃಖಮಯವಾದ ಮಹಾಸರ್ಪಕ್ಕೆ. **ದ್ವಿಜರಾಜನೆನಿಸುವನು**=ಗರುಡ ಸದೃಶನಾಗಿದ್ದಾನೆ ಶ್ರೀ ಹರಿಯು (ದ್ವಿಜ-ಪಕ್ಷಿಗಳು. ದ್ವಿಜರಾಜ-ಪಕ್ಷಿರಾಜನಾದ-ಗರುಡನು)

## ವ್ಯಾಖ್ಯಾನಗಳು

### ೧ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮ ಎಂಥಾವನೆಂದರೆ ಹೇಳುತ್ತಾರೆ. ಈ ಪರಮಾತ್ಮನಲ್ಲಿ ದ್ವೇಷಮಾಡತಕ್ಕ ಸ್ವರೂಪಸ್ವಭಾವವುಳ್ಳ ದೈತ್ಯರನ್ನು ನಾಶಮಾಡತಕ್ಕ ಪರಮಾತ್ಮನು ಹರಿಸರ್ವೋತ್ತಮ. ವಾಯುಜೀವೋತ್ತಮ, ತಾರತಮ್ಯ ಪಂಚಭೇದಜ್ಞಾನವೇ ಸತ್ಯವೆನ್ನತಕ್ಕ ಜ್ಞಾನಿಗಳಿಗೆ, ಇವರ ಮನಸ್ಸು ಪರಮಾತ್ಮನ ಪಾದ ಸೇರಿ, ಆ ಪಾದ ಸಮೀಪದಲ್ಲಿ ಇರೋಣದರಿಂದ ಪರಮಾತ್ಮನು ಮನಸ್ಸಿಗೆ ಸಮೀಪನಾಗಿ ಇರ್ತಾನೆ. ತಾರತಮ್ಯ ಅಂಗೀಕರಿಸದೇ ಪಂಚಭೇದ ಅಂಗೀಕರಿಸದ ಸ್ವರೂಪ ಸ್ವಭಾವದವರಿಗೆ-ಎಂದರೆ ನಿತ್ಯ ಸಂಸಾರಿಗಳಿಗೆ ಎಂತ ಅರ್ಥದರ್ಪಣಗತ ಪ್ರತಿಬಿಂಬವತ್ ದೂರದ ದೆಶಿಯಿಂದ ಇರತಕ್ಕವ—**ಶ್ರೀಮದಾಚಾರ್ಯರ ವಾಕ್ಯ, ದೂರದ್ದೂರತರಂ ಯತ್ತು ತದೇವಾಂತಿಕಮಂತಿಕಾತ್.** ಸಂಪೂರ್ಣ ದ್ವೇಷಿಗಳಾದ ದೈತ್ಯಕೂಟಕ್ಕೆ ಅನಾದ್ಯನಂತಕಾಲಕ್ಕೂ ಅತ್ಯಂತ ದೂರನಾಗಿ ಇರತಾನೆ. ಮುಕ್ತಿಯೋಗ್ಯ ಸ್ವರೂಪದವರಾದ ಕಾಲಕ್ಕೂ, ಅಹಂಮಮತಾದಿಗಳಿಂದ ಸಹಿತರಾಗಿ ಮನಸ್ಸನ್ನು ಪರಮಾತ್ಮನ ಪಾದದಲ್ಲಿ ಇಡದೆ ಇರೋಪರಿಯಂತ ಇವರಿಗೂನು ದುರ್ಲಭ ಎಂತಲೇ ಕರಸತಾನೆ. ಉಳಿದ ದೈತ್ಯರಿಗೂ ಮಿಶ್ರದ್ವೇಷಿಗಳಿಗೂ ಅತಿ ದುರ್ಲಭನು. ಅಹಂಮಮತಾ

ದಿಗಳ ದೂರಮಾಡಿ ಪರಮಾತ್ಮನಲ್ಲಿ ನಿಷ್ಠವಾದ ಮನಸುಳ್ಳವರಾಗಿ ಪದೇಪದೇ ಸ್ಮರಣೆ ಮಾಡಿ ಸುಖವನ್ನು ಹೊಂದುವ, ಸಾರಭೂತನಾದ ಶ್ರೀ ಪರಮಾತ್ಮನನ್ನು ಹೃದಯಾಕಾಶದಲ್ಲಿ ಧ್ಯಾನೋಪಾಸನ ಮಾಡತಕ್ಕ ತನ್ನ ಭಕ್ತರ ಸಂಸಾರದುಃಖವೆಂಬೋ ದೊಡ್ಡದಾದ ಸರ್ಪಕ್ಕೆ ಪಕ್ಷಿರಾಜನಾದ ಗರುಡ ಎಂತ ಕರಷೋವನಾಗುತ್ತಾನೆ ಎಂದರೆ, ಸರ್ಪವನ್ನು ಗರುಡ ಹ್ಯಾಂಗೆ ನಾಶಮಾಡುತಾನೋ ತದ್ವತ್ ಭಕ್ತರ ಜನನ ಮರಣಾಖ್ಯ ದುಃಖವನ್ನು ನಾಶಮಾಡಿ ಸುಖವನ್ನು ಕೊಡತಾನೆ ಎಂತ ತಾತ್ಪರ್ಯ ॥೨೮॥

## ೨. ಭಾವ ಪ್ರಕಾಶಿಕೆ.

(ಈ ವ್ಯಾಖ್ಯಾನದಲ್ಲಿ ಈ ಪದ್ಯವನ್ನು ೨೯ನೇ ಪದ್ಯವೆಂದು ಪರಿಗಣಿಸಲಾಗಿದೆ.) ಜ್ಞಾನಿಗಳಿಗೆ ಪರಮಾತ್ಮನು ಅತಿ ಸಮೀಪದಲ್ಲಿ ಎಂದರೆ ಎಲ್ಲಿ ಕರೆದರೆ ಅಲ್ಲೇ ಪ್ರತ್ಯಕ್ಷನಾಗುವನು. ಪ್ರಹ್ಲಾದನಿಗೆ ಸ್ತಂಭದಲ್ಲಿ ಪ್ರತ್ಯಕ್ಷನಾದನು ದುರ್ವಾಸರು ದುರ್ಯೋಧನನಿಗೆ ಪ್ರೀತಿಮಾಡುವುದಕ್ಕಾಗಿ ಪಾಂಡವರು ವನವಾಸದಲ್ಲಿದ್ದಾಗ ಆ ಕಾಲದಲ್ಲಿ ಅನ್ನವನ್ನು ಬೇಡಲು ದ್ರೌಪದಿ ದೇವಿಯರು ದುರ್ವಾಸರ ಭಯದಿಂದ ಕೃಷ್ಣನನ್ನು ಸ್ಮರಿಸಿದ ಕೂಡಲೇ ದ್ವಾರಾವತಿಯಲ್ಲಿದ್ದರೂ ಆ ತಕ್ಷಣ ಬಂದೊದಗಿದನು. ಇತ್ಯಾದಿಗಳು ಅನೇಕವಿರುವವು. ಅಯೋಗ್ಯರ-ಹೃದಯಾಕಾಶದಲ್ಲಿದ್ದರೂ ಅವರಿಗ ದೂರಾದ್ದೂರತರನಾಗಿಯೇ ಇರುವನು ದೈತ್ಯವಂಶದವರಿಗೆ ಅಂದರೆ ದೈತ್ಯಾಚಾರಉಳ್ಳವರಿಗೆ ಎಂದೆಂದಿಗೂ ಲಭ್ಯನಾಗನು ಬಾರಿಬಾರಿಗೂ ತನ್ನನ್ನು ಸ್ಮರಿಸುತ್ತಿರುವ ಸಜ್ಜನರಿಗೆ ಸರ್ಪಕ್ಕೆ ಗರುಡ ಹೇಗೋ ಹಾಗೆ ಸಂಸಾರ ಸರ್ಪಕ್ಕೆ ಗರುಡನಂತೆ ನಾಶವನ್ನು ಮಾಡಿ ಸ್ವರೂಪಾನಂದವನು. ಕೊಡಿಸುವನು ॥೨೮॥

## ೩ ಭಾವ ದರ್ಪಣ

(ಈ ವ್ಯಾಖ್ಯಾನದಲ್ಲಿ ಈ ಪದ್ಯವನ್ನು ೨೯ನೇ ಪದ್ಯವೆಂದು ಪರಿಗಣಿಸಲಾಗಿದೆ.) ತ್ರಿವಿಧರಿಗೂ ಪರಮಾತ್ಮ ಇರತಕ್ಕ ರೀತಿ ಹೇಳುತ್ತಾ. ಸೂರಿಬಿತಿ ಜ್ಞಾನಿಗಳು ॥೨೮॥

## ಶ್ರೀ ಗುರು ಹೃದಯ ಪ್ರಕಾಶಿಕೆ

ಮನಸ್ಸಿನಲ್ಲೂ ಶಬ್ದಸ್ಪರ್ಶಾದಿ ಪದಾರ್ಥಗಳಲ್ಲೂ ಜೀವನದಲ್ಲೂ ಇರುವ ಜ್ಞಾನ, ಜ್ಞೇಯ ಜ್ಞಾತೃ ಎಂಬ ಶ್ರೀಹರಿ ರೂಪಗಳ ಸ್ಮರಣೋಪಾಸನೆ ತಿಳಿಸುತ್ತಾರೆ, ಜ್ಞಾನವೆಂದು. ಜ್ಞಾನವೆಂಬ ಮನೋಬುದ್ಧಿಗಳಲ್ಲಿ ಜ್ಞಾನವೆಂತಲೂ, ಜೀವನಲ್ಲಿ ತಿಳುವಳಿಕೆ ಕೊಡುವುದರಿಂದ ಜ್ಞಾತೃವೆಂತಲೂ ಅಭಿಧಾನವೆಂಬ ಹೆಸರುಳ್ಳವನಾಗಿ ದೇವರು ಇರುವನು. ಭಾನುಮಂಡಲವೆಂಬ ಸೂರ್ಯಮಂಡಲದಲ್ಲಿದ್ದು, ಪ್ರದರ್ಶಕನೆಂದರೆ ಸರ್ವವಸ್ತುಗಳನ್ನು ಕಾಣಿಸಿಕೊಟ್ಟು ಅಧಿದೈವವೆಂಬ ರೂಪದಿಂದಿರುವನು. ಸರ್ವ ವಸ್ತುಗಳಲ್ಲಿ ಅಧಿಭೂತನಾಮಕನಾಗಿರುವನು. ಕಣ್ಣು ಮೊದಲಾದ ಕರಣಗಳಲ್ಲಿ ಅಧ್ಯಾತ್ಮ ಶಬ್ದ ವಾಚ್ಯನಾಗಿರುವನು. ವಕ್ತೃಗಳಾದ ಶುಕರು ಮೊದಲಾದ ಯೋಗಿಗಳಲ್ಲೂ ಶ್ರೋತೃಗಳಾದ ಶೌನಕಾದಿ ಋಷಿಗಳಲ್ಲಿಯೂ ಹೃದಯವೆಂಬ ಮನೋರೂಪಗಳಿಂದ ವಶನಾಗುವನು ಎಂದರೆ ಗೋಚರಿಸುವನು ಎಂದರ್ಥ,

**ಸಾಧ್ಯಾತ್ಮಂ ಸಾಧಿಭೂತಂ ಚ ಸಾಧಿದೈವಂ ಚ ಯೇ ವಿದುಃ । ಪ್ರಯಾಣಕಾಲೇಪಿ ಚ ಮಾಂ ತೇ ವಿದುರ್ಯುಕ್ತ ಚೇತಸಃ ॥** ಎಂಬ ಗೀತಾ **ಅಧಿಭೂತವಾಥಾಧ್ಯಾತ್ಮಾಮಧಿ ದೈವಮಿತಿ ತ್ರಿಧಾ ।** ಎಂಬ ಭಾಗವತ. **ಜ್ಞಾನ ಜ್ಞೇಯ ಜ್ಞಾತೃರೂಪಾ ಪ್ರೇರಣಾ ಸಾ ಸದೈವತು ।** ಎಂಬ ಗೀತಾ ಭಾಷ್ಯದಲ್ಲೂ ಹೇಳಿರುವ ಅರ್ಥ ತಿಳಿಸುತ್ತಾರೆ. ಈ ಅರ್ಥ ಹೇಳುವುದಕ್ಕಾಗಿ ಶುಕ ಶೌನಕಾದಿ ಮುನೀಂದ್ರ ಹೃದಯಾಕಾಶಗತ ಚಂದ್ರನೆಂದು ದೇವರಿಗೆ ವಿಶೇಷ ಹೇಳಿರುವ ಆಶಯ ॥೨೮॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಪಂಚಭೇದ ತಾರತಮ್ಯ ಜ್ಞಾನಯುಕ್ತರಾಗಿ. ಹರಿ ಸರ್ವೋತ್ತಮ ವಾಯುಜೀವೋತ್ತಮನೆಂದು ಉಪಾಸಿಸುತ್ತಿರುವ ಜ್ಞಾನಿಗಳೇ **ಸೂರಿಗಳು.**

ಅಂತಹ ಸೂರಿಗಳು ಬಿಂಬವಾದ ಶ್ರೀ ಹರಿಯನ್ನು ತಮ್ಮ ಪರಮಾಪ್ತ-ನೆಂತಲೂ, ಸರ್ವಚೇಷ್ಟ ಪ್ರವರ್ತನೆಂತಲೂ, ಸರ್ವಕರ್ಮಗಳಿಗೆ ಪ್ರೇರಕನೆಂತಲೂ ಧ್ಯಾನಿಸುತ್ತಿರುವರು ಅವರಿಗೆ ಶ್ರೀಹರಿಯು ಅತ್ಯಂತ ಸಮೀಪಸ್ಥಾನವಾಗಿದ್ದು ಸದಾ ಸಂರಕ್ಷಿಸುತ್ತಿರುವನು.

ದುಷ್ಕರ್ಮಗಳನ್ನು ಆಚರಿಸುತ್ತಾ, ಶ್ರೀಹರಿಯಲ್ಲಿ ದ್ವೇಶಭಾವನೆಯ-ನ್ನು ಹೊಂದಿ, ಭಗವದ್ಭಕ್ತರನ್ನು ದ್ವೇಷಿಸುತ್ತಿರುವರು **ದುರಾಚಾರಿಗಳು** = ಅಂತಹ ದುರಾಚಾರಿಗಳಿಗೆ ಶ್ರೀಹರಿಯು ಬಿಂಬನಾಗಿದ್ದಾಗ್ಯೂ ಪ್ರತ್ಯಕ್ಷಕ್ಕೆ ವಿಷಯನಾಗದೆ, ದೂರವಾಗಿದ್ದು. ಅಲಭ್ಯನಾಗಿರುವನು. ಶ್ರೀಹರಿಯಲ್ಲಿ ನಿತ್ಯ ದ್ವೇಷಸ್ವಾಭಾವವುಳ್ಳ, ತಮೋಯೋಗ್ಯರಾದ ದೈತ್ಯರಿಗೆ ಅತ್ಯಂತ ದೂರನು ಅವರಿಂದ ಅಪ್ರಾಪ್ಯನು. ದೈತ್ಯಸಂತತಿಗೆ ದುರ್ಲಭನೆಂದು ಹೇಳಿದ್ದಾರೆ.

**"ದೂರಾದ್ದೂರತರಂ ಯತ್ತು ತದೇವಾಂತಿಕ ಮಂತಿರಾತ್"** ಎಂದು **ಶ್ರೀಮದಾಚಾರ್ಯರ** ವಚನ. ಅಂದರೆ ಸಂಪೂರ್ಣ ಹರಿ ದ್ವೇಷಿಗಳಾದ ದೈತ್ಯಕೂಟಕ್ಕೆ ಅನಾದ್ಯನಂತಕಾಲಕ್ಕೂ ಅತ್ಯಂತ ದೂರನು,

ಅಹಂ ಮಮತಾದಿಗಳಿಂದ ಗ್ರಸ್ತರಾಗಿ, ಮನಸ್ಸನ್ನು ಶ್ರೀಹರಿಯ ಪಾದಾರವಿಂದಗಳಲ್ಲಿ ನೆಡಿಸದೆ ಅಹಂಕರ್ತೃತ್ವ ಭಾವಯುಕ್ತರಾದ ನಿತ್ಯಸಂಸಾರಿಗಳಿಗೂ ದುರ್ಲಭನು. ಸರ್ವವಸ್ತುಗಳಲ್ಲಿ ಸಾರಭೂತನಾಗಿರುವುದರಿಂದ. ಸರ್ವಸಾರ ಭೋಕ್ತನಾದ ಶ್ರೀಹರಿಗೆ **ಸಾರ** ನೆಂದು ಹೆಸರು. ಅಂತಹ ಸಾರನಾಮಕ-ನಾದ ಶ್ರೀಹರಿಯನ್ನು ಪದೇ ಪದೇ ಸ್ಮರಿಸುತ್ತಾ ಹೃದಯಾಂಬರದಲ್ಲಿ ಅವ-ನನ್ನು ಕಾಣುತ್ತಾ ಆನಂದದಿಂದ ಉದ್ರಿಕ್ತರಾದ ಭಕ್ತರು **ಸಾರಹೃದಯರು**

ಅಂತಹ ಸಾರಹೃದಯರ ಸಂಸಾರ ದುಃಖವನ್ನು ಪರಿಹರಿಸಿ, ಆನಂದವ ನ್ನೀವನು. ದುಸ್ತರವಾದ ಸಂಸಾರವು ಮಹಾಸರ್ಪ ಸದೃಶ್ಯವು **(ಮಹೋರಗ)** ಸಂಸಾರ ದುಃಖಗಳಿಗೆ ಗರುಡ ಸದೃಶನಾಗಿದ್ದಾನೆ. ಪರಮ ಕರುಣಾಳುವಾದ ಕಂಜದಳಾಯತಾಕ್ಷನು, ದ್ವಿಜ-ಎಂದರೆ. ಪಕ್ಷಿಗಳು ಏಕೆಂದರೆ ಪಕ್ಷಿಗಳು ಮೊ-

ದಲು ಮೊಟ್ಟೆ ಇಡುತ್ತವೆ ನಂತರ ಮೊಟ್ಟೆ ಒಡೆದು ಮರಿಯಾಗುವುದು, ಇದರಿಂದ ಎರಡಾವರ್ತಿ ಜನಿಸುವುದರಿಂದ, ಪಕ್ಷಿಗಳು "ದ್ವಿಜ" ಎನಿಸುವವು. ಪಕ್ಷಿರಾಜನಾದ ಗರುಡನು ದ್ವಿಜರಾಜನು. ಗರುಡನನ್ನು ಕಂಡ ಸರ್ಪವು ಹೇಗೆ ತಲ್ಲಣಿಸುವುದೋ ದೈತ್ಯ ದಲ್ಲಣನಾದ ಆ ದಾನವಾರಿಯು ಅನುಗ್ರಹದಿಂದ ಭವ ದುಃಖ ಪರಿಹಾರವು ॥೨೮॥

## ಪದ್ಯ-೨೯

ಮೂಲ :

> **ಕ್ಷುಧೆಯುಗೋಸುಗ ಪೋಗಿ ಕಾನನ ।**
> **ಬದರಿ ಫಲಗಳಪೇಕ್ಷೆಯಿಂದಲಿ ।**
> **ಪೊದೆಯೊಳಗೆ ಸಿಗಬಿದ್ದು ಬಾಯ್ದೆರದವನ ತೆರನಂತೆ ॥**
> **ವಿಧಿಪಿತನ ಪೂಜಿಸದೆ ನಿನ್ನಯು ।**
> **ಉದರ ಗೋಸುಗ ಸಾಧುಲಿಂಗ ।**
> **ಪ್ರದರುಶಕ ರಾರಾಧಿಸುತ ಬಳಲದಿರು ಭವದೊಳಗೆ ॥ ॥೨೯॥**

**ಅವತರಣಿ :**

ಹಸಿವೆಯ ಬಾಧೆಯನ್ನು ತಾಳಲಾರದೆ. ಕಾನನವನ್ನು ಪೊಕ್ಕು, ಅಲ್ಲಿ ಪೊದರಿನಲ್ಲಿ ಸಿಕ್ಕು ಪರಿತಪಿಸುವಂತೆ. ಬ್ರಹ್ಮಪಿತನಾದ ಆ ಪರಬ್ರಹ್ಮನನ್ನು ಪೂಜಸದೆ, ಕೇವಲ ಉದರಂಭರಣಕ್ಕಾಗಿ ಕಪಟ ಭಕ್ತಿ ಪ್ರದರ್ಶನ ಮಾಡುವ ವಂಚಕಿಗಳನ್ನು ಆಶ್ರಯಿಸಿ. ಸಂಸಾರದಲ್ಲಿ ಸಿಕ್ಕು ಬಳಲದಿರೆಂದು ತಿಳಿಸುತ್ತಾರೆ. ॥೨೯॥

**ಪ್ರತಿ ಪದಾರ್ಥ :**

**ಕ್ಷುಧೆಯುಗೋಸುಗ** = ಹಸಿವೆಯನ್ನು ಹೋಗಲಾಡಿಸುವುದಕ್ಕಾಗಿ,

**ಕಾನನ ಪೋಗಿ**=ಗ್ರಾಮವನ್ನು ಬಿಟ್ಟು, ಕಾಡಿಗೆ ಹೋಗಿ, **ಬದರಿ-ಪಲಗಳಆಪೇಕ್ಷೆಯಿಂದಲಿ**=ಮುಳ್ಳಿನಿಂದ ಯುಕ್ತವಾದ ಬೋರೇ ಹಣ್ಣಿನ ಅಪೇಕ್ಷೆಯಿಂದ **ಪೊದೆಯೊಳಗೆ**=ಮುಳ್ಳಿನಿಂದ ತುಂಬಿದ ಪೊದೆಯಲ್ಲಿ **ಸಿಕ್ಕು ಬಿದ್ದು** = ಸಿಕ್ಕಿದವನಾಗಿ, **ಬಾಯ್ದೆರೆದವನ ತೆರನಂತೆ** = ಬಾಯಿಬಿಡುತ್ತಾ ತೊಳಲಾಡುತ್ತಿರುವ ನೋಪಾದಿಯಲ್ಲಿ, **ವಿಧಿಪತನ** =ಬ್ರಹ್ಮದೇವರ ತಂದೆಯಾದ ಶ್ರೀಹರಿಯನ್ನು, **ಪೂಜಿಸದೆ**=ಅರ್ಚನಾ ವಿಧಿಯಿಂದ. ಯಾಚನೆ-ಮಾಡದೇ. **ನಿನ್ನಯ ಉದರಗೋಸುಗ**= ನಿನ್ನ ಉದರಂಭರಣಕ್ಕಾಗಿ **ಸಾಧುಲಿಂಗಪ್ರದರ್ಶಕರ**=ಅಂತರಂಗದಲ್ಲಿ ಭಗವದ್ಭಕ್ತಿ ಶೂನ್ಯನಾಗಿ, ಹೊ-ರಗೆ ಕಪಟ ಭಕ್ತಿ ಪ್ರದರ್ಶನ ಮಾಡತಕ್ಕ ವಂಚಕರ, **ಆರಾಧಿಸುತ**=ಆಶ್ರಯ ಮಾಡಿ, ಅವರನ್ನು ಪೂಜಿಸುತ್ತಾ. **ಭವನೊಳಗೆ** = ಸಂಸಾರಾಖ್ಯ ಪೊದೆಯೊ-ಳಗೆ (**ಭವಾಖ್ಯ** ಸುಳಿಯಲ್ಲಿ) **ಬಳಲದಿರು** = ದುಃಖಪಡುವ ನಾಗಬೇಡ ॥೨೯॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಪರಮಾತ್ಮನ್ನ, ತತ್ತ್ವದೇವತೆಗಳ, ಭಗವದ್ಭಕ್ತರ ಭಜಿಸದೆ ಅನ್ಯರ ಭಜಿಸಿದವರಿಗೆ ಆಗತಕ್ಕ ದುಃಖ ದೃಷ್ಟಾಂತದಿಂದ ಹೇಳತಾರೆ.

ಹಸಿವಿನ ನಿವಾರಣೆ ಆಗಬೇಕು ಎಂತ ಗ್ರಾಮಗತರಾದವರನ್ನು ಯಾಚ-ನ ಮಾಡದೆ ಹಸಿವಿಗಾಗಿ ಕಂಟಕದಿಂದ ಸಹಿತವಾದ ಬೋರೇಹಣ್ಣಿನ ಅಪೇಕ್ಷೆಯಿಂದ ಗ್ರಾಮಗತ ಜನರನ್ನೂ ಗ್ರಾಮವನ್ನೂ ಬಿಟ್ಟು ಅಡವಿಯನ್ನು ಕುರಿತು ಹೋಗಿ ಪ್ರವೇಶ ಮಾಡಿ ಮುಳ್ಳಿನಿಂದ ಯುಕ್ತವಾದ ಬೋರೆಯ ಪೊದೆಯಲ್ಲಿ ಸಿಕ್ಕಿದವನಾಗಿ, ಆ ಪೊದೆಯನ್ನು ಬಿಡಿಸಿಕೊಂಡು ಹೊರಗೆ ಬಂದು ಸ್ವಸ್ಥಳ ತಾನು ಸೇರೋದಕ್ಕೆ ಸಾಮರ್ಥ್ಯ ಸಾಲದೆ, ಮಾರ್ಗ ತಿಳಿಯದೆ ಬಾಯಿಬಿಟ್ಟು ಕಷ್ಟಪಡತಾ ಇರುವ ನೋಪಾದಿಯಲ್ಲಿ, ತನ್ನ ದೇಹಾಖ್ಯಗ್ರಾಮಗತ ತತ್ತ್ವದೇವತಾಸಾಂಕೇತರಾದ ಜನರನ್ನು, ಬ್ರಹ್ಮನ ತಂದೆಯಾದಅತ್ಮರೂಪೀ ಪರಮಾತ್ಮನ್ನ, ಈ ತತ್ತ್ವದೇವತೆಗಳ ಭಜನಾರೂಪವಾದ ಯಾಚನದಿಂದ, ಜ್ಞಾನಾಖ್ಯ ಅಶನ ಸಂಪಾದಿಸಿ ಕ್ಷುತ್ತು ಎಂಬ ಅಜ್ಞಾನ ನಿವಾರಣ ಮಾಡಿಕೊಳ್ಳದೆ, ಜ್ಞಾ-

ನಾಖ್ಯ ಅಶನ ದ್ರವ್ಯದಿಂದ ನಿನ್ನ ಉದರ ಪೂರ್ತಿಮಾಡಿಕೊಂಭೋದಕ್ಕೋಸ್ಕರ ಭಗವದ್ಭಕ್ತರಲ್ಲದ, ಬದರೀವೃಕ್ಷದೋಪಾದಿಯಲ್ಲಿ ದಿವ್ಯಫಲಗಳ ಪ್ರದರ್ಶನ ಮಾಡುತಾ ಸಮಗ್ರ ವೃಕ್ಷ ಕಂಟಕಯುಕ್ತವಾಗಿ ಹ್ಯಾಂಗಿರ್ತದೋ ತದ್ವತ್ ದೇಹದಲ್ಲಿ ಸಾಧುತ್ವ ಮಾತ್ರ ಪ್ರದರ್ಶನಮಾಡತಾ ಅಂತರಂಗದಲ್ಲಿ ಭಗವದ್ಭಕ್ತರಲ್ಲದ ಕಪಟಭಕ್ತಿ ಪ್ರದರ್ಶನ ಮಾಡತಕ್ಕವರ ಆರಾಧನಿ ಮಾಡತಾ ಬಂದರೆ, ಅವರು ಸಂಸಾರ ಸಮುದ್ರದಲ್ಲಿ ನಾನಾಪ್ರಕಾರ ದುಃಖಪಡತಕ್ಕ ಮಾರ್ಗಪ್ರದರ್ಶನಮಾಡಿ, ಬದರೀ ಪೊದೆಯೊಳಗೆ ಸಿಗಬಿದ್ದ ಪುರುಷನಂತೆ ಸಂಸಾರಾಖ್ಯ ಪೊದೆಯೊಳಗೆ ಸಿಗಬೀಳುವಂತೆ ಅವರು (ಕಪಟ ಭಕ್ತರು) ಮಾಡೋರು, ಆದ್ದರಿಂದ ಅಂಥಾವರ ಭಜಿಸಿ ಸಂಸಾರಾಖ್ಯ ಪೊದೆಯೊಳಗೆ ಸಿಗಬಿದ್ದು ದುಃಖಬಡೋವನಾಗಬ್ಯಾಡ, ಭಗವಂತನ ಭಕ್ತರಾದ ತತ್ತ್ವ ದೇವತೆಗಳನ್ನು ಇತರರಾದ ಭಗವದ್ಭಕ್ತರನ್ನು ಅನುಸರಿಸಿ ಅವರಲ್ಲಿ ಯಾಚನೀಪೂರ್ವಕ ಜ್ಞಾನ ಸಂಪಾದನ ಮಾಡಿ, ಅಜ್ಞಾನ ಪರಿಹರಿಸಿಕೊಂಡು ಸುಖಿಸು ಎಂತ ತಾತ್ಪರ್ಯ.

**ತಾತ್ಪರ್ಯ:-**

ನಿಷ್ಕಾಮನಾಗಿ ಪರಮಾತ್ಮನ್ನ ಭಜಿಸಿದರೆ ಸಂಸಾರ ಛೇದವಾಗಿ ಭಗವತ್ಸಂದರ್ಶನವಾಗಿ ಕಡಿ ಸೇರತಾನೆ. ಸಕಾಮನಾಗಿ ಅನ್ಯದೇವತಾರಾಧನಿ, ಧನವಂತರ ಸೇವಾದಿಗಳ ಮಾಡಿದರೆ ದುಃಖ ಐದತಾನೆ. ಸಾಧುಲಿಂಗಪ್ರದರ್ಶಕರು ಎಂದರೆ, ಅಂತಃ ಶುದ್ಧಿ ಇಲ್ಲದೇನೆ ಅಹಂಮಮತಾ ವಿಶಿಷ್ಟರಾಗಿ ಬಹಿಃಯಲ್ಲಿ ಲಿಂಗ ಎಂದರೆ ದೇಹವನ್ನ ತೊಳೆದು ನಾಮಮುದ್ರೆಗಳಿಂದ ಅಲಂಕರಿಸಿ, ತುಲಸಿ ಕಮಲಾಕ್ಷ ಮಾಲಿಗಳ ಧರಿಸಿ ದ್ರವ್ಯಾಕರ್ಷಣೆಗಾಗಿ ವೇದಾಂತ ವಾಕ್ಯಗಳ ಉಚ್ಚರಿಸತಾ, ಸಂಚಾರ ಮಾಡತಾ ಅಂತರಂಗದಲ್ಲಿ ಪರಮಾತ್ಮನ್ನ ತಿಳಿದು ಭಜಿಸದೆ, ದ್ರವ್ಯಾರ್ಜನಿಗಾಗಿ ವೇಷವನ್ನು ಧರಿಸಿ ತಿರುಗುವರೇ ಸಾಧುಲಿಂಗಪ್ರದರ್ಶಕರೆಂತ ತಿಳೀಬೇಕು. ಈ ರೀತಿಯಿಂದ ತಿರುಗದೆ ದಾರಾನ್ ಸುತಾನ್ ಪ್ರಿಯಾನ್ ಪ್ರಾಣಾನ್ ಪರಸ್ಮೈತ್ ಸನ್ನಿವೇದಯೇತ್ ಎಂಬ ಪ್ರಮಾಣವನ್ನನುಸರಿಸಿ ಎಲ್ಲಾ ಭಗವಧೀನತ್ವೇನ ಅರ್ಪಣೆ ಮಾಡಿ ಭಗವಧ್ಯಾನದಲ್ಲಿ ರತರಾಗಿ ನಿಷ್ಕಾಮನಾಗಿದ್ದರೆ ಭಗವದನುಗ್ರಹವಾಗಿ ಸಂಸಾರದಿಂದ ಮುಕ್ತನಾಗತಾನೆ. ಆದ್ದರಿಂದ ನಿಷ್ಕಾಮವನ್ನೇ ಆಚರಿಸಬೇಕೆಂದು ತಿಳಿಯಬೇಕು ॥೨೯॥

**೨ ಭಾವಪ್ರಕಾಶಿಕೆ**

(ಈ ವ್ಯಾಖ್ಯಾನದಲ್ಲಿ ಈ ಪದ್ಯವನ್ನು ೨೦ನೇ ಪದ್ಯವೆಂದು ಪರಿಗಣಿಸಲಾಗಿದೆ.)

ಮನುಷ್ಯನು ತನಗೆ ಹಸಿವೆಯಾದರೆ ಊರೊಳಗೆ ಶುದ್ಧವೃತ್ತಿಯನ್ನು, ಅಥವಾ ಮಧುಕರವೃತ್ತಿಯನ್ನಾಗಲೀ, ಅಂತು ಊರೊಳಗೆ ಅನ್ನವನ್ನು ಹುಡುಕುವುದನ್ನು ಬಿಟ್ಟು, ಅರಣ್ಯದಲ್ಲಿರುವ ಭೋರೆಹಣ್ಣಿಗೆ ಆಶೆಬಟ್ಟು, ಪೊದೆಯೊಳಗೆ ಶಿಗಿಬಿದ್ದು ಕಷ್ಟಪಡುವವನಂತೆ. ಬ್ರಹ್ಮದೇವರಿಗೆ ತಂದೆಯಾದ ಸಕಲ ಜಗದ್ರಕ್ಷಕನಾದ ಶ್ರೀಪರಮಾತ್ಮನನ್ನು ಆರಾಧಿಸದೆ ನೋಡಿದವರಿಗೆ ಮಹಾಸಾಧುಗಳಂತೆ ಬರೇ ವೇಷಧಾರಿಗಳ ವೇಷಕ್ಕೆ ಮೋಸಹೋಗಿ ಅವರೆನ್ನು ಆರಾಧನೆ ಮಾಡಿ ನಿನ್ನ ಹೊಟ್ಟೆ ತುಂಬಿಕೊಳ್ಳುವ ಪ್ರಯತ್ನ ಮಾಡಿ ಸಂಸಾರದಲ್ಲಿ ಕಷ್ಟವನ್ನನುಭವಿಸಬೇಡ ॥೨೯॥

**ಭಾವದರ್ಪಣ**

(ಈ ವ್ಯಾಖ್ಯಾನದಲ್ಲಿ ಈ ಪದ್ಯವನ್ನು ೨೦ನೇ ಪದ್ಯವೆಂದು ಪರಿಗಣಿಸಲಾಗಿದೆ.) ಪರಮಾತ್ಮನಲ್ಲಿ ಲೇಶ ಭಕ್ತಿ ಇಲ್ಲದೇ ಇದ್ದರೂ ಹೊರಗೆ ಪರಮಸತ್ಕರ್ಮಾಚರಣೆ ಮಾಡುವರಂತೆ ಸಾಧುಚಿನ್ಹ ತೋರಿಸತಕ್ಕವರೇ ಸಾಧುಲಿಂಗ ಪ್ರದರ್ಶಕರು, ಇಂಥವರನ್ನ ಎಂದೆಂದಿಗೂ ಆರಾಧಿಸದೆ ವಿಹಿತವಾಗಿ ಶ್ರೀ ಪರಮಾತ್ಮನ ಪೂಜಾಮಾಡು ಎಂದು ಹೇಳುತ್ತಾರೆ. ಕ್ಷುಧೆಯು. ಬದರಿ-ಬೋರೇಗಿಡ, ॥೨೯॥

**೪ ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ**

(ಈ ವ್ಯಾಖ್ಯಾನದಲ್ಲಿ ಈ ಪದ್ಯವನ್ನು ೨೧ನೇ ಪದ್ಯವೆಂದು ಪರಿಗಣಿಸಲಾಗಿದೆ.) ವಿಪರ್ಯಾಯೋ ಅನಿಷ್ಟವೂಹ "ಕ್ಷುದೆ" ಇತಿ ॥೨೯॥

**ಕನ್ನಡಾರ್ಥ**

ಶ್ರೀಹರಿಯನ್ನು ಬಿಟ್ಟು ಅನ್ಯಮತಾವಲಂಬಿಗಳಾದ ಇತರ ದೇವತೆಗ-

ಳನ್ನು ಭಜಿಸುವವರು ಸಂಸಾರದಲ್ಲಿ ಬಳಲುವರು, ಎಂಬ ವಿಷಯವನ್ನು ದೃಷ್ಟಾಂತದಿಂದ ಹೇಳುತ್ತಾರೆ. "ಕ್ಷುದೆಯು" ಎಂಬ ಪದ್ಯದಿಂದ-ಹರಿಯನ್ನು ತೊರೆದು ಅನ್ಯರನ್ನು ಭಜಿಸುವುದು ಅನಿಷ್ಟಕರವೆಂದು ಈ ಪದ್ಯದ ಸಾರಾಭಿಪ್ರಾಯ ॥೨೯॥

## ಶ್ರೀಗುರುಹೃದಯ ಪ್ರಕಾಶಿಕೆ

ಕ್ಷುದ್ಬಾದೇಗೋಸ್ಕರ ದುರ್ಜನರ ಸಹವಾಸ ಮಾಡಿದರೆ ಭವಬಂಧವೆಂದು ಸದೃಷ್ಟಾಂತವಾಗಿ ತಿಳಿಸುತ್ತಾರೆ, ಕ್ಷುಧೆ ಎಂದು. ಹಸಿವೆ ತಾಳಲಾರದೆ ಅಡವಿಯಲ್ಲಿ ಬೋರಹಣ್ಣಿಗೆ ಹೋಗಿ ಮುಳ್ಳು ಪೊದೆಯೊಳಗೆ ಸಿಕ್ಕಿ ಶ್ರಮಪಡುವವನಂತೆ ವಿಧಿ ಎಂಬ ಬ್ರಹ್ಮನ ಜನಕನಾದ ದೇವರನ್ನು ಆರಾಧಿಸದೆ ಸಾಧುಲಿಂಗಪ್ರದರ್ಶಕರೇದರೆ, ಡಂಭಾರ್ಥವಾಗಿ ಶುಭಕರ್ಮ ಮಾತ್ರ ಆಚರಿಸುವ ಜ್ಞಾನಶೂನ್ಯ ಅಯೋಗ್ಯರನ್ನಾಶ್ರಯಿಸಿ ಭವವೆಂಬ ಜನನಾದಿ ದುಃಖದೊಳಗೆ ಸಿಕ್ಕಿ ಶ್ರಮಪಡಬಾರದೆಂದರ್ಥ.

**ತವಲಂ ಬಹುಲೋಕ ವಿಚಿಂತನಯಾ ಶ್ರವಣಂ ಕುರುಮಾನ ಸಮೀಶಪದೇ**

ಎಂಬ ದ್ವಾದಶಸ್ತೋತ್ರಾರ್ಥ ವಿವರಿಸಿತು ॥೨೯॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಜಗತ್ತಿನಲ್ಲಿ ಸಜ್ಜನರೆಂದು ಹೊರಗೆ ತೋರಿಸಿಕೊಳ್ಳುತ್ತಾ. ಅಂತರಂಗಶುದ್ಧಿಯಿಲ್ಲದೆ ಭಗವದ್ಭಕ್ತಿ ಲವಲೇಶವೂ ಇಲ್ಲದ ವಂಚಕರನ್ನು ಆಶ್ರಯಿಸಿ ಉದರಂಭರಣ ಮಾಡುವ ನರರ ಪರಿಸ್ಥಿತಿಯನ್ನು ಸುಂದರವಾದ ದೃಷ್ಟಾಂತದಿಂದ ತಿಳಿಸುತ್ತಾರೆ ಶ್ರೀ ದಾಸರಾಯರು.

ಹಸಿವಿನ ಬಾಧೆಯನ್ನು ತಾಳಲಾರದೆ, ತನ್ನ ಗ್ರಾಮವನ್ನು ಮತ್ತು ಗ್ರಾಮಸ್ಥಜನರನ್ನು ತೊರೆದು ಕಾಡಿಗೆ ಹೋಗಿ ಅಲ್ಲಿ ಫಲಭರಿತವಾದ ಬೋರೇ

ಹಣ್ಣಿನ ಗಿಡವನ್ನು ಕಂಡು. ಅದನ್ನು ತಿನ್ನಲು ಅಪೇಕ್ಷಿಸಿ ಮುಳ್ಳುಗಳಿಂದ ಯುಕ್ತವಾದ ಪೊದೆಯಲ್ಲಿ ಸಿಕ್ಕು, ಅದರಿಂದ ಬಿಡಿಸಿಕೊಳ್ಳಲು ಸಾಧ್ಯವಾಗದೇ, ತನ್ನ ಊರಿಗೂ ಹೋಗಲು ಸಾಧ್ಯವಾಗದೇ ಬಳಲುತ್ತಿರುವ ಮಾನವನಂತೆ, ಬ್ರಹ್ಮದೇವರ ಜನಕನಾದ ಸಕಲಾಭೀಷ್ಟದಾಯಕನಾದ ಸರ್ವೋತ್ತಮನಾದ ಶ್ರೀಹರಿಯನ್ನು ಪೂಜಿಸದೆ, ಕೇವಲ ವೇಷಭೂಷಣಗಳಿಂದ ಢಾಂಭೀಕರಾಗಿ, ಹೊರಗೆ ಸಜ್ಜನರಾದ ಭಗವದ್ಭಕ್ತರಂತೆ ತೋರುತ್ತಾ. ಅಂತರಂಗದಲ್ಲಿ ಭಕ್ತಿ ಭಾವಶೂನ್ಯರಾದ ವಂಚಕರನ್ನು ಅಶನ ವಸನಕ್ಕಾಗಿ ಆಶ್ರಯಿಸಿ, ಸಂಸಾರವೆಂಬ ಘೋರ ಕಾನನದಲ್ಲಿ ದುಃಖಮಯವಾದ ಮುಳ್ಳುಗಳಿಂದ ತುಂಬಿದ ಪೊದೆ ಯಲ್ಲಿ ಸಿಕ್ಕಿಕೊಂಡು ಪರಿತಪಿಸಬಾರದೆಂದು ಎಚ್ಚರಿಕೆಯ ನುಡಿಗಳನ್ನಾಡಿದ್ದಾರೆ ಸನ್ಮಾರ್ಗಪ್ರದರ್ಶಕರಾದ ದಾಸರಾಯರು ಸಾಧು-ಎಂದರೆ. ಸಜ್ಜನರಾದ ಭಗ-ವದ್ಭಕ್ತರು. ಲಿಂಗ ಎಂದರೆ, ಕೇವಲ ಸಾಂಕೇತ. ತಮ್ಮ ಶರೀರವನ್ನು ತೊಳೆದು ನಾಮಮುದ್ರೆಗಳಿಂದ ಅಲಂಕರಿಸಿಕೊಂಡು. ಕಂಠದಲ್ಲಿ ತುಲಸಿ ಕಮಲಾಕ್ಷಿಮಾಲೆ ಗಳಿಂದ ಅಲಂಕೃತರಾಗಿ, ಕೇವಲ ದ್ರವ್ಯಸಂಪಾದನೆಗಾಗಿ ಶಾಸ್ತ್ರಾರ್ಥಗಳನ್ನು ಹೇಳುತ್ತಾ ಅಂತರಂಗದಲ್ಲಿ ಕಿಂಚಿತ್ತು ಭಕ್ತಿ ಭಾವವಿಲ್ಲದೇ ಕಪಟಿಗಳಾದ ವಂಚ ಕರೇ ಈ ಸಮಾಜದಲ್ಲಿ ಬಹುಮಂದಿ. ಅಂತಹ ಢಾಂಭಿಕರಿಗೆ ದಾಸರಾಯರು. **ಸಾಧುಲಿಂಗಪ್ರದರ್ಶಕರು** ಎಂದಿದ್ದಾರೆ ಹರಿಸರ್ವೋತ್ತಮ ವಾಯುಜೀವೋ ತ್ತಮ ಪಂಚಬೇಧ ತಾರತಮ್ಯ ಜ್ಞಾನ-ಜಗತ್ತಿನ ಸತ್ಯತ್ವವನ್ನು ಸಾರುವ ಸತ್ಸಿ ದ್ಧಾಂತಮಾರ್ಗವನ್ನು ಬಿಟ್ಟು. ಅನ್ಯ ಶಾಸ್ತ್ರಗಳನ್ನು ಅನುಸರಿಸುತ್ತಾ, ಅನ್ಯ ದೇವತೆಗಳ ಆರಾಧನೆಮಾಡುತ್ತಾ, ಕೇವಲ ಉದರ ಪೋಷಣೆಗಾಗಿ, ಕಪಟಿಗ-ಳಾದ ಢಾಂಭಿಕರನ್ನು ಆಶ್ರಯಿಸುವವರ ಪರಿಸ್ಥಿತಿಯು ಬೋರೆಹಣ್ಣಿನ ಆಸೆಗಾಗಿ ಕಾನನವನ್ನು ಪೊಕ್ಕು ಮುಳ್ಳಿನ ಪೊದೆಯಲ್ಲಿ ಸಿಕ್ಕು ಪರಿತಪಿಸುವವ ನಂತೆ ಆಗುವುದು.

ಈ ದೃಷ್ಟಾಂತದಲ್ಲಿ ವಿಧಿಜನಕನಾದ ಶ್ರೀಹರಿಯು ಸ್ವಸ್ಥಳವಾದ ಗ್ರಾ-ಮ ಮತ್ತು ತನಗೆ ಹಿತರಾದ ಗ್ರಾಮಸ್ಥರ ಸದೃಶ, ಕಾನನವು, ಅನ್ಯಶಾಸ್ತ್ರ,

ಅನ್ಯ ದೇವತಾಶ್ರಯಗಳಿಗೆ ಸದೃಶ, ಕ್ಷುಧೆ ಪರಿಹಾರ ಎಂದರೆ ತನ್ನ ಕಾಮನೆಯನ್ನು ಪೂರ್ತಿಸಿಕೊಳ್ಳುವುದು. ಕ್ಷುದ್ರ ದೇವತೆಗಳ ಉಪಾಸನೆ ಮತ್ತು ಡಾಂಭಿಕರಾದ ಸಾಧುಲಿಂಗ ಪ್ರದರ್ಶಕರು ಕಾನನಗತ ಬೋರೆ ಹಣ್ಣಿನ ಸದೃಶ. ಅವರ ಆಶ್ರಯದಿಂದ ಕ್ಷುದ್ರ ಹಾಗೂ ಕ್ಷಿಪ್ರ ಫಲವನ್ನು ಪಡೆವು ಅಂತ್ಯದಲ್ಲಿ ದುಃಖಪಡುವುದು ಮುಳ್ಳಿನ ಪೊದೆಯಲ್ಲಿ ಸಿಕ್ಕಿಕೊಂಡಂತೆ ॥೨೯॥

## ಪದ್ಯ-೩೦

**ಮೂಲ :**

**ಚಕ್ರಶಂಖ ಗದಾಬ್ಜ ಧರದುರ ।**
**ತಿಕ್ರಮ ದುರಾವಾಸ ವಿಧಿ ಶಿವ ।**
**ಶಕ್ರ ಸೂರ್ಯಾದ್ಯಮರ ಪೂಜ್ಯ ಪದಾಬ್ಜ ನಿರ್ಲಜ್ಜ ॥**
**ಶುಕ್ರ ಶಿಷ್ಯನ ಆಶ್ವಮೇಧ ।**
**ಪ್ರಕ್ರಿಯವ ಕೆಡಿಸಬ್ಜ ಜಾಂಡವ ।**
**ತಿಕ್ರಮಿಸಿ ಜಾಹ್ನವಿಯ ಪಡೆದ ತ್ರಿವಿಕ್ರಮಾಹ್ವಯನು॥೩೦॥**

**ಅವತರಣಿಕೆ :**

ಅಪಾರ ಮಹಿಮಾ ಸಂಪನ್ನನಾದ ಶ್ರೀ ಹರಿಯನ್ನು ಸ್ತೋತ್ರ ಮಾಡುತ್ತಾರೆ. ॥೩೦॥

**ಪ್ರತಿ ಪದಾರ್ಥ :**

**ಚಕ್ರಶಂಖಗದಾಬ್ಜ ಧರ** = ಚಕ್ರ, ಶಂಖ, ಗದಾ, ಪದ್ಮ ಎಂಬ ನಾಲ್ಕು ಆಯುಧಗಳನ್ನು ಚತುರ್ಭುಜಗಳಲ್ಲಿ ಧರಿಸಿರುವ **ದುರತಿಕ್ರಮ** = ಜಯಿಸಲಿಕ್ಕೆ ಅಶಕ್ಯವಾದ ಪರಾಕ್ರಮವುಳ್ಳವನು (ಅಜೇಯನು) **ದುರಾವಾಸ** = ಚರಾಚರಗಳಲ್ಲಿ ವಾಸವಾಗಿದ್ದರೂ ಅವುಗಳಿಂದ ಪರಮ ವಿಲಕ್ಷಣನಾಗಿರುವನು

(ಜೀವಜಡರಿಂದ ಅತ್ಯಂತ ಭಿನ್ನನು) **ವಿಧಿ ಶಿವ ಶಕ್ರ ಸೂರ್ಯ**=ಬ್ರಹ್ಮ ರುದ್ರ, ಇಂದ್ರ, ಸೂರ್ಯ **ಆದಿ ಅಮರ**=ಇವರೇ ಮೊದಲಾದ ದೇವತೆಗಳಿಂದ **ಪೂಜ್ಯಪದಾಬ್ಜ**=ಪೂಜಿತರಾದ ಪಾದಕಮಲಗಳುಳ್ಳವನೇ **ನಿರ್ಲಜ್ಜ**=ಈತನ ಮಹಾ ಸಾಮರ್ಥ್ಯದ ಎದುರು ಬ್ರಹ್ಮಾದಿ ದೇವತೆಗಳು ಲಜ್ಜಿತರಾಗುತ್ತಾರೋ ಅಂತಹ ಮಹಾ ಮಹಿಮನು **ಶುಕ್ರ ಶಿಷ್ಯನ**=ದೈತ್ಯರ ಗುರುಗಳಾದ ಶುಕ್ರಾಚಾರ್ಯರ ಶಿಷ್ಯನಾದ ಬಲಿಚಕ್ರವರ್ತಿಯ **ಅಶ್ವಮೇಧ ಪ್ರಕ್ರಿಯೆನ**=ವಿಧ್ಯುಕ್ತವಾದ ಅಶ್ವಮೇಧ ಯಾಗವನ್ನು **ಕೆಡಿಸಿ**=ಭಂಗಗೊಳಿಸಿ **ಅಬ್ಜ ಜಾಂಡವ**=ಬ್ರಹ್ಮಾಂಡವನ್ನು **ಅತಿಕ್ರಮಿಸಿ**=ಪೂರ್ಣವಾಗಿ ಅಳೆದು **ಜಾಹ್ನವಿಯ**=ಬ್ರಹ್ಮಾಂಡದ ಬಾಹ್ಯದಲ್ಲಿದ್ದ ಭಾಗೀರಥಿ ನದಿಯನ್ನು **ಪಡೆದ**=ತನ್ನ ವಾಮಪಾದಾಂಗುಷ್ಠದಿಂದ ಪಡೆದವನಾಗಿ **ತ್ರಿವಿಕ್ರಮಾಹ್ವಯನು**=ತ್ರಿವಿಕ್ರಮನೆಂಬ ನಾಮದಿಂದ ಪ್ರಖ್ಯಾತನಾದವನು ॥೩೦॥

## ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

## ವ್ಯಾಖ್ಯಾನಗಳು

ಶ್ರೀ ಪರಮಾತ್ಮನು ಎಂಥವನೆಂದರೆ ಹೇಳುತಾರೆ. ಚಕ್ರ, ಶಂಖ, ಗದಾ, ಪದ್ಮ ಈ ನಾಲ್ಕು ಆಯುಧಗಳನ್ನು ನಾಲ್ಕು ಹಸ್ತಗಳಲ್ಲಿ ಉಳ್ಳ ಚತುರ್ಭುಜನಾದವನು. ಜೈಸಲಿಕ್ಕೆ ಅಶಕ್ಯವಾದ ಪರಾಕ್ರಮವುಳ್ಳವನು. ಚರಾಚರದಲ್ಲಿ ವಾಸವಾಗಿದ್ದರೂ ಅದಕ್ಕೆ ದೂರನಾಗಿ ನಿರ್ಲಿಪ್ತನಾಗಿ ಇರತಕ್ಕವನು. ಬ್ರಹ್ಮ ರುದ್ರ ಇಂದ್ರ ಸೂರ್ಯ ಮೊದಲಾದ ಯಾವತ್ತೂ ದೇವತೆಗಳಿಂದ ಪೂಜಿತವಾದ ಪಾದಕಮಲಗಳುಳ್ಳವ, ಲಜ್ಜಾರಹಿತನಾದವ ಎಂದರೆ ಇವನ ಸಾಮರ್ಥ್ಯಾದಿ ಗುಣಗಳ ನೋಡಿ ಸಮರ್ಥರೆನಿಸುವ ಬ್ರಹ್ಮಾದಿ ದೇವತೆಗಳೂ ಲಜ್ಜಾಯುಕ್ತರಾಗುತಾರೆ, ಇಂಥಾ ಲಜ್ಜಾ ರಹಿತನಾದವ ಪರಮಾತ್ಮ ಎಂತ ಅರ್ಥ, ಇಂಥಾ ಪರಮಾತ್ಮ ವಾಮನಾವತಾರ ಮಾಡಿದವನಾಗಿ ದೈತ್ಯ ಗುರುಗಳಾದ ಶುಕ್ರಾಚಾರ್ಯರಿಗೆ ಶಿಷ್ಯನಾದ ಬಲಿಚಕ್ರವರ್ತಿಯು, ವಿತರಣೆಯಿಂದ ಮಾಡತಕ್ಕ ಅಶ್ವ

ಮೇಧ ಯಾಗವನ್ನು ಇಂದ್ರದೇವರಿಗೋಸ್ಕರ ಕೆಡಿಸಿದವನಾಗಿ ಅದೇ ವಾಮನ ದೇವರೇ ತ್ರಿವಿಕ್ರಮ ಎಂತ ದೊಡ್ಡದಾದ ರೂಪ ಧರಿಸಿದವನಾಗಿ ಬ್ರಹ್ಮಾಂಡ ವನ್ನ ಅತಿಕ್ರಮಿಸಿ, ಬ್ರಹ್ಮಾಂಡವನ್ನ ಬಿಟ್ಟು ಹೊರಭಾಗದಲ್ಲಿ ಇದ್ದಂಥಾ ಭಾಗೀರತಿಯನ್ನು ತನ್ನ ಪಾದಾಂಗುಷ್ಠದಿಂದ ಪಡಿಯೋವನಾದ, ಆದ ಕಡಿ ಯಿಂದ ಶ್ರೀ ಪರಮಾತ್ಮನ ಮಹಿಮಿ ಇಂಥಾದ್ದು ಎಂತ ತಿಳದು ಉಪಾಸನಾ ಮಾಡಬೇಕು ಎಂತ ತಾತ್ಪರ್ಯ ॥೩೦॥

## ೨ ಭಾವಪ್ರಕಾಶಿಕೆ

"ಚಕ್ರ ಶಂಖ ಗದಾ ಪದ್ಮ ಧರಾಶ್ಚಿಂತ್ಯಾ ಹರೇರ್ಭುಜಾಃ" ಎಂಬ ದ್ವಾದಶ ಸ್ತೋತ್ರದ ವಾಕ್ಯದಂತೆ ಚಕ್ರ ಶಂಖ ಗದಾ ಪದ್ಮಗಳನ್ನು ಯಾವಾ ಗಲೂ ಧರಿಸಿರುವನು. ಇಂತಹಾ ಪರಮಾತ್ಮನನ್ನು ಯಾವ ಕಾಲದಲ್ಲಾಗಲೀ ಯಾವ ದೇಶದಲ್ಲಾಗಲೀ ರಮಾ ಬ್ರಹ್ಮಾದಿ ಯಾವ ದೇವತೆಗಳಿಂದಾಗಲೀ ಯಾವ ವಿಷಯದಲ್ಲೂ ಮೀರಿ ನಡೆಯಲು ಸಾಧ್ಯವಿಲ್ಲವು. ಅಯೋಗ್ಯರಾದ ಭಗವದ್ವೇಷಿಗಳು ಭಗವದ್ಭಕ್ತರ ದ್ವೇಷಿಗಳು. ಏನು ಮಾಡಿದರೂ ಅವರಿಗೆ ಆವನ ವಾಸವು ಸುಖಕರವಾಗುವುದಿಲ್ಲ. ಕೃಷ್ಣನ ದರ್ಶನಾದಿಗಳಿಂದ ದುರ್ಯೋ ಧನಾದಿಗಳಿಗೆ ದುಃಖಕ್ಕೆ ಸಾಧನವಾಯಿತು. ಬ್ರಹ್ಮ ರುದ್ರಾದಿ ದೇವತೆಗಳಿಂದ ಪೂಜಿತವಾದ ಪಾದಕಮಲಗಳುಳ್ಳವನು. ಯಾವ ಕೆಲಸವನ್ನು ಮಾಡಿದರೆ ನಾಲ್ವರ ಮುಂದೆ ನಾಚಿಕೊಳ್ಳಬೇಕಾಗುವುದೋ ಅಂತಹಾ ಕೆಲಸವನ್ನು ಯಾವ ಗಲೂ ಮಾಡದವನು ಆದ್ದರಿಂದ ನಾಚಿಕೆಯಿಲ್ಲದವನು, ಬಲಿಚಕ್ರವರ್ತಿಯು ಇಂದ್ರ ಪದವಿಯನ್ನು ಹೊಂದಿ ೧೦೦ ಅಶ್ವಮೇಧಗಳನ್ನು ಮಾಡುತ್ತಿರುವಾಗ ಇವನು ಭಕ್ತನೇ ಆದರೂ ಒಂದೊಂದು ಮನ್ವಂತರಕ್ಕೆ ಒಬ್ಬೊಬ್ಬನೇ ಇಂದ್ರ ನೆಂದು ಪರಮಾತ್ಮನ ಸಂಕಲ್ಪವಿರುವುದರಿಂದಲೂ ಇವನು ಮುಂದಿನ ಮನ್ವಂ ತರದಲ್ಲಿ ಇಂದ್ರಪದವಿಗೆ ಬರುವವನಾದುದರಿಂದಲೂ ಈ ಮನ್ವಂತರದಲ್ಲಿ ಪುರಂದರನೆಂಬುವನಿಗೆ ಇಂದ್ರ ಪದವಿ ಇರುವುದನ್ನು ಬಲಾತ್ಕಾರದಿಂದ ಬಲಿ ಚಕ್ರವರ್ತಿಯು ಅಪಹರಿಸಿರುವುದರಿಂದಲೂ ಆವನ ಭಕ್ತಿಯನ್ನೂ, ಸತ್ಯ

ವನ್ನೂ, ಲೋಕದಲ್ಲಿ ಪ್ರಖ್ಯಾತಿ ಪಡಿಸಬೇಕೆಂಬ ಇಚ್ಛೆಯಿಂದ ಪರಮಾತ್ಮನು ವಾಮನರೂಪಿಯಾಗಿ ಬಂದು ಬಲಿಯನ್ನು ಮೂರಡಿ ಭೂಮಿಯನ್ನು ಬೇಡಿ ತ್ರಿವಿಕ್ರಮರೂಪದಿಂದ ಒಂದು ಹೆಜ್ಜೆಯಿಂದ ಭೂಮಿಯನ್ನು ಆಳೆದು ಎರಡನೆಯ ಹೆಜ್ಜೆಯನ್ನು ಅಂತರಿಕ್ಷದಲ್ಲಿಡುವಾಗ ಆ ಹೆಜ್ಜೆಯು ಬ್ರಹ್ಮಾಂಡಖರ್ಪರವನ್ನು ಭೇದಿಸಿಕೊಂಡು ಹೊರಗಿನ ಬಾಹ್ಯೋದಕವು ಬ್ರಹ್ಮಾಂಡದ ಒಳಗೆ ಬಂದಿತು. ಅದೇ ವಿಷ್ಣುಪದೀ ಗಂಗೆ ಎಂಬ ನಾಮಧೇಯದಿಂದ ಜಗತ್ತನ್ನು ಪವಿತ್ರವನ್ನಾಗಿ ಮಾಡುತ್ತಿರುವುದು, ಇಂತಹಾ ಮಹಿಮೆಯುಳ್ಳವನೆಂದರ್ಥ. ॥೩೦॥

## ೨ ಭಾವದರ್ಪಣ

ಚಕ್ರಮಿತಿ, ದುರತಿಕ್ರಮ "ದುರ್ಲಭೋ ದುರತಿಕ್ರಮಃ" ಇತಿ ಸಹಸ್ರನಾಮಪಾಠಾತ್ ಬಲಿ ಚಕ್ರವರ್ತಿಯ ಯಜ್ಞ ಭಂಗಮಾಡಿದ ವಿವರ ದೃಷ್ಟಾಂತದಿಂದ ಹೇಳುತ್ತಾರೆ ಶುಕ್ರ ಇತಿ ॥೩೦॥

## ೪ ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

"**ಚಕ್ರ ಶಂಖ ಗದಾಬ್ಜಧರೆ-** ಇತಿ॥ ಚಕ್ರಧರ (ಚಕ್ರಿ)*ಓಂ॥ ಅಸೋ ಯಥಾನೋಽವಿತಾ ವೃಧೇ ಚ ದದೋ ವಸೂನಿ ಮಮದಶ್ಚ ಸೋಮೈಃ॥

ಗೃಭೀಶಂ ತೇ ಮನ ಇಂದ್ರ ದ್ವಿ ಬರ್ಹಾಃ ಸುತಃ ಸೋಮಃ ಪರಿಷಕ್ತಾ ॥ಓಂ॥*ಚಕ್ರಂ ವರ್ಧನಂ ತತ್ ದಾತವ್ಯತ್ವೇನ ಅಸ್ತೀತಿ ಚಕ್ರೀ ಚಕ್ರಪಾಣಿರ್ವಾ ॥

"**ಶಂಖಭೃತ್**"*॥ಅಸುರ್ಯಸ್ಯ ವಿದ್ವಾನ್ ಸದಾ ತೇ ನಾಮ ಸ್ವಯಶೋ ವಿವಿರ್ಮ (ಭೃ)ಮ ಭೂರಿ ಹಿತೇ ಸವನಾ ಮಾನುಷೀಷು ಭೂರಿ ಮನಿಷೀ ಹವತೇ ತ್ವಾಮಿತ್ ॥ ಓಂ ॥* ದೇವಾಹ್ವಾನಂ ಶಂಖಃ॥ತದ್ವಿಷಯಃ॥ ದರಧರೋವಾ॥

**"ಪದ್ಮೀ"** *ಓಂ॥ಮ್ಯಗಯುತೇ ಅಭಿತ್ಸರಂತಿ ಧೇನುಭಿಃ ತ್ರಿಯಂಇಂದ್ರಸ್ಯ ಸೋಮಾಃ ಸುತಾಸಃ ಸಂತು ದೇವಸ್ಯ ಸ್ವೇ ಕ್ಷಯೇ ಸುತಪಾವ್ನಃ ॥ ಓಂ ॥*॥ (ತ್ರಿಸವನಾನುಗ ಸೋಮಃ) ಪದ್ಮಂ॥ ಕಂ ಜಂ ವಾ॥ ಅಸ್ಯ ಅಸ್ತಿ ಪೇಯತ್ವ ಧಾರ್ಯತ್ವಾಭ್ಯಾಂ ಪದ್ಮೀ॥ **ದುರತಿಕ್ರಮ*** ಓಂ॥ನಪರೀಬಾಧೋ ಹರಿವೋ ಗವಿಷ್ಟಿಸು ಅ ತ್ವಾ ಗೋಭಿರಿವ ವಜ್ರಂ ಗೀರ್ಭಿರ್ ಋಣೋಭ್ಯ ದ್ರಿವಃ ಅಸ್ಮಾ ಕಾಮಂ ಜರಿತುರಾ ಮನಃ ಪೃಣ॥ಓಂ॥*ದುಃಖೇನ ಅಪಿ ಅತ್ಯೇತುಂ ಅಶಕ್ಯಃ ಕ್ರಮಃ ಶಕ್ತಿಃ ಯಸ್ಯ ಸಃ ತಥೋಕ್ತಃ॥ **"ದುರಾವಾಸ"** *ಓಂ॥ ನೂ ಅಸ್ಯತಾ ಚಿದಪ್ರಿವಸ್ತ್ವನ್ನೋ ಜಗ್ಮುರಾಶಸಃ॥ ಮಘವಂ ಶ್ಚಗ್ಧಿ ತವ ತನ್ನ ಊತಿಭಿಃ ನಹ್ಯಾಂಗ ನ್ನತೋತ್ವದನ್ಯಂ॥ಓಂ॥*॥ಸ್ತುತಿಭಿರೇದ ಆವಾಸನೀಯಃ ಪ್ರಸನ್ನೀ ಕರ್ತವ್ಯಃ ನ್ನ ಸುಖೇನ ಇತಿ ತಥೋಕ್ತಃ ॥೩೦॥

## ಕನ್ನಡಾರ್ಥ

"ಚಕ್ರಶಂಖಗದಾಬ್ಜಧರ" ಎಂಬ ಸಮಸ್ತಪದವನ್ನು ಬಿಡಿಸಿದರೆ ಚಕ್ರಧರ, ಶಂಖಧರ, ಗದಾಧರ, ಅಬ್ಜಧರ ಎಂಬ ನಾಲ್ಕು ನಾಮಗಳು ಆಗುತ್ತವೆ

**"ಚಕ್ರಧರ"** ಚಕ್ರ ಅಂದರೆ ಅಭಿವೃದ್ಧಿ (ಬೆಳವಣಿಗೆ) ಅದನ್ನು ಕೊಡುವುದಕ್ಕಾಗಿ ಹಿಡಿದಿರುವವನು ಅಥವಾ ಚಕ್ರವೆಂಬ ಆಯುಧವನ್ನು ಹಿಡಿದಿರುವವನು.

**"ಶಂಖಧರ"** ದೇವತೆಗಳ ಆಹ್ವಾನಕ್ಕೆ ಶಂಖವೆಂದು ಹೆಸರು, ದೇವತೆಗಳ ಆಹ್ವಾನಕ್ಕೆ ವಿಷಯನು ಅಥವಾ ಶಂಖವನ್ನು ಹಿಡಿದಿರುವವನು.

**"ಪದ್ಮಧರ"** ಸವನತ್ರಯದಲ್ಲಿ ಅರ್ಪಿಸಲ್ಪಡುವ ಸೋಮಕ್ಕೆ ಪದ್ಮವೆಂದು ಹೆಸರು, ಅದನ್ನು ಪಾನಮಾಡುವವನು ಅಥವಾ ಪದ್ಮವನ್ನು ಧರಿಸಿದವನು.

**"ದುರತಿಕ್ರಮಃ"** ಕಷ್ಟದಿಂದಲೂ ಸಹ ಅತಿಕ್ರಮಿಸಲಶಕ್ಯವಾದ ಚರಿತ್ರವುಳ್ಳವನು, ಶಕ್ತಿ ಉಳ್ಳವನು.

**"ದುರಾವಾಸಃ"** ಸ್ತುತಿಗಳಿಂದಲೇ ಪ್ರಸನ್ನನಾಗತಕ್ಕವನು, ಹೊರತಾಗಿ ಅನ್ಯ ಸುಲಭ ಉಪಾಯುಗಳಿಂದ ಪ್ರಸನ್ನನಾಗದವನು ॥೩೮॥

**೫ ಶ್ರೀಗುರುಹೃದಯ ಪ್ರಕಾಶಿಕೆ**

ಲೀಲೆಯಿಂದ ಅಧಿಕ ಸಾಧನವನ್ನು ಜೀವರಿಗೆ ಮಾಡಿಸಿದರೂ ದೇವರು ಯೋಗ್ಯತೆ ಮೀರಲೀಸನೆಂದು ತಿಳಿಸುತ್ತಾರೆ ಚಕ್ರ ಎಂದು, ಚಕ್ರ, ಶಂಖ ಗದಾ ಪದ್ಮಾದಿಗಳನ್ನು ಧರಿಸಿ ಪರಮ ಸಮರ್ಥನಾದಾಗ್ಯೂ ದುರತಿಕ್ರಮನೆಂಬ ಅಜೇಯನಾದಾಗ್ಯೂ, ಆದ್ದರಿಂದಲೇ ದುರಾವಾಸಿ ಎಂದರೆ ನಿಗ್ರಹಿಸುವುದಕ್ಕೆ ಅಶಕ್ಯನಾದಾಗ್ಯೂ, ಶಕ್ರ ಸೂರ್ಯ ಮೊದಲಾದ ದೇವಪೂಜ್ಯಪಾದನಾದಾಗ್ಯೂ, ನಿರ್ಲಜ್ಜ ಎಂದರೆ ನಾಚಿಕೆ ತ್ಯಜಿಸಿ ಶುಕ್ರಶಿಷ್ಯನಾದ ಬಲಿಚಕ್ರವರ್ತಿಯ ಯಜ್ಞವನ್ನು ಕೆಡಿಸುವುದಕ್ಕೆ ವಾಮನರೂಪದಿಂದ ಮೂರು ಹೆಜ್ಜೆ ಭೂಮಿಯನ್ನು ಯಾಚಿಸಿ ಹೆಜ್ಜೆಗೆ ಸಾಲದ ಹಾಗೆ ಮಾಡುವುದಕ್ಕೋಸ್ಕರ, ಅಬ್ಜಜಾಂಡವೆಂಬ ಬ್ರಹ್ಮಾಂಡವನ್ನು ಅತಿಕ್ರಮಿಸಿ ಬೆಳೆದು, ಅಂಗುಷ್ಠದ ಉಗುರಿನಿಂದ ಬ್ರಹ್ಮಾಂಡವನ್ನು ಭೇದಿಸಿ ಬಹಿರಾವರಣಜಲದಿಂದ ಗಂಗಾನದಿಯನ್ನು ಪಡೆದು ತ್ರಿವಿಕ್ರಮನೆಂದು ಕರೆಯಿಸಿಕೊಂಡನು.

**ವಿಧವಾನದ್ವಿಡು ಭಯಸ್ಯರಾಚಾ** ಎಂಬ ಶೃತಿ **ನಾಯೂಚ್ಞಯೂತಂ ಪ್ರತಿಹನ್ಮಿತಂ ಬಲಿಂ ಶುಭ್ರಾನೇತ್ಯೇವ ತತೋಭ್ಯಯಾಚತ** ಎಂಬ ನಿರ್ಣಯಾರ್ಥ ಸಹ ಬಲಿಯನ್ನು ಯಾಚಿಸದೆ ಅವನ ಪದವಿಯನ್ನು ಅಪಹರಿಸುವುದಿಲ್ಲವೆಂದು ಪ್ರಹ್ಲಾದನಿಗೆ ದೇವರು ಮಾತುಕೊಟ್ಟಿದ್ದ ಕಾರಣ ಯಾಚಿಸಿದನೆಂಬ ನಿರ್ಣಯಾರ್ಥವನ್ನು ತಿಳಿಸುವುದಕ್ಕೋಸ್ಕರ **ನಿರ್ಲಜ್ಜ**ನೆಂದು ದೇವರಿಗೆ ವಿಶೇಷಣವನ್ನು ಕೊಟ್ಟಿರುತ್ತಾರೆ ॥೩೦॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಶ್ರೀಹರಿಯು ಸುದರ್ಶನವೆಂಬ ಚಕ್ರವನ್ನು ಧರಿಸಿರುವನು. ಚಕ್ರ-ಎಂದರೆ, ಭಕ್ತರಿಗೆ ಅಭಯಪ್ರದವು ಮತ್ತುಅಭಿವೃದ್ಧಿ(ಬೆಳವಣಿಗೆ)ದಾಯಕವು ದೈತ್ಯರ ಉಪಟಳದಿಂದ ಪರಿಹಾರ ಪಾಂಚಜನ್ಯವೆಂಬ ಶಂಖವನ್ನು ಹಿಡಿದಿದ್ದಾನೆ. ಇದು ಜ್ಞಾನಪ್ರದ ಸೂಚಕವು. ದೇವತೆಗಳ ಆಹ್ವಾನಕ್ಕೆ"ಶಂಖ"ಎಂತ ನಾಮ. ಇದರಿಂದ ದೇವತೆಗಳ ಆಹ್ವಾನಕ್ಕೆ ವಿಷಯನು ಕೌಮೋದಕೀ ಎಂಬ ಗದಾಯುಧ ಧರನು. ದುಷ್ಟರ ಸಂಹಾರ ಸೂಚಕಾಯುಧವು. ಪದ್ಮವನ್ನು ಧಾರಣಮಾಡಿದ್ದಾನೆ, ಸವನಪ್ರಾಯದಲ್ಲಿ ಅರ್ಪಿಸಲ್ಪಡುವ ಸೋಮಕ್ಕೆ"ಪದ್ಮ" ವೆಂದು ಹೆಸರು (ತ್ರಿಸವನಾಮಗ ಸೋಮಃ- ಉಪನಿಷದ್ವಚನ)

ಹೀಗೆ ಶ್ರೀಹರಿಯು ಚಕ್ರ-ಶಂಖ-ಗದಾ-ಪದ್ಮಗಳೆಂಬ ಚತುರಾಯುಧಗಳನ್ನು ತನ್ನ ಬಾಹುಭುಜಗಳಲ್ಲಿ ಧರಿಸಿದ್ದಾನೆ.

**"ಚಕ್ರ ಶಂಖ ಗದಾ ಪದ್ಮ ಧರಾಶ್ಚಿಂತ್ಯಾ ಹರೇ ರ್ಭುಜಾಃ"**
**-ಶ್ರೀಮದಾನಂದ ತೀರ್ಥರ ದ್ವಾದಶ ಸ್ತೋತ್ರವಾಕ್ಯ**

ಶ್ರೀ ಹರಿಯನ್ನು ಯಾರಿಂದಲೂ ಜಯಿಸಲು ಶಕ್ಯವಿಲ್ಲ, ಅಜೇಯನಾದ್ದರಿಂದ **ದುರತಿಕ್ರಮನು** ಅಂದರೆ ರಮಾಬ್ರಹ್ಮಾದಿ ಸಮಸ್ತ ದೇವತೆಗಳಿಂದಲೂ ಅವನನ್ನು ಮೀರಿ ನಡೆಯಲು ಶಕ್ಯವಿಲ್ಲ. ಸ್ತುತಿಗಳಿಂದಲೇ ಪ್ರಸನ್ನನಾಗತಕ್ಕವನು. ಅನ್ಯ ಸುಲಭೋಪಾಯಗಳಿಂದ ಅಲಭ್ಯನು. ಚರಾಚರಾತ್ಮಕವಾದ ಜಗತ್ತಿನಲ್ಲಿ ಸರ್ವತ್ರ ವಾಸವಾಗಿದ್ದರೂ ಅವುಗಳಿಂದ ಅತ್ಯಂತ ಭಿನ್ನನು. ಇದರಿಂದ **ದುರಾವಾಸನು**,

ಬ್ರಹ್ಮದೇವನು (ವಿಧಿ) ರುದ್ರದೇವನು (ಶಿವ) ಇಂದ್ರ (ಶಕ್ರ) ಸೂರ್ಯಾದಿ ಸಮಸ್ತ ದೇವತಾವರ್ಗದಿಂದ ಪೂಜಿತ ಪಾದಪದ್ಮನು.

ಸಮರ್ಥರಾದ ಬ್ರಹ್ಮಾದಿ ದೇವತೆಗಳೂ ಸಹ ಆವನ ಸಾಮರ್ಥ್ಯಕ್ಕೆ ಶಕ್ತಿಗೆ ಎದುರಾಗಿ ನಿಲ್ಲದೆ ಲಜ್ಜಿತರಾಗುವರು. ಇದರಿಂದ **ನಿರ್ಲಜ್ಜನು.** ಅಂದರೆ ಲಜ್ಜಾರಹಿತನೆಂದು ಅರ್ಥವಲ್ಲ.

ಶುಕ್ರಾಚಾರ್ಯರು ದೈತ್ಯರ ಗುರುಗಳು- **ಅವರ ಆದೇಶದಂತೆ** ಇಂದ್ರ ಪದವಿ ಪ್ರಾಪ್ತಿಗಾಗಿ ೧೦೦ನೆಯ ಅಶ್ವಮೇಧ ಯಾಗವನ್ನು ಬಲಿಚಕ್ರವರ್ತಿ ಮಾಡುತ್ತಿದ್ದನು. ಬಲಿಯು ಶುಕ್ರ ಶಿಷ್ಯನು. ಇಂದ್ರಾದಿ ದೇವತೆಗಳಿಂದ ಪ್ರಾರ್ಥಿತನಾದ ಶ್ರೀ ಹರಿಯು ವಾಮನರೂಪವನ್ನು ತಾಳಿ ಯಾಗಶಾಲೆಗೆ ಬಂದು ಮೂರು ಪಾದ ಭೂಮಿಯನ್ನು ಬೇಡಿ ಎರಡು ಪಾದಗಳಿಂದ ಸಮಸ್ತ ಭೂಮಂಡಲವನ್ನೂ ಅಳೆದು ತೃತೀಯ ಪಾದವನ್ನು ಬಲಿಯ ಶಿರದ ಮೇಲಿಟ್ಟು ಪಾತಾಳಕ್ಕೆ ತುಳಿದನು. ಶ್ರೀ ಹರಿಯು ಸತ್ಯಸಂಕಲ್ಪನು, ಆ ಮನ್ವಂತರದಲ್ಲಿ ಪುರಂದರನೆಂಬುವನಿಗೆ ಇಂದ್ರ ಪದವಿ ದೊರೆಯಬೇಕಾಗಿದ್ದು ಬಲಿಚಕ್ರವರ್ತಿಯು ಅದನ್ನು ತಾನು ಪಡೆಯುವ ಉದ್ದೇಶದಿಂದ ನೂರನೆಯ ಅಶ್ವಮೇಧ ಯಾಗದಲ್ಲಿ ದೀಕ್ಷಾಬದ್ಧನಾಗಿದ್ದ. ಬಲಿಗೆ ಮುಂದಿನ ಮನ್ವಂತರ ದಲ್ಲಿ ಇಂದ್ರ ಪದವಿ ಪ್ರಾಪ್ತಿ ಇದ್ದುದರಿಂದ ವಾಮನನಾಗಿ ಬಂದು ತ್ರಿವಿಕ್ರಮ ನಾಗಿ ಬೆಳೆದ. ತನ್ನ ಎಡ ಪಾದದ ಉಂಗುಷ್ಠದ ನಖಾಗ್ರದಿಂದ ಬ್ರಹ್ಮಾಂಡ ಖರ್ಪರ ಸೀಳಿ ಬಾಹ್ಯೋದಕವು ಗಂಗಾನದಿಯಾಗಿ ಇಳಿಯಿತು.

ಅಬ್ಜ- ಎಂದರೆ ನೀರಿನಲ್ಲಿ ಹುಟ್ಟಿದ ಕಮಲ, ಅಬ್ಜಜ-ಎಂದರೆ ಕಮಲೋ ದ್ಭವರಾದ ಚತುರ್ಮುಖ ಬ್ರಹ್ಮದೇವರು ಅಬ್ಜಜಾಂಡ- ಎಂದರೆ ಬ್ರಹ್ಮಾಂಡ ಇದನ್ನು ಅತಿಕ್ರಮಿಸಿ ಅಂದರೆ ಮೀರಿ ಶ್ರೀ ಹರಿಯ ಪಾದೋದ್ಭವೆಯಾದ ಗಂಗೆಯು ಪ್ರತ್ಯಕ್ಷಳಾದಳು.

ಮುಂದೆ ಭಗೀರಥ ಮಹಾರಾಜನು ತನ್ನ ವಂಶದವರ ಸದ್ಗತಿ ಪ್ರಾಪ್ತಿ ಗಾಗಿ ಗಂಗಾನದಿಯನ್ನು ಭೂಮಿಗೆ ತರಲು ಪ್ರಯತ್ನಿಸುವ ಪ್ರಸಂಗದಲ್ಲಿ ಭಗೀ

ರಥನನ್ನು ಹಿಂಬಾಲಿಸಿ ಗಂಗಿ ಬಂದಳು. ಅದರಿಂದ ಗಂಗಿಗೆ ಭಾಗೀರಥಿ-ಎಂಬ ಹೆಸರಾಯಿತು. ಮಾರ್ಗ ಮಧ್ಯದಲ್ಲಿ ಗಂಗಾ ಪ್ರವಾಹವು ತಪೋನಿರತರಾಗಿದ್ದ "ಜುಹ್ನು" ಎಂಬ ಮುನಿಪುಂಗವರ ಆಶ್ರಮವನ್ನು ಪ್ರವೇಶಿಸಿತು. ಅವರ ಆಶ್ರಮ ಪ್ರವಾಹದ ರಭಸದಿಂದ ಕೊಚ್ಚಿಹೋಯಿತು, ಆಗ ಧ್ಯಾನದಿಂದ ಎಚ್ಚೆತ್ತ ಜುಹ್ನು ಮುನಿಯು ಭಾಗೀರಥಿಯನ್ನು ಅಪೋಶನ ರೂಪದಲ್ಲಿ ಸೇವಿಸಿಬಿಟ್ಟನು. ನಂತರ ಭಗೀರಥನಿಂದ ಪ್ರಾರ್ಥ್ಯಮಾನರಾಗಿ ಆ ಮುನಿಯು ತನ್ನ ಕಿವಿಯಿಂದ ಗಂಗಾನದಿಯನ್ನು ಬಿಟ್ಟರು, ಇದರಿಂದ ಗಂಗಾನದಿಗೆ "ಜಾಹ್ನವಿ" ಎಂಬ ಹೆಸರು ಬಂದಿತು.

ಜಗತ್ತಿನ ಮೂರು ಲೋಕಗಳನ್ನು ಗೆದ್ದು ವ್ಯಾಪಿಸಿದ್ದರಿಂದ ವಾಮನ ರೂಪೀ ಶ್ರೀ ಹರಿಗೆ ತ್ರಿವಿಕ್ರಮ ಎಂಬ ಹೆಸರಾಯಿತು (ತ್ರಿವಿಕ್ರಮ್ಯಾಯನು) ॥೩೦॥

## ಪದ್ಯ-೩೧

**ಮೂಲ**

**ಶಕ್ತರೆನಿಸುವರಿಲ್ಲ ಹರಿವ್ಯತಿ ।**
**ರಿಕ್ತ ಸುರಗಣದೊಳಗೆ ಸರ್ವೋ ।**
**ದ್ರಿಕ್ತನೆನಿಸುವ ಸರ್ವರಿಂದಲಿ ಸರ್ವಕಾಲದಲಿ ॥**
**ಭಕ್ತಿ ಪೂರ್ವಕವಾಗಿ ಅನ್ಯ ಪ್ರ ।**
**ಸಕ್ತಿಗಳ ನೀಡಾಡಿ ಪರಮಾ ।**
**ಸಕ್ತನಾಗಿರು ಹರಿಕಥಾಮೃತಪಾನ ವಿಷಯದಲಿ ॥೩೧॥**

**ಅವತರಣಿಕೆ :**

ಪ್ರಾಪಂಚಿಕ ವಿಷಯಗಳಲ್ಲಿ ಮಗ್ನರಾಗದೆ ಶ್ರೀ ಹರಿಯ ನಾಮಾಮೃತ ಪಾನದಲ್ಲಿ ಸದಾ ಆಸಕ್ತರಾಗಿರಬೇಕೆಂದು ತಿಳಿಸುತ್ತಾರೆ ॥೩೧॥

**ಪ್ರತಿಪದಾರ್ಥ :**

**ಸುರಗಣದೊಳಗೆ**= ದೇವತಾವೃಂದದಲ್ಲಿ **ಹರಿವ್ಯತಿರಿಕ್ತ**= ಶ್ರೀಮನ್ನಾರಾಯಣನನ್ನು ಹೊರತು **ಶಕ್ತರೆನಿಸುವರಿಲ್ಲ** = ಸಾಮರ್ಥ್ಯವಂತರು ಯಾರೂ ಅನಾದ್ಯನಂತ ಕಾಲಕ್ಕೂ ಇಲ್ಲವೇ ಇಲ್ಲ. **ಸರ್ವಕಾಲದಲಿ**= ಭೂತ ಭವಿಷ್ಯದ್ವರ್ತಮಾನ ಕಾಲಗಳಲ್ಲಿ **ಸರ್ವರಿಂದಲೂ**= ಸರ್ವ ಚೇತನವರ್ಗದವರಿಂದಲೂ **ಸರ್ವೋದ್ರಿಕ್ತನೆನಿಸುವ**= ಸರ್ವ ಪ್ರಕಾರಗಳಲ್ಲಿಯೂ ಶ್ರೇಷ್ಠನೆನಿಸುವ (ಅಪರಿಚ್ಛಿನ್ನನು) **ಭಕ್ತಿಪೂರ್ವಕ**= ಅವರು ಸರ್ವಶ್ರೇಷ್ಠನಾದ ಶ್ರೀಹರಿಯನ್ನು ಭಕ್ತಿಭಾವದಿಂದೊಡಗೂಡಿ **ಅನ್ಯ ಪ್ರಸಕ್ತಿಗಳನು ಈಡಾಡಿ** = ಭಗವದ್ವಿಷಯದಿಂದ ರಹಿತವಾದ ಪ್ರಾಪಂಚಿಕ ವಿಷಯಗಳು. ಲೌಕಿಕ ಹರಟೆಗಳನ್ನು ಬಿಟ್ಟು **ಹರಿಕಥಾಮೃತಪಾನ ವಿಷಯದಲಿ**= ಶ್ರೀ ಹರಿಯ ಕಥಾರೂಪವಾದ ಅಮೃತ ಸದೃಶವಾದ ವಿಷಯಗಳನ್ನು ಶ್ರವಣದ್ವಾರಾಪಾನ ಮಾಡುವುದರಲ್ಲಿ **ಪರಮಾಸಕ್ತನಾಗಿರು** = ಅತ್ಯಂತ ಆದರಿಂದ ಯುಕ್ತನಾಗಿರು ॥೩೦॥

**೧ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ**

## ವ್ಯಾಖ್ಯಾನಗಳು

ಶ್ರೀ ಪರಮಾತ್ಮನ ಕಥಾವಿಷಯದಲ್ಲಿ ಆಸಕ್ತನಾಗಿರು ಎಂತ ಹೇಳುತಾರೆ.

ದೇವತಾಗಣದೊಳಗೆ ಶ್ರೀ ನಾರಾಯಣದೇವರ ವ್ಯತಿರಿಕ್ತ ಸಾಮರ್ಥ್ಯವಂತರು ಎಂತ ಎನಿಸತಕ್ಕವರು ಅನಾದ್ಯನಂತಕಾಲಕ್ಕೂ ಇಲ್ಲ. ಭೂತಭವಿಷ್ಯದ್ವರ್ತಮಾನ ಕಾಲಗಳಲ್ಲೂ ಸರ್ವ ಚರಾಚರಗಳಿಂದಲಿ ಸರ್ವ ವಿಷಯಗಳಿಂದಲೂ ಶ್ರೇಷ್ಠ, ಅಪರಿಚ್ಛಿನ್ನ ಎಂತ ಎನಿಸುವ ಇಂಥಾ ಶ್ರೀ ಪರಮಾತ್ಮನ್ನ ಅನ್ಯವಾದ ಪರಮಾತ್ಮನ ವಿಸ್ಮೃತಿ ಕೊಡುವ ಪ್ರಸಕ್ತಿಗಳ ದೂರಮಾಡಿ ಅತ್ಯಂತ ಭಕುತಿಯಿಂದ ಸಹಿತನಾಗಿ, ಶ್ರೀಪರಮಾತ್ಮನ ಕಥಾ ಎಂಬ ಅಮೃತ

ವನ್ನು ಶ್ರವಣೇಂದ್ರಿಯದಿಂದ ಪಾನ ಮಾಡೋ ವಿಷಯದಲ್ಲಿ, ಅತ್ಯಂತ ಆದರ ದಿಂದ ಯುಕ್ತನಾಗಿರಬೇಕು ಎಂತ ಹೇಳಿದ್ದಾರೆ ॥೩೦॥

## ೨. ಭಾವ ಪ್ರಕಾಶಿಕೆ.

ಪರಮಾತ್ಮನನ್ನು ಬಿಟ್ಟರೆ ಮತ್ತೊಬ್ಬರು ದೇವತಾಗಣದೊಳಗಾಗಲಿ, ಇತರರಾದ ದೈತ್ಯ ರಾಕ್ಷಸ ಗಂಧರ್ವಾದಿಗಳಲ್ಲೂ ಸಮರ್ಥರೆನಿಸುವರು ಇಲ್ಲ. ಪರಮಾತ್ಮನೊಬ್ಬನು ಸರ್ವರಿಂದಲೂ ಸರ್ವ ಕಾಲದಲ್ಲೂ ಸರ್ವೋತ್ತಮನೆನಿಸುವನು. ಆದ್ದರಿಂದ ಇತರ ವಿಷಯಗಳಲ್ಲಿ ಆಸಕ್ತಿಯನ್ನು ಬಿಟ್ಟು ಹರಿಕಥಾಮೃತವನ್ನು ಪಾನಮಾಡುವ ವಿಷಯದಲ್ಲಿ ಭಕ್ತಿಪೂರ್ವಕವಾಗಿ ಅತ್ಯಂತ ಆದರದಿಂದ ಆಸಕ್ತನಾಗಿರು ॥೩೦॥

## ೩ ಭಾವ ದರ್ಪಣ

"ಶಕ್ತ" ಇತಿ ॥ಉದ್ರಿಕ್ತ ಪೂರ್ಣ ॥೩೦॥

## ಕನ್ನಡಾರ್ಥ

ಹರಿವ್ಯತಿರಿಕ್ತರನ್ನು ತೊರೆದು, ಸರ್ವೋತ್ತಮ ಪೂರ್ಣಗುಣನೆಂಬುದಾಗಿ ಶ್ರೀ ಹರಿಯನ್ನೇ ನೆನೆಯುತ್ತ. ಅನ್ಯತ್ರ ಅನಾಸಕ್ತಿಯಿಂದಲೂ, ಹರಿಯಲ್ಲಿ ಪರಮ ಭಕ್ತಿಯಿಂದಲೂ ಹರಿಕಥಾಮೃತರಸವನ್ನು ಪಾನಮಾಡಬೇಕೆಂದು ಹೇಳುತ್ತಾರೆ. "ಶಕ್ತ" ಎಂಬ ಪದ್ಯದಿಂದ,

"ಉದ್ರಿಕ್ತ ಪೂರ್ಣ" ॥೩೦॥

## ಶ್ರೀ ಗುರು ಹೃದಯ ಪ್ರಕಾಶಿಕೆ

ಅಸುರರನ್ನು ಮೋಹಿಸುವುದಕ್ಕೋಸ್ಕರ ಮೋಸ ಮಾಡಿದಾಗ್ಯೂ ಪೆಟ್ಟು ಬಿದ್ದವನಂತೆ, ಮೂರ್ಛೆ ಹೋದವನಂತೆ, ಪರಾಜಿತನಂತೆ ದೇವರು ತೋರಿಸಿ

ದಾಗ್ಯೂ ಅವೆಲ್ಲಾ ಸುಳ್ಳು ತೋರಿಸುತ್ತಾನೆ. ದೇವರಲ್ಲಿ ಲೇಶದೋಷವೂ ಇಲ್ಲವೆಂದು ತತ್ಕಥಾಮೃತ ಪಾನಾಸಕ್ತರಾಗುವರು ಸಜ್ಜನರೆಂದು ತಿಳಿಸುತ್ತಾರೆ ಶಕ್ತನೆಂದು. ಸುರಗಣವೆಂಬ ಸರ್ವ ದೇವತಾ ಸಮೂಹದಲ್ಲೂ, ಇದರಿಂದ ಸೂಚಿತ ಅಸುರಾದಿ ಸಮೂಹದಲ್ಲೂ ಶ್ರೀ ಹರಿ ವ್ಯತಿರಿಕ್ತ ಶಕ್ತಿ ಯಾರಿಗೂ ಇಲ್ಲ. ಸರ್ವರೂ ತತ್ಪ್ರೇರಿತರಾದ್ದರಿಂದ ಆ ಸ್ವಾಮಿಯೇ ಸರ್ವರಿಗಿಂತ ಆರ ಮೋತ್ಕೃಷ್ಟನೆಂದು ಕರೆಸುವನು. ಸದಾ ಹೀಗೆ ತಿಳಿದು ಇತರ ಪ್ರಸಕ್ತಿ ವೆಂಬ ದೇವರಲ್ಲಿ ದೋಷ ಭ್ರಾಂತಿ ತೋರುವ ಪುರಾಣಾದಿ ವಾಕ್ಯಗಳನ್ನು ಮೋಹವೆಂದು ನಿರಾಕರಿಸಿ, ಆ ಪರಮಾತ್ಮನ ಗುಣ ಮಹಿಮೆ ಹೇಳುವ ಹರಿಕಥೆ ಎಂಬ ಅಮೃತಪಾನರೂಪ ಶ್ರವಣ ವಿಷಯದಲ್ಲಿ ಪರಮಾಸಕ್ತನಾಗಿರಬೇಕೆಂದರ್ಥ.

**ವಿದ್ಧವನ್ಮುಗ್ಧವಚ್ಚೈವ ಕೇಶವೋ ವೇದನಾರ್ತವತ್ ।**
**ದರ್ಶಯೇಜ್ಜನ ಮೋಹಾಯ ದೋಷಾ ವಿಷ್ಣೋರ್ನಹಿ ಕ್ವಚಿತ್॥**

ಇತ್ಯಾದಿ ನಿರ್ಣಯಾರ್ಥ ವಿವರಿಸಿತು ॥೩೦॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಶ್ರೀ ಹರಿಯು ಪರಮ ಸಮರ್ಥನು ಸೃಷ್ಟ್ಯಾದಿ ಸಮಸ್ತ ವ್ಯಾಪಾರಗಳನ್ನು ತಾನೇ ಏಕಾಕಿಯಾಗಿ ನಿರಾಯಾಸವಾಗಿ ನಿರ್ವಹಿಸಬಲ್ಲ ನಿಸ್ಸೀಮನು. ಶ್ರೀ ಹರಿಯನ್ನು ಹೊರತು ಸಕಲ ದೇವತಾಗಣದಲ್ಲಿಯಾಗಲೀ ಮಾನವ ರಾಕ್ಷಸ ವರ್ಗದಲ್ಲಿಯಾಗಲೀ ಅವನಿಗೆ ಸಮಶಕ್ತರಾದ ಇತರರ್ಯಾರೂ ಅನಾದ್ಯನಂತಕಾಲದಿಂದಲೂ ಇಲ್ಲವೇ ಇಲ್ಲ.

ಸರ್ವ ಶ್ರೇಷ್ಠನು, ಸರ್ವ ಪ್ರಕಾರಗಳಿಂದಲೂ ಸರ್ವೋತ್ತಮನು ಭೂತ ಭವಿಷ್ಯತ್ವರ್ತಮಾನ ಕಾಲಗಳಲ್ಲಿಯೂ ಅವನಿಗೆ ಸಮರಾಗಲೀ ಅಧಿಕರಾಗಲೀ ಯಾರೂ ಇಲ್ಲ. ಸಮಾಭ್ಯಧಿಕ ಶೂನ್ಯನಾದ ಆ ಸರ್ವೇಶ್ವರನು ಪರಮನು (ಉದ್ರಿಕ್ತ-ಅತ್ಯಂತ ಶ್ರೇಷ್ಠ ವಸ್ತು)

ಆದರೆ ಅನೇಕ ಪ್ರಸಂಗಗಳಲ್ಲಿ ಶತ್ರುಗಳಿಂದ ಪೆಟ್ಟು ಹಾಕಿಸಿಕೊಂಡು, ಮೂರ್ಛೆ ಹೋದವನಂತೆಯೂ, ಪರಾಜಿತನಾದವನಂತೆಯೂ ಪುರಾಣಗಳಲ್ಲಿ ಪ್ರದರ್ಶಿಸಿರುವನು. ನಿರ್ದೋಷನಾದ ಆ ನಿರ್ಮಲನಿಗೆ ಯಾವ ಕಾಲಕ್ಕೂ ಯಾವ ಆಪತ್ತುಗಳೂ ಇಲ್ಲ, ಕೇವಲ ಅಸುರರ ಮೋಹನಾರ್ಥವಾಗಿ, ಲೋಕ ವಿಡಂಬನೆಗಾಗಿ ಹಾಗೆ ತೋರಿಸಿಕೊಂಡಿರುವನು.

**ವಿದ್ಧವನ್ಮೂರ್ಛವ ಚೈವ ಕೇಶವೋ ವೇದನಾರ್ತವತ್ ।**
**ದರ್ಶನೇಯಜ್ಞನ ಮೋಹಾಯ ದೋಷಾ ವಿಷ್ಣೋರ್ನಹಿ ಕ್ವಚಿತ್॥**
**-ನಿರ್ಣಯ ವಾಕ್ಯ ಪ್ರಮಾಣ**

ಅಂತಹ ನಿತ್ಯಾನಂದ ನಿರಂಜನನನ್ನು ನಿತ್ಯವೂ ಭಕ್ತಿಪೂರ್ವಕವಾಗಿ ಧ್ಯಾನಿಸುತ್ತಾ ಹೃನ್ಮಂದಿರದಲ್ಲಿ ಭಗವನ್ಮೂರ್ತಿಯನ್ನು ಉಪಾಸಿಸುತ್ತಾ ಇರ ಬೇಕೆಂದು ತಿಳಿಸುತ್ತಾರೆ. ಹಾಳು ಹರಟೆಗಳನ್ನು ಬಿಟ್ಟು ಪ್ರಾಪಂಚಿಕ ವಿಷ ಯೋಪ ಭೋಗಗಳಲ್ಲಿ ಆಸಕ್ತ ಮನಸ್ಕನಾಗದೆ ಶ್ರದ್ಧಾಭಕ್ತಿಗಳಿಂದ (ಅನ್ಯಪ್ರ ಸಕ್ತಿಗಳನ್ನು ಈಡಾಡಿ) ಶ್ರೀ ಹರಿಯ ಪರಮ ಪವಿತ್ರವಾದ ಮಂಗಳಪ್ರದ ವಾದ ಚರಿತಾಮೃತವನ್ನು ಕೇಳುವುದರಲ್ಲಿ ತನ್ಮಯನಾಗಿರಬೇಕೆಂದು ಆತ್ಮೋ ದ್ಧಾರದ ಮಾರ್ಗವನ್ನು ತೋರಿಸಿದ್ದಾರೆ ದಾಸರಾಯರು. ಅನ್ಯ ವಿಷಯಗಳಲ್ಲಿ ನಿರಾಸಕ್ತಿ, ಭಗವದ್ವಿಷಯದಲ್ಲಿ ಪರಮಾಸಕ್ತಿ ಇರುವುದೇ ಭಗವದ್ಭಕ್ತರ ಪ್ರಧಾನ ಲಕ್ಷಣವು ॥೩೦॥

## ಪದ್ಯ-೩೨

**ಮೂಲ :**

**ಬಲ್ಲೆನೆಂಬುವರಿಲ್ಲವೀತನ ।**
**ಒಲ್ಲೆನೆಂಬುವರಿಲ್ಲ ಲೋಕದೊ ।**
**ಳಿಲ್ಲದಿಹ ಸ್ಥಳವಿಲ್ಲವಲ್ಲೈ ಜ್ಞಾತಜನರಿಲ್ಲ ॥**
**ಬೆಲ್ಲದಚ್ಚಿನ ಬೊಂಬೆಯಂದದಿ ।**
**ಎಲ್ಲರೊಳಗಿರುತಿಪ್ಪ ಶ್ರೀ ಭೂ ।**
**ನಲ್ಲ ಇವಗೆಣೆಯಿಲ್ಲ ಅಪ್ರತಿಮಲ್ಲ ಜಗಕೆಲ್ಲ ॥ ೩೨ ॥**

**ಅವತರಣಿಕೆ :**

ಬೆಲ್ಲದಚ್ಚಿನಂದದಿ ಪರಿಪೂರ್ಣನಾದ ಭಗವಂತನನ್ನು ಸಾಕಲ್ಯೇನ ಯಾರೂ ಅರಿಯರು. ಇವನನ್ನು ಬೇಡ ಎಂಬುವರ್‍ಯಾರೂ ಇಲ್ಲ. ಸಜ್ಜನರಿಂದ ಅಪೇಕ್ಷಿಸುವ ವಸ್ತು. ಸರ್ವತ್ರ ವ್ಯಾಪ್ತನಾದ ಇಂದಿರಾಧವನು ಸಕಲ ಚೇತನರಲ್ಲಿದ್ದಾನೆಂದು ತಿಳಿಸುತ್ತಾರೆ ॥೩೨॥

**ಪ್ರತಿ ಪದಾರ್ಥ :**

**ಈತನ** = ಶ್ರೀ ಪರಮಾತ್ಮನನ್ನು **ಬಲ್ಲೆನೆಂಬುವರಿಲ್ಲವು** = ಸಾಕಲ್ಯೇನ ತಿಳಿದವರು ಯಾರೂ ಇಲ್ಲ **ಒಲ್ಲೆನೆಂಬುವರಿಲ್ಲ** = ಸಜ್ಜನರಿಂದ ಅಪೇಕ್ಷಿತನು ಇವನನ್ನು ಬ್ಯಾಡ ಎಂಬ ಭಗವದ್ಭಕ್ತರ್‍ಯಾರೂ ಇಲ್ಲ **ಲೋಕದೊಳಿಲ್ಲದಿಹ ಸ್ಥಳವಿಲ್ಲ** = ಚರಾಚರಾತ್ಮಕವಾದ ಈ ಜಗತ್ತಿನಲ್ಲಿ ಶ್ರೀ ಹರಿಯು ಇಲ್ಲದೇ ಇಲ್ಲದ ಸ್ಥಳವೇ ಇಲ್ಲ. ಸರ್ವತ್ರ ಪರಿಪೂರ್ಣ ವ್ಯಾಪ್ತನು **ಜ್ಞಾತಜನರಿಲ್ಲ** = ಅವನನ್ನು ಸಂಪೂರ್ಣವಾಗಿ ತಿಳಿದವರು ಯಾರೂ ಇಲ್ಲ **ಬೆಲ್ಲದಚ್ಚಿನ ಬೊಂಬೆಯಂದದಿ** = ಬೆಲ್ಲದ ಪಾಕದಿಂದ ಮಾಡಿದ ಗೊಂಬೆಯು ಎಲ್ಲಾ ಭಾಗವೂ ಮಧುರವಾಗಿಯೇ ಇರುವುದು ಹಾಗೆಯೇ ಸರ್ವ ಸರ್ವೇಂದ್ರನಾದ ಶ್ರೀ ಹರಿಯು ಸ್ವಗತಬೇಧವಿವರ್ಜಿತನು. ಅವನ ರೂಪ, ಆಕಾರ, ನಾಮ, ಅಂಗಾಂಗಗಳು, ಅವತಾರಗಳು, ಕ್ರಿಯಾ ವಿಶೇಷಣಗಳಿಗೆ ಪರಸ್ಪರ ಭೇದವಿಲ್ಲ ಸರ್ವ ಪ್ರಕಾರದಿಂದಲೂ ಪರಿಪೂರ್ಣನು **ಎಲ್ಲರೊಳಗಿರುತಿಪ್ಪ** = ತ್ರಿವಿಧ ಜೀವರಲ್ಲಿಯೂ ಬಿಂಬರೂಪದಿಂದ ಇದ್ದಾನೆ **ಶ್ರೀ ಭೂನಲ್ಲ** = ಶ್ರೀದೇವಿ ಮತ್ತು ಭೂದೇವಿಯರಿಗೆ ರಮಣನು **ಇವಗೆ ಎಣೆಯಿಲ್ಲ** = ಇವನಿಗೆ ಸದೃಶರ್‍ಯಾರೂ ಇಲ್ಲ. ಸಮರೂ ಇಲ್ಲ. ಅಧಿಕರಂತೂ ಇಲ್ಲವೇ ಇಲ್ಲ. **ಜಗಕೆಲ್ಲ** = ಸಮಸ್ತ ಜಗತ್ತಿನಲ್ಲಿ **ಅಪ್ರತಿಮಲ್ಲ** = ಅಸದೃಶವಾದ ಶಕ್ತಿ ಸಾಮರ್ಥ್ಯವುಳ್ಳವನು ॥೩೨॥

## ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

## ವ್ಯಾಖ್ಯಾನಗಳು

ಪೂರ್ವೋಕ್ತನಾದ ಈ ಶ್ರೀ ಪರಮಾತ್ಮನ ನಾವು ಬಲ್ಲೆವು ಎನತಕ್ಕವರಿಲ್ಲ ಎಂದರೆ. ಒಂದು ರೂಪವಾದಲ್ಲಿ ಆ ಒಂದು ರೂಪವನ್ನು ಒಂದಾವರ್ತಿ ನೋಡಿ, ಎರಡನೇ ಆವರ್ತಿ ಅದೇ ರೂಪ ಒಂದಾಗೆ ಇದ್ದರೆ ಇದುವರಿಗೆ ಬಲ್ಲೆವು ಎಂತ ತಿಳಿಯಬಹುದು. ಅನಂತಾನಂತ ರೂಪಗಳು ಉಳ್ಳವನಾದರಿಂದ ಈ ರೂಪಗಳು ಬಲ್ಲೆನು ಅನ್ನತಕ್ಕವರು ಚರಾಚರದೊಳಗೆ ದಾರೂ ಇಲ್ಲ ಎಂತ ತಾತ್ಪರ್ಯ, ಈ ಪರಮಾತ್ಮನ್ನ ಬ್ಯಾಡಾ ಎಂತಲೂ, ಇವನ್ನ ನಾವು ಬಲ್ಲೆವೂ ಎನತಕ್ಕವರು ದಾರೂ ಇಲ್ಲ. ಪರಮಾತ್ಮ ಬ್ಯಾರೆ ಎಂಬುದರನ್ನನಾವು ಬಲ್ಲೆವು. ನಾವೇ ಪರಮಾತ್ಮ ಎಂಬುವರು ದಾರೋ ಅವರಿಗೆ ಅವರ ಹೃದಯಾಕಾಶಡಲ್ಲಿ ಪರಮಾತ್ಮ ಪ್ರತ್ಯಕ್ಷನಾಗೋದಿಲ್ಲ ಅವರೆ ಭಗವದ್ವೇಷಿಗಳು: ಚರಾಚರಾತ್ಮಕವಾದ ಲೋಕದೊಳು ಇವನ ವ್ಯಾಪ್ತಿ ಇಲ್ಲದೇ ಇರತಕ್ಕ ಸ್ಥಳವೇ ಇಲ್ಲ. ಇವನ ಮಹಿಮಾ ಸಾಕಲ್ಯೇನ ಬಲ್ಲವರು ಇಲ್ಲ. ಬೆಲ್ಲದ ಪಾಕವನ್ನು ಬೊಂಬೆಯಾಕಾರದಿಂದ ಇರತಕ್ಕ ಅಚ್ಚಿನಲ್ಲಿ ಹಾಕಿದರೆ ತದಾತ್ಮಕ ಬೊಂಬೆಯು ಸರ್ವಾಯುವಗಳಲ್ಲಿ ಮಧುರ ಪೂರ್ಣವಾಗಿ ಹ್ಯಾಂಗೆ ಇರತದೋ ತದ್ವತ್ ಪರಮಾತ್ಮನ ರೋಮಾದಿ ಸರ್ವಾಯುವಗಳೂ ಸರ್ವ ಸಾಮರ್ಥ್ಯದಿಂದಲೂ ಸರ್ವಗುಣಗಳಿಂದಲೂ ಪೂರ್ಣವಾಗಿಯೇ ಇರತವೆ ಎಂತ ತಾತ್ಪರ್ಯ ಭಕ್ತಾಭಕ್ತ ತ್ರಿವಿಧ ಜೀವರಿಗೆ ಬಿಂಬನಾಗಿ ಇರೋವನಾಗಿದ್ದಾನೆ, ಶ್ರೀದೇವೇರಿಗೂ ಭೂದೇವೇರಿಗೂ ಪತಿಯಾದವನು. ಇವಗೆ ಸಮಾನರು ಇಲ್ಲ. ಈ ಪರಮಾತ್ಮ ಸಮಸ್ತ ಜಗಕ್ಕೆಲ್ಲ ಅಪ್ರತಿಹತನಾದ ಪರಾಕ್ರಮವುಳ್ಳವನೆಂದು ತಾತ್ಪರ್ಯ.

**ವಿಶೇಷಾರ್ಥ** ಸರ್ವವ್ಯಾಪ್ತ ಎನ್ನಲಿಕ್ಕೆ ಪ್ರಮಾಣ

**ಸರ್ವತಃ ಪಾಣಿಪಾದಂ ತತ್ಸರ್ವತೋಕ್ಷಿ ಶಿರೋಮುಖಂ ।**
**ಸರ್ವತಃ ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ ॥೩೨॥**

## ೨ ಭಾವಪ್ರಕಾಶಿಕೆ

(ಈ ವ್ಯಾಖ್ಯಾನದಲ್ಲಿ ಈ ಪದ್ಯವನ್ನು ೩೩ನೇ ಪದ್ಯವೆಂದು ಪರಿಗಣಿಸ ಲಾಗಿದೆ)

ಭಾಗವತ ತೃತೀಯ ಸ್ಕಂಧ ೬ನೆಯ ಅಧ್ಯಾಯದಲ್ಲಿ ನಾರದರಿಗೆ ಬ್ರಹ್ಮ ದೇವರು ಉಪದೇಶ ಮಾಡುವ ಪ್ರಕರಣದಲ್ಲಿ "ಯಸ್ಯಾವತಾರ ಕರ್ಮಾಣಿ ಗಾಯಂತಿಹ್ಯಸ್ಮದಾದಯಃ॥ ನಯಂ ವಿಂದಂತಿ ತತ್ತ್ವೇನ ತಸ್ಮೈ ಭಗವತೇ ನಮಃ" ಯಾವ ಪರಮಾತ್ಮನ ಅವತಾರ ಚರಿತ್ರೆಗಳನ್ನು ನಮ್ಮಂತಹರೆಲ್ಲರು ಗಾನ ಮಾಡುತ್ತಿರುವೆವೋ ಯಾವನ ಸ್ವರೂಪವನ್ನು ಸಾಕಲ್ಯೇನ ಅರಿಯಲಾ ರೆವೋ ಅಂತಹ ಪರಮಾತ್ಮನಿಗೋಸ್ಕರ ನಮಸ್ಕಾರವು ಎಂದು ಹೇಳಿರುವರು. ಮತ್ತು ೭ನೆಯ ಅಧ್ಯಾಯದಲ್ಲಿ "ವಿಷ್ಣೋರ್ನುವೀರ್ಯ ಗಣನಾಂ ಕತಮೋ ರ್ಹತೀಹ" "ನಾಂತಂವಿದಾಮ್ಯಹ ಮಮೀ ಮುನಯಃ ಪ್ರಜೇಶಾಃ" ಇತ್ಯಾದಿ ವಾಕ್ಯಗಳಿಂದ ಪರಮಾತ್ಮನ ಮಹಿಮೆ ಸಾಕಲ್ಯೇನ ನಾನು ತಿಳಿದಿರುತ್ತೇನೆಂದು ತಿಳಿದವರಿಲ್ಲವೆಂದು ಸಿದ್ಧವಾಗುವುದು, ಆದ್ದರಿಂದಲೇ ದಾಸಾರ್ಯರು ಈತನನ್ನು ಬಲ್ಲೆನೆಂಬುವರಿಲ್ಲ ಎಂದರು. ಯೋಗ್ಯರಾದ ಜನರಲ್ಲಿ ಪರಮಾತ್ಮನನ್ನು ಬೇಡ ವೆಂಬುವರಿಲ್ಲವೆಂಬ ತಾತ್ಪರ್ಯ.

ತಮೋ ಯೋಗ್ಯರಾದ ಭಗವದ್ವೇಷಿಗಳು ಮಾತ್ರ ಭಗವಂತನನ್ನು ವಲ್ಲರು. ಲೋಕದಲ್ಲಿ ಪರಮಾತ್ಮನಿಲ್ಲದಿರುವ ಸ್ಥಳವೇ ಇಲ್ಲ. ಪರಮಾತ್ಮನ ಮಹಿಮಾದಿಗಳನ್ನು ಚೆನ್ನಾಗಿ ತಿಳಿದವರೂ ಇಲ್ಲ. ಬೆಲ್ಲದಿಂದ ಬೊಂಬೆಯನ್ನು ಮಾಡಿದರೆ ಅದರ ಸರ್ವಾಂಗಗಳಲ್ಲೂ ಸಿಹಿ ಹೇಗೆ ವ್ಯಾಪಿಸಿಕೊಂಡಿರುವುದೋ ಹಾಗೆ ಪರಮಾತ್ಮನು ಎಲ್ಲರೊಳಗೂ ಸರ್ವಾಂಗಗಳಲ್ಲೂ ಸಮನಾಗಿ ವ್ಯಾಪ್ತನಾ ಗಿರುವನು. ಶ್ರೀ ದೇವಿಯರಿಗೂ ಭೂದೇವಿಯರಿಗೂ ಅರಸನು. ಇವನಿಗೆ ಸಮರು ಯಾರೂ ಇಲ್ಲ, ಜಗತ್ತಿನಲ್ಲಿ ಇವನಿಗೆ ಎದರೂ ಮತ್ತೊಬ್ಬನಿಲ್ಲ ಎಂಬ ತಾತ್ಪರ್ಯ ॥೩೨॥

**೨ ಭಾವದರ್ಪಣ**

(ಈ ಪದ್ಯವನ್ನು ಈ ವ್ಯಾಖ್ಯಾನದಲ್ಲಿ ೩೩ನೇ ಪದ್ಯವೆಂದು ಪರಿಗಣಿಸ ಲಾಗಿದೆ)

ಬ್ರಹ್ಮಾದಿ ತೃಣಾಂತ ಜೀವರಲ್ಲಿ ಶ್ರೀ ಹರಿಯನ್ನು ಸಾಕಲ್ಯೇನ ಬಲ್ಲ ವರು ಇಲ್ಲ. ವಲ್ಲೀ ಎಂಬೋರು ಇಲ್ಲೆಂದು ಸೂಚಿಸುತ್ತಾರೆ. ಬಲ್ಲೆ ॥೩೨॥

**೪ ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ**

"ಬಲ್ಲೆ" ಇತಿ ॥೩೨॥

## ಕನ್ನಡಾರ್ಥ

ಆತ್ಮಪ್ರಿಯ ಸುಹೃತ್, ದೇಶ-ಕಾಲ-ಗುಣ-ಕೃತಿ ಪರಿಚ್ಛೇದ ರಹಿತ, ಸರ್ವಜ್ಞ, ಸರ್ವತೋ ವ್ಯಾಪ್ತ, ಸಮಾಧಿಕ ರಹಿತ ಎಂದು ಮುಂತಾಗಿ ವಿಶೇ ಷಣಗಳಿಂದ ಶ್ರೀಭೂದುರ್ಗಾರಮಣ ಶ್ರೀ ಹರಿಯನ್ನು ಸ್ತುತಿಸುತ್ತಾರೆ. ಈ ಪದ್ಯದಿಂದ ॥೩೨॥

**ಶ್ರೀ ಗುರುಹೃದಯ ಪ್ರಕಾಶಿಕೆ**

ದೇವರು ಭಕ್ತರ ಅಪರಾಧವನ್ನು ಕ್ಷಮಿಸುವನೆಂದು ಸದೃಷ್ಟಾಂತವಾಗಿ ತಿಳಿಸುತ್ತಾರೆ, ಪ್ರಣತ ಎಂದು.ಶರಣಾಗತರಿಗೆ ಇಷ್ಟಪ್ರದನಾದ ಭಕ್ತರ ಕ್ಷೇಮ ಚಿಂತನೆ ಎಂಬ ರತ್ನಾಭರಣಾದಿ ಭೂಷಣಾದಿ ಗುಣವುಳ್ಳ, ಘೃಣೀ ಅಂದರೆ ಕರುಣಾಶಾಲಿಯಾದ, ತ್ರಿಗುಣಾತೀತನಾದ ಅಗಾಧ ಸನ್ಮಹಿಮನಾದ, ಕುಂಭಿಣಿ ಎಂಬ ಭೂದೇವಿಗೂ, ಜಯಾ ಎಂಬ ಶ್ರೀದೇವಿಗೂ ಅಣ್ಮ ಎಂದರೆ ಆಳುವ ಸ್ವಾಮಿಯಾದ (ಪತಿಯಾದ) ಶ್ರೀರಾಮರೂಪನು. ರಾಮಾರ್ಪಣವೆಂದು

ಭಾವಿಸಿದ್ದರಿಂದ ಶಬರಿ ಎಂಬ ಶಾಪಗ್ರಸ್ತ ಅಪ್ಸರ ಸ್ತ್ರೀಯು ಕೊಟ್ಟ ಹಣ್ಣುಗಳನ್ನು ಅಂಗೀಕರಿಸಿ, ಆಕೆಗೆ ಪಾಪವಿಮೋಚನೆಯನ್ನು ಮಾಡಿ ಮೋಕ್ಷವನ್ನು ಕೊಟ್ಟನು, ಆದ್ದರಿಂದ ಪರಮಾಪ್ತ ಅಂದರೆ ತನ್ನ ಭಕ್ತರಲ್ಲಿ ಅತಿ ಸ್ನೇಹವನ್ನುವನ್ನು ತೋರಿಸುವಂಥಾವನು ಎಂದರ್ಥ ॥೩೨॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಶ್ರೀ ಹರಿಯು ಅಪಾರ ಕಲ್ಯಾಣಗುಣ ಸಂಪನ್ನನು. ಅನಂತಾವತಾರ ಯುಕ್ತನು, ಆವನ ರೂಪಗಳು, ಅವತಾರಗಳು, ಕ್ರಿಯಾದಿಗಳು ಅಪಾರ, ಹಾಗೂ ಅಪರಿಚ್ಛಿನ್ನ. ರಮಾ ಬ್ರಹ್ಮಾದಿಗಳೂ ಸಹ ಅವನನ್ನು ಸಾಕಲ್ಯೇನ ಅರಿಯಲಾರರು, ಅವರವರ ಯೋಗ್ಯತಾನುಸಾರ ತಿಳಿಯಲ್ಪಡುತ್ತಾನೆ, ಇದರಿಂದ **ಇವನನ್ನು ಬಲ್ಲೆನೆಂಬುವರು ಇಲ್ಲ.**

**ಯಸ್ಯಾವತಾರ ಕರ್ಮಾಣಿ ಗಾಯಂತಿಹ್ಯಸ್ಮದಾದಯಃ ।**
**ನಯಂ ವಿಂದಂತಿ ತತ್ವೇನ ತಸ್ಮೈ ಭಗವತೇ ನಮಃ ॥**

ಎಂದು ಬ್ರಹ್ಮ ದೇವರು ನಾರದನಿಗೆ ಉಪದೇಶಿಸಿರುವರು. **(ಭಾಗವತ ತೃತೀಯ ಸ್ಕಂಧ ಅಧ್ಯಾಯ)**

**"ನಾಂತಂ ವಿದ್ಯಾಮಹ ಮಮೀ ಮುನಯಃ ಪ್ರಜಾಶಾಃ"** ಎಂಬ ಪ್ರಮಾಣವಾಕ್ಯವೂ ಸಹ ಆವನ ಮಹಿಮಾತಿಶಯ ದ್ಯೋತಕವಾಗಿದೆ,

ಸಕಲ ಸಜ್ಜನರಿಂದಲೂ ಅಪೇಕ್ಷಿತ ವಸ್ತು. ಈತನನ್ನು **ಬಲ್ಲೆನೆಂಬುವರಿಲ್ಲ**. ಭಕ್ತರ ಕಾಮಿತಾರ್ಥಪ್ರದನಾದ್ದರಿಂದ ಸಕಲರಿಗೂ ಶ್ರೀ ಹರಿಯು ಬೇಕು.

ಚರಾಚರಾತ್ಮಕವಾದ ಈ ಜಗತ್ತಿನಲ್ಲಿ ಅವನಿಲ್ಲದ ಸ್ಥಳವಿಲ್ಲ, ಅಣುರೇಣು ತೃಣ ಕಾಷ್ಠಾದಿಗಳಲ್ಲಿ ಪರಿಪೂರ್ಣನಾಗಿ ವ್ಯಾಪ್ತನಾಗಿದ್ದಾನೆ ಆ ವಾಸುದೇವನು. ಈ ಜಗತ್ತೇ ಅವನ ಮಂದಿರವು.

ಅವನನ್ನು ಪೂರ್ಣವಾಗಿ ತಿಳಿದಿದ್ದೇವೆ ಎಂಬುವರು ಯಾರ್‍ಯಾರೂ ಇಲ್ಲ ಈ ಜಗತ್ತಿನಲ್ಲಿ **ಜ್ಞಾತಜನರಿಲ್ಲ** - ಎಂದು ತಿಳಿಸುತ್ತಾರೆ.

ಬೆಲ್ಲವನ್ನು ಹದವಾಗಿ ಕಾಯಿಸಿ ಬೆಲ್ಲದ ಪಾಕವನ್ನು ಅಚ್ಚಿನಲ್ಲಿಹೊಯ್ದರೆ ಬೆಲ್ಲದ ಬೊಂಬೆಯಾಗುವುದು. ಅಂತಹ ಬೆಲ್ಲದ ಅಚ್ಚಿನ ಬೊಂಬೆಯನ್ನು ಯಾವ ಭಾಗದಲ್ಲಿ ಮುರಿದು ತಿಂದರೂ ಮಧುರವಾಗಿಯೇ ಇರುವುದು, ಮಧುರ ರಹಿತವಾದ ಅಂಶವೇ ಇಲ್ಲವು, ಅಂತೆಯೇ ನಮ್ಮ ಅಚ್ಯುತನು **ಬೆಲ್ಲದ ಅಚ್ಚಿನ ಬೊಂಬೆಯಂತಿದ್ದಾನೆ.** ಆತನ ಸರ್ವಾಂಗ ಪರಿಪೂರ್ಣ, ಅನಂತಾನಂತ ಅವತಾರಗಳಲ್ಲಿ, ರೂಪಕ್ರಿಯಾದಿಗಳಲ್ಲಿ ಗುಣ ಸಮೂಹದಲ್ಲಿ ಸರ್ವ ಪ್ರಕಾರದಿಂದಲೂ ಪರಿಪೂರ್ಣನು. ಸ್ವಗತ ಭೇದವಿವರ್ಜಿತನು.

ಸಕಲ ಚರಾಚರಗಳಲ್ಲಿ ತುಂಬಿ ಹರಡಿದ್ದಾನೆ. ಶ್ರೀದೇವಿ ಮತ್ತು ಭೂದೇವಿ ಸಹಿತನಾಗಿ ಸರ್ವಾಂತರ್ಯಾಮಿಯಾಗಿರುವ ಸರ್ವೇಶ್ವರನಿಗೆ ಸಮರಾಗಲಿ ಅಧಿಕರಾಗಲೀ ಯಾರ್‍ಯಾರೂ ಇಲ್ಲ. ಇದರಿಂದ ಸಮಾಭ್ಯಧಿಕ ಶೂನ್ಯನು. **ಅವನಿಗೆ ಎಣೆಯಿಲ್ಲ** ಎಂದಿದ್ದಾರೆ,

ಜಗತ್ತಿನಲ್ಲಿ ಶ್ರೀ ಹರಿಯ ಸದೃಶವಾದ ಪರಾಕ್ರಮಶಾಲಿಗಳಾಗಲೀ, ಸಾಮರ್ಥ್ಯವಂತರಾಗಲೀ ಶಕ್ತಿಸಂಪನ್ನರಾಗಲೀ ಇಲ್ಲವೇ ಇಲ್ಲ. ಇದರಿಂದ **ಅಪ್ರತಿಮ ಮಲ್ಲನು** ಮಲ್ಲ=ಶಕ್ತಿ ಪರಾಕ್ರಮಿ ॥೩೨॥

## ಪದ್ಯ-೩೩

**ಮೂಲ**

**ಪ್ರಣತ ಕಾಮದ ಭಕ್ತ ಚಿಂತಾ ।**
**ಮಣಿ ಮಣಿಮಯಾಭರಣ ಭೂಷಿತ ।**
**ಗುಣಿ ಗುಣತ್ರಯದೂರ ವರ್ಜಿತ ಗಹನಸನ್ಮಹಿಮ ॥**
**ಎಣಿಸ ಭಕ್ತರ ದೋಷಗಳ ಕುಲ ।**
**ಭಣಿಜೆಯಾಣ್ಮ ಶರಣ್ಯ ರಾಮಾ ।**
**ರ್ಪಣವೆನಲು ಕೈಗೊಂಡ ಶಬರಿಯ ಫಲವ ಪರಮಾತ್ಮ ॥೩೨॥**

**ಅವತರಣಿಕೆ :**

ಶರಣಾಗತ ವತ್ಸಲನಾದ ಆ ಶರ್ವಾದಿವಂದ್ಯನನ್ನು ಮಹಾತ್ಮ್ಯ ಜ್ಞಾನ ಪೂರ್ವಕವಾಗಿ ಸ್ತೋತ್ರ ಮಾಡಿದರೆ ಕರಾವಲಂಬನ ನೀಡಿ ಕಾಪಾಡುತ್ತಾನೆಂದು ತಿಳಿಸುತ್ತಾರೆ ॥೩೩॥

**ಪ್ರತಿ ಪದಾರ್ಥ :**

**ಪ್ರಣತಕಾಮದ** = ತನಗೆ ಶರಣಾಗತರಾದ ಭಕ್ತಜನರ ಮನೋಭೀಷ್ಟಗಳನ್ನು ಸಲ್ಲಿಸುವ **ಭಕ್ತ ಚಿಂತಾಮಣಿ** = ಭಕ್ತರ ಪಾಲಿಗೆಚಿ ಂತಾಮಣಿಸದೃಶನಾದ **ಮಣಿಮಯಾಭರಣ ಭೂಷಿತ** = ಸ್ವಾಖ್ಯಗಳಾದ ನವರತ್ನಾದಿ ಮಣಿಹಾರ ಆಭರಣಗಳಿಂದ ಅಲಂಕೃತನಾದ **ಗುಣಿ**-ಸ್ವಾಖ್ಯಅಪ್ರಾಕೃತಮಂಗಳಗುಣಧಾಮನಾದ **ಗುಣತ್ರಯ ದೂರ** = ಪ್ರಾಕೃತ ಗುಣ ತ್ರಯಗಳಿಂದ ದೂರನಾದ **ವರ್ಜಿತ** = ಲೋಕ ವಿಲಕ್ಷಣನಾದ (ಜೀವ ಜಡಗಳಲ್ಲಿದ್ದೂ ಅವುಗಳಿಂದ ನಿರ್ಲಿಪ್ತನಾಗಿ ಅತ್ಯಂತ ಭಿನ್ನನಾಗಿರುವ) **ಗಹನ ಸನ್ಮಹಿಮ** = ಯಾರಿಂದಲೂ ತಿಳಿಯಲು ಸಾಧ್ಯವಿಲ್ಲದ ಮಂಗಳ ಮಹಿಮೆಗಳಿಂದ ಕೂಡಿದ **ಕುಂಭಿಣಿಜೆಯರಮಣ** = ಭೂಪುತ್ರಿಯಾದ ಸೀತಾದೇವಿಗೆ ಪತಿಯಾದ(ಕುಂಭಿಣಿ=ಭೂಮಿ ಕುಂಭಿಣಿಜೆ=ಭೂ ಪುತ್ರಿಯಾದ ಸೀತೆ) ಅಣ್ಮ= ಪತಿ ಸೀತಾಪತಿ ಶ್ರೀರಾಮಚಂದ್ರ) **ಶರಣ್ಯ** = ಭಕ್ತರಿಂದ ವಂದ್ಯನಾದ (ಶರಣು ಹೊಂದಲು ಯೋಗ್ಯರಾದ) **ಪರಮಾತ್ಮ** = ಸರ್ವೋತ್ತಮನಾದ ಶ್ರೀಹರಿಯು **ಭಕ್ತರ ದೋಷಗಳ ಎಣಿಸ** = ಭಕ್ತರಲ್ಲಿರುವ ದೋಷಗಳನ್ನು ಪರಿಗಣಿಸುವುದಿಲ್ಲ. ಅವರನ್ನು ದಯಾರ್ದ್ರ ಹೃದಯನಾಗಿ ಕ್ಷಮಿಸುವ ಪರಮ ಕರುಣಾಳು **ರಾಮಾರ್ಪಣವೆನಲು** = ಶ್ರೀರಾಮನೇ ನಿನಗೆ ಅರ್ಪಿತವಾಗಲಿ ಎಂಬ ಅನುಸಂಧಾನದಿಂದ **ಶಬರಿಯ ಫಲವ** = ಭಕ್ತಳಾದ ಶಬರಿಯು ಕೊಟ್ಟ ಫಲಗಳನ್ನು **ಕೈಗೊಂಡ** = ಸ್ವೀಕರಿಸಿದನು (ಶಬರಿಯು ಎಂಜಲು ಮಾಡಿದ ಫಲಗತ ಸ್ವಾಖ್ಯರಸವನ್ನು ಸ್ವೀಕರಿಸಿದನು. ಸ್ವಾಖ್ಯರಸವುಫಲಗತರಸಕ್ಕಿಂತ ಅತ್ಯಂತ ಭಿನ್ನವಾದದ್ದು ॥೩೩॥

೧ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

# ವ್ಯಾಖ್ಯಾನಗಳು

ಇನ್ನೂ ಪರಮಾತ್ಮನ ಮಹಿಮಾ ಹೇಳುತಾರೆ.

ವಂದನಾ ಮಾಡತಕ್ಕ ಸ್ವರೂಪ ಸ್ವಭಾವದಲ್ಲಿಉಳ್ಳ ಭಕ್ತರಿಗೆ ಇಷ್ಟಾರ್ಥ ವಾವ ತನ್ನ ಸಂದರ್ಶನ ಕೊಡತಕ್ಕವ, ಮತ್ತು ಭಕ್ತರಿಗೆ ಅಭೀಷ್ಟಗಳ ಪೂರ್ಣ ಮಾಡೋದರಲ್ಲಿ ಚಿಂತಾಮಣಿ ಸದೃಶನಾದವ ಯೋಗ್ಯತಾನುಸಾರ ಚಿಂತಿಸಿದ್ದು ಕೊಡತಕ್ಕವ. ತನ್ನ ಸ್ವಾಖ್ಯಗಳಾದ ನವರತ್ನಾದಿ ಮಣಿಮಯಗಳಾದ ಆಭರಣಗಳಿಂದ ಭೂಷಿತನಾದವ, ಸ್ವಾಖ್ಯಗುಣತ್ರಯಗಳುಳ್ಳವ. ಪ್ರಾಕೃತ ಗುಣತ್ರಯಗಳಿಂದ ದೂರನಾದವ. ಜೀವ ದೇಹ ಈ ಎರಡರಲ್ಲಿ ಇದ್ದ ಕಾಲಕ್ಕೂ ಜೀವ ಭುಕ್ತದಿಂದ ವರ್ಜಿತನಾದವ. ಸ್ವಾಖ್ಯಗಳೇ ಭೋಜ ಮಾಡತಕ್ಕವ. ದಾರಿಂದಲೂ ತಿಳಕೊಂಬೋದಕ್ಕೆ ಶಕ್ಯವಲ್ಲದ ಅಸಾಧ್ಯವಾದ ಮಂಗಳಕರಗಳಾದ ಮಹಾಮಹಿಮಾ ಉಳ್ಳವ. ಭೂಮಿಯಲ್ಲಿ ಉತ್ಪನ್ನರಾದ ಲಕ್ಷ್ಮೀದೇವೇರಾದ ಸೀತಾ ದೇವಿಯರ ಆಳತಕ್ಕವ ಎಂದರ ಸೀತಾ ದೇವರಿಗೆ ಪತಿಯಾದವ. ಶ್ರೀರಾಮಾವತಾರ ಮಾಡಿದವ, ಭಕ್ತಜನರಿಂದ ವಂದನ ಮಾಡಿಸಿ ಕೊಳ್ಳಲ್ಪಟ್ಟವ. ಇಂಥಾ ಸರ್ವೋತ್ತಮನಾದ ಭಗದಂಶಭೂತನಾದ ಶ್ರೀ ರಾಮ ಚಂದ್ರದೇವರು ಶಬರಿ ಎನತಕ್ಕ ಸ್ತ್ರೀಯಿಂದ ಕೊಡಲ್ಪಟ್ಟ 'ಹಣ್ಣುಗಳನ್ನು ನಿನಗೆ ಸಮರ್ಪ ಮಾಡಿದ್ದೇನು' ಎಂತ ಅನ್ನಲು ಆ ಫಲಗಳನ್ನುತಾನು ಸ್ವೀಕಾರಮಾಡಿದ. ಈ ಶಬರಿ ಕಚ್ಚಿ ಎಂಜಲು ಮಾಡಿದ ತನ್ನ ಸ್ವಾಖ್ಯರಸಗಳನ್ನು ಸ್ವೀಕಾರ ಮಾಡಿದನೇ ಹೊರ್ತು ಅನ್ಯವಾದ ರಸವನ್ನು ಸ್ವೀಕಾರ ಮಾಡಲಿಲ್ಲ. ಇನ್ನೂ ಕೇವಲ ಭಕ್ತಿಯಿಂವ ಕೊಟ್ಟ ಫಲವನ್ನು ಸ್ವೀಕಾರಮಾಡಿ ಅವಳಲ್ಲಿ ಪರಮಾನುಗ್ರಹ ಮಾಡಿದನೇ ಹೊರ್ತುಅನ್ಯಥಾಮಾಡಲಿಲ್ಲ. ಮುಖ್ಯ ಭಕ್ತಿ ಕಾರಣ. ಈ ಪ್ರಕಾರ ಭಕ್ತಿಯುಕ್ತರಾದ ಭಕ್ತರ ದೋಷಗಳ ಗಣನಾ ಮಾಡದೆ ಉದ್ಧಾರ ಮಾಡತಾನೆ ಎಂತ ತಾತ್ಪರ್ಯ ॥೩೩॥

## ೨. ಭಾವ ಪ್ರಕಾಶಿಕೆ.

ಈ ವ್ಯಾಖ್ಯಾನದಲ್ಲಿ ಈ ಪದ್ಯವನ್ನು ೩೨ನೇ ಪದ್ಯವೆಂದು ಪರಿಗಣಿಸ ಲಾಗಿದೆ)

ತನ್ನನ್ನು ಪೂಜಿಸುವ ಜನರಿಗೆ ಇಷ್ಟಾರ್ಥವನ್ನು ಕೊಡುವವನು ಭಕ್ತರಿಗೆ ಚಿಂತಾಮಣಿಯಂತೆ ಇಷ್ಟಾರ್ಥವನ್ನು ಪೂರೈಸುವವನು. ಮಾಣಿಕ್ಯಮಯ ವಾದ ಒಡವೆಗಳಿಂದ ಅಲಂಕೃತನಾದವನು. ಪರಮ ದಯಾಳು. ಪ್ರಾಕೃತ ವಾದ ಸತ್ವ ರಜ ಸ್ತಮೋಗುಣಗಳಿಂದ ದೂರನು. ಬ್ರಹ್ಮಾದಿ ದೇವತೆಗಳಿಂ ದಲೂ ತಿಳಿಯಲಶಕ್ಯವಾದ ಮಹಾಮಹಿಮೆಯುಳ್ಳವನು. ಭಕ್ತರಲ್ಲಿ ಏನು ದೋಷಗಳಿದ್ದರೂ ಗಣನೆಗೆ ತಾರದವನು. ಕುಂಭಿಣೀ ಎಂದು ಭೂಮಿಗೆ ಹೆಸರು. ಕುಂಭಿಣಿಯಿಂದ ಜನಿಸಿದವಳಿಗೆ ಕುಂಭಿಣಿಜೆ ಎಂದು ಹೆಸರು. ಆಕೆ ಯಾಣ್ಮ ಎಂದರೆ ಪಾಲಿಸುವವನು, ಪತಿ ಎಂದು ತಾತ್ಪರ್ಯ. ಭೂಮಿಯಿಂದ ಜನಿಸಿದವಳು ಸೀತಾದೇವಿ- ಆಕೆಯ ಪತಿಯು ಶ್ರೀರಾಮನೆಂದರ್ಥ. ರಾಮ ದೇವರು ಅರಣ್ಯದಲ್ಲಿರುವಾಗ ಶಬರಿಯೆಂಬ ತಾಪಸಿಯು ರಾಮದೇವರ ಬರು ವಿಕೆಯನ್ನು ತಿಳಿದು ಫಲಗಳನ್ನು ರುಚಿನೋಡಿ ಸ್ವಾದುವಾಗಿದ್ದರೆ ಇದು ರಾಮ ದೇವರಿಗೆಂದು ತೆಗೆದು ಇಡುತ್ತಿದ್ದಳು, ರಾಮದೇವರು ಆಕೆಯ ಆಶ್ರಮಕ್ಕೆ ಬರಲು ಸೀತಾಪತಿಯಾದ ಶ್ರೀ ರಾಮಾ, ಈ ಫಲಗಳನ್ನು ನಿನಗಾಗಿ ಇಟ್ಟಿರು ವೆನು. ಇವನ್ನು ನಿನಗರ್ಪಿಸುವೆನೆಂದು ಅರ್ಪಿಸಲು ಆ ಫಲಗಳನ್ನು ಪ್ರೀತಿ ಯಿಂದ ಸ್ವೀಕರಿಸಿದನು.

ಆದ್ದರಿಂದ ಭಕ್ತಜನರು ಭಕ್ತಿಯಿಂದ ಕೊಡುವ ಯಾವ ಪದಾರ್ಥವನ್ನಾ ದರೂ ಪರಮ ಪ್ರೀತಿಯಿಂದ ಸ್ವೀಕರಿಸುವನೆಂಬ ತಾತ್ಪರ್ಯ ||೩೩||

## ೩ ಭಾವ ದರ್ಪಣ

(ಈ ವ್ಯಾಖ್ಯಾನದಲ್ಲಿ ಈ ಪದ್ಯವನ್ನು ೩೨ನೇ ಪದ್ಯವೆಂದು ಪರಿಗಣಿಸ ಲಾಗಿದೆ)

ಭಕ್ತಿಯಿಂದ ಏನು ಕೊಟ್ಟಾಗ್ಯೂ ತೆಗೆದುಕೊಳ್ಳುತ್ತಾನೆಂದು ಶಬರೀ ದೃಷ್ಟಾಂತ ಹೇಳುತ್ತಾರೆ. ಪ್ರಣತಕಾಮದೇತಿ ಘೃಣಿ=ದಯಾವುಳ್ಳವ, ಜಯಾಣ್ಮ=ಜಯಾದೇವಿಯನ್ನು ಆಳಿದವ ಸಂಕರ್ಷಣ ॥೩೩॥

## ಳ ಶ್ರೀ ವ್ಯಾಸರಾಜ ಸಿದ್ಧಾಂತ ಕೌಮುದೀ

"ಪ್ರಣತ" ಇತಿ ॥೩೩॥

## ಕನ್ನಡಾರ್ಥ

ಪರಮಾತ್ಮನು ಭಕ್ತಿಯಿಂದ ಸಮರ್ಪಿಸಿದುದನ್ನು ಸ್ವೀಕರಿಸಿ ಪದವನ್ನು ಕೊಡುವನು, ಈ ವಿಷಯದಲ್ಲಿ ಶಬರಿಯ ದೃಷ್ಟಾಂತವನ್ನು ಸೂಚಿಸುತ್ತಾರೆ, ಈ ಪದ್ಯದಿಂದ ॥೩೩॥

## ಶ್ರೀ ಗುರು ಹೃದಯ ಪ್ರಕಾಶಿಕೆ

ದೇವರು ಜ್ಞಾನಿ ಅಜ್ಞಾನಿ ಮೊದಲಾದ ಸರ್ವರಿಗೂ ಅಪೇಕ್ಷಿತನೆಂದು ತಿಳಿಸುತ್ತಾರೆ ಬಲ್ಲೆನೆಂದು. ಜಗತ್ತಿನಲ್ಲಿ ಅಪ್ರತಿಮಲ್ಲನೆಂಬ ಅಸದೃಶ ಭಟನಾದ ಶ್ರೀ ಭೂನಲ್ಲನೆಂದರೆ ಶ್ರೀ ಭೂದೇವಿಯರಿಗೆ ಅತಿ ಪ್ರಿಯನಾದ ಶ್ರೀ ಹರಿಯು ಈತನನ್ನು ಕೊನೆಗೊಂಡು ಬಲ್ಲೆನೆಂಬ ಜ್ಞಾನಿಗಳೂ ಇಲ್ಲ, ವಲ್ಲೆನೆಂಬ ಅಯೋಗ್ಯರೂ ಇಲ್ಲವೆಂದರೆ ದ್ವೇಷಕ್ಕೆ ವಿಷಯನಾದ್ದರಿಂದ ಅವರು ಸಹಾ ದೇವರು ಇದ್ದಾನೆಂದು ಅಂಗೀಕರಿಸಲೇಬೇಕು ಎಂದರ್ಥ. ಸರ್ವತ್ರ ಈ ಸ್ವಾಮಿಯು ಇರುತ್ತಾನೆ, ಇವನಿಲ್ಲದಿರುವ ಸ್ಥಳವೇ ಇಲ್ಲ. ಅಜ್ಞಾತ ಜನರಿಲ್ಲ. ಎಂದರೆ ಇವನಿಗೆ ತಿಳಿಯದೆ ಇದ್ದಂಥಾ ಜನ ಮೊದಲಾದ ವಸ್ತುವೂ ಇಲ್ಲ. ಬೆಲ್ಲದಚ್ಚಿನ ಬೊಂಬೆಯಂದದಿ ಅಂದರೆ ಬೆಲ್ಲದಚ್ಚಿನ ಪ್ರತಿಮೆಯು ಮನುಷ್ಯಾದ್ಯಾಕಾರವಾಗಿ ಇದ್ದಾಗ್ಯೂ. ಮಾಧುರ್ಯ ಸ್ವರೂಪ ಇರುವಂತೆ, ಕರಚರಣಾದಿ ಸಮಸ್ತಾವಯವಗಳುಳ್ಳವನಾದರೂ ಜಾನಾನಂದಾತ್ಮಕ ಸ್ವರೂಪವೇ ಆಗಿ

ವಿಕಾರತ್ವವಿಲ್ಲದೆ ಸರ್ವತ್ರ ಇರುವನು, ಇವನಿಗೆ ಸಮರೇ ಇಲ್ಲ, ಅಧಿಕರಿಲ್ಲ ವೆಂದು ಹೇಳತಕ್ಕದ್ದೇನಿದೆ ಎಂದರ್ಥ.

**ಸರ್ವತಃ ಪಾಣಿ ಪಾದಂ ತತ್ಸರ್ವತೋಕ್ಷಿ ಶಿರೋ ಮುಖಂ ।**
**ಸರ್ವತಃ ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಟತಿ ॥**
**ನ ತ್ವತ್ಸಮೋಸ್ತ್ಯಧಿಕಃ ಕುತೋನ್ಯಃ**

ಎಂಬ ಗೀತಾರ್ಥ ವಿವರಿಸಿತು,

## ಸರ್ವವ್ಯಾಖ್ಯಾನಸಾರ ಸಂಗ್ರಹ

"ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ" ಎಂದು ದೀನ ಭಾವದಿಂದ ತನ್ನ ಮೊರೆಹೊಕ್ಕ ಭಕ್ತಜನರಿಗೆ ಸಕಲ ಅಭೀಷ್ಟ ಗಳನ್ನು ನೀಡಿ, ಅವರನ್ನು ಅನುಗ್ರಹಿಸುವುದರಿಂದ ಶ್ರೀ ಪರಮಾತ್ಮನಿಗೆ **ಪ್ರಣತಕಾಮದ** ನೆಂಬ ಹೆಸರು.

ಚಿಂತಾಮಣಿ ಎಂಬ ಅನರ್ಘ್ಯ ರತ್ನವು ತನ್ನನ್ನು ಸೇವಿಸುವವರಿಗೆ ಸಕ ಲಾಭೀಷ್ಟಗಳನ್ನು ನೀಡುವುದು, ಅಂತೆಯೇ ಭಕ್ತರ ಪಾಲಿಗೆ ಭಕ್ತವತ್ಸಲ ನಾದ ಶ್ರೀ ಹರಿಯು ಚಿಂತಾಮಣಿ ಸದೃಶನು, ಇದರಿಂದ **ಭಕ್ತ ಚಿಂತಾ ಮಣಿಯು.**

ನವರತ್ನಾದಿ ಮಣಿಮಾಲೆಗಳಿಂದ ಅಲಂಕೃತನಾದವನು. ಈತನ ಅಭ ರಣಗಳೆಲ್ಲವೂ ಅಪ್ರಾಕೃತ ಮತ್ತು ಜ್ಞಾನಾನಂದಮಯಗಳು, ಅವು ಸ್ವಾಖ್ಯ ರೂಪವಾದ ಆಭರಣ ವಿಶೇಷಗಳು.

**ಮಣಿಮಯಭೂಷಿತನಾದ** ಆ ಮಾಯಾ ರಮಣನು ನಿತ್ಯಾನಂದ ಉದ್ರಿಕ್ತವಸ್ತು. ಅಪ್ರಾಕೃತ ಗುಣಗಣಪೂರ್ಣನು.

ಪ್ರಾಕೃತ ಸಾತ್ವಿಕಾದಿ ಗುಣಗಳಿಂದ ದೂರನು. ಇದರಿಂದ **ಗುಣತ್ರಯ ದೂರನು.** ಅಪಾರ ಮಹಿಮಾ ಸಂಪನ್ನನು. ಅವನ ಲೀಲಾ ರೂಪವಾದ

ಮಹಾಮಹಿಮೆಗಳು ಅಪಾರ ಹಾಗೂ ಅಪರಿಚ್ಛಿನ್ನ. ರಮಾ ಬ್ರಹ್ಮಾದಿದೇವತೆಗಳಿಂದಲೂ ಸಾಕಲ್ಯೇನ ತಿಳಿಯಲಸಾಧ್ಯವಾದ ಮಹಾಮಹಿಮೆಯುಳ್ಳವನಾದ್ದರಿಂದ **ಗಹನ ಸನ್ಮಹಿಮನು.**

ತನ್ನ ಅಂತರಂಗ ಭಕ್ತರು ಪ್ರಮಾದವಶಾತ್ ಮಾಡುವ ದೋಷಪೂರಿತವಾದ ಪಾಪಗಳನ್ನು ಎಂದೆಂದಿಗೂ ಗಣನೆಗೆ ತಾರನು. ಅವರನ್ನು ಕ್ಷಮಿಸುವ ದಯಾಶೀಲನು. ಭಕ್ತರ ದೋಷ ಪರಿಹಾರ ಮಾಡಿ ಅವರ ಪಾಪಕ್ಷಾಳನೆಗೈದು ಶುದ್ಧಾತ್ಮರನ್ನಾಗಿ ಮಾಡುವ ಭಕ್ತವತ್ಸಲನು, **ಕುಂಭಿಣಿ**= ಎಂದರೆ ಭೂಮಿ. ಭೂಪುತ್ರಿಯಾದ ಸೀತಾದೇವಿಯು **ಕುಂಭಿಣಿಜೆಯು ಆಣ್ಮ**= ಎಂದರೆ ಪತಿ ಎಂದರ್ಥ, ಅಂದರೆ ಸೀತಾರಮಣನಾದ ಶ್ರೀ ರಾಮಚಂದ್ರನು **ಕುಂಭಿಣಿಜೆಯೊಣ್ಮನು.**

ಮೊರೆ ಹೋಗಲಿಕ್ಕೆ ವಿಷಯನಾದ್ದರಿಂದ **ಶರಣ್ಯನು.**

ವನವಾಸದಲ್ಲಿದ್ದಾಗ ಸೀತಾನ್ವೇಷಣೆ ಮಾಡುತ್ತಾ ಶ್ರೀರಾಮಲಕ್ಷ್ಮಣರು ಪಂಪಾ ಸರೋವರದ ತೀರಕ್ಕೆ ಬರುತ್ತಾರೆ. ಅಲ್ಲಿ ಶಬರಿ ಎಂಬ ವೃದ್ಧೆ ತಾಪಸಿಯು ಶ್ರೀರಾಮನ ಭಕ್ತಳು. ಜಾತಿಯಲ್ಲಿ ಬೇಡರವಳಾಗಿದ್ದರೂ ಶ್ರೀಹರಿಯ ಅನುಗ್ರಹ ಪಾತ್ರಳು, ಶ್ರೀರಾಮನ ಬರುವಿಕೆಯನ್ನು ನಿರೀಕ್ಷಿಸುತ್ತಾ ವೃಕ್ಷಗಳಿಂದ ಬಿದ್ದ ಸ್ವಾದು ಹಣ್ಣುಗಳನ್ನು ಆಯ್ದು ರುಚಿನೋಡಿ ರಾಮನಿಗಾಗಿ ಮೀಸಲಿಡುವಳು, ರಾಮಾರ್ಪಣ ಬುದ್ಧಿಯಿಂದ ಶಬರಿಯು ಕೊಟ್ಟ ಫಲಗಳನ್ನು ಶ್ರೀರಾಮನು ಸ್ವೀಕರಿಸಿದನು.

ಅಲ್ಲಿ ತನ್ನ ಸ್ವಾಖ್ಯರಸಗಳನ್ನು ಮಾತ್ರ ಸ್ವೀಕರಿಸಿದನೆಂದು ತಿಳಿಯಬೇಕು. ಅನ್ಯ ರಸಗಳನ್ನಲ್ಲ. ಶಬರಿಯ ಭಕ್ತಿಗೆಮೆಚ್ಚಿ ಆ ಶರಣಾಗತ ವತ್ಸಲನು ಅವಳಿಗೆ ಸದ್ಗತಿಯನ್ನು ಕರುಣಿಸಿದ ॥೩.೩॥

## ಪದ್ಯ-೩೪

**ಮೂಲ :**

**ಶಬ್ದಗೋಚರ ಶಾರ್ವರೀಕರ ।**
**ನಬ್ದವಾಹನನನುಜ ಯದುವಂ ।**
**ಶಾಬ್ಧಿ ಚಂದ್ರಮ ನಿರುಪಮ ಸುನಿಸ್ಸೀಮ ಸಮಿತಸಮ ॥**
**ಲಬ್ಧನಾಗುವ ತನ್ನವಗೆ ಪ್ರಾ ।**
**ರಬ್ಧ ಕರ್ಮಗಳುಣಿಸಿ ತೀವ್ರದಿ ।**
**ಕ್ಷುಬ್ಧ ಪಾವಕನಂತೆ ಬಿಡದಿಪ್ಪನು ದಯಾಸಾಂದ್ರ ॥**

**ಅವತರಣಿಕೆ ;**

ವೇದಪ್ರತಿಪಾದ್ಯನಾದ ಸಜ್ಜನರ ಹೃತ್ತಾಪವನ್ನು ಪರಿಹರಿಸುವ ದಯಾ ಸಾಗರನು ತನ್ನ ಭಕ್ತರ ಸಂಚಿತಾಗಾಮಿಕರ್ಮಗಳನ್ನು ಕಳೆದು ಅವಶಿಷ್ಟವಾದ ಪ್ರಾರಬ್ಧವನ್ನು ಉಣಿಸಿ ಅಂತ್ಯದಲ್ಲಿ ಅವರಿಗೆ ನಿತ್ಯಾನಂದ ರೂಪವನ್ನೂ, ಮೋಕ್ಷವನ್ನೂ ಕರುಣಿಸುವನೆಂದು ತಿಳಿಸುತ್ತಾರೆ ॥೩೪॥

**ಪ್ರತಿಪದಾರ್ಥ :**

**ಶಬ್ದಗೋಚರ** = ವೇದಗಳಿಂದ ತಿಳಿಯತಕ್ಕವನು **ಶಾರ್ವರೀಕರನು** = ಚಂದ್ರನೋಪಾದಿಯಲ್ಲಿ ಸಂಸಾರ ದುಃಖದಿಂದ ತಪ್ತರಾದ ತನ್ನ ಭಕ್ತರ ಅಂತರಂಗದ ತಾಪವನ್ನು ಪರಿಹರಿಸಿ ಶಾಂತಿಯನ್ನು ಕೊಡುವವನು **ಅಬ್ದವಾಹನನನುಜ** = ಮೇಘ ವಾಹನನಾದ ಇಂದ್ರನ ಸಹೋದರನಾದ ಉಪೇಂದ್ರ ನಾಮಕನು **ಯದುವಂಶಾಬ್ಧಿ ಚಂದ್ರಮ** = ಯದುಕುಲಕ್ಕೆ ಚಂದ್ರನಂತಿರು ವವನು **ನಿರುಪಮ** = ಸದೃಶ ರಹಿತನು **ಸುನಿಸ್ಸೀಮ** = ಸರ್ವರಿಂದಲೂ ಅಜೇಯನು ಹಾಗೂ ಅವನ ಅನಂತಾಖ್ಯವಾದ ಎಲ್ಲೆಯನ್ನು ಅರಿದವರು ಯಾರೂ ಇಲ್ಲ (ತಿಳಿಯಲಶಕ್ಯನು) **ಸಮಿತಸಮ** = ಸಾಮವೇದದಿಂದಗೇ ಗೀಯಮಾನನಾದವನು ಅಥವಾ ಸರ್ವರೂಪಗಳಲ್ಲಿಯೂ ಸಮವಾದ ಸಂಪೂರ್ಣ ಗುಣಯುಕ್ತನು **ತನ್ನವಗೆ** = ತನ್ನ ಏಕಾಂತ ಭಕ್ತರಿಗೆ **ಲಬ್ಧನಾ**

ಗುವ = ಅಪರೋಕ್ಷ ಜ್ಞಾನ ಕರುಣಿಸಿ ಅವರ ವಶನಾಗುವನು **ತೀವ್ರದಿ** = ಜಾಗ್ರತೆಯಾಗಿ **ಪ್ರಾರಬ್ಧಕರ್ಮಗಳುಣಿಸಿ** = ಸಂಚಿತ ಆಗಾಮಿ ಕರ್ಮಗಳನ್ನು ಕಳೆದು ಅಪರೋಕ್ಷ ಜ್ಞಾನಿಗಳಿಗೆ ಅವಶಿಷ್ಟ ರೂಪವಾದ ಪ್ರಾರಬ್ಧ ಕರ್ಮವನ್ನು ಮಾತ್ರ ಉಣಿಸಿ (ಅವರ ಅನುಭೋಗಕ್ಕೆ ತಂದು) **ದಯಾಸಾಂದ್ರ** = ದಯಾಸಾಗರನಾದ ಬಿಂಬರೂಪೀ ಶ್ರೀ ಹರಿಯು **ಸ್ತಂಬ್ಧಪಾವಕನಂತೆ** = ಕಾಷ್ಠಸಂಬಂಧದಿಂದ ಪ್ರಜ್ವಲಿಸುವ ಅಗ್ನಿಯಂತೆ **ಬಿಡದಿಪ್ಪನು** = ತನ್ನ ಭಕ್ತರನ್ನು ಎಂದೆಂದಿಗೂ ಬಿಡುವುದಿಲ್ಲ. ಅಂದರೆ ನಿತ್ಯಾವಿಯೋಗಿಯಾಗಿ ಜೀವಾಂತರ್ಗತನಾಗಿದ್ದಾನೆ ॥೩೪॥

## ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ ವ್ಯಾಖ್ಯಾನಗಳು

ಇನ್ನೂ ಪರಮಾತ್ಮನ ಮಹಾತ್ಮ್ಯ ಹೇಳತಾರೆ.

ವೇದದಿಂದ ತಿಳಿಯಲ್ಪಡತಕ್ಕವ. ಚಂದ್ರನು ಎಂದರೆ ಚಂದ್ರನೋಪಾದಿಯಲ್ಲಿ ಸಂಸಾರದಲ್ಲಿ ಕೇವಲ ತಪ್ತರಾದ ಭಕ್ತರಿಗೆ ತಾಪ ಪರಿಹರಿಸಿ ಶಾಂತಿ ಕೊಡತಕ್ಕವನು, ಮೇಘ ವಾಹನನಾದ ಇಂದ್ರನ ಸಹೋದರನಾದ ಉಪೇಂದ್ರ ಎಂತ ನಾಮ ಪಡೆದವನು. ಯದುವಂಶವೆಂಬ ಸಮುದ್ರದಲ್ಲಿ ಜನಿಸಿ ಆ ಯದುವಂಶಕ್ಕೆ ಚಂದ್ರನೋಪಾದಿಯಲ್ಲಿ ಪ್ರಕಾಶನಾದವನು, ಉಪಮಾರಹಿತನು. ಸರ್ವರಿಂದಲೂ ಅಜೇಯನಾದವನು. ಮುಕ್ತರಿಂದ ಸಾಮವೇದದಿಂದ ಗಾನಮಾಡಿಸಿಕೊಂಡು ಅವರ ಕಡೆಯಿಂದ ವಂದಿತನಾದಂಥವನು. ಇನ್ನೂ ಸಮಿತಸಮ ಎಂದರೆ ಸರ್ವರೂಪಗಳಲ್ಲೂ ಸಮನಾಗಿ ಸಂಪೂರ್ಣಗುಣವುಳ್ಳವನಾದ್ದರಿಂದ ಸಮಿತ ಅನಿಸಿಕೊಂಡು ಸರ್ವತ್ರ ಸಮಾನನಾಗಿ ಇರುವನು. ಅಥವಾ ದೇಶಕಾಲಗಳಲ್ಲಿ ಸಮವ್ಯಾಪ್ತಿಯುಳ್ಳ ಮಾ ಎಂಬ ಲಕ್ಷ್ಮೀಸಮೇತ ಎಂತಲೂ ಅರ್ಥವೇ. ತನ್ನ ಭಕ್ತರಿಗೆ ಅಪರೋಕ್ಷ ಕೊಟ್ಟು ಸಂಚಿತಾಗಾಮಿಗಳ ನಾಶಮಾಡಿ, ಪ್ರಾರಬ್ಧ ಕರ್ಮಗಳ ಭೋಜನ ಮಾಡಿಸಿ, ಕಾಷ್ಠ ಸಂಬಂಧನಿಂದ ಪ್ರಜ್ವಲಿಸತಕ್ಕ ಅಗ್ನಿಯಂತೆ ಜೀವಾಂತರ್ಗತನಾದ ದಯಾಳುವಾದ ಪರ

ಮಾತ್ಮ ಪ್ರಜ್ವಲಿಸುತಾ ಪ್ರತ್ಯಕ್ಷನಾಗಿ ಜೀವನ್ನ ಬಿಟ್ಟು ವಿಯೋಗನಾಗದೆ ಜೀವನಲ್ಲೇ ಇರೋವನಾಗಿದ್ದಾನೆ. ಇಂಥಾ ಪರಮಾತ್ಮನ್ನ ಪ್ರತ್ಯಕ್ಷೀಕರಸಿಕೋಬೇಕಾದರೆ ಅತಿ ತೀವ್ರದಿಂದ ಅಹಂಮಮತಾದಿಗಳ ತ್ಯಜಿಸಿ, ಕೇವಲ ಭಕ್ತಿಯಿಂದ ಸಹಿತನಾಗಿ ತದೇಕ ನಿಷ್ಠನಾಗಿ ಇರತಕ್ಕವರಿಗೆ ಬಹುಬ್ಯಾಗ ಅಪರೋಕ್ಷದಿಂದ ಸ್ವಾಧೀನವಾಗತಾನೆ ಹೊರ್ತು ಅನ್ಯಮಾರ್ಗದಿಂದ ಲಬ್ಧನಾಗತಕ್ಕವನಲ್ಲ ಶ್ರೀಪರಮಾತ್ಮನ್ನ ಏಕಾಗ್ರ ಚಿತ್ತದಿಂದ ಭಜಿಸಿ ಮುಕ್ತನಾಗಬೇಕಂತ ತಾತ್ಪರ್ಯ ||೩೪||

## ೨ ಭಾವಪ್ರಕಾಶಿಕೆ

ಶ್ರೀ ಪರಮಾತ್ಮನು ವೇದದಿಂದ ತಿಳಿಯಲು ಯೋಗ್ಯನು. ಚಂದ್ರನು ಹೇಗೆ ತಾಪ ಪರಿಹಾರಕನೋ, ಆಹ್ಲಾದಕರನೋ ಹಾಗೆ ಪರಮಾತ್ಮನಲ್ಲೂ ಆ ಗುಣಗಳಿರುವವು, ಭಕ್ತರ ಸಂಸಾರದಿಂದಾಗುವ ಸಂತಾಪವನ್ನು ಪರಿಹರಿಸಿ ಅಪರೋಕ್ಷದಲ್ಲಿ ಪ್ರತ್ಯಕ್ಷನಾಗಿ ತನ್ನ ದರ್ಶನದಿಂದ ಆಹ್ಲಾದವನ್ನುಂಟುಮಾಡುವ. ಆದ್ದರಿಂದ (ಶಾರ್ವರೀಕರ) ಚಂದ್ರ ಎಂದೆರು. ಅಬ್ದವೆಂದರೆ ನೀರನ್ನು ಕೊಡುವುದರಿಂದ ಮೇಘಕ್ಕೆ ಹೆಸರು, ಮೇಘವಾಹನನೆಂದು ದೇವೇಂದ್ರನಿಗೆ ಹೆಸರೆಂದು "ತುರಾಷಾಣ್ಮೇಘವಾಹನಃ ಎಂದು ಅಮರವಿರುವದು. ಅದಿತಿಯಲ್ಲಿ ವಾಮನಾವತಾರ ಮಾಡಿದ್ದರಿಂದ ಇಂದ್ರದೇವನಿಗೆ ತಮ್ಮನಾದನು. ಆದ್ದರಿಂದ ಉಪೇಂದ್ರನೆಂದು ಪರಮಾತ್ಮನಿಗೆ ಹೆಸರು; ಇದು "ಉಪೇಂದ್ರ ಇಂದ್ರಾವರಜಃ" ಎಂದು ಅಮರಕೋಶದಲ್ಲಿ ಸ್ಪಷ್ಟವಾಗುವುದು. ಯದು ವಂಶವೆಂಬ ಸಮುದ್ರಕ್ಕೆ ಚಂದ್ರ. ಸಮುದ್ರದಲ್ಲಿ ಚಂದ್ರೋದಯವಾದ ಕೂಡಲೇ ವೃದ್ಧಿಯಾಗುವ ಗುಣವಿರುವುದು. ಆದ್ದರಿಂದ ಯದುವಂಶವೆಂಬ ಸಮುದ್ರಕ್ಕೆ ಚಂದ್ರನೆಂದರೆ, ಯದುವಂಶದಲ್ಲಿ ಕೃಷ್ಣಾವತಾರವನ್ನು ಮಾಡಿ ಆ ವಂಶವನ್ನು ವೃದ್ಧಿಗೊಳಿಸಿದವನೆಂದರ್ಥ. ಉಪಮಾನ ರಹಿತನು. ಇಂದ್ರಾದಿಗಳಿಗೆ ಉಪಮಾನ ಕೊಡಬೇಕಾದರೆ ಅವರಕಿಂತಲೂ ಉತ್ತಮರಾದ ಮತ್ತೊಬ್ಬರನ್ನು ಹೋಲಿಸುವುದುಂಟು. ಪರಮಾತ್ಮನಿಗೆ ಸಮನಾಗಿ ಯಾರನ್ನು ಹೋಲಿಸಬೇಕು? ಆದ್ದರಿಂದಲೇ ರಾಮಾಯಣದಲ್ಲಿ "ರಾಮ ರಾವಣಯೋ

ಯುದ್ಧಂ ರಾಮ ರಾವಣಯೋರಿವ" ರಾಮರಾವಣರ ಯುದ್ಧವುಯಾರನ್ನು ಹೋಲಿಸುವಂತಿದ್ದಿತೆಂದರೆ ರಾಮ ರಾವಣರಂತೆಯೇ ಇದ್ದಿತು ಎಂದು ಹೇಳಿರುವರು, ಆದ್ದರಿಂದ ನಿರುಪಮ ಎಂದರು. ಎಲ್ಲಿ ಇಲ್ಲದ ಗುಣಗಳುಳ್ಳವನು ಸಮತಿಸಮ, ಇವನಿಗೆ ಸಮರೆಂದು ಯಾರನ್ನಾದರೂ ಹೇಳಬೇಕಾದರೆ ಯಾವ ವಿಷಯದಲ್ಲೂ ಯಾರೂ ಇಲ್ಲ. ಬ್ರಹ್ಮ ರುದ್ರಾದಿಗಳನ್ನು ಸೃಷ್ಟಿಸುವ ಯೋಗ್ಯತೆಯುಳ್ಳ ರಮಾದೇವಿಯರು ಪರಮಾತ್ಮನ ಅಧೀನರೆಂದ ಮೇಲೆ ಇವನಿಗೆ ಸಮರೆಂದು ಯಾರನ್ನು ಹೇಳಬೇಕು? ಆದ್ದರಿಂದ ತನ್ನನ್ನು ತನಗೆ ಸಮನೆಂದು ಗಣಿಸಿಕೊಳ್ಳಲ್ಪಟ್ಟಿರುವನು, ತನ್ನ ಭಕ್ತರಿಗೆ ತಾನು ಪ್ರೀತನಾಗಿ ಆಗಾಮಿ ಸಂಚಿತ ಕರ್ಮಗಳನ್ನು ಭಸ್ಮಮಾಡುವನು. ಪ್ರಾರಬ್ಧವು ಮಾತ್ರ ಅನುಭವಿಸೇ ಆಗಬೇಕು. ಆದ್ದರಿಂದ ಶೀಘ್ರದಲ್ಲಿ ಆ ಪ್ರಾರಬ್ಧವನ್ನೂ ಅನುಭವಿಸುವಂತೆ ಮಾಡಿ ಅವರಿಗೆ ಅಪರೋಕ್ಷದಲ್ಲಿ ಕಾಣಿಸಿಕೊಳ್ಳುವನು. ಕಟ್ಟಿಗೆಗಳನ್ನು ಸುಡುತ್ತಾ ಪ್ರಜ್ವಲಿಸುತ್ತಿರುವ ಅಗ್ನಿಯು ಹೇಗೆ ಪ್ರಕಾಶವಾಗಿರುವುದೋ ಹಾಗೆ ಅವರವರ ಯೋಗ್ಯತಾನುಸಾರವಾಗಿ ಅವರಿಗೆ ಗೋಚರಿಸುತ್ತಾ ಕರುಣಾಪೂರ್ಣನಾದ ಸ್ವಾಮಿಯು ಆ ಭಕ್ತರನ್ನು ಬಿಡದಿರುವನು. ॥೩೪॥

### ೩ ಭಾವದರ್ಪಣ

ಶಬ್ದ ಇತಿ, ಶಬ್ದಾಗೋಚರ= ಶಬ್ದಕ್ಕೆ ಸಿಗದೇ ಇದ್ದವ. ಅಬ್ದವಾಹನ = ಇಂದ್ರ, ಈತನ ತಮ್ಮ = ಉಪೇಂದ್ರ "ಉಪೇಂದ್ರ ಇಂದ್ರಾವರಜ" ಇತ್ಯಮರಃ. ಕ್ಷುಬ್ಧ ಜ್ವಲತಿ ಎಂಬರ್ಥ, ಸಮಿತಿ ಸಮ=ಯುದ್ಧದಲ್ಲಿ ಸಮರಹಿತ ಎಂಬರ್ಥ ॥೩೪॥

### ೪ ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

"ಶಬ್ದ" ಇತಿ॥ ಯತಃ ಪೂರ್ವಾಣಿ ಕರ್ಮಾಣಿ ಭೋಕ್ತುಮಾರಬ್ಧಕಾಣಿಚ॥ ಪ್ರಾಪ್ತೇ ಶರೀರೇ ಕುರ್ವಂತಿ ನಿತ್ಯ ಕರ್ಮಾಣ್ಯನೇಕಶಃ॥ ಕ್ರಿಯಮಾ

ತಾನಿಸ್ಯುಃ ಅಶುಭಾನಿ ಶುಭಾನಿಚ॥ ತಾನ್ಯೇವ ಪರತಃ ಕಾಲೇ ಸಂಚಿತಾನಿ ಭವಂತಿ ಹಿ॥ ಸಂಚಿತಾನಿಚ ಕಾಲೇನ ಲಾಭಾಚ್ಚ ಸಹಕಾರಿಣಃ॥ ಫಲೋನ್ಮುಖಾ ನ್ಯುದ್ಭವಂತಿ ತಾನಿ ಪ್ರಾರಬ್ಧಕಾನಿ ತು॥ತೇಷಾಂ ಫಲಸ್ಯ ಭೋಗಾಯ ಧ್ರಿಯ ಮಾಣಃ ಶರೀರಕಮ್॥ಪುನಃ ಕರೋತಿ ಕರ್ಮಾಣಿ ಸ್ಯಾದೇವಂ ತು ಪುನಃಪುನಃ॥ ಕರ್ಮಣಾಂ ಹಿ ಪ್ರಭಾವೋಽಯಂ ಏವಮೇವಾದಿ ಕಾಲತಃ॥ ತಸ್ಮಾತ್ ಭೋಗಾ ದಿನಾಕ್ವಾಪಿ ಕ್ಷೇಪ್ತುಂ ಕರ್ಮ ನ ಶಕ್ಯತೇ॥ ತಸ್ಮಾತ್ ತಂ ಶರಣಂ ಯಾಯಾತ್ ಮುಮುಕ್ಷಾ ಯಸ್ಯ ಜಾಯತೇ ॥ಇತಿ॥ ಕರ್ಮ ಮೋಕ್ಷಾ ಉದಾಹೃತಾ ಭಗ ವತೀ ವಿಷ್ಣುರಹಸ್ಯೇ॥ ಅಲ್ಪ ಭೋಗೇನ ಕ್ಷುಬ್ಧಃ॥ಶಾಂತಾರ್ಚಿಃ ತದ್ ದಗ್ಧಾಧ ॥೩೪॥

## ಕನ್ನಡಾರ್ಥ

"ಪೂರ್ವದ ಪ್ರಾರಬ್ಧ ಕರ್ಮಗಳನ್ನು ಉಪಭೋಗಿಸಲು ಶರೀರವು ಇರುವುದು. ಆ ಶರೀರದಲ್ಲಿ ಅನೇಕ ತರಹದ ಕರ್ಮಗಳನ್ನು ನಿತ್ಯದಲ್ಲೂ ಮಾಡುತ್ತಾರೆ, ಅವರು ಮಾಡುವ ಈ ಕರ್ಮಗಳಲ್ಲಿ ಕೆಲವು ಶುಭಗಳೂ, ಕೆಲವು ಅಶುಭಗಳೂ ಆಗಿರುತ್ತವೆ. ಈ ಕರ್ಮಗಳೇ ಮುಂದಿನ ಶರೀರಕ್ಕೆ ಸಂಚಿತಗಳಾಗುವುವು. ಸಂಚಿತ ಕರ್ಮಗಳು ಕಾಲಾನುಸಾರವಾಗಿ ಸಹಕಾರಿ ಕಾರಣದ ಮೂಲಕವಾಗಿ ಫಲವನ್ನು ಕೊಡುವವುಗಳಾಗುತ್ತವೆ. ಹಾಗೂ ಅವು ಪ್ರಾರಬ್ಧಗಳೆನಿಸುವುವು, ಈ ಕರ್ಮಫಲಗಳನ್ನು ಉಪಭೋಗಿಸಲು ಶರೀರ ವನ್ನು ಹೊಂದಿ ಮತ್ತೆ ಕರ್ಮಗಳನ್ನು ಮಾಡುತ್ತಾನೆ. ಮತ್ತೆ ಅವುಗಳ ಫಲ ಗಳನ್ನು ತೀರಿಸಲು ಶರೀರಾಂತರಗಳಿಂದ ಕರ್ಮಗಳನ್ನು ಮಾಡುತ್ತಾನೆ, ಹೀಗೆ ಅನಾದಿಕಾಲದಿಂದ ಕರ್ಮಗಳು ಚಕ್ರದಂತೆ ಬಂದೇ ಬರುವವು, ಈ ಕರ್ಮಗ ಳನ್ನು ಕೇವಲ ಫಲೋಪಭೋಗಗಳಿಂದಲೇ ಕಳೆದುಕೊಳ್ಳಲು ಸಾಧ್ಯವಿಲ್ಲ. ಆದುದರಿಂದ ಮುಮುಕ್ಷುಗಳು ಆ ಕರ್ಮ ವಿಮೋಚಕನಾದ ಶ್ರೀ ನಾರಾಯಣ ನನ್ನು ಮರೆಹೋಗಬೇಕು" ಎಂದು ವಿಷ್ಣು ರಹಸ್ಯದಲ್ಲಿ ಭಗವಂತನು ಕರ್ಮ, ಅವುಗಳ ಮೋಚನ ಇವುಗಳನ್ನು ಉದಾಹರಿಸಿ ನಿರೂಪಿಸುತ್ತಾನೆ.

ದೃಷ್ಟಾಂತದಲ್ಲಿ ಅಗ್ನಿಯು ಅಲ್ಪತೃಣಾದಿಗಳ ಭೋಗದಿಂದ ಕ್ಷುಭಿತನಾಗುವನು. ಅದೆಲ್ಲವನ್ನೂ ದಹಿಸುವುದರಿಂದ ಶಾಂತನಾಗುವನು ಎಂದು ತಿಳಿಯಬೇಕು ॥೩೪॥

## ಶ್ರೀ ಗುರು ಹೃದಯ ಪ್ರಕಾಶಿಕೆ

ದೇವರ ರೂಪಗಳು ಜ್ಞಾನಾನಂದಾತ್ಮಕ ನಿರ್ವಿಕಾರವೆಂಬುದು ಬ್ರಹ್ಮಾದಿ ವಸುದೇವಾದಿ ಜ್ಞಾನಿ ಪ್ರತ್ಯಕ್ಷವೆಂದು ಸೂಚಿಸುತ್ತಾ ತನ್ನ ಮಹಿಮೆಯನ್ನು ವರ್ಣಿಸುತ್ತಾರೆ ಶಬ್ದಗೋಚರ ಎಂದು ಎರಡು ಪದ್ಯದಿಂದ. ಶಬ್ದಗೋಚರ ಎಂದರೆ ಸರ್ವವೇದ ಮುಖ್ಯಪ್ರತಿಪಾದ್ಯನು, **ಸರ್ವವೇದಾ ಯತ್ಪದ ಮಾಮನಂತಿ** ಎಂಬಂತೆ ಶಾರ್ವರೀಕರ ಚಂದ್ರಗೂ. ಅಬ್ಧಿವಾಹನವೆಂಬ ಇಂದ್ರಗೂ ಧನ್ವಂತರಿ, ಉಪೇಂದ್ರ ರೂಪದಿಂದ ಅನುಜನಾಗಿ ಅವತರಿಸಿದನು. ಯದುವಂಶವೆಂಬ ಸಮುದ್ರಕ್ಕೆ ಚಂದ್ರನಂತೆ ವೃದ್ಧಿ ಮಾಡಿದವನು, ನಿರುಪಮಾ ಎಂದರೆ ಸಮಾನರಹಿತನು ಸುನಿಸ್ಸೀಮ ಎಂದರೆ ಅಪಾರ ಸ್ವರೂಪನು ಸಮಿತಸಮ ಎಂದರೆ ಸರ್ವರೂಪಗಳಲ್ಲೂ ಸಮನಾಗಿ ಸಂಪೂರ್ಣ ಗುಣವುಳ್ಳವನಾದ್ದರಿಂದ ಸಮಿತ ಎನಿಸಿಕೊಂಡು ಸರ್ವತ್ರ ಸಮನಾಗಿರುವನು, ಅಥವಾ ಸಮಿತ ಎಂದರೆ ದೇಶ ಕಾಲಗಳಲ್ಲಿ ಸಮವ್ಯಾಪ್ತಿಯುಳ್ಳ ಮಾ ಎಂಬ ರಮಾ ಸಮೇತನೆಂದರ್ಥ, ತನ್ನ ಭಕ್ತಗೆ ಪ್ರಾರಬ್ಧ ಭೋಗ ಕೊಟ್ಟನಂತರ ಕ್ಷುಬ್ಧ ಪಾವಕನಂತೆ ಅಂದರೆ ಕ್ಷುಬ್ ಸಂಚಲನೇ ಎಂಬ ಧಾತು ರೀತ್ಯಾ ಗಾಳಿಬೀಸಿ ಅಲ್ಲಾಡಿಸಿದ ಬೆಂಕಿ ಬಿಡದೆ ಅಂಟಿಕೊಳ್ಳುವಂತೆ ಬಿಡದೆ ರಕ್ಷಿಸುವನು ಆದ್ದರಿಂದ ದಯಾಪೂರ್ಣನು॥೩೪॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಶ್ರೀ ಹರಿಯ ಅಪಾರ ಗುಣಗಳನ್ನು ಜಗತ್ತಿಗೆ ಪರಿಚಯಿಸುವ ಶಬ್ದರಾಶಿಗಳೇ ಅನಂತ ಸಂಖ್ಯಾಕವಾದ ವೇದಗಳು. ಅಂತಹ ಅಪೌರುಷೇಯ ವೇದಗಳಿಂದ ತಿಳಿಯತಕ್ಕವನು ಶ್ರೀ ಪರಮಾತ್ಮ. ಅಂದರೆ ವೇದ ಪ್ರತಿಪಾ

ದ್ಯನು. ವೇದಗಮ್ಯನಾದ ಆ ವೇದ ಪುರುಷನಿಗೆ **ಶಬ್ದಗೋಚರ** ನೆಂದಿದ್ದಾರೆ ಜ್ಞಾನಿ ಪ್ರತ್ಯಕ್ಷನೆಂದರ್ಥ.

ಶಾರ್ವರೀ ಎಂದರೆ ರಾತ್ರಿ. ಕತ್ತಲೆಯನ್ನು ಪರಿಹರಿಸಿ ರಾತ್ರಿಯಲ್ಲಿ ತಂಪಾದ ಕಿರಣಗಳಿಂದ ಬೆಳದಿಂಗಳನ್ನು ಕೊಡುವ ಚಂದ್ರನಿಗೆ 'ಶಾರ್ವರೀಕರ' ನೆಂದು ಹೆಸರು. ಚಂದ್ರನ ಕಿರಣಗಳು ಅಮೃತಮಯವು, ಆದರಿಂದ ತಾಪ ಪರಿಹಾರವು ಮತ್ತು ಆಹ್ಲಾದಕರವು. ಅಂತೆಯೇ ಸಂಸಾರ ದುಃಖಗಳಿಂದ ತಪ್ತರಾದ ಭಕ್ತರ ಪಾಲಿಗೆ ತಾಪ ಪರಿಹಾರಕನಾಗಿ ಅವರ ದುಃಖಗಳನ್ನು ಕಳೆದು ಮನಸ್ಸಿನ ಶಾಂತಿ ಮತ್ತು ಆಹ್ಲಾದವನ್ನು ಕೊಡುವುದರಿಂದ **ಶಾರ್ವರೀಕರ** ನೆಂದು ಕರೆದಿದ್ದಾರೆ, ಚಂದ್ರನ ಸಾದೃಶ್ಯ.

ಅಬ್ದ- ಎಂದರೆ ನೀರನ್ನು ಕೊಡುವ ಮೇಘಗಳೆಂದರ್ಥ (ಅಪ್-ನೀರು ದ-ಕೊಡುವುದು) ಮೇಘ ವಾಹನನಾದ ಇಂದ್ರನಿಗೆ ಅಬ್ದ ವಾಹನನೆಂದು ಹೆಸರು. ಬಲಿಯ ಅಶ್ವಮೇಧ ಭಂಗಕ್ಕಾಗಿ ಅದಿತಿಯ ಮಗನಾಗಿ ಅವತರಿಸಿದ. ವಾಮನರೂಪೀ ಶ್ರೀ ಹರಿಯು ಉಪೇಂದ್ರ ನಾಮಕನು. ಇದರಿಂದ ಇಂದ್ರನ ತಮ್ಮನು. ಇದಕ್ಕಾಗಿ **ಅಬ್ದವಾಹನನನುಜ** ಎಂದಿದ್ದಾರೆ.

ಯದುವಂಶದಲ್ಲಿ ಶ್ರೀ ಹರಿಯು ಕೃಷ್ಣಾವತಾರದಿಂದ ಪ್ರಕಟನಾದನು. ಚಂದ್ರೋದಯದಿಂದ ಸಮುದ್ರವು ಉಕ್ಕುವುದು. ಅಂತೆಯೇ ಶ್ರೀ ಕೃಷ್ಣನ ಜನನದಿಂದ ಯದುಕುಲವೆಂಬ ಸಾಗರವು ಸಂತೋಷದಿಂದ ಉಕ್ಕಿತು,ಇದರಿಂದ ಶ್ರೀ ಕೃಷ್ಣನು **ಯದುವಂಶಾಬ್ಧಿ ಚಂದ್ರಮನು.**

ಶ್ರೀ ಹರಿಗೆ ಸಮರಾಗಲೀ ಸದೃಶ ಗುಣವುಳ್ಳವರಾಗಲೀ ಇತರರ್‍ಯಾರೂ ಅನಾದ್ಯಂತ ಕಾಲದಿಂದ ಇಲ್ಲವೇ ಇಲ್ಲ. ಶ್ರೀಹರಿಯು ಸಮಾಭ್ಯಧಿಕಶೂನ್ಯನು ಉಪಮಾನ ರಹಿತನಾದ್ದರಿಂದ **ನಿರುಪಮನು.**

ಶ್ರೀ ಪರಮಾತ್ಮನು ಸೀಮಾತೀತನು. ಅವನ ರೂಪ, ಗುಣ, ಅವತಾರ ಕ್ರಿಯಾದಿಗಳಿಗೆ ಮಿತಿ ಇಲ್ಲ. ಸರ್ವ ವಿಧಗಳಲ್ಲಿಯೂ ಪರಿಪೂರ್ಣನು. ಅಜೇಯನು, ಇದರಿಂದ **ಸುನಿಸ್ಸೀಮ** ಎಂದಿದ್ದಾರೆ(ಸೀಮಾ-ಎಲ್ಲೆ-ಮಿತಿ ನಿಸ್ಸೀಮ- ಮಿತಿರಹಿತನು)

ತನ್ನ ಸರ್ವ ಅವತಾರ, ರೂಪಗಳಲ್ಲಿ ಸಮನಾದ ಸಂಪೂರ್ಣ ಗುಣ ಯುಕ್ತನಾದವನು, ಸಾಮವೇದದಿಂದ ಗೇಗೀಯಮಾನನು, ದೇಶ ಕಾಲಾದಿ ಗಳಲ್ಲಿ ಸಮವ್ಯಾಪ್ತರಾದ ಶ್ರೀ ಲಕ್ಷ್ಮೀದೇವಿಯರಿಂದ ಯಾವಾಗಲೂ ಸಹಿತ ನಾಗಿದ್ದಾನೆ ಇದರಿಂದ **ಸಮಿತಸಮನು.**

ತನ್ನ ಏಕಾಂತ ಭಕ್ತರಿಗೆ ಲಭ್ಯನು. ಭಕ್ತ್ಯೈಕಲಬ್ಧನು. ಅವರಿಗೆ ಅಪ ರೋಕ್ಷ ರೂಪವಾದ ತನ್ನ ದರ್ಶನ ಭಾಗ್ಯವನ್ನಿತ್ತು ಅವರ ಸಂಚಿತಾಗಾಮಿ ಕರ್ಮಗಳನ್ನು ಕಳೆಯುವನು, ಅಪರೋಕ್ಷಾನಂತರ ಅವಶಿಷ್ಟ ರೂಪವಾದ ಪ್ರಾರಬ್ಧ ಕರ್ಮವನ್ನು ಜೀವರಿಗೆ ಉಣಿಸಿ ಕ್ರಮಕ್ರಮವಾಗಿ ಕರ್ಮಕ್ಷಯ ಗೈದು ಲಿಂಗಭಂಗ ದ್ವಾರಾಸ್ವರೂಪಗತ ಆನಂದಾವಿರ್ಭಾವ ರೂಪವಾದ ನಿತ್ಯಾನಂದ ಮುಕ್ತಿಯನ್ನು ಕರುಣಿಸುವನು. ಪಾವಕನೆಂದರೆ-ಅಗ್ನಿ, ಕಾಷ್ಠ ಸಂಬಂಧದಿಂದ ಅಗ್ನಿಯು ಪ್ರಜ್ವಲಿಸಿ ಉರಿಯುವುದು, ಇದರಿಂದ **ಪ್ರಕ್ಷುಬ್ಧ ಪಾವಕ**ನೆಂಬ ಶಬ್ದ ಪ್ರಯೋಗ ಮಾಡಿರುವರು.

ದಯಾಮಯನಾದ ಆ ದಾಮೋದರನು ಕ್ಷುಬ್ಧಪಾವಕನಂತೆ ಶೀಘ್ರದಲ್ಲಿ ಪಾಪರಾಶಿಗಳೆಂಬ ಕಾಷ್ಠವನ್ನು ದಹಿಸಿ ನಿರ್ಮಲರನ್ನಾಗಿ ಮಾಡಿ ಅಂತ್ಯದಲ್ಲಿ ತನ್ನ ಪ್ರಸಾದ ರೂಪವಾದ ದರ್ಶನಭಾಗ್ಯವನ್ನು ಕರುಣಿಸುವನು.

**ವಿಶೇಷಾರ್ಥ :**

(೧) **"ತುರಾಗಾಷ್ಟಾಣ್ಮೇಘವಾಹನಃ"**ಎಂಬ **ಅಮರರೀತ್ಯಾ** ಇಂದ್ರ ನಿಗೆಮೇಘವಾಹನನೆಂದು ಹೆಸರು, ಪರ್ಜನ್ಯ ದೇವತೆಗಳು ಮಳೆಗೆ ಅಭಿಮಾನಿ ಗಳು ಅವರು ಇಂದ್ರನಿಂದ ನಿಯಮ್ಯರು, ಇಂದ್ರನ ಆದೇಶದಂತೆ ಪರ್ಜನ್ಯ ದೇವತೆಗಳು ಮೇಘಗಳ ದ್ವಾರಾ ಮಳೆಯನ್ನು ಸುರಿಸುವರು. ಇದರಿಂದ ಇಂದ್ರನು ಮೇಘ ವಾಹನನು,

(೨) **"ಉಪೇಂದ್ರ ಇಂದ್ರಾವರಜ"** ಎಂಬ **ಅಮರವಚನದಂತೆ** ಇಂದ್ರನ ಅವರಜ ಎಂದರೆ ಇಂದ್ರನ ತಮ್ಮನಾಗಿ ಶ್ರೀ ಹರಿಯು ವಾಮನ ರೂಪದಿಂದ ಉಪೇಂದ್ರ ನಾಮಕನಾಗಿ ಅದಿತಿ ಕಶ್ಯಪರಲ್ಲಿ ಉದಯಿಸಿದನು,

ಬಲಿಯನ್ನು ದಾನ ಬೇಡಿ ಅವನಿಂದ ಗೆಲ್ಲಲ್ಪಟ್ಟ ಸ್ವರ್ಗಾಧಿಪತ್ಯವನ್ನು ಪುನಃ ಇಂದ್ರನಿಗೆ ಕೊಡಿಸಿದನು. ಇದರಿಂದ ಅಬ್ದವಾಹನನನುಜ ನೆಂದರೆ ಇಂದ್ರನ ತಮ್ಮನಾದ ಉಪೇಂದ್ರನೆಂದರ್ಥ.

(೩) ಜೀವನ ಸ್ವರೂಪದೇಹಕ್ಕೆ ಅನಾದಿಯಿಂದ ಆವರ್ಕವಾಗಿರುವ ಪ್ರಾಕೃತ ಗುಣತ್ರಯ ಯುಕ್ತವಾದ ಲಿಂಗ ಶರೀರವೇ ಕರ್ಮ ಬೀಜಗಳ ಆಗರವು. ಅನಾದಿ ಕರ್ಮದ ಬೀಜಗಳು ಅಲ್ಲಿವೆ ಪ್ರಾಕೃತ ಗುಣ ಜನ್ಯವಾದ ಕರ್ಮಗಳು ಅನಾದಿರೂಪದಿಂದ ಲಿಂಗ ಶರೀರಗತವಾಗಿವೆ. ಇದು ಜೀವರಿಗೆ ಸಂಬಂಧಿಸಿದ ಅನಾದಿ ಕರ್ಮವು. ಇದು ಭೋಗದಿಂದಲೇ ಕ್ಷಯವಾಗಬೇಕು. ಅಪ್ರಾಕೃತವಾದ ಸ್ವರೂಪ ಶರೀರಕ್ಕೂ ಪ್ರಾಕೃತವಾದ ಲಿಂಗ ಶರೀರಕ್ಕೂ ಶ್ರೀ ಹರಿಯು ತನ್ನ ಇಚ್ಛೆಯಿಂದ ಸಂಪರ್ಕವನ್ನು ಉಂಟುಮಾಡುವನು. ಆ ಜೀವ ನಿಗೆ ನಾನು ನನ್ನದು ಎಂಬ ಅಹಂಮಮತಾದಿಗಳು ಅಂಕುರವಾಗಿ ಅನಾದಿ ಕರ್ಮವು ಪ್ರಾರಬ್ಧರೂಪದಲ್ಲಿ ಅಭಿವ್ಯಕ್ತವಾಗುವುದು, ಅದರಿಂದ ಜನ್ಮಾಂತರ ಗಳ ಪ್ರಾಪ್ತಿ. ಪ್ರತಿ ಜನ್ಮದಲ್ಲಿಯೂ ಆಯಾಯಾ ಜೀವರ ಯೋಗ್ಯತೆಗೆ ಅನ್ವ ಗುಣವಾಗಿ ಕರ್ಮಗಳನ್ನು ಕರ್ಮಪತಿಯಾದ ಕಂಜದಳಾಯತಾಕ್ಷನು ಮಾಡಿ ಮಾಡಿಸುತ್ತಾ, ಕರ್ಮ ಜನ್ಯಫಲವನ್ನು ಜೀವರಿಗೆ ಉಣಿಸುವನು. ಇದರಿಂದ ಸಂಚಿತ ಆಗಾಮಿ ಕರ್ಮಗಳ ಪ್ರಾಬಲ್ಯ. ಜೀವನ ಅನುಭೋಗಕ್ಕೆ ವಿಷಯ ವಾದ ಕರ್ಮಗಳು ಭೋಗದ್ವಾರಾ ನಿವೃತ್ತಿಯಾಗುವುವು. ಭೋಗಿಸಲ್ಪಡದ ಅವಶಿಷ್ಟ ಕರ್ಮವು ಸಂಚಿತವೆನಿಸುವುದು. ಅದೇ ಮುಂದಿನ ಜನ್ಮಕ್ಕೆ ಹೇತುವು ಅದೇ ಆಗಾಮಿಯಾಗಿ ಹಿಂದಿನ ಜನ್ಮಗಳ ಅನುಭವಿಸದೇ ಉಳಿದಿರುವ ಸಂಚಿತ ಕರ್ಮಗಳ ಅನುಭೋಗಕ್ಕೆ ಕಾರಣವಾಗುವುದು. ಕರುಣಾಮಯನಾದ ಕಮಲಾ ರಮಣನು ತನ್ನನ್ನು ಎಡಬಿಡದೆ ಸೇವಿಸುತ್ತಿರುವ ಭಕ್ತರಿಗೆ ತನ್ನದರ್ಶನಭಾಗ್ಯ ರೂಪವಾದ ಅಪರೋಕ್ಷವನ್ನಿತ್ತು ಬಿಂಬ ದರ್ಶನ ಮಾಡಿಸುವನು, ಆಗ ಅಪ ರೋಕ್ಷದಿಂದ ಸಂಚಿತ ಕರ್ಮಗಳೆಲ್ಲವೂ ನಾಶಹೊಂದುವುವು, ಆಗಾಮಿಯ ಲೇಪವಿಲ್ಲ. ಹೀಗೆ ಸಂಚಿತ ಆಗಾಮಿ ಕರ್ಮಗಳು ಕಳೆದರೂ ಅಪರೋಕ್ಷ

ಜ್ಞಾನಿಗೆ ಅವುಗಳಿಗೆ ಮೂಲಭೂತವಾದ ಪ್ರಾರಬ್ಧ ಕರ್ಮಾನುಭೋಗವಿದ್ದೇ ಇರುವುದು. ಅದನ್ನೂ ಸಹ ಶೀಘ್ರವಾಗಿ (ಶೀವ್ರದಿ) ಪರಿಹರಿಸಿ ಕರ್ಮ ವಿಮೋಚನಾದ್ವಾರಾ ಪ್ರಾರಬ್ಧ ಕರ್ಮ ನಾಶವಾಗುವುದು.॥೩೪॥

## ಪದ್ಯ-೩೫

**ಮೂಲ :**

**ಶ್ರೀ ವಿರಿಂಚಾದ್ಯಮರ ವಂದಿತ ।**
**ಈ ವಸುಂಧರೆಯೊಳಗೆ ದೇವಕಿ ।**
**ದೇವಿ ಜಠರದೊಳವತರಿಸಿದನು ಅಜನು ಜನದಂತೆ ॥**
**ರೇವತಿರಮಣಾನುಜನು ಸ್ವ ಪ ।**
**ದಾವಲಂಬಿಗಳನು ಸಲಹಿ ದೈ ।**
**ತ್ಯಾವಳಿಯ ಸಂಹರಿಸಿದ ಜಗನ್ನಾಥ ವಿಠ್ಠಲನು ॥೩೫॥**

**ಅವತರಣಿಕೆ :**

ರಮಾಬ್ರಹ್ಮಾದಿ ವಂದಿತ ಪಾದನಾದ ರಮಾರಮಣನು ಜನರೋಪಾದಿಯಲ್ಲಿ ದೇವಕೀ ಜಠರದಲ್ಲಿ ಶ್ರೀ ಕೃಷ್ಣನಾಮದಿಂದ ಅವತರಿಸಿ, ಧರ್ಮ ಸಂಸ್ಥಾಪನ ಮಾಡಿ ದುರುಳರಾದ ದೈತ್ಯರನ್ನು ಶಿಕ್ಷಿಸಿ ಸಜ್ಜನರನ್ನು ಉದ್ಧರಿಸಿದನೆಂದು ತಿಳಿಸುತ್ತಾ ಪ್ರಸಕ್ತ ಸಂಧಿಯನ್ನು ಈ ೩೫ನೆಯ ಅಂತ್ಯಪದ್ಯದಿಂದ ಮುಕ್ತಾಯಗೊಳಿಸುತ್ತಾರೆ ॥೩೫॥

**ಪ್ರತಿಪದಾರ್ಥ :**

**ಶ್ರೀ** = ಶ್ರೀನಾಮಕಳಾದ ಲಕ್ಷ್ಮೀದೇವಿಯರಿಂದ **ವಿರಿಂಚಿ** = ಶ್ರೀಹರಿಯ ಜ್ಯೇಷ್ಠಪುತ್ರರಾದ ಚತುರ್ಮುಖ ಬ್ರಹ್ಮದೇವರಿಂದ **ಆದಿ ಅಮರ**

**ವಂದಿತ**=ರಮಾ ಬ್ರಹ್ಮ ಮುಖ್ಯರಾದ ಸಕಲ ದೇವತಾಗಣದಿಂದ ನಮಸ್ಕೃತನಾದ **ಅಜನು**=ಜನನ ಮರಣರಹಿತನಾದ ಶ್ರೀ ಪರಮಾತ್ಮನು **ಈ ವಸುಂಧರೆಯೊಳಗೆ**=ಈ ಭೂಮಿಯಲ್ಲಿ **ಜನದಂತೆ**=ಪ್ರಕೃತ ಜನರೋಪಾದಿಯಲ್ಲಿ **ದೇವಕಿದೇವಿ ಜಠರದೊಳು** = ದೇವಕಿಯ ಗರ್ಭದಲ್ಲಿ **ಅವತರಿಸಿದನು**=ಶ್ರೀ ಕೃಷ್ಣನಾಮದಿಂದ ಪ್ರಕಟನಾದನು **ರೇವತಿರಮಣಾನುಜನು** =ರೇವತಿಯ ಪತಿಯಾದ ಬಲರಾಮನ ತಮ್ಮನೆಂದೆನಿಸಿದ ಶ್ರೀ ಕೃಷ್ಣನು **ಸ್ವಪದಾವಲಂಬಿಗಳನು**=ತನ ಪಾದವನ್ನು ನಂಬಿಕೊಂಡು ತನ್ನನ್ನು ಆಶ್ರಯಿಸಿಕೊಂಡಿದ್ದ ಪಾಂಡವರೇ ಮೊದಲಾದ ಭಕ್ತರನ್ನು **ಸಲಹಿ**=ಸಂರಕ್ಷಿಸಿ **ಜಗನ್ನಾಥ ವಿಠ್ಠಲನು**=ಜಗತ್ಪತಿಯಾದ ಶ್ರೀ ಪರಮಾತ್ಮನು (ದಾಸರಾಯರ ನಾಮಾಂಕಿತ ಮೂರ್ತಿಯು) **ದೈತ್ಯಾವಳಿಯ ಸಂಹರಿಸಿದ**=ಭಕ್ತರ ದ್ವೇಷಿಗಳಾದ ದೈತ್ಯರ ಸಮೂಹವನ್ನು ನಾಶಮಾಡಿದನು ॥೩೫॥

**॥ಇಲ್ಲಿಗೆ ಪ್ರಸಕ್ತ ಸಂಧಿಗತ ೩೫ನೆಯ ಅಂತ್ಯಪದ್ಯದ ಪ್ರತಿಪದಾರ್ಥವಾಗಿಯಿತು॥**

**॥ಶ್ರೀ ಕೃಷ್ಣಾರ್ಪಣಮಸ್ತು॥**

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

## ವ್ಯಾಖ್ಯಾನಗಳು

ಲಕ್ಷ್ಮೀದೇವೇರಿಂದಲೂ ಬ್ರಹ್ಮಾದಿದೇವತೆಗಳಿಂದಲೂ ವಂದನಾ ಮಾಡಿಸಿಕೊಳ್ಳಲ್ಪಟ್ಟವ. ಶ್ರೀ ಪರಮಾತ್ಮ ಉತ್ಪತ್ತಿಯಿಂದ ಶೂನ್ಯನಾದವನು. ಈ ಭೂಮಿಯಲ್ಲಿ ರೇವತೀ ದೇವೇರ ಪತಿಯಾದ ಬಲರಾಮದೇವರ ತಮ್ಮ ಎಂತ ಕರೆಸಿದವನಾಗಿ ಪ್ರಾಕೃತ ಜನರೋಪಾದಿಯಲ್ಲಿ ದೇವಕ ರಾಯನ ಮಗಳಾದ ದೇವಕೀ ಎಂತ ನಾಮ ಪಡೆದ ವಸುದೇವನ ಪತ್ನಿಯಾದ ದೇವಕೀದೇವಿಯು

ಉದರದಲ್ಲಿ ಶ್ರೀ ಕೃಷ್ಣ ಎಂತ ನಾಮಾಂಕಿತನಾಗಿ ಅವತಾರಮಾಡೋವನಾದನು, ಹೀಂಗೆ ಅವತಾರ ಮಾಡಿದ ಪರಮಾತ್ಮನಾದ ಶ್ರೀ ಕೃಷ್ಣ ಸಮಸ್ತ ಲೋಕಕ್ಕೆ ಸ್ವಾಮಿ ಎಂತಲೂ, ಭಕ್ತರ ಪಾಪಪರಿಹಾರಕ ಎಂತಲೂ ಎನಿಸಿ ತನ್ನ ಪಾದವನ್ನೇ ನಂಬಿಕೊಂಡ ಭಕ್ತರಾದ ಪಾಂಡವರನ್ನು, ಇನ್ನೂ ಅನೇಕ ಮಂದಿ ಭಕ್ತರನ್ನು ಸಂರಕ್ಷಣೆ ಮಾಡುವನಾಗಿ ಭಕ್ತರ ದ್ವೇಷಿಗಳಾದ ದೈತ್ಯರನ್ನು ಸಂಹಾರಮಾಡೋವನಾಗಿದ್ದಾನೆ. ಶ್ರೀ ಪರಮಾತ್ಮನ ಮಹಾ ಮಹಾತ್ಮ್ಯವನ್ನು ತಿಳಿದು ಭಜನಾ ಮಾಡೋಣದರಿಂದ ಮಹಾ ಫಲವನ್ನು ಹೊಂದತಾನಾದ ಕಡಿಯಿಂದ ಪೂರ್ವೋಕ್ತ ಶ್ರೀ ಪರಮಾತ್ಮನ ಧ್ಯಾನೋಪಾಸನ ಮಾಡಿ ಕರ್ಮ ವಿಮೋಚನ ಮಾಡಿಕೊಳ್ಳಬೇಕಂತ ತಾತ್ಪರ್ಯ ॥೩೫॥

೨. ಭಾವ ಪ್ರಕಾಶಿಕೆ.

ರಮಾ ಬ್ರಹ್ಮಾದಿ ಸಕಲ ದೇವತೆಗಳಿಂದಲೂ ವಂದಿತನಾದ ಶ್ರೀ ಜಗನ್ನಾಥ ವಿಠಲನು ತಾನು ಜನನವಿಲ್ಲದವನಾದರೂ ಸಾಮಾನ್ಯ ಜೀವರಂತೆ ಲೋಕವನ್ನು ಮೋಹಿಸುತ್ತಾ ದೇವಕೀ ದೇವಿಯರ ಉದರದಲ್ಲಿ ಅವತರಿಸಿ ಬಲರಾಮನ ತಮ್ಮನೆನಿಸಿ ಕಂಸಾದಿ ದುಷ್ಟರಾದ ದೈತ್ಯ ರಾಜರನ್ನು ಸಂಹರಿಸಿ ಪಾಂಡವರು ಮೊದಲಾದ ದೇವತಾಂಶರಾದ ರಾಜರನ್ನು ಸಂರಕ್ಷಿಸಿದನು. ಆದ್ದರಿಂದ ಇಂತಹ ಪರಮಾತ್ಮನಲ್ಲಿ ಅವಿಚ್ಛಿನ್ನ ಭಕ್ತಿಯನ್ನು ಮಾಡಿದರೆ ನಮ್ಮ ಕಷ್ಟ ವಿಮೋಚನೆ ಮಾಡಿ ನಮ್ಮನ್ನು ರಕ್ಷಿಸುವನೆಂಬ ತಾತ್ಪರ್ಯ ॥೩೫॥

೩ ಭಾವದರ್ಪಣ

ಶ್ರೀ ವಿರಿಂಚ ಇತಿ. ಅಜನು. ಉತ್ಪತ್ತಿ ಶೂನ್ಯನು ಆವಳಿ ಸಮೂಹ ॥೩೫॥

೪ ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ

"ಶ್ರೀ" ಇತಿ॥ ಅಬ್ದವಾಹನನಾನುಜ ಪದೇನ ಇಂದ್ರಾನುಜತ್ವಸ ರೇವತೀ ರಮಣಾನುಜ ಪದೇನ ಬಲಾನುಜತ್ವಸ್ಯ ಚ ಕಥನೇನ ಭಕ್ತರಕ್ಷಣಂ ಉಕ್ತಮ್ ॥೩೫॥

## ಕನ್ನಡಾರ್ಥ

ಈ ಸಂಧಿಯನ್ನು ಮುಗಿಯಿಸುತ್ತಾರೆ 'ಶ್ರೀ ವಿರಿಂಚಾದ್ಯಮರ ವಂದಿತ' ಎಂಬ ಪದ್ಯದಿಂದ.

ಹಿಂದಿನ ಪದ್ಯದಲ್ಲಿ 'ಅಬ್ದವಾಹನಾನುಜ' (ಅಬ್ದ-ಮೇಘ, ತದ್ವಾಹನ-ಮೇಘವಾಹನ ಇಂದ್ರ, ಅವನ ಅನುಜ-ವಾಮನ) ಎಂಬ ಪದದಿಂದ ಶ್ರೀ ಹರಿಯು ಇಂದ್ರಾನುಜ-ಉಪೇಂದ್ರ-ವಾಮನನಾದನು ಎಂದು ಹೇಳಿದುದರಿಂದಲೂ ಈ ಪದ್ಯದಲ್ಲಿ ಬಲರಾಮಾನುಜನೆಂದು (ಶ್ರೀ ಕೃಷ್ಣನಿಗೆ) ಹೇಳಿದುದರಿಂದಲೂ ಭಕ್ತರಕ್ಷಣವನ್ನು ಹರಿಯು ಮಾಡುವನೆಂಬ ಲಕ್ಷಣವು ಹೇಳಲ್ಪಟ್ಟಿರುತ್ತದೆ ॥೨೫॥

## ೫. ಶ್ರೀ ಗುರು ಹೃದಯ ಪ್ರಕಾಶಿಕೆ

ಶ್ರೀ ಬ್ರಹ್ಮಾದಿ ದೇವವಂದಿತನು ಈ ವಸುಧರೆಯೆಂಬ ಭೂಮಿಯಲ್ಲಿ ದೇವಕೀ ದೇವಿ ಉದರದಲ್ಲಿದ್ದು, ಅಜರ ಎಂದರೆ ಜರಾದಿ ವಿಕಾರ ಇಲ್ಲದವನಾದರೂ ನರರಂತೆ ಅವತರಿಸಿದನು. ರೇವತೀ ರಮಣನೆಂಬ ಬಲರಾಮನ ತಮ್ಮನಾಗಿ ಸ್ವಪದಾವಲಂಬಿಗಳಾದವೆಂದರೆ ತನ್ನ ಭಕ್ತರಾದ ಪಾಂಡವರು ಮೊದಲಾದವರನ್ನು ರಕ್ಷಿಸಿ ದೈತ್ಯಾವಳಿಯೆಂಬ ಕಂಸ ಮೊದಲಾದ ಅಸುರ ಸಮೂಹವನ್ನು ಸಂಹರಿಸಿದನು, ಜಗನ್ನಾಥನಾದ ಜ್ಞಾನಪ್ರದ ಸ್ವಾಮಿಯು ಆದ್ದರಿಂದ ಅವರವರ ಯೋಗ್ಯತಾನುಸಾರ ಫಲಪ್ರದನು. ನಿರ್ದೋಷನೆಂದರ್ಥ.

**ಆನಂದ ಮಾತ್ರಮಜರಂ ಪುರಾಣಂ** ಎಂಬ ಶ್ರುತಿ.

**ಆನಂದ ಮಾತ್ರ ಕರಪಾದಸರೋರುಹಂ ಸರ್ವತ್ರ ಚ ಸ್ವಗತ ಭೇದವಿವರ್ಜಿತಾತ್ಮ** ಎಂಬ ನಿರ್ಣಯವು,

**ರೂಪಂ ಯತ್ತೋಪ್ರಾಹುರವ್ಯಕ್ತಮಾದ್ಯಂ ಬ್ರಹ್ಮಜ್ಯೋತಿರ್ನಿರ್ಗುಣಂ ನಿರ್ವಿಕಾರಂ** ಎಂಬ ಭಾಗವತಾರ್ಥ ಸಹ ವಿವರಿಸಿತು॥೨೫॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಪರಮ ಮಂಗಳಪ್ರದಳಾದ ಸತ್ತ್ವಗುಣಾಭಿಯಾದ ಶ್ರೀ ಲಕ್ಷ್ಮೀದೇವಿಗೆ 'ಶ್ರೀ' ಎಂತ ನಾಮ ಮಾಯಾಪತಿಯಾದ ವಾಸುದೇವನ ದೆಸೆಯಿಂದ ಸೂಕ್ಷ್ಮಸೃಷ್ಟಿಯಲ್ಲಿ ಮೊಟ್ಟಮೊದಲು ಜನಿಸಿದವರು ಚತುರ್ಮುಖಬ್ರಹ್ಮ ದೇವರು. ಶ್ರೀ ಲಕ್ಷ್ಮೀನಾರಾಯಣರ ಜ್ಯೇಷ್ಠಪುತ್ರರಾದ್ದರಿಂದ ಬ್ರಹ್ಮ ದೇವರಿಗೆ 'ವಿರಿಂಚಿ' ಎಂದು ಹೆಸರು,

ರಮಾಬ್ರಹ್ಮಾದಿ ಸಕಲ ದೇವತಾ ವರ್ಗದಿಂದ ನಮ್ಯನಾದವನು. ಕ್ಷರಾಕ್ಷರ ಪುರುಷ ಪೂಜಿತನಾದ ಶ್ರೀ ಹರಿಯು ಇದರಿಂದ ಶ್ರೀ ಪರಮಾತ್ಮನು **ಶ್ರೀವಿರಿಂಚಾದ್ಯಮರ ವಂದಿತನಾದನು**

ಧರ್ಮ ಸಂಸ್ಥಾಪನೆಗಾಗಿ ದುಷ್ಟ ಶಿಕ್ಷಣದ್ವಾರಾ ಸಕಲ ಶಿಷ್ಟರ ಪರಿಪಾಲನಾರ್ಥವಾಗಿ ಕ್ಷೀರ ಸಮುದ್ರಶಾಯಿಯಾದ ಲಕ್ಷ್ಮೀರಮಣನು ದೇವತೆಗಳಿಂದ ಪ್ರಾರ್ಥ್ಯಮಾನನಾಗಿ ಭೂಲೋಕದಲ್ಲಿ ದೇವಕೀಸುತನಾಗಿ ಅವತರಿಸಿದನು.

ದೇವಕನು ಯದುವಂಶದ ಅಹುರ ರಾಜನ ಹಿರಿಯ ಮಗ. ಉಗ್ರಸೇನನು ಇವನ ಸಹೋದರ. ದೇವಕನಿಗೆ ನಾಲ್ವರು ಪುತ್ರರೂ ಏಳುಮಂದಿ ಪುತ್ರಿಯರೂ ಜನಿಸಿದರು, ಅವರ ಪೈಕಿ ಕೊನೆಯವಳೇ **ದೇವಕಿಯು.** ವಸುದೇವನು ದೇವಕನ ಏಳುಮಂದಿ ಪುತ್ರಿಯರನ್ನೂ ಲಗ್ನವಾಗಿದ್ದನು. ವಸುದೇವ ದೇವಕಿಯರ ಪುತ್ರನಾಗಿ ಅಷ್ಟಮ ಗರ್ಭದಲ್ಲಿ ಶ್ರೀಹರಿಯು ಶ್ರೀ ಕೃಷ್ಣನಾಮಕನಾಗಿ ಅವತರಿಸಿದನು,

ಶ್ರೀ ಹರಿಗೆ ಶುಕ್ಲಶೋಣಿತ ಸಂಪರ್ಕವಿಲ್ಲ ಉತ್ಪತ್ತಿಶೂನ್ಯನು. ಜನನವೇ ಇಲ್ಲದಿದ್ದುದರಿಂದ ಮರಣ ವಿದೂರನು, ಹೀಗೆ ಉತ್ಪತ್ತಿನಾಶಶೂನ್ಯನಾದ ಶ್ರೀ ಹರಿಗೆ **ಅಜ** ನೆಂತ ಹೆಸರು. (ಜ-ಜನನ ಅ-ನಿಷೇದಾರ್ಥ ಅಂದರೆ ಜನನ ರಹಿತನು)

ಶ್ರೀ ಹರಿಯು ಅಜನಾದರೂ ದೇವಕಿಯ ಗರ್ಭದಲ್ಲಿ ಸಾಮಾನ್ಯ ಮಾನವರಂತೆ ಅವತರಿಸಿ ಪ್ರಾದುರ್ಭವಿಸಿದನು.

ಸೂರ್ಯ ವಂಶದ ಅರಸನಾದ ಕಕುದ್ಮಿ ಎಂಬುವನಿಗೆ ರೇವತ ಎಂದು ನಾಮಾಂತರ. ರೇವತ ರಾಜನ ಪುತ್ರಿಯೇ ರೇವತಿಯು. ರೇವತಿರಮಣನೇ ಶ್ರೀಕೃಷ್ಣನ ಜ್ಯೇಷ್ಠನಾದ ಬಲರಾಮನು, ಶ್ರೀಕೃಷ್ಣನು **ರೇವತಿ ರಮಣಾನುಜನು**.

ಬಲರಾಮಾನನುಜನು ದೇವಕಿಯಲ್ಲಿ ಅವತರಿಸಿ ಕಂಸಾದಿ ದುಷ್ಟರಾದ ದೈತ್ಯರ ಸಮೂಹವನ್ನು ಸಂಹರಿಸಿ ತನ್ನ ಪಾದಕಮಲಗಳನ್ನೇ ನಂಬಿ ಭಜಿಸುತ್ತಿದ್ದ ಗೋಪಾಲಕರನ್ನು ಸಂರಕ್ಷಿಸಿದನು. ಹಾಗೆಯೇ ಕುರುಕ್ಷೇತ್ರದ ಮಹಾ ಸಮರವನ್ನು ತಾನೇ ಏರ್ಪಡಿಸಿ, ಪಾರ್ಥನ ಬಂಡಿ ಬೋವನಾಗಿ, ದುರ್ಯೋಧನಾದಿ ಸಕಲ ತಮೋಯೋಗ್ಯರ ನಾಶಕ್ಕೆ ಕಾರಣನಾದನು, ಅಂತಿಹ ಜಗದೀಶ್ವರನಾದ ಶ್ರೀ ಜಗನ್ನಾಥ ವಿಠ್ಠಲಾಂಕಿತನಾದ ಜನಾರ್ದನನು ಸಜ್ಜನರನ್ನು ಸಂರಕ್ಷಿಸಲೆಂದು ಅನನ್ಯ ಭಕ್ತಿಯಿಂದ ಆ ಅಜನಾಮಕನನ್ನು ಪ್ರಾರ್ಥಿಸುತ್ತಾ ಪ್ರಸಕ್ತ ಸಂಧಿಗತ ವಿಷಯವನ್ನು ಈ ಅಂತ್ಯ ಪದ್ಯದಿಂದ ಮುಕ್ತಾಯಗೊಳಿತ್ತಾರೆ ದಾಸವರ್ಯರು. ॥೩೨॥

**॥ ಇಂತು ೧೯ನೆಯ ಸಂಧಿಯ ಸರ್ವ ವ್ಯಾಖ್ಯಾನಸಾರವೆಂಬ ತಾತ್ಪರ್ಯಾರ್ಥವು ಮುಗಿಯಿತು ॥**

॥ ಶ್ರೀ ಲಕ್ಷ್ಮೀನರಸಿಂಹಾರ್ಪಣಮಸ್ತು ॥

# ತಪ್ಪೋಲೆ

| ಕ್ರಮ ಸಂಖ್ಯೆ | ಪುಟ ಸಂಖ್ಯೆ | ಸಾಲಿನ ಸಂಖ್ಯೆ | ತಪ್ಪಾಗಿರುವುದು | ಸರಿಯಾಗಿರಬೇಕಾದದ್ದು |
|---|---|---|---|---|
| 1 | 3 | 6 | ಬೃಹ್ಮಾಂಡ | ಬ್ರಹ್ಮಾಂಡ |
| 2 | 3 | ಕೊನೇಸಾಲು | ಜಿದಿಂದ್ರಿಯ | ಜಿದೇಂದ್ರಿಯ |
| 3 | 10. | 17 | ಸಕ್ಷೇಪಿಸಿ | ಸಂಕ್ಷೇಪಿಸಿ |
| 4 | 26 | 15 | ಕೊಡುವೆ | ಕೊಡುವ |
| 5 | 27 | 18 | ಕುರ್ಯನಾಮುಕನಾಗಿ | ಕಾರ್ಯನಾಮುಕನಾಗಿ |
| 6 | 29 | 2 | ಶಿಕ್ಷಿಸುವನ್ನು | ಶಿಕ್ಷಿಸುವನು |
| 7 | 31 | 20 | ಎಲ್ಲಾ | ಎಲ್ಲಾ |
| 8 | 32 | 21 | ಆಕಾಶಧಾಗೆ | ಆಕಾಶಧಾಂಗೆ |
| 9 | 33 | 4 | ಅಂಶುವತಾರ | ಅಂಶಾವತಾರ |
| 10 | [illegible]3 | 14 | ಅಂತರ್ಬಹಿಶ್ವ | ಅಂತರ್ಬಹಿಶ್ಚ |
| 11 | 3[illegible] | 13 | ವಿಡೆಯುನ್ನು | ಎಡೆಯುನ್ನು |
| 12 | [illegible] | 22 | ಕಾಷ್ಠದಲ್ಲಿರುದ | ಕಾಷ್ಠದಲ್ಲಿರುವ |
| 13 | [illegible] | 12 | ಆರಣೇ | ಆರಣೇ |
| 14 | 44 | 19 | ಇದ್ದು | ಇದ್ದು |
| 15 | 48 | 10 | ದ್ವೈತ್ಯರ | ದೈತ್ಯರ |
| 16 | 48 | 23 | ಯುವಾಗಲೂ | ಯಾವಾಗಲೂ |
| 17 | 52 | 11 | ವನು | ವುದು |
| 18 | 52 | 18 | ಕೊಟ್ಟುಧ್ಧರಿಸುವನು | ಕೊಟ್ಟುದ್ಧರಿಸುವನು |
| 19 | 56 | 4 | ಸರ್ವಾವಸ್ಥಿ | ಸರ್ವಾವಸ್ಥೆ |
| 20 | 57 | 7 | ರವಿಯುದ | ರವಿಯುದ |
| 21 | 58 | 9 | ಎಲ್ಲಾ | ಎಲ್ಲಾ |
| 22 | 59 | 1 | ಸರ್ವವ್ಯಾಪಾರ | ಸರ್ವವ್ಯಾಪಾರ |
| 23 | 60 | 3 | ಸಮೀರನೇ | ಸರ್ವೇಶ್ವರನೇ |
| 24 | 61 | 18 | ಪಾಫಫಲಪ್ರದಗಳಾಗಿ | ಪಾಪಫಲಪ್ರದಗಳಾಗಿ |
| 25 | 60 | 12 | ವೃರ್ಥ | ವ್ಯರ್ಥ |
| 26 | 67 | 16 | ಅಚ್ಛಿದ್ರ | ಅಚ್ಛಿದ್ರ |
| 27 | 68 | 2 | ಪೂರ್ವಸ್ತು | ಪೂರ್ವಸ್ತು |
| 28 | 73 | 1 | ಮಾಡಂದತಾ | ಮಾಡತಾ |

| ಕ್ರಮ ಸಂಖ್ಯೆ | ಪುಟ ಸಂಖ್ಯೆ | ಸಾಲಿನ ಸಂಖ್ಯೆ | ತಪ್ಪಾಗಿರುವುದು | ಸರಿಯಾಗಿರಬೇಕಾದದ್ದು |
|---|---|---|---|---|
| 29 | 78 | 6 | ಸುಲಭನಾದವನ್ನೇ | ಸುಲಭನಾದವನೇ |
| 30 | 79 | 20 | ಇಷ್ವಾರ್ಥಗಳ | ಇಷ್ಟಾರ್ಥಗಳ |
| 31 | 80 | 14 | ಸ್ಥರೂಪ | ಸ್ವರೂಪ |
| 32 | 88 | 19 | ಅಂತು | ಅರಿತು |
| 33 | 89 | 4 | ದ್ವಂದ್ಜ | ದ್ವಂದ್ವ |
| 34 | 91 | 7 | ಜೀವರು | ಜೀವರು |
| 35 | 93 | ಕೊನೇಸಾಲು | ಮಾಡಬೇಟ | ಮಾಡಬೇಡ |
| 36 | 94 | 6 | ಸುಖರೂಪ | ದುಃಖರೂಪ |
| 37 | 101 | 17 | ಉವಾಸನೆ | ಉಪಾಸನೆ |
| 38 | 123 | 10 | ಇತ್ಯವುಕಃ | ಇತ್ಯಮುರಃ |
| 39 | 123 | 11 | ಕರ್ಮಕರಿಗೆ | ಕರ್ಮಠರಿಗೆ |
| 40 | 127 | 13 | ಸೃಷ್ಠರಾದ | ಸೃಷ್ಟರಾದರು |
| 41 | 127 | 14 | ಖುಜು | ಋಜು |
| 42 | 128 | 13 | ಲಭ್ಯೈಃ | ಲಭ್ಯಃ |
| 43 | 129 | 3 | ಸೌರಕ್ಯವ | ಸೌರತ್ಯವ |
| 44 | 129 | 15–16 | ಪ್ರತಿವಾದಕವಾದ | ಪ್ರತಿಪಾದಕವಾದ |
| 45 | 130 | 1 | ದೃಷ್ಟಾಂತ | ದೃಷ್ಟಾಂತ |
| 46 | 132 | 21 | ಚಿಟ್ಟು | ಬಿಟ್ಟು |
| 47 | 133 | 8 | ಜಗತ್ಸತ್ಯತ್ಪ | ಜಗತ್ಸತ್ಯತ್ವ |
| 48 | 134 | 2 | ಅಹಿಕ | ಐಹಿಕ |
| 49 | 136 | 20 | ಪರವರಾತ್ಮನನ್ನು | ಪರಮಾತ್ಮನನ್ನು |
| 50 | 138 | 17 | ಮುಕ್ಕ್ತಿ ಸಾಮ್ರಾಜ್ಯ | ಮುಕ್ತಿ ಸಾಮ್ರಾಜ್ಯ |
| 51 | 141 | 4 | ಪೃಥಪೃಡಕ್ | ಪೃಥಪೃಥಕ್ |
| 52 | 142 | 6 | ಧರಿಸ್ಯ | ಧರಿಸಿ |
| 53 | 142 | 16 | ವಾಪಾರಗಳ | ವ್ಯಾಪಾರಗಳ |
| 54 | 153 | 22 | ಸ್ವಧಾತು | ಸ್ವಧಾಮ |
| 55 | 155 | 12 | ತಿಧಿಗಳಲ್ಲಿ | ತಿಥಿಗಳಲ್ಲಿ |
| 56 | 155 | 15 | ವಿಷ್ಡುವಿಗೆ | ವಿಷ್ಣುವಿಗೆ |
| 57 | 156 | 2 | ವ್ರತವಾದ್ತರಿಂದ | ವ್ರತವಾದ್ದರಿಂದ |
| 58 | 156 | 10 | ಅಂತರ್ಗತನಾವ | ಅಂತರ್ಗತನಾದ |

| ಕ್ರಮ ಸಂಖ್ಯೆ | ಪುಟ ಸಂಖ್ಯೆ | ಸಾಲಿನ ಸಂಖ್ಯೆ | ತಪ್ಪಾಗಿರುವುದು | ಸರಿಯಾಗಿರಬೇಕಾದದ್ದು |
|---|---|---|---|---|
| 59 | 160 | 4 | ವ್ಯಾಪ್ರವಾದ | ವ್ಯಾಪ್ತವಾದ |
| 60 | 160 | 9 | ಕಾಜ್ಯೇಚ | ಕಾಬ್ದೇಚ |
| 61 | 160 | 9 | ದಿಸೇ | ದಿನೇ |
| 62 | 161 | 11 | ವ್ರಾಪ್ತನಾದ | ವ್ಯಾಪ್ತನಾದ |
| 63 | 163 | 6 | ಜಖುವುದಕೆ | ಜಯಿಸುವುದಕೆ |
| 64 | 162 | 3 | ಕಕುರ | ಕಕುತ್ |
| 65 | 165 | 9 | ಶ್ರೀತದ್ವೀಪ | ಶ್ವೇತದ್ವೀಪ |
| 66 | 164 | 14 | ಸಂಪನ್ನನಾದ್ದರಿಂಬ | ಸಪನ್ನನಾದ್ದರಿಂದ |
| 67 | 165 | 15 | ಅವರಿಚ್ಛಿನ್ನ | ಅಪರಿಚ್ಛಿನ್ನ |
| 68 | 167 | 9 | ಅರಸುವೋಪಾದಿಯಲ್ಲಿ | ಅರಸುವೋಪಾದಿಯಲ್ಲಿ |
| 69 | 170 | 17 | ಅರವಿದೂಶನನ್ನು | ಅರವಿದೂರನನ್ನು |
| 70 | 171 | 2 | ಸದಶರು | ಸದೃಶರು |
| 71 | 171 | 2 | ದೇವರನ್ನು | ಜೀವರನ್ನು |
| 72 | 171 | 12 | ತರವಲ್ಪಟ್ಟಿ | ತರಲ್ಪಟ್ಟಿ |
| 73 | 172 | 8 | ನಿರ್ಜೀವನ | ನಿರ್ಜೀತನ |
| 74 | 180 | 8 | ಸಪಾರಿ | ಸಪಾಂ |
| 75 | 181 | 1 | ಪ್ರತಿವಾದಕ | ಪ್ರತಿಪಾದಕ |
| 76 | 181 | 16 | ಸೊಂಟಿದಲ್ಲಿ | ಸೊಂಟದಲ್ಲಿ |
| 77 | 181 | 21 | ಮುಕ್ತಯೋಗ್ಯ | ಮುಕ್ತಿಯೋಗ್ಯ |
| 78 | 182 | 1 | ಓಡಿಬಂದಾ | ಓಡಿಬಂದು |
| 79 | 182 | 9 | ರಮೀಪ | ಸಮೀಪ |
| 80 | 182 | 10 | ತೀಮೋಯೋಗ್ಯ | ತಮೋಯೋಗ್ಯ |
| 81 | 185 | 17 | ಮುನೇಂದ್ರ | ಮುನೀಂದ್ರ |
| 82 | 186 | 5 | ದ್ವೇಶ | ದ್ವೇಪ |
| 83 | 188 | 2 | ಹಣ್ಣೆನ | ಹಣ್ಣಿನ |
| 84 | 188 | 5 | ವಿಧಿಪತನ | ವಿಧಿಪಿತನ |
| 85 | 188 | 8 | ಶೂನ್ಯನಾಗಿ | ಶೂನ್ಯದಾಗಿ |
| 86 | 188 | ಕೊನೇಸಾಲು | ಕ್ಷುತ್ರು | ಕ್ಷುತ್ತು |
| 87 | 190 | 1 | ೨ನೇ ಪದ್ಯ | ೩ನೆಯ ಪದ್ಯ |
| 88 | 190 | 5 | ಭೋರೇಹಣ್ಣಿಗೆ | ಬೋರೇಹಣ್ಣಿಗೆ |

| ಕ್ರಮ ಸಂಖ್ಯೆ | ಪುಟ ಸಂಖ್ಯೆ | ಸಾಲಿನ ಸಂಖ್ಯೆ | ತಪ್ಪಾಗಿರುವುದು | ಸರಿಯಾಗಿರಬೇಕಾದದ್ದು |
|---|---|---|---|---|
| 89 | 190 | 11 | ೨೦ನೇ ಪದ್ಯವೆಂದು | ೩೦ನೆಯ ಪದ್ಯವೆಂದು |
| 90 | 190 | 15 | ಬೋರೇಗಿಡ | ಬೋರೇಗಿಡ |
| 91 | 190 | 16 | ೨೧ನೇ ಪದ್ಯವೆಂದು | ೩೧ನೆಯ ಪದ್ಯವೆಂದು |
| 92 | 190 | 17 | ಕ್ಷುದೆ | ಕ್ಷುಧೆ |
| 93 | 191 | 5 | ಕ್ಷುದ್ಬಾಧೆಗೋಸ್ಕರ | ಕ್ಷುದ್ಬಾಧೆಗೋಸ್ಕರ |
| 94 | 193 | 3 | ಡಾಂಭಿಕರಾದ | ಢಾಂಭಿಕರಾದ |
| 95 | 194 | 4 | ಪೂಜಿತರಾದ | ಪೂಜಿತರಾದ |
| 96 | 194 | 16 | ಪೂಜಿತರಾದ | ಪೂಜಿತರಾದ |
| 97 | 195 | 4 | ಭಾಗೀರತಿ | ಭಾಗೀರಥಿ |
| 98 | 190 | 4 | ಖರ್ಚರ | ಖರ್ಪರ |
| 99 | 190 | 12 | ಪಶೋಣಿ | ಪಸೂಣಿ |
| 100 | 200 | ಕೂನೇಸಾಲು | ಭೂಮಿಗೆ | ಭೂಮಿಗೆ |
| 101 | 201 | 1 | ಗಂಗಿ | ಗಂಗೆ |
| 102 | 202 | 7 | ಭಕ್ತಿಬಾವದಿಂದ | ಭಕ್ತಿಭಾವದಿಂದ |
| 103 | 208 | 16 | ವಲ್ಲರು | ಒಲ್ಲರು |
| 104 | 210 | 8 | ಯೋಗ್ಯತಾನುಸಾರ | ಯೋಗ್ಯತಾನುಸಾರ |
| 105 | 212 | 9 | ದೂರನಾದೆ | ದೂರನಾದ |
| 106 | 210 | 3 | ಇಷ್ಟಾರ್ಥವಾವ | ಇಷ್ಟಾರ್ಥವಾದ |
| 107 | 213 | 11 | ಎಂದರ | ಎಂದರೆ |
| 108 | 213 | 15 | ಮಾಡಿದ್ದೇನು | ಮಾಡಿದ್ದೇನೆ |
| ॥09 | 215 | 11 | ವಲ್ಲೆನೆಂಬ | ಒಲ್ಲೇನೆಂಬ |
| 110 | 315 | ಕೊನೇಸಾಲು | ಸಮಸ್ತಾವಯುವ | ಸಮಸ್ತಾವಯವ |
| 111 | 218 | ಪದ್ಯ ೨೪ | ಪದ್ಯ ಸಂಖ್ಯೆ ಬಿಟ್ಟು ಹೋಗಿದೆ | ॥೨೪॥ |
| 112 | 220 | 5 | ಸ್ವಾಧೀನವಾಗದ್ದಾನೆ | ಸ್ವಾಧೀನವಾಗುತಾನೆ |
| 113 | 225 | 5 | ಭಕ್ತ್ಯೈಕಲಬ್ಧನು | ಭಕ್ತ್ಯೈಕಲಭ್ಯನು |
| 118 | 226 | 16 | ಪ್ರಾಬಲ್ಯ | ಪ್ರಾಚುರ್ಯ |
| 115 | 228 | 7 | ತನ | ತನ್ನ |
| 116 | 229 | 13 | ಬಲರಾಮನ | ಬಲರಾಮನ |
| 117 | 230 | 10 | ಅಜರ | ಅಜ |
| 118 | 232 | 15 | ॥೩೪॥ | ॥೩೫॥ |